" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# ಕರ್ನಾಟಕ ವಿಧಾನ ಪರಿಷತ್ತು

16ನೇ ಮಾರ್ಚ್ 2020
ಸೋಮವಾರ

## ವಿಷಯಾನುಕ್ರಮಣಿಕೆ

**01. ಸಚಿವರ ಹೇಳಿಕೆ**

**02. ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ**

ಶ್ರೀ ಆರ್.ಬಿ.ತಿಮ್ಮಾಪೂರ
ಶ್ರೀ ಎಂ.ಕೆ.ಪ್ರಾಣೇಶ್
ಡಾ:ಕೆ.ಸುಧಾಕರ್(ವೈದ್ಯಕೀಯ ಶಿಕ್ಷಣ ಸಚಿವರು)
ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
ಶ್ರೀ ಆಯನೂರು ಮಂಜುನಾಥ್
ಶ್ರೀ ಹೆಚ್.ಎಂ.ರಮೇಶ್‌ಗೌಡ
ಶ್ರೀ ಎಸ್.ರುದ್ರೇಗೌಡ
ಶ್ರೀ ಎಸ್.ರವಿ
ಶ್ರೀ ಎನ್.ಅಪ್ಪಾಜಿಗೌಡ
ಶ್ರೀ ನಸೀರ್ ಅಹ್ಮದ್

**3. ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳು ಹಾಗೂ ಅಧಿಕಾರಿಗಳು ಹಾಜರಿಲ್ಲದಿರುವ ಬಗ್ಗೆ.**

ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಯು.ಬಿ.ವೆಂಕಟೇಶ್
ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

4. **ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

**ರಾಜ್ಯಾದ್ಯಂತ ಕೋವಿಡ್–19 ಕೊರೊನಾ ಖಾಯಿಲೆಯು ಹರಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಸದರಿ ವೈರಸ್ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಕುರಿತು**

ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಲಹರ್ ಸಿಂಗ್ ಸಿರೋಯಾ
ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ಐವನ್ ಡಿ'ಸೋಜಾ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
ಶ್ರೀ ಆಯನೂರು ಮಂಜುನಾಥ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀ ಕೆ.ಎ.ತಿಪ್ಪೇಸ್ವಾಮಿ
ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**05. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

1035+1045+1207– ಅರಣ್ಯ ಇಲಾಖೆಯಲ್ಲಿನ ಜೇಷ್ಠತಾ ಪಟ್ಟಿ ತಯಾರಿಕೆಯಲ್ಲಿನ ಅಕ್ರಮ ಕುರಿತು.

– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ಮರಿತಿಬ್ಬೇಗೌಡ
– ಶ್ರೀ ಎನ್.ಅಪ್ಪಾಜಿಗೌಡ

1054 – ಸಕ್ಕರೆ ಕಾರ್ಖಾನೆಗಳಿಂದ ಪರಿಸರ ಹಾನಿಗೊಳಗಾದವರಿಗೆ ಪರಿಹಾರ ನೀಡಬೇಕೆನ್ನುವ ಬಗ್ಗೆ.

– ಶ್ರೀ ಆರ್.ಬಿ.ತಿಮ್ಮಾಪೂರ
– ಶ್ರೀ ಆನಂದ್ ಸಿಂಗ್(ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು)

1210 – ಜನರಿಕ್ ಔಷಧಗಳ ವಿತರಣೆ ಬಗ್ಗೆ

– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

1061 – ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಅತಿಥಿ ಉಪನ್ಯಾಸಕರ ಬಗ್ಗೆ.

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಡಾ:ಅಶ್ವಥ್ ನಾರಾಯಣ ಸಿ.ಎನ್. (ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು)

1051 – ಬೆಳಗಾವಿಯಲ್ಲಿರುವ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪದವಿ ಪೂರ್ಣಗೊಳಿಸದೆ ಅವಕಾಶ ವಂಚಿತರಾಗುತ್ತಿರುವ ವಿದ್ಯಾರ್ಥಿಗಳ ಕುರಿತು.

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
– ಡಾ:ಅಶ್ವಥ್ ನಾರಾಯಣ ಸಿ.ಎನ್. (ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು)

1165 – ಹಿಂದುಳಿದ ವರ್ಗಗಳ ಬಗ್ಗೆ

– ಶ್ರೀ ಎಂ.ಸಿ.ವೇಣುಗೋಪಾಲ್
– ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

1057– ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ ದೇವರಾಜ ಅರಸು ನಿಗಮದಿಂದ ಕೊರೆದಿರುವ ಕೊಳವೆ ಬಾವಿಗಳ ಕುರಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

– ಶ್ರೀ ಆರ್.ಪ್ರಸನ್ನ ಕುಮಾರ್
– ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

1226– ಸ್ತನ ಕ್ಯಾನ್ಸರ್ ಹೆಚ್ಚಾಗುತ್ತಿರುವ ಬಗ್ಗೆ.
– ಡಾ: ಜಯಮಾಲ
– ಡಾ: ಕೆ.ಸುಧಾಕರ್ (ವೈದ್ಯಕೀಯ ಶಿಕ್ಷಣ ಸಚಿವರು)

573 – ರಾಜ್ಯದಲ್ಲಿ ಅರಣ್ಯ ಒತ್ತುವರಿಯಾಗಿರುವ ಬಗ್ಗೆ.
– ಶ್ರೀ ಪಿ.ಆರ್.ರಮೇಶ್
– ಶ್ರೀ ಆನಂದ್ ಸಿಂಗ್(ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು)

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ.**

6. **ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) ಕೆ.ಆರ್.ಪೇಟೆಯ 17ನೇ ವಾರ್ಡ್‌ನಲ್ಲಿನ ಉದ್ಯಾನವನದಲ್ಲಿ ಪುರಸಭಾ ಅನುದಾನದಲ್ಲಿ ಕೈಗೊಂಡಿರುವ ಡ್ರೈನೇಜ್ ಕಾಮಗಾರಿ ಬಗ್ಗೆ

– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಆ) Alleged atrocity by a gang of five on a pregnant woman near Electronic City last weekend

– ಶ್ರೀ ಲಹರ್ ಸಿಂಗ್ ಸಿರೋಯಾ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಇ) ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕಿನ ಶ್ರೀನಿವಾಸಪುರ ಗ್ರಾಮದಲ್ಲಿರುವ ಹೇಮಾವತಿ ಸಕ್ಕರೆ ಕಾರ್ಖಾನೆಯ ಬಾಯ್ಲರ್‌ನ ಡಸ್ಟ್ ಕ್ಯಾಚರ್ ಸ್ಫೋಟಗೊಂಡು ಆಗಿರುವ ಅನಾಹುತಗಳ ಬಗ್ಗೆ

– ಶ್ರೀ ಎಂ.ಎ.ಗೋಪಾಲಸ್ವಾಮಿ
– ಅರಬೈಲು ಶಿವರಾಮ್ ಹೆಬ್ಬಾರ (ಕಾರ್ಮಿಕ ಮತ್ತು ಸಕ್ಕರೆ ಸಚಿವರು)

ಈ) ಅಡುಗೆ ಎಣ್ಣೆಗೆ ಮಿನರಲ್ ಆಯಿಲ್ ಬೆರೆಸುತ್ತಿರುವ ಬಗ್ಗೆ
– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**7. ಗಮನ ಸೆಳೆಯುವ ಸೂಚನೆ**

**ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಕೋಲಿ, ಕಬ್ಬಲಿಗ ಹಾಗೂ ಇನ್ನಿತರ 39 ಪರ್ಯಾಯ ಜಾತಿಗಳನ್ನು ಹೊಂದಿರುವವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆನ್ನುವ ವಿಷಯ ಕೇಂದ್ರ ಸರ್ಕಾರದಲ್ಲಿ ಹಲವು ವರ್ಷಗಳಿಂದ ಬಾಕಿ ಉಳಿದಿದ್ದು ಈ ಸಂಬಂಧ ರಾಜ್ಯ ಸರ್ಕಾರ ಮುತುವರ್ಜಿ ವಹಿಸಬೇಕಾಗಿರುವ ಬಗ್ಗೆ**

– ಶ್ರೀ ತಿಪ್ಪಣ್ಣ ಕಮಕನೂರ
– ಶ್ರೀ ಎನ್.ರವಿಕುಮಾರ್
– ಶ್ರೀ ಎನ್.ಎಸ್.ಬೋಸ್‌ರಾಜು
– ಶ್ರೀ ಹೆಚ್.ಎಂ.ರೇವಣ್ಣ
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಮಾಜ ಕಲ್ಯಾಣ ಸಚಿವರ ಪರವಾಗಿ)

~~*~~*~~*~~

(413) 16.03.2020 11.10 LL-BNS

**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ 16ನೇ ಮಾರ್ಚ್, 2020**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ) ಯವರು ಪೀಠದಲ್ಲಿ ಉಪಸ್ಥಿತರಾದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

1. ಸಚಿವರ ಹೇಳಿಕೆ

**ಶ್ರೀ ಪ್ರಭು ವಿ. ಚವ್ಹಾಣ್ (ಪಶುಸಂಗೋಪನೆ, ಹಜ್ ಹಾಗೂ ಔಕಾಫ್ ಸಚಿವರು):–** ಮಾನ್ಯ ಸಭಾಪತಿಯವರೇ, ಕಳೆದ ಶುಕ್ರವಾರ ಪಶುಸಂಗೋಪನಾ ಇಲಾಖೆಯ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಶ್ನೆ ಕೇಳಿದ್ದರು. ಆದರೆ, ನಮ್ಮ ಪಶುಸಂಗೋಪನಾ ಇಲಾಖೆಯ ಯಾವ್ಯಾವ ಅಧಿಕಾರಿಗಳು ನಿಯೋಜನೆ ಮೇರೆಗೆ ಬೇರೆ ಇಲಾಖೆಗೆ ಹೋಗಿದ್ದಾರೋ, ಅವರೆಲ್ಲರನ್ನೂ ಪಶುಸಂಗೋಪನಾ ಇಲಾಖೆಗೆ ಹಿಂತೆಗೆದುಕೊಳ್ಳುತ್ತೇವೆ.

2. ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ

**ಶ್ರೀ ಆರ್.ಬಿ. ತಿಮ್ಮಾಪೂರ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನದ ಮೇಲಿನ ವಿಶೇಷ ಚರ್ಚೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಇವೊತ್ತಿನ ದಿವಸ ಸಂವಿಧಾನದ ಬಗ್ಗೆ ಚರ್ಚೆ ಪ್ರಾರಂಭವಾಗಿರತಕ್ಕಂಥದ್ದು ಬಹಳ ಅವಶ್ಯಕತೆ ಹಾಗೂ ಅದರ ವಿಚಾರಧಾರೆಗಳನ್ನು ಜನತೆಗೆ ತಿಳಿಸಿಕೊಡುವಂತಹ ಕೆಲಸಕ್ಕೆ ತಾವು ಪ್ರಯತ್ನಿಸಿರುವುದು ಅದ್ಭುತವಾದದ್ದು ಎಂಬ ಮಾತನ್ನು ಹೇಳುತ್ತೇನೆ. ಇದರ ಜೊತೆಗೆ, ಸಂವಿಧಾನ ಮನುಕುಲದ ಉದ್ಧಾರದ ಪ್ರತೀಕ. ಎಲ್ಲಾ ಧರ್ಮದವರನ್ನು ಪ್ರೀತಿಸುವ, ಎಲ್ಲರನ್ನೂ ಸಮಾನವಾಗಿ ಕಾಣುವ, ಎಲ್ಲರಿಗೂ ಸಮಾನ ಸ್ವತಂತ್ರ ನೀಡುವ ಧರ್ಮಗ್ರಂಥ ಎನ್ನುವಂತಹ ಮಾತನ್ನು ನಾನು ಹೇಳಬೇಕಾಗುತ್ತದೆ. ಸಂವಿಧಾನ ರಚನೆ ವೇಳೆಯಲ್ಲಿ ಹಲವಾರು ಜನರಿಂದ ಟೀಕೆ–ಟಿಪ್ಪಣಿಗಳು ಬರುತ್ತವೆ. ಕೆಲವರು ಸಂವಿಧಾನದ ರಚನಾಕಾರರ ಬಗ್ಗೆ 'ತೇಲುತ್ತಿರುವ ಸಮಿತಿ' ಎಂಬ ಮಾತನ್ನು ಹೇಳಿದಾಗ, ಡಾ॥ ಬಿ.ಆರ್.ಅಂಬೇಡ್ಕರ್‌ರವರು, "ನಿಯಂತ್ರಣ ಸಹಿತವಾಗಿ ತೇಲುವುದಕ್ಕೆ ಹಾಗೂ ನಿಯಂತ್ರಣ ರಹಿತವಾಗಿ ತೇಲುವುದಕ್ಕೆ ವ್ಯತ್ಯಾಸವಿದೆ" ಎಂದು ಹೇಳುತ್ತಾರೆ. ಸಂವಿಧಾನ ರಚನೆಯಲ್ಲಿ ಹಲವಾರು ಜನರ ಪರಿಶ್ರಮ ಇದೆ. ಅದರಲ್ಲಿ ವಿಶೇಷವಾಗಿ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಈ ನಾಡಿಗೆ ಹಾಗೂ ವಿಶ್ವಕ್ಕೆ ಮಾದರಿಯಾದಂತಹ ಸಂವಿಧಾನವನ್ನು ರಚನೆ ಮಾಡಿದ್ದಾರೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ಸಮಾಜದಲ್ಲಿರತಕ್ಕಂತಹ ಹಲವಾರು ವಿಚಾರಗಳು ಎಷ್ಟರಮಟ್ಟಿಗೆ ಸಂವಿಧಾನದ ಆಶಯಗಳ ಸಮೀಪ ಇದೆ ಎನ್ನುವುದನ್ನು ನಾವು ಯೋಚನೆ ಮಾಡಿದಾಗ, ಈ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರನ್ನು ನಾವು ಸ್ಮರಿಸಬೇಕಾಗುತ್ತದೆ. ಅದರಂತೆ, ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಎಲ್ಲರನ್ನೂ ನಾನು ಸ್ಮರಿಸಿ ನಮ್ಮ ಸಂವಿಧಾನ ನಮಗೆ ಯಾವ ರೀತಿ, ಸಂವಿಧಾನ ಆಶಯಗಳ ನೆರವಿನಂತೆ ನಡೆದಿದೆ ಎನ್ನುವಂತಹ ಮಾತನ್ನು ನಾನು ಸ್ವಲ್ಪ ಅವಲೋಕನ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ವಿಶ್ವದಲ್ಲಿ ಹಲವಾರು ರಾಷ್ಟ್ರಗಳು ಹಲವಾರು ಬಾರಿ ಸಂವಿಧಾನ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬದಲಾವಣೆ ಮಾಡಿದ್ದನ್ನು ನಾವು ಕಾಣುತ್ತೇವೆ. ಉದಾಹರಣೆಗೆ, Poland ನಲ್ಲಿ 10 ಬಾರಿ, ಗ್ರೀಸ್‌ನಲ್ಲಿ 13 ಬಾರಿ, ಫ್ರಾನ್ಸ್‌ನಲ್ಲಿ 16 ಬಾರಿ, ಪಾಕಿಸ್ತಾನದಲ್ಲಿ 4 ಬಾರಿ, ಶ್ರೀಲಂಕಾದಲ್ಲಿ 3 ಬಾರಿ ಹಾಗೂ ಥೈಲಾಂಡ್‌ನಲ್ಲಿ 20 ಬಾರಿ ಸಂವಿಧಾನ ಬದಲಾವಣೆಯಾಗಿರುತ್ತದೆ. ಆದರೆ, ಸುಮಾರು 70 ವರ್ಷಗಳ ಕಾಲ ಎಲ್ಲ ಜನರ ಹಿತವನ್ನು ಕಾಪಾಡಿಕೊಂಡು ಬಂದಿರತಕ್ಕಂತಹ ನಮ್ಮ ಸಂವಿಧಾನ ಬಹಳ ಅದ್ಭುತವಾಗಿದೆ ಎಂಬ ಮಾತನ್ನು ಹೇಳುವುದರ ಜೊತೆಗೆ, ಸಂವಿಧಾನ ರಚನಾಕಾರರು ಹಲವಾರು ವಿಷಯಗಳಲ್ಲಿ ಭಿನ್ನಮತ ಬಂದರೂ ರಾಷ್ಟ್ರಕ್ಕೆ ಒಂದು ಒಳ್ಳೆಯ ಸಂವಿಧಾನ ನೀಡುವಂತಹ ವಿಷಯದಲ್ಲಿ ಹಿಂದೆ ಬೀಳಲಿಲ್ಲ ಎನ್ನುವಂತಹ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ 'ಹಿಂದೂ ಕೋಡ್ ಬಿಲ್' ತಂದಾಗ, ಡಾ॥ ಬಿ.ಆರ್. ಅಂಬೇಡ್ಕರ್‌ರವರಿಗೆ, ಶ್ರೀ ಜವಾಹರಲಾಲ್ ನೆಹರು ಮೇಲೆ 'ಹಿಂದೂ ವಿರೋಧಿಗಳು' ಎನ್ನುವಂತಹ ಪಟ್ಟ ಕಟ್ಟುತ್ತಾರೆ. ಡಾ॥ ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನದ ಬಿಲ್ ತರುವಂತಹ ಸಂದರ್ಭದಲ್ಲಿ, ಶ್ರೀ ಜವಹಾರಲಾಲ್ ನೆಹರುರವರು, "ಈ ಬಾರಿ ಸಂವಿಧಾನದ ಬಿಲ್ ತರುವುದು ಬೇಡ, ಚುನಾವಣೆ ಮುಗಿದ ನಂತರ ತರೋಣ" ಎಂದು ಹೇಳುತ್ತಾರೆ. ಆದರೆ, ಡಾ॥ ಬಿ.ಆರ್. ಅಂಬೇಡ್ಕರ್‌ರವರು ಹಿಂದೂ ಕೋಡ್ ಸಲುವಾಗಿ, ಮಹಿಳೆಯರಿಗಾಗಿ, ಮಹಿಳೆಯರ ಹಕ್ಕುಗಳ ರಕ್ಷಣೆ ಸಲುವಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಬರುತ್ತಾರೆ. ಏಕೆಂದರೆ, ಹಿಂದೂ ಜಾತಿಯಲ್ಲಿ ಮಹಿಳೆಯರ ಸ್ಥಾನಮಾನ, ಹಿಂದುಳಿದ ಜಾತಿಯವರ ಸ್ಥಾನಮಾನ ಎಂತಹ ಅದೋಗತಿಯಲ್ಲಿತ್ತು ಎಂದರೆ, ಸತಿ–ಸಹಗಮನದಂತಹ ಅನಿಷ್ಟ ಪದ್ಧತಿಗಳ ಜೊತೆಗೆ, ಅವರಿಗೆ ಆಸ್ತಿಯಲ್ಲಿ ಹಕ್ಕಿರಲಿಲ್ಲ ಹಾಗೂ ಧಾರ್ಮಿಕ ವಿಧಿ–ವಿಧಾನಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶವಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಮಹಿಳೆಯರಿಗಾಗಿ ಹಾಗೂ ಹಿಂದುಳಿದ ಜನಾಂಗದವರಿಗಾಗಿ ಹಿಂದೂ ಕೋಡ್ ಬಿಲ್ ತರುವಂತಹ ಸಂದರ್ಭದಲ್ಲಿ ಎಂತಹ ಟೀಕೆಗಳು ಬಂದರೂ ಸಹ ಡಾ॥ ಬಿ.ಆರ್. ಅಂಬೇಡ್ಕರ್‌ರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಬರುತ್ತಾರೆ.

ತದನಂತರ, ಶ್ರೀ ಜವಾಹರಲಾಲ್ ನೆಹರು ಚುನಾವಣೆಗೆ ಸ್ಪರ್ಧಿಸಿದಾಗ, ಹಿಂದೂ ಮಹಾಸಭಾ ಸಮಿತಿಯವರು ಹಾಗೂ ಇತರ ಹಿಂದೂ ಸಂಘಟನಾಕಾರರು ಅವರ ವಿರುದ್ಧ ಹಿಂದೂ ವಿರೋಧಿಗಳು ಎಂಬ ಪಟ್ಟ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ಈ ಅಖಂಡ ಭಾರತವನ್ನು ಉಳಿಸಿಕೊಂಡಿದ್ದು, ನಮ್ಮೆಲ್ಲರ ಹೆಮ್ಮೆ ಎನ್ನುವಂಥದ್ದು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಂವಿಧಾನದ ರಚನೆಯ ಬಗ್ಗೆ ಹಾಗೂ ಸ್ವಾತಂತ್ರ್ಯದ ಬಗ್ಗೆ ಬಹಳಷ್ಟು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ತಾವು ಕೂಡ, "ಸಂವಿಧಾನದ ಬಗ್ಗೆ ಹೇಳಿದ್ದನ್ನೇ ಹೇಳಬಾರದು ಎನ್ನುವಂಥದ್ದನ್ನು" ಹೇಳಿದ್ದೀರಿ. ಈ ಸಂವಿಧಾನ ಬಂದ ನಂತರ ಹಾಗೂ ಸಂವಿಧಾನದ ಮೊದಲು ಜಾತಿ ಪದ್ಧತಿಗಳ ಬಹಳ ಹೀನಾಯಮಾನ ಪರಿಸ್ಥಿತಿಯನ್ನು ಈ ಮನುಷ್ಯ ಕುಲದಲ್ಲಿ ಇಟ್ಟುಕೊಂಡು ಬಂದಿರುವುದನ್ನು ನಾವು ಕಾಣುತ್ತೇವೆ. ವರ್ಣಗಳು ಬಂದಾಗ ಬಹುಶಃ ನಮ್ಮಲ್ಲಿ 3 ವರ್ಗಗಳಿದ್ದವು. ತದನಂತರ, ಮನುಸ್ಮೃತಿ ಬಂದ ನಂತರ, ಈ ಶೂದ್ರ ಜಾತಿ ಹುಟ್ಟಿಕೊಂಡು 4 ಜಾತಿಗಳ ವರ್ಣಮಯ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮನುಸ್ಮೃತಿಯಲ್ಲಿ, "...ಒಬ್ಬ ತಲೆಯಲ್ಲಿ, ಒಬ್ಬ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾಲಿನಲ್ಲಿ, ಒಬ್ಬ ಕೈಯಲ್ಲಿ ಹುಟ್ಟಿದ..." ಎಂದು ಹೇಳುತ್ತಾರೆ. ಇಂತಹ ವಿಚಿತ್ರಕಾರಕ ವಿಚಾರಧಾರೆಯನ್ನು ದೈವಪ್ರೇರಿತ ರೀತಿಯಲ್ಲಿ ಹಾಗೂ ಕರ್ಮಫಲ ಎನ್ನುವಂತಹ ರೀತಿಯಲ್ಲಿ ಶೂದ್ರರನ್ನು ಹೊರಗೆ ಇಡುವಂತಹ ಕೆಲಸ ಪ್ರಾರಂಭವಾಗುತ್ತದೆ. ಇದರ ಜೊತೆಗೆ, ಶೂದ್ರರನ್ನು, "ಅದು ನಿನ್ನ ಕರ್ಮ, ನೀನು ಹಿಂದಿನ ಜನ್ಮದಲ್ಲಿ ಏನೋ ಕರ್ಮ ಮಾಡಿರುತ್ತೀಯಾ ಅದಕ್ಕೆ ಈ ಜಾತಿಯಲ್ಲಿ ಹುಟ್ಟಿರುತ್ತೀಯಾ" ಎನ್ನುವಂತಹ ಸಿದ್ಧಾಂತವನ್ನು ಒಪ್ಪಿಸುವುದಕ್ಕೆ ಪ್ರಯತ್ನಗಳು ಆಗುತ್ತವೆ. ರಾಜ-ಮಹಾರಾಜರ ಕಾಲದಲ್ಲಿಯೂ ಹಲವಾರು ಜನರು ಆ ದೈವ ಮಾನವ, ದೇವನಿಂದ ಬಂದವನು, ಆ ದೇವರ ವಾಕ್ಯಗಳೇ ಹಾಗೆ ಎಂದು ಪರಿಗಣಿಸಬೇಕು ಎನ್ನುವಂತಹ ವಿಚಾರಧಾರೆ ಹಲವಾರು ಬಾರಿ ಬರುವುದನ್ನು ನಾವು ಕಾಣುತ್ತಿದ್ದೇವೆ.

(ಮುಂದುವರೆದಿದೆ...)

(414)16.03.2020/11.20/ವೈಎಲ್-ಜಿಆರ್

**ಶ್ರೀ ಆರ್.ಬಿ.ತಿಮ್ಮಾಪೂರ(ಮುಂದು):-**

ಬಹುಶಃ ಅಭಿವೃದ್ಧಿ ಎಂಬ ಈ ಪ್ರವಾಹದಲ್ಲಿ ಬಹಳ ಹಿಂದುಳಿದವರೆಂದರೆ, ಶೂದ್ರರು ಮತ್ತು ಹೆಣ್ಣು ಮಕ್ಕಳು. ಈ ಕ್ಷಣದವರೆಗೂ ಅವರುಗಳಿಗೆ ಸ್ವಾತಂತ್ರ್ಯ ಸಿಕ್ಕಿದೆಯೇ, ಧಾರ್ಮಿಕ ಕಾರ್ಯಗಳಲ್ಲಿ ಎಷ್ಟರ ಮಟ್ಟಿಗೆ ಅವರು ಭಾಗಿಯಾಗುತ್ತಾರೆ, ಆಸ್ತಿ ಹಕ್ಕುಗಳಲ್ಲಿ ಏನಾದರೂ ಅವರು ಪಾಲು ತೆಗೆದುಕೊಂಡಿದ್ದಾರೆಯೇ ಎನ್ನುವಂಥ ವಿಚಾರಧಾರೆಗಳನ್ನು ನೋಡಿದರೆ, 70 ವರ್ಷದ ಸಂವಿಧಾನದ ಅವಲೋಕನದಲ್ಲಿ ಇವತ್ತಿಗೂ ಅತಿಯಾಗಿ ಇನ್ನೂ ಹಿಂದುಳಿದ ಸ್ಥಿತಿಯಲ್ಲಿರುವ ಜನಾಂಗವೆಂದರೆ, ಶೂದ್ರರು ಮತ್ತು ಹೆಣ್ಣು ಮಕ್ಕಳು ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಶ್ರಮ ಜೀವಿಗಳೇನಿದ್ದಾರೆ ಅವರು ಇವತ್ತಿನ ದಿವಸ ಕೂಡ ದುಡಿದು ತಿನ್ನುತ್ತಿದ್ದಾರೆ. ನನಗೆ ಗೊತ್ತಿರುವ ಹಾಗೆ, ನಾನು ಚಿಕ್ಕ ಹುಡುಗನಾಗಿದ್ದಾಗ ಅಸ್ಪೃಶ್ಯತೆಯ ಪರಿಸ್ಥಿತಿಯನ್ನು ನೋಡಿ ಬಹಳ ನೋವಾಗುತ್ತಿತ್ತು. ನಾನು ಬಾವಿ ಹತ್ತಿರ ಹೋಗಿ ಕುಳಿತುಕೊಂಡು ಯಾರಾದರೂ ಮೇಲ್ಜಾತಿಯವರು ಬಂದು ನನ್ನ ಕೊಡಕ್ಕೆ ನೀರು ಹಾಕುವವರೆಗೂ ಕಾಯಬೇಕಾಗಿತ್ತು. ನಾನು ಸಹ ಹುಡುಗರ ಜೊತೆ ಕಬ್ಬಡಿ ಆಟ ಆಡಬೇಕೆಂದು ಹೋಗಿದಂತಹ ಸಂದರ್ಭದಲ್ಲಿ ಆ ಮಕ್ಕಳ ಪೋಷಕರು ಬಂದು ಅವರ ಮಕ್ಕಳ ಮೇಲೆ ಗಲಾಟೆ ಮಾಡುತ್ತಿದ್ದರು. 'ಶೂದ್ರನ ಜೊತೆ ಆಟವಾಡುತ್ತೀಯಾ, ನೀನು ಅವನ ಕಾಲು ಹಿಡಿಯಬೇಕಾ, ಅವನನ್ನು ಮುಟ್ಟಿಸಿಕೊಳ್ಳುತ್ತೀಯಾ' ಎಂದು ಗಲಾಟೆ ಮಾಡಿದಾಗ, ಆ ಹುಡುಗರನ್ನು ನಾನಿವತ್ತು appreciate ಮಾಡುತ್ತೇನೆ; ಆ ಹುಡುಗರು ಅವರ ಪೋಷಕರ ವಿರುದ್ಧವಾಗಿ 'ಆತ ನನ್ನ ಗೆಳೆಯ, ಆತನ ಜೊತೆ ಆಟವಾಡುತ್ತೇವೆ' ಎಂದು ಹೇಳುತ್ತಿದ್ದರು. ಇವತ್ತಿಗೂ ನಾನು ಅವರನ್ನು ಗೌರವಿಸುತ್ತೇನೆ. ಎಷ್ಟರಮಟ್ಟಿಗೆ ಅಸ್ಪೃಶ್ಯತೆಯು ಬೇರೂರಿತ್ತು ಎನ್ನುವುದನ್ನು ಇವತ್ತು ಹೇಳುವುದಕ್ಕೆ ಇಷ್ಟಪಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಹುಶಃ ಜಾತೀಯತೆ ಎಷ್ಟರ ಮಟ್ಟಿಗೆ ಹೋಗಿದೆ, ಏನಾದರೂ ಅದರ ಬೇರುಗಳು ಸಡಿಲಗೊಂಡಿವೆಯೇ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಈ ಕ್ಷಣಕ್ಕೂ ನಮಗೆ ಬಾಡಿಗೆ ಅಥವಾ ಭೋಗ್ಯಕ್ಕೆ ಮನೆ ಅವಶ್ಯಕವಿದ್ದರೆ ನನ್ನ ಜಾತಿ ಯಾವುದೆಂದು ಹೇಳಿದರೆ, ಯಾರೂ ಕೂಡಾ ನಮಗೆ ವಾಸಕ್ಕೆ ಮನೆ ನೀಡುವುದಿಲ್ಲ. ಇಂತಹ ಸಮಸ್ಯೆಯನ್ನು ಎಷ್ಟು ಜನ ನಮ್ಮ ಅಸ್ಪೃಶ್ಯರು ಹಾಗೂ ಆ ಜನಾಂಗದ politicians ಅನುಭವಿಸುತ್ತಿದ್ದಾರೆ ಎಂಬುದನ್ನು ನೋಡಬೇಕಾಗುತ್ತದೆ. ನಮ್ಮ ವಿಚಾರ ಬಿಡಿ. ಈ ದೇಶದ ಮಾಜಿ ಪ್ರಧಾನಮಂತ್ರಿಗಳಾದ ಇಂದಿರಾಗಾಂಧಿಯವರಿಗೂ ಇಂತಹ ಪರಿಸ್ಥಿತಿ ಬಂದಿತ್ತು. ಮಾಜಿ ಪ್ರಧಾನಮಂತ್ರಿಗಳಾದ ಇಂದಿರಾಗಾಂಧಿಯವರು ಪುರಿ ಜಗನ್ನಾಥ ದೇವಾಲಯಕ್ಕೆ ಹೋಗಿ ಬಂದ ನಂತರ ಆ ದೇವಸ್ಥಾನವನ್ನು ಶುದ್ಧಿಗೊಳಿಸುತ್ತಿದ್ದರು. ಶ್ರೀ ಬಾಬು ಜಗಜೀವನ್ ರಾಮ್‌ರವರಿಗೂ ಇಂತಹ ಪರಿಸ್ಥಿತಿ ಬಂದಿದೆ. ಸನ್ಮಾನ್ಯ ಬೂಟಾ ಸಿಂಗ್ ರವರು ಅಸ್ಪೃಶ್ಯತೆಯ ಪರಿಸ್ಥಿತಿಯನ್ನು ಎದುರಿಸುವಂಥದ್ದು ಈ ದೇಶದಲ್ಲಿದೆ ಎಂದರೆ ಇದು ಎಂತಹ ಪರಿಸ್ಥಿತಿ? ಹಿಂದೂ ಸಂಘಟನಾಕಾರರಿಗೆ ನಾನು ಒಂದು ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಎಲ್ಲಾ ಜಾತಿಗಳನ್ನು ಬಿಟ್ಟು ನೀವು ಈ ಸಾಮ್ರಾಜ್ಯವನ್ನು ಕಟ್ಟುವುದಕ್ಕೆ ಸಾಧ್ಯವೇ? ಈ ಅದ್ಭುತವಾದ ಪರಿಸ್ಥಿತಿಯಲ್ಲಿ ಹಿಂದೂ ರಾಷ್ಟ್ರ ಮಾಡಬೇಕೆಂದು ಕೆಲವರು ಮಾತನಾಡುತ್ತಿದ್ದಾರೆ. ಅಂದರೆ, ಹಿಂದೂ ರಾಷ್ಟ್ರದಲ್ಲಿ ಶೂದ್ರರು ಈ ಮೊದಲು ಯಾವ ರೀತಿ ಇದ್ದರೋ, ಅದೇ ರೀತಿ ಇರಬೇಕೆ? ನಾನು ಬಹಳಷ್ಟು ಕಡೆ ಕೇಳಿದ್ದೇನೆ; ಬಹುಶಃ ಮರ್ಯಾದಾಹತ್ಯೆ ಪ್ರಕರಣಗಳು ನಡೆದಂತಹ ಸಂದರ್ಭದಲ್ಲಿ ಆ ಕ್ಷೇತ್ರದ ಯಾರಾದರೂ ಹಿಂದೂ ಸಂಘಟನೆಯವರು ಹೋಗಿ, 'ನೀವು ಮಾಡುತ್ತಿರುವುದು ತಪ್ಪು, ಜಾತೀಯತೆ ಹೋಗಬೇಕು' ಎಂದು ನಾವು ಹೋರಾಡುತ್ತಿದ್ದೇವೆ ಎಂಬ ಭಾವನೆಗಳನ್ನು ಎಲ್ಲಿಯಾದರೂ ವ್ಯಕ್ತಪಡಿಸಿರುವುದು ಉಂಟೆ?

ಅಸ್ಪೃಶ್ಯತೆ ಬಗ್ಗೆ ಹಿಂದೂ ಮಹಾ ಸಂಘಟನೆಕಾರರು 'ಹೌದು, ಇಡೀ ಜಾತಿ ಜನಾಂಗದವರು ಒಟ್ಟಾಗಿ ಇರಬೇಕು' ಎನ್ನುವ ಮಾತನ್ನು ಎಲ್ಲಿಯಾದರೂ ಹೇಳುವುದಕ್ಕೆ ಪ್ರಯತ್ನ ಪಟ್ಟಿದ್ದಾರೆಯೇ? ಸುಮಾರು ಎರಡು ಸಾವಿರ ವರ್ಷಗಳಿಂದ ಅಸ್ತಿತ್ವದಲ್ಲಿರುವ ಈ ಜಾತಿ ಪದ್ಧತಿಯು, ಬಹುಶಃ 'ಕ್ಷೌರ ಮಾಡುವವನು ಎದುರುಗಡೆ ಬಂದರೆ, ಇವತ್ತು ನಮ್ಮ ಕೆಲಸ ಯಾವುದು ಆಗುವುದಿಲ್ಲ' ಎನ್ನುವಂಥ ಮೂಢನಂಬಿಕೆ ಇವತ್ತಿಗೂ ಇದೆ. ಅವರು ಶೂದ್ರರಿಗಿಂತಲೂ ಹೆಚ್ಚಾಗಿ ಅನುಭವಿಸುವಂಥ ನೋವು ಯಾರಿಗೂ ಬರಬಾರದು. ಒಳ್ಳೆಯ ಕಾರ್ಯಕ್ರಮಕ್ಕೆ ಹೋದರೆ ಅಥವಾ ಮನೆ ಬಿಟ್ಟು ಹೊರಗೆ ಬಂದರೆ ಕ್ಷೌರಿಕರು ಎದುರುಗಡೆ ಬರಬಾರದು ಎಂದರೆ, ಇದು ಎಂತಹ ವಿಚಿತ್ರ ಮೂಢನಂಬಿಕೆಯಿಂದ ಕೂಡಿದ್ದ ಹಿಂದುತ್ವದಲ್ಲಿ ನಾವು ಬದುಕುತ್ತಿದ್ದೇವೆ? ಹಿಂದೂ ರಾಷ್ಟ್ರ ನಿರ್ಮಾಣ ಮಾಡಬೇಕೆಂದು ಹೊರಟಿರುವವರಿಗೆ ಇದು ಕಾಣಿಸುತ್ತಿಲ್ಲವೇನು? ಇದರ ಬಗ್ಗೆ ಯಾರಾದರೂ ಚಕಾರ ಎತ್ತಿದ್ದಾರೆಯೇ? ಕೆಲವು ಕಡೆ ಮಠ–ಮಾನ್ಯರು ಪ್ರಯತ್ನ ಮಾಡಿದ್ದಾರೆ, ಇಲ್ಲವೆಂದು ನಾನು ಹೇಳುವುದಿಲ್ಲ. ಮೂರ್ತಿಯನ್ನು ತೆಗೆದು ಹಾಕಿ ಚಿತ್ರದುರ್ಗದಲ್ಲಿ ಮೂರ್ತಿರಹಿತ ಮಠಗಳನ್ನು ಪ್ರಾರಂಭಿಸಿ, ಎಲ್ಲಾ ಜಾತಿ–ಜನಾಂಗದವರಿಗೂ ಸ್ಥಳಾವಕಾಶವನ್ನು ಮಾಡಿಕೊಟ್ಟಿದ್ದಾರೆ. ನಾವು ಮೂಲತಃ ಪಂಚಭೂತಗಳ ಆರಾಧಕರು. ನಾವು ದ್ರಾವಿಡ ಸಮುದಾಯದವರಾದರೂ ಮೂರ್ತಿ ಪೂಜಕರಲ್ಲ. ಗಾಳಿ, ನೀರು, ಭೂಮಿ ಈ ರೀತಿ ಪಂಚಭೂತಗಳನ್ನು ಪೂಜೆ ಮಾಡಿಕೊಂಡು ಬದುಕುತ್ತಿದ್ದೆವು. ಆರ್ಯರು ಬಂದ ನಂತರ, ನಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಡೀ ಸ್ಥಿತಿಗತಿಗಳು ಬದಲಾದವು. ಯಾರ್‍ಯಾರು ಮಹತ್ವ ಪೂರ್ಣ ದೊಡ್ಡ ವ್ಯಕ್ತಿಗಳಾಗುತ್ತಾರೆಯೋ, ಅವರೆಲ್ಲರ ಮೂರ್ತಿಯನ್ನು ಮಾಡಿ, ಪೂಜೆ ಮಾಡುವುದಾಗಿದೆ. ಬಸವಣ್ಣನವರ ತತ್ವವು ಎಂತಹ ಅದ್ಭುತವಾದ ತತ್ವವಾಗಿದೆ ಎಂದರೆ, ಅವರ ತತ್ವ ಮತ್ತು ಆದರ್ಶಗಳನ್ನು ಜಾರಿಗೆ ತಂದರೆ, ‘ಈ ದೇಶ ವಿಶ್ವದಲ್ಲಿಯೇ ಮಾದರಿಯ ದೇಶವಾಗುವುದಕ್ಕೆ ಸಾಧ್ಯ ಇದೆ.’ ಆದರೆ, ಆರ್ಯರ ಕುತಂತ್ರದಿಂದ ಇವತ್ತು ದೇವಸ್ಥಾನದ ಗುಡಿಯೊಳಗೆ ಮೂರ್ತಿಯನ್ನು ಇಟ್ಟು, ಆತನನ್ನೇ ಪೂಜೆ ಮಾಡಲು ಪ್ರಾರಂಭಿಸಿ ನಮ್ಮನ್ನು ಮತ್ತೆ ಹೊರಗೆ ತಂದಿದ್ದಾರೆ. ಬಸವ ತತ್ವಗಳೆಲ್ಲಿಯೋ ಹೋಗಿ ಅದು ಒಂದು ಲಿಂಗಾಯಿತ ಜಾತಿಯಾಗಿತೇ ವಿನಃ ಲಿಂಗಾಯಿತ ಅನುಯಾಯಿಗಳೇನಿದ್ದಾರೆ, ಅವರು ಈ ಜಾತಿಯನ್ನು ಹೋಗಲಾಡಿಸಬೇಕೆನ್ನುವ ಪ್ರಯತ್ನವನ್ನು ಮಾಡಲಿಲ್ಲ. ನಮ್ಮ ಬಿಜೆಪಿ ಮಿತ್ರರು ರಾಮ ಮಂದಿರ ಕಟ್ಟುತ್ತೇವೆ ಎಂದು ಎಷ್ಟೋ ಜನರು ಬಹಳಷ್ಟು ಹುಮ್ಮನಸ್ಸಿನಿಂದ ಹೋರಾಡಿದರು. ಮಾನ್ಯ ಎಲ್.ಕೆ.ಅಡ್ವಾಣಿಯವರು ಇಡೀ ದೇಶಾದ್ಯಂತ ರಥಯಾತ್ರೆಯ ನೇತೃತ್ವವಹಿಸಿದ ಸಂದರ್ಭದಲ್ಲಿ ಬಹಳಷ್ಟು ಜನರು ನೊಂದು–ಬೆಂದಿದ್ದಾರೆ. ಆದರೆ, ನಾನು ರಾಮಮಂದಿರದ ಹೊರಗೆ ನಿಂತಿರುವುದರಿಂದ ನನ್ನ ಪರಿಸ್ಥಿತಿಯನ್ನು ನೋಡಿ, ಆವೊತ್ತಿನ ದಿವಸವೇ ನಾವು ಬದಲಾವಣೆಯಾಗಬೇಕಾಗಿತ್ತಲ್ಲವೇ?

ಮತಾಂತರದ ಭಾರಿ ವಿಚಾರಧಾರೆಗಳು ಬಂದಿವೆ. ಡಾ|| ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್‌ರವರು ‘ಈ ಧರ್ಮದಲ್ಲಿ ಹುಟ್ಟಿದ್ದೇನೆ, ಆದರೆ, ಈ ಧರ್ಮದಲ್ಲಿ ಸಾಯುವುದಿಲ್ಲ’ ಎನ್ನುವಂಥ ಮಾತನ್ನು ಹೇಳುತ್ತಾರೆ. ಹಾಗಾದರೆ, ನಾವು ಏತಕ್ಕೆ ಇನ್ನೂ ಈ ಪರಿಸ್ಥಿತಿಯಲ್ಲಿ ಉಳಿದುಕೊಂಡಿದ್ದೇವೆ? ಶ್ರೀ ಬಾಬು ಜಗಜೀವನ ರಾಮ್‌ರವರನ್ನು ಹಿಂದೂ ಸಂಘಟನಾಕಾರರು ತಮಿಳುನಾಡಿಗೆ ಕಳುಹಿಸಿ ತಮಿಳುನಾಡಿನಲ್ಲಿ ಮತಾಂತರವನ್ನು ತಡೆಯಿರಿ. ‘ಆದಷ್ಟು ಬೇಗ ನಾವು ಬದಲಾವಣೆಯನ್ನು ತರುತ್ತೇವೆ, ಅಸ್ಪೃಶ್ಯತೆಯನ್ನು ಹೋಗಲಾಡಿಸುತ್ತೇವೆ, ಸಮಾನ ಹಕ್ಕನ್ನು ನೀಡುತ್ತೇವೆ’ ಎನ್ನುವಂಥ ಮಾತನ್ನು ಹೇಳುತ್ತಾರೆ. ಆಗ ಮಾನ್ಯ ಜಗಜೀವನ ರಾಮ್‌ರವರು ತಮಿಳುನಾಡಿಗೆ ಬಂದು ಮತಾಂಧರನ್ನು ತಡೆಯುತ್ತಾರೆ. ಆದರೆ, ಅವರ ಮಾತಿನ ಪ್ರಕಾರ ನಾವು ಹಾಗೆಯೇ ಅದೇ ಸಮಾಜದಲ್ಲಿ ಉಳಿದುಕೊಂಡೆವು. ಅದು ಬಹಳಷ್ಟು ಜನ ಕ್ರಿಶ್ಚಿಯನ್ ಧರ್ಮಕ್ಕೆ, ಭೌದ್ಧ ಧರ್ಮಕ್ಕೆ ಮತಾಂತರಗೊಳ್ಳುವುದಕ್ಕೆ ಹೊರಟಂತಹ ಕಾಲಘಟ್ಟವಾಗಿತ್ತು. ಇವತ್ತು ನಾನು ಈ ಸಮಾಜದಲ್ಲಿಯೇ ನಿಂತುಕೊಂಡಿದ್ದೇನೆ. ಈ ದೇಶದಲ್ಲಿ ರಾಮಮಂದಿರ ಕಟ್ಟುತ್ತೇವೆ ಎಂದು, ರಾಮ ಮಂದಿರ ಕಟ್ಟಿದ ಮೇಲೆ ಭಾರಿ ಬದಲಾವಣೆಯಾಗಿಬಿಡುತ್ತದೆ ಎನ್ನುವಂತಹ ಗುಲ್ಲು ಎದ್ದಿತ್ತು. ಇಲ್ಲಿ ಇರುವಂಥ ಓಣಿಯಲ್ಲಿನ ದೇವಸ್ಥಾನದ ಒಳಗೇ ನನ್ನನ್ನು ಬಿಡುವುದಿಲ್ಲ, ಇನ್ನು ರಾಮಮಂದಿರ ಕಟ್ಟಿದರೇನು, ಬಿಟ್ಟರೇನು? ಅದರಿಂದ ನನಗೇನು ಲಾಭ. ಇದರ ಬಗ್ಗೆ ಸರ್ಕಾರಕ್ಕೆ ಎಂದಾದರೂ ಯೋಚನೆಗಳು ಬಂದಿವೆಯೇ? ರಾಮಮಂದಿರ ಕಟ್ಟುವ ಬಗ್ಗೆ ಇಷ್ಟೆಲ್ಲಾ ಪ್ರಚಾರ ಮಾಡಿ, ಅದನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿದ್ದಾರೆ. ಆದರೆ, ನಿಜವಾಗಿ ಹಿಂದೂ ಧರ್ಮದಲ್ಲಿರುವ ಜಾತಿಗಳ ಬಗ್ಗೆ, ಎಂದಾದರೂ ಅವರ ಬಾಯಿಯಿಂದ ‘ಹೌದು’ ಮಾನ್ಯ ತಿಮ್ಮಾಪೂರವರೇ, ನೀವು ಅಸ್ಪೃಶ್ಯರಾದರೂ ಪರವಾಗಿಲ್ಲ ಬನ್ನಿ’ ಎಂದು ಕರೆದು ಸಂಬಂಧಗಳನ್ನು ಮಾಡುತ್ತಾರೆಯೇ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಭಾರತೀಯ ಜನತಾ ಪಾರ್ಟಿ ಅಧಿಕಾರದಲ್ಲಿದ್ದಾಗ ಶ್ರೀ ಬಾಬು ಜಗಜೀವನ ರಾಮ್‌ರವರನ್ನು ಈ ದೇಶದ ಪ್ರಧಾನ ಮಂತ್ರಿಗಳಾಗಿ ಮಾಡಬೇಕೆಂದು ಹೊರಟಿದ್ದಾಗ ಆ ಸರ್ಕಾರದಲ್ಲಿ ಜನತಾ ಪಾರ್ಟಿಯೊಳಗೆ ಬಿಜೆಪಿ ಸರ್ಕಾರವೂ ಸೇರ್ಪಡೆಗೊಂಡಿತ್ತು. ಆದರೆ, ಅವರನ್ನು ಪ್ರಧಾನಮಂತ್ರಿಗಳಾಗಿ ಮಾಡುವುದಕ್ಕೆ ಸಹಕಾರ ನೀಡದೇ ಇರುವವರು ಇವತ್ತು ಶ್ರೀ ಬಾಬು ಜಗಜೀವನ ರಾಮ್‌ರವರ ಬಗ್ಗೆ ಮಾತನಾಡುತ್ತಿದ್ದಾರೆ. ಹಾಗಾಗಿ ಅವರು ಸ್ವಲ್ಪ ಮಟ್ಟಿಗೆ ಹಿಂದೆ ನಡೆದಿರುವುದನ್ನು ನೆನಪಿಸಿಕೊಳ್ಳಲಿ. ಅವರು ಯಾವತ್ತಾದರೂ ಶ್ರೀ ಬಾಬು ಜಗಜೀವನ ರಾಮ್‌ರವರನ್ನು ಈ ದೇಶದ ಪ್ರಧಾನ ಮಂತ್ರಿಗಳನ್ನಾಗಿ ಮಾಡಬೇಕೆಂಬ ಆಲೋಚನೆ ಮಾಡಿದ್ದಾರೆಯೇ? ಜನತಾ ಪಾರ್ಟಿ ಮತ್ತು ಬಿಜೆಪಿ ಸಮ್ಮಿಶ್ರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಶ್ರೀ ಬಾಬು ಜಗಜೀವನ ರಾಮ್‌ರವರನ್ನು ಈ ದೇಶದ ಪ್ರಧಾನ ಮಂತ್ರಿಗಳಾಗಿ ಮಾಡಬೇಕೆಂದು ಯೋಚನೆ ಮಾಡಿ, ಅವರನ್ನೇ ಮುಂದೆ ಇಟ್ಟುಕೊಂಡು ಚುನಾವಣೆಯ ಸಂದರ್ಭವನ್ನೆದುರಿಸಿದವರು ನಾವು, ಅವರಲ್ಲ.

**ಡಾ॥ ಕೆ.ಸುಧಾಕರ್(ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ,ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರಿಗೆ 'ಭಾರತ ರತ್ನ ಪ್ರಶಸ್ತಿ' ಯನ್ನು ಕಾಂಗ್ರೆಸ್ ಪಕ್ಷದವರು ನೀಡಲೇ ಇಲ್ಲ. ಅವರಿಗೆ 'ಭಾರತ ರತ್ನ ಪ್ರಶಸ್ತಿ' ಯನ್ನು ಕೊಡ ಮಾಡಿಸಿದವರು ಮಾಜಿ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಮತ್ತು ಎಲ್.ಕೆ.ಅಡ್ವಾಣಿರವರು ಎಂಬುದನ್ನು ಮಾನ್ಯ ಸದಸ್ಯರಾದ ನಮ್ಮ ಬಿ.ಜೆ.ಪಿ. ಪಕ್ಷದ ಹಿರಿಯ ಮುಖಂಡರಾದ ಸನ್ಮಾನ್ಯ ಶ್ರೀ ಆರ್.ಬಿ.ತಿಮ್ಮಾಪೂರ್‌ರವರು ತಿಳಿದುಕೊಳ್ಳಬೇಕು. 1955ರಲ್ಲಿ ಮಾಜಿ ಪ್ರಧಾನಮಂತ್ರಿಗಳಾದ ಜವಹರ್‌ಲಾಲ್ ನೆಹರುರವರು 'ಭಾರತ ರತ್ನ ಪ್ರಶಸ್ತಿ' ಯನ್ನು ಅವರಾಗಿಯೇ ತೆಗೆದುಕೊಳ್ಳುತ್ತಾರೆ. ಅದೇ ರೀತಿ 1976ರಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು 'ಭಾರತ ರತ್ನ ಪ್ರಶಸ್ತಿ' ಯನ್ನು ಅವರಾಗಿಯೇ ತೆಗೆದುಕೊಳ್ಳುತ್ತಾರೆ. ತೆಗೆದುಕೊಳ್ಳಲಿ. ಪ್ರಶಸ್ತಿಯನ್ನು ತೆಗೆದುಕೊಳ್ಳುವ ವಿಚಾರದಲ್ಲಿ ನಮ್ಮ ಅಭ್ಯಂತರವಿಲ್ಲ. ಆದರೆ, ಡಾ॥ ಬಿ.ಆರ್.ಅಂಬೇಡ್ಕರ್! ಡಾ॥ ಬಿ.ಆರ್.ಅಂಬೇಡ್ಕರ್! ಎಂದು ಎಲ್ಲಾ ಕಡೆ ಯಾರು ಭಾಷಣ ಮಾಡುತ್ತಾರೆಯೋ, ಅವರ ಪಕ್ಷದವರಾದರೂ ಅವರಿಗೆ 'ಭಾರತ ರತ್ನ ಪ್ರಶಸ್ತಿ' ಯನ್ನು ಕೊಡಿಸಲಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 'ಮೊನ್ನೆ–ಮೊನ್ನೆ ಹೊಸ ಮಾಲಗಿತ್ತಿ' ಎಂದು ಬಿಜೆಪಿ ಪಕ್ಷಕ್ಕೆ ಹೋಗಿದ್ದಾರೆ. ಅದಕ್ಕೂ ಮೊದಲು ಬಹುಕಾಲ ನಮ್ಮ ಜೊತೆಯಲ್ಲಿಯೇ ಇದ್ದರು.

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಡಾ॥ ಬಿ.ಆರ್.ಅಂಬೇಡ್ಕರ್‌ರವರಿಗೆ ಈ ಮೊದಲೇ 'ಭಾರತ ರತ್ನ ಪ್ರಶಸ್ತಿ' ನೀಡುವಂತೆ ಪ್ರಯತ್ನ ಮಾಡಿಸಬೇಕಾಗಿತ್ತು.

**ಡಾ॥ ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಎಲ್ಲಿಯಾದರೂ ಇರಲಿ, ಇತಿಹಾಸ ಸುಳ್ಳಾಗುವುದಿಲ್ಲ ಅಲ್ಲವೇ? ಆಡಳಿತ ಪಕ್ಷದಲ್ಲಿರಲಿ, ವಿರೋಧ ಪಕ್ಷದಲ್ಲಿರಲಿ. ಇತಿಹಾಸ ಬದಲಾಗುವುದಿಲ್ಲ ಅಲ್ಲವೇ?

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಡಾ॥ ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ನಮಗೆ ಗೌರವ ಇದೆ. (ಗೊಂದಲ) ನಿಮ್ಮ 'ಕಾಂಗ್ರೆಸ್‌ನಲ್ಲಿ' ಎಂದು ಉಲ್ಲೇಖ ಮಾಡಿರುವುದಕ್ಕೆ ಹೇಳುತ್ತಿದ್ದೇನೆ, (ಗೊಂದಲ) ಕಾಂಗ್ರೆಸ್ ಪಕ್ಷದವರಿಗೆ ಈಗ ಡಾ॥ ಬಿ.ಆರ್.ಅಂಬೇಡ್ಕರ್ ಮತ್ತು ಶ್ರೀ ಬಾಬು ಜಗಜೀವನ ರಾಮ್‌ರವರ ಬಗ್ಗೆ ಮಾತನಾಡುವುದಕ್ಕೆ ಏನು ಅವಶ್ಯಕತೆ ಇದೆ?

(ಮುಂದು)

(415)/16.03.2020/11.30/ಎಸ್‌ಕೆ–ಜಿಆರ್

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನವನ್ನು ಹೊಂದಿದವರು):–** ಡಾ॥ ಬಿ.ಆರ್. ಅಂಬೇಡ್ಕರ್‌ರವರು he is much more than the award of Bharath Rathna. ಅದಕ್ಕೂ ಹೆಚ್ಚಿನ ಗೌರವ ಸ್ಥಾನವನ್ನು ಭಾರತ ದೇಶದಲ್ಲಿರುವ ಪ್ರತಿಯೊಬ್ಬ ಪ್ರಜೆಗಳು ಕೊಟ್ಟಿದ್ದಾರೆ. **(ಗೊಂದಲ)** Bharath Rathna Award ಕೊಟ್ಟಿದ್ದು ಮಾನ್ಯ ವಾಜಪೇಯಿಯವರು ಎಂದು ಹೇಳಿರುವುದರಲ್ಲಿ ದೊಡ್ಡ ಸಾಧನೆ ಏನು? ತಮ್ಮ ಪಕ್ಷ 1979 ನೇ ಇಸವಿಯಲ್ಲಿ ತಮ್ಮದೇ ಆದ ಪಕ್ಷವಿತ್ತಲ್ಲಾ ಆಗ ...

**(ಗೊಂದಲ)**

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಗಾಂಧಿ ಕುಟುಂಬದವರೆಲ್ಲರಿಗೂ ಪ್ರಶಸ್ತಿಗಳನ್ನು ಕೊಡಬಹುದು. ಆದರೆ ಭಾರತ ರತ್ನ ಅದಕ್ಕಿಂತ above ಎನ್ನುವುದು ಸರಿ. ಆದರೆ, ಡಾ॥ ಅಂಬೇಡ್ಕರ್‌ರವರಿಗೆ ಭಾರತ ರತ್ನ ಪ್ರಶಸ್ತಿ ಕೊಡಲಿಲ್ಲ. ಗಾಂಧಿ ಕುಟುಂಬದವರೆಲ್ಲರಿಗೂ ಪ್ರಶಸ್ತಿಯನ್ನು ಕೊಟ್ಟಿರಿ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ:–** 1979ರಲ್ಲಿ ತಮ್ಮದೇ ಆದ ಪಕ್ಷವಿತ್ತಲ್ಲ. ತಾವು ಏಕೆ ಕೊಡಲಿಲ್ಲ? ಅದರ ಬಗ್ಗೆ ಮಾತನಾಡಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, atleast ವಿಮಾನದಲ್ಲಿ ಮೃತ ದೇಹವನ್ನು ತೆಗೆದುಕೊಂಡು ಹೋಗುವುದಕ್ಕೆ ಮತ್ತು ಅಂತ್ಯ ಸಂಸ್ಕಾರ ಮಾಡುವುದಕ್ಕೆ ಅದರ ಖರ್ಚು ಕೊಡಲಿಲ್ಲ. ಇದನ್ನು ಅಪಮಾನ ಎಂದು ಹೇಳುತ್ತೇನೆ. ಡಾ॥ ಬಿ.ಆರ್. ಅಂಬೇಡ್ಕರ್‌ರವರ ಜೀವನದಲ್ಲಿ ... **(ಗೊಂದಲ)** ಮಾನ್ಯ ತಿಮ್ಮಾಪೂರವರ ಬಗ್ಗೆ ಅಪಾರವಾದ ಗೌರವವಿದೆ.

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನೀವು ಮಾತನಾಡುತ್ತಿರುವಂತಹ ಮಾತು ಸೂಕ್ತವಲ್ಲ. ಆ ಪಕ್ಷದಲ್ಲಿದ್ದುಕೊಂಡು, ಈ ಬಗ್ಗೆ ಮಾತನಾಡುವಂತಹ ನೈತಿಕತೆ ಇಲ್ಲ.

**ಶ್ರೀ ಎನ್. ರವಿಕುಮಾರ್:–** ಡಾ॥ ಅಂಬೇಡ್ಕರ್‌ರವರನ್ನು ಕಾಂಗ್ರೆಸ್ ಪಾರ್ಟಿಯೇ ಯಾವ ರೀತಿ ನೋಡಿತು...

**ಶ್ರೀ ಆರ್. ಬಿ. ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ರವಿಕುಮಾರ್‌ರವರೇ, ನೀವು ಒಬ್ಬ ಶೂದ್ರಾಗಿ ಹುಟ್ಟಿ ಬಂದಿಲ್ಲ. ನಾವು ಬೇರೆ ಪಾರ್ಟಿಯಲಿದ್ದೇವೆ. ಶೂದ್ರರು ಇರುತ್ತಾರೆಂದರೆ, ಅಲ್ಲಿ ಸುಧಾರಣೆಯಾಗುತ್ತದೆ. ಸುಧಾರಣೆ ಮಾಡುವ ಕ್ರಮಗಳೇನು ಎಂದು ಕೇಳುತ್ತೇನೆ.

(ಗೊಂದಲ)

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಮಾನ್ಯ ತಿಮ್ಮಾಪೂರರವರೇ, ಒಂದೇ ನಿಮಿಷ. ನಾವು ಮಾತನಾಡುವುದಕ್ಕೆ ಸ್ವಾತಂತ್ರ್ಯವಿದೆ. ಆದರೆ ನಾವು ಆತ್ಮ ವಂಚನೆಯನ್ನು ಮಾಡಿಕೊಂಡು, ಮಾತನಾಡಬಾರದು.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್‌ರವರು ಮಾತನಾಡುತ್ತಾ, ಸನ್ಮಾನ್ಯ ಬಾಬು ಜಗಜೀವನ್ ರಾಂ ಅವರಿಗೆ ಜನತಾ ಪಕ್ಷವಿದ್ದಾಗ ಯಾವ ರೀತಿಯಾಯಿತು ಎಂಬ ಬಗ್ಗೆ ಹೇಳಿದರು. ಆದುದರಿಂದ ನಾನು ಒಂದೇ ಒಂದು ಉದಾಹರಣೆಯನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಸನ್ಮಾನ್ಯ ರಾಜೀವ್ ಗಾಂಧಿಯವರು ಪ್ರಧಾನಿ ಮಂತ್ರಿಯಾಗಿದ್ದಾಗ, ಸನ್ಮಾನ್ಯ ಬಾಬು ಜಗಜೀವನ್ ರಾಂ ಅವರು ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರನ್ನು ಭೇಟಿಯಾಗಬೇಕೆಂದು ಒಂದು ಪತ್ರವನ್ನು ಪ್ರಧಾನಿ ಮಂತ್ರಿಯವರ ಕಛೇರಿ ನಂ.7, ರೇಸ್ ಕೋರ್ಸ್, ದೆಹಲಿ ಕಳುಹಿಸಿಕೊಡುತ್ತಾರೆ. ಆಗ ಪ್ರಧಾನಿ ಮಂತ್ರಿಯವರು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವಾಗ ಬೇಕಾದರೂ ಭೇಟಿಯಾಗಲಿ ಎಂದು ಹೇಳಿ ಪತ್ರವನ್ನು ಕಳುಹಿಸಿದಾಗ, ಅವರು ಹಳೆಯ Ambassador Car ನಲ್ಲಿ ಮಾನ್ಯ ಪ್ರಧಾನ ಮಂತ್ರಿಯವರ ಅಧಿಕೃತ ಕಛೇರಿಗೆ ಬಂದಾಗ, ಮಾನ್ಯ ರಾಜೀವ್ ಗಾಂಧಿಯವರು ಹೋಗಿ ಬಾಗಿಲಿನಲ್ಲಿ ನಿಂತುಕೊಂಡಿರುತ್ತಾರೆ. ಆಗ ಮಾನ್ಯ ರಾಜೀವ್ ಗಾಂಧಿಯವರು ಬಾಗಿಲು ತೆರೆದು ಒಳಗಡೆಗೆ ಅವರನ್ನು ಬರಮಾಡಿಕೊಳ್ಳುತ್ತಾರೆ. ತಾವು ಇಷ್ಟು ದೂರದಿಂದ ಬರುವ ಅವಶ್ಯಕತೆಯಿರಲಿಲ್ಲ. ನಿಮ್ಮದು ಕೆಲಸ ಏನಾದರೂ ಹೇಳಿದ್ದರೆ, ನಾನೇ ಅಲ್ಲಿಗೆ ಬಂದು ಕೆಲಸವನ್ನು ಮಾಡಿಕೊಡುತ್ತೇನೆಂದು ಮಾನ್ಯ ರಾಜೀವ್ ಗಾಂಧಿಯವರು ಹೇಳುತ್ತಾರೆ. ಅವರು ಒಳಗಡೆ ಕುಳಿತುಕೊಂಡು ನಾನು ಯಾವುದೋ ಒಂದು ಕಾರಣಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಬೇರೆ ಪಕ್ಷಕ್ಕೆ ಹೋಗಿಬಿಟ್ಟೆ. ನಾನು ಸಾಯಬೇಕಾದರೆ, ಕಾಂಗ್ರೆಸ್‌ನ ಪಕ್ಷದಲ್ಲಿದ್ದು ಸಾಯಬೇಕು. ಕಾಂಗ್ರೆಸ್ ಬಾವುಟವನ್ನು ನನ್ನ ಮೇಲೆ ಹೊತ್ತಿಕೊಂಡು ಬಿಟ್ಟು ಸಾಯಬೇಕು ಎನ್ನುವಂತಹ ಒಂದು ಮಾತನ್ನು ಹೇಳಿ ಹೋಗುತ್ತಾರೆ.

**ಸಭಾಪತಿಯವರು:–** ಮಾನ್ಯ ತಿಮ್ಮಾಪೂರರವರೇ ಮಾತನಾಡಿ.

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್:–**ಇಡೀ ಕಾಂಗ್ರೆಸ್ ಬಗ್ಗೆ...

**(ಗೊಂದಲ)**

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಭಾರತ ರತ್ನ, ಉಪ ಪ್ರಧಾನಿ ಇದರ ಬಗ್ಗೆ ಬಹಳ ಚೆನ್ನಾಗಿ ಹೇಳುತ್ತಿದ್ದಾರೆ.

**ಸಭಾಪತಿಯವರು:–** ಸಂವಿಧಾನದ ಬಗ್ಗೆ ಚರ್ಚೆ ಮಾಡಿ.

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಅಸ್ಪೃಶ್ಯತೆಯನ್ನು ಹೋಗಲಾಡಿಸುವುದರ ಬಗ್ಗೆ ನಾನು ಹೇಳಬೇಕಲ್ಲ. ನಾನು ಸಂವಿಧಾನದ ಬಗ್ಗೆ ಚರ್ಚೆ ಮಾಡುತ್ತಿದ್ದೇನೆ. ಆ ಚೌಕಟ್ಟಿನಲ್ಲಿಯೇ ನಾನು ಹೇಳುತ್ತಿದ್ದೇನೆ. ಭಾರತ ರತ್ನ..

**ಶ್ರೀ ಎಸ್. ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸದಸ್ಯರಾದ ತಿಮ್ಮಾಪೂರವರು ಬಹಳ ಚೆನ್ನಾಗಿ ಮತ್ತು ವಿಸ್ತೃತವಾಗಿ ಚರ್ಚೆ ಮಾಡುತ್ತಿದ್ದರು. ಆನಂತರ ಭಾರತ ರತ್ನ ಪ್ರಶಸ್ತಿ ಬಗ್ಗೆ ಹೇಳಿದರು. 'ನಡೆದಾಡುವ ದೇವರು' ಎಂದು ಖ್ಯಾತರಾಗಿರುವ ತ್ರಿವಿಧ ದಾಸೋಹಿ ತುಮಕೂರು ಸಿದ್ದಗಂಗಾ ಶ್ರೀ ಶಿವಕುಮಾರ ಸ್ವಾಮೀಜಿಯವರಿಗೆ ಭಾರತ ರತ್ನ ಪ್ರಶಸ್ತಿ ಕೊಡಿ ಎಂದು ರಾಜ್ಯದ ಆರೂವರೆ ಕೋಟಿ ಜನರು ಹೇಳಿದರು. ಅವರು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನನಗೆ ಸಂತೋಷ ತರುವ ಮಾತನ್ನು ಹೇಳಿದ್ದಾರೆ. ಡಾ॥ ಬಿ.ಆರ್. ಅಂಬೇಡ್ಕರ್‌ರವರಿಗೆ ಭಾರತ ರತ್ನ ಪ್ರಶಸ್ತಿಯನ್ನು ಕೊಟ್ಟರು. ಮಾನ್ಯ ಬಾಬು ಜಗಜೀವನ್ ರಾಂ ಅವರನ್ನು ಉಪ ಪ್ರಧಾನಿ ಮಂತ್ರಿಯನ್ನಾಗಿ ಮಾಡುತ್ತೇವೆಂದರು. ನಾನು ಕೇಳುವುದೇನೆಂದರೆ, ಶ್ರೀ ಬಾಬು ಜಗಜೀವನ್ ರಾಂ, ಡಾ॥ ಬಿ.ಆರ್. ಅಂಬೇಡ್ಕರ್‌ರವರ ಅಸ್ಪೃಶ್ಯತೆಯ ಬಗ್ಗೆ ಹೇಳಿರಿ. ಅವರನ್ನೇ ನೀವು ಅಸ್ಪೃಶ್ಯರನ್ನಾಗಿ ಇಟ್ಟಿದ್ದೀರಿ. ಅದರ ಬಗ್ಗೆ ಮಾತನಾಡಿರಿ. ಡಾ॥ ಬಿ.ಆರ್. ಅಂಬೇಡ್ಕರ್‌ರವರನ್ನು ಕೊಲೆ ಮಾಡುವುದಕ್ಕೆ ಎಷ್ಟು ಸಲ ಪ್ರಯತ್ನವಾಯಿತು? **(ಗೊಂದಲ)** ಹಿಂದೂ ಮಹಾ ಸಭೆ ಬಗ್ಗೆ ನಾನು ಉದಾಹರಣೆ ಬೇಕಾದರೆ ಕೊಡುತ್ತೇನೆ.

**ಡಾ. ಕೆ. ಸುಧಾಕರ್ (ವೈದ್ಯಕೀಯ ಶಿಕ್ಷಣ ಸಚಿವರು):–** ದಯವಿಟ್ಟು, ಇದು ರೆಕಾರ್ಡ್‌ಗೆ ಹೋಗಬಾರದು.

**(ಗೊಂದಲ)**

**ಶ್ರೀ ಆರ್.ಬಿ. ತಿಮ್ಮಾಪೂರ:–** ಈ ದೇಶದ ಬಗ್ಗೆ ಇವತ್ತು ಹಲವಾರು ವಿಚಾರಧಾರೆಗಳು ನಡೆದು ಹೋಗಿವೆ.

**(ಗೊಂದಲ)**

**ಸಭಾಪತಿಯವರು:–** ಈ ದೇಶದಲ್ಲಿರುವ ಯಾವುದೇ ಪಕ್ಷದ ಬಗ್ಗೆಯಾಗಲಿ, ಯಾವುದೇ ಸಂಘಟನೆ ಬಗ್ಗೆಯಾಗಲೀ ...ಅವರು ಮಾತನಾಡುವುದಕ್ಕೆ ಬಿಡಿ. ಅವರವರ ಭಾವನೆಗೆ ಬಂದಂತೆ ಹೇಳುತ್ತಾರೆ.

**(ಗೊಂದಲ)**

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ಯಾವುದೇ ಪಕ್ಷದ ಬಗ್ಗೆ ಹೇಳಿಲ್ಲ. ಮಾನ್ಯ ರವಿಕುಮಾರ್ ನೀನು ಒಬ್ಬ ಶೂದ್ರ ಮಾರಾಯ. ನೀನು ಆ ಪಕ್ಷದಲ್ಲಿದ್ದೀಯ. ನೀನು ಆ ಪಕ್ಷದಲ್ಲಿದ್ದುಕೊಂಡು ಅಸ್ಪೃಶ್ಯತೆಯ ಬಗ್ಗೆ ಅಲ್ಲಿ ಕೇಳು. ಅಸ್ಪೃಶ್ಯತೆಯನ್ನು ಯಾವಾಗ ನಿವಾರಣೆ ಮಾಡುತ್ತೀರಿ? ನೀನು ಸಹಪಂಕ್ತಿ ಭೋಜನ ಉಡುಪಿಯಲ್ಲಿ ಮಾಡಿಸುವುದಕ್ಕಾಗುತ್ತದೆಯೇ? ಈ ದೇಶದಲ್ಲಿ ಮುಖ್ಯಮಂತ್ರಿಗಳು, ಪ್ರಧಾನಿ ಮಂತ್ರಿಗಳು ಅಸ್ಪೃಶ್ಯತೆಯನ್ನು ಅನುಭವಿಸುವಂತಹ ನೋವು ನಮ್ಮಲ್ಲಿ ಇವತ್ತು ಕಾಡುತ್ತಿದೆ.

**ಡಾ: ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಹಿಂದುಳಿದ ವರ್ಗದವರನ್ನೇ ರಾಷ್ಟ್ರಪತಿಯನ್ನಾಗಿ ಮಾಡಿದ್ದಾರೆ. ಒಬ್ಬ ಹಿಂದುಳಿದ ವರ್ಗದವರು ಪ್ರಧಾನಮಂತ್ರಿಯಾಗಿದ್ದಾರೆ. ಇದಕ್ಕಿಂತ ಇನ್ನೇನು ಉದಾಹರಣೆ ಬೇಕು ಹೇಳಿ. ಇದುವರೆಗೂ ಕಾಂಗ್ರೆಸ್‌ನಲ್ಲಿ ಹಿಂದುಳಿದ ವರ್ಗದವರು ಯಾರಾದರೂ ಒಬ್ಬರು ಪ್ರಧಾನ ಮಂತ್ರಿಯಾಗಿದ್ದಾರೆಯೇ? ಇದರ ಬಗ್ಗೆ ಹೇಳಿ, ಯಾರೂ ಆಗಿಲ್ಲ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಸಂವಿಧಾನದ ಬಗ್ಗೆ ಮಾತನಾಡತಕ್ಕಂತಹವರು,

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ. ಕೆ.ಸುಧಾಕರ್:–** ಇವತ್ತು ಸಾಮಾನ್ಯ ಹಿಂದುಳಿದ ವರ್ಗದವರು ಪ್ರಧಾನ ಮಂತ್ರಿ ಆದರು. ಅಸ್ಪೃಶ್ಯರು ರಾಷ್ಟ್ರಪತಿಗಳಾಗಿದ್ದಾರೆ.

**(ಗೊಂದಲ)**

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ತಕ್ಷಣ ಹಿಂದುಳಿದ ವರ್ಗದವರು ಮಾನ್ಯ ತಿಮ್ಮಾಪೂರರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಹೋಗುವುದಕ್ಕಾಗುತ್ತದೆಯೇ?

**(ಗೊಂದಲ)**

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿನ್ನೆ ಮೊನ್ನೆ ತಾನೇ ಬಿ.ಜೆ.ಪಿ.ಗೆ ಹೋಗಿರುವವರು ಮಾತನಾಡುವುದು ಬೇಡ. ಬಿ.ಜೆ.ಪಿಗೆ ಹೋಗಿ season ಆಗಿ, ಆದರ ಚಿಂತೆಯಿಲ್ಲ. ಬಿ.ಜೆ.ಪಿಯಲ್ಲಿರುವ ಹೊಸದಾಗಿ ಹೋಗಿರುವ ಸದಸ್ಯರು ಮಾತನಾಡುವುದು ಬೇಡ. ಆದರೆ ಈ ಪಕ್ಷದಲ್ಲಿರುವ ಹಳೆಯ ಬಿ.ಜೆ.ಪಿ ಸದಸ್ಯರು ಮಾತನಾಡಲಿ.

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ದೇವೇಗೌಡರಿಗೆ ಅವಮಾನ ಮಾಡಿ ಕಳುಹಿಸಿರುವುದನ್ನು ಮರೆತು ಬಿಟ್ಟರಾ?

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್:–** ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ ಕೂರಿಸಿ, ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಇಲ್ಲಿ ಪ್ರಯತ್ನ ಹಾಕಿದರು. **(ಗೊಂದಲ)** ಅದು ಬಿಟ್ಟು ಭಾಷಣ ...

**(ಗೊಂದಲ)**

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ರಾಜಕಾರಣದ ಬಗ್ಗೆ ಮಾತನಾಡುತ್ತಿಲ್ಲ. ಮನುಷ್ಯನನ್ನು ಮಾನವನನ್ನಾಗಿ ಕಾಣಬೇಕೆಂಬ ಧರ್ಮ ಬೇಕೆಂದು ನಾನು ನಿಂತುಕೊಂಡಿದ್ದೇನೆ. ನನ್ನ ನೋವು ಅರ್ಥವಾಗುತ್ತಿಲ್ಲ. ದೇಶದಲ್ಲಿ ಪ್ರಧಾನಿಯನ್ನಾಗಿ ಮಾಡಿದ್ದೇವೆ. ರಾಜ್ಯದಲ್ಲಿ ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದೇವೆ ಎಂಬುದು ಬೇಡ. ನನಗೆ ಬೇಕಾದದ್ದು ಯಾವುದೆಂದರೆ, ಮಾನವನನ್ನು ಮಾನವನಾಗಿ ಕಾಣತಕ್ಕಂತಹ ಧರ್ಮ ನನಗೆ ಬೇಕಾಗಿದೆ. ಶ್ರೀಮತಿ ಮೀರಕುಮಾರ್ ಅವರನ್ನು ಸ್ಪೀಕರ್ ಮಾಡಿದ್ದೇವೆ ಎನ್ನುತ್ತೀರಿ. ಅಸ್ಪೃಶ್ಯರ ಜೋಡಿ ಸಂಬಂಧ ಮಾಡುತ್ತೀಯಾ? ಕೈ ಎತ್ತಿ ಏಕೆ ಮಾತನಾಡುತ್ತೀರಾ? ಹಿಂದೂ ರಾಷ್ಟ್ರ ಕಟ್ಟುವುದರ ಬಗ್ಗೆ ನಿಮ್ಮಲ್ಲಿ ಮಾತನಾಡುವುದೇನಾದರೂ ಇದೆಯೇ? ಈ ದೇಶದಲ್ಲಿ ಯಾರನ್ನು ಎಲ್ಲೆಲ್ಲಿ ಇಡಬೇಕೆಂದು ಇಟ್ಟಿದ್ದೀರಿ? ಒಂದು ವೇಳೆ ಅವೊತ್ತು ಏನಾದರೂ ನಾವು ಮತಾಂತರ ಹೊಂದಿದ್ದರೆ ಇವತ್ತು ಈ ದೇಶದ ಚಿತ್ರ ಇರುತ್ತಿರಲಿಲ್ಲ. ಎರಡು ಸಾವಿರ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವರ್ಷಗಳವರೆಗೇನು; ನಾವು ಅನುಭವಿಸಿರುವ ನೋವು, ಅಸಹ್ಯಗಳನ್ನು–ಅಸ್ಪೃಶ್ಯ ಹೋಗಿದೆ ಎನ್ನುವಂತಹ ಮಾತನ್ನು ನಾವು ಯಾವತ್ತು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ನಾವು ಆ ನೋವನ್ನು ಅನುಭವಿಸುತ್ತಿದ್ದೇವೆ. ಇನ್ನು ಮುಂದೆ ಇಂತಹ ನೋವನ್ನು ಹೋಗಲಾಡಿಸುವಂತಹ ಧರ್ಮವನ್ನು ಹುಡಕಬೇಕೇ, ಅಥವಾ ಬೇಡವೇ? ಮಾನವ ಮಾನವರನ್ನಾಗಿ ಕಾಣುವಂತಹ ಧರ್ಮವನ್ನು ಹುಡಕಬೇಕು ಅಲ್ಲವೇ? ಮಾನ್ಯ ಗುಂಡಾರಾವ್‌ರವರು ಹುಬ್ಬಳ್ಳಿಯ ಮೂರು ಸಾವಿರ ಮಠಕ್ಕೆ ಬಂದಿದ್ದರು. ಹೀಗೆ ಜಾತಿಯನ್ನಿಟ್ಟುಕೊಂಡು ಹೋದ್ರಿ ಎಂದರೆ, ಮೂರು ಸಾವಿರ ಮಠವಾಗಿ ಉಳಿಯುವುದಿಲ್ಲ. ಮೂರು ಮಠವಾಗಿ ಉಳಿಯವುದಿಲ್ಲ ಎನ್ನುವ ಮಾತನ್ನು ನನಗೆ ಹೇಳಿದರು. ಆಗ ನಾನು ಮೊದಲ ವರ್ಷದ ಎಲ್.ಎಲ್.ಬಿ. ಓದುತ್ತಿದ್ದೆ. ಹಿಂದೂ ರಾಷ್ಟ್ರ ಕಟ್ಟಬೇಕೆನ್ನುತ್ತೀರಿ. ಇವತ್ತು ಎಲ್ಲಾ ಜಾತಿಯವರನ್ನು ಕರೆದುಕೊಂಡು ಹೋಗುವಂತಹ ಕೆಲಸವಾಗಬೇಕಾಗಿದೆ. ನಾವು ಅನುಭವಿಸುವಂತಹ ನೋವು ನಮ್ಮ ಮಕ್ಕಳಿಗೆ ಬರಬಾರದು. ನಾವು ಎಲ್ಲಿಯಾದರೂ ಹೋದಾಗ, ನಾಯಿಗಳು ಮಂದಿರಗಳಿಗೆ ಹೋಗಿ ಬರುತ್ತವೆ. ಅದಕ್ಕೆ ನಮ್ಮ ಮಕ್ಕಳು ಕೇಳುತ್ತಾರೆ. ಅಪ್ಪಾಜಿ ಆ ನಾಯಿ ಮಂದಿರದ ಒಳಗೆ ಹೋಗಿ ಬಂತು. ಆದರೆ ನಾವು ಮಂದಿರದ ಒಳಗಡೆ ಹೋಗಬಾರದೆ ಎಂದು ಕೇಳುತ್ತಾರೆ. ಇದಕ್ಕೆ ಉತ್ತರ ಏನು ಕೊಡುತ್ತೀರಾ? ನಾಯಿ ಮಂದಿರಗಳಿಗೆ ಹೋಗಬಹುದು. ಆದರೆ ಮನುಷ್ಯ ಹೋಗುವಂತಿಲ್ಲ. ಇದು ಎಂತಹ ಪರಿಪಾಠ? ಇದು ಹಿಂದೂ ಧರ್ಮ, ಹಿಂದೂ ಪ್ರತಿಪಾದಕರಿಗೆ ಇದೇನು ಸರಿ ಅನಿಸುತ್ತಿದೆಯಾ? ನಮ್ಮದು ಬಹಳ ಅದ್ಭುತವಿದೆ. ಈ ಶ್ರೇಣೀಕೃತ ಜಾತಿಯಲ್ಲಿ ಎಂತಹದು ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಈ ಹಿಂದೆ ಅವರು ಆಡಳಿತ ಪಕ್ಷದಲ್ಲಿದ್ದುಕೊಂಡು ಆಡಳಿತವನ್ನು ನಡೆಸಿದ್ದಾರೆ. ಈಗ ನಾವು ಆಡಳಿತ ಪಕ್ಷದಲ್ಲಿದ್ದು ಆಡಳಿತವನ್ನು ನಡೆಸುತ್ತಿದ್ದೇವೆ. ಈ ವ್ಯವಸ್ಥೆ ಯಾವ ರೀತಿ ಇದೆ ಎಂಬದನ್ನು ನಾವು ನೋಡಿಕೊಂಡು ಬಂದಿದ್ದೇನೆ. ಇವತ್ತು ಯಾವಾದಾದರೊಂದು ದೇವಸ್ಥಾನದಲ್ಲಿ ಅಸ್ಪೃಶ್ಯತೆ ಇದೆ, ಇಂತಹ ನಿರ್ದಿಷ್ಟ ದೇವಸ್ಥಾನದಲ್ಲಿ ನನ್ನ ಮಕ್ಕಳು ಹೋದಾಗ, ಈ ದೇವಸ್ಥಾನದಲ್ಲಿ ನಾಯಿ ಹೋಗುತ್ತಿದೆ. ಆದರೆ ನಾವು ಹೋಗಬಾರದಾ ಎಂದು ಕೇಳಿದ್ದಾರೆ ಎನ್ನುವುದಾದರೆ, ಆ ದೇವಸ್ಥಾನದ ಹೆಸರನ್ನು ಹೇಳಲಿ. ಅಸ್ಪೃಶ್ಯತೆ ಏನಾದರೂ ಜೀವಂತಿಕೆಯಾಗಿ ಇದ್ದರೆ, ಅದಕ್ಕೆ ನಾವು ನೀವೆಲ್ಲರೂ ಹೊಣೆಗಾರರು.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಬಿಡ್ರಿ. ಇಲ್ಲಿ ತಾವು ಮಾತನಾಡುವುದಲ್ಲ. ತಾವು ಅನುಭವಿಸಿಲ್ಲವೆಂಬುದು ನನಗೆ ಕಾಣಿಸುತ್ತದೆ. ಈ ರೀತಿ ಮಾತನಾಡುತ್ತೀರಾ ಎಂದು ನಾನು ಅಂದುಕೊಂಡಿರಲಿಲ್ಲ.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾನಾಯಕರೇ ದಯವಿಟ್ಟು ಕೇಳಿ. ತಾವು ಆ ಇಲಾಖೆಯ ಸಚಿವರಾಗಿದ್ದೀರಿ. ಒಂದು ವಾರದ ಹಿಂದೆ ಪ್ರಜಾವಾಣಿ ಪತ್ರಿಕೆಯಲ್ಲಿ ಬರೆದಿದ್ದಾರೆ, ಇವತ್ತಿಗೂ ಸಹ ದೇವಸ್ಥಾನದೊಳಗಡೆ ಜನರನ್ನು ಬಿಡಲಿಲ್ಲ. ಆ ಊರಿನಲ್ಲಿರುವಂತಹ ಹೋಟೆಲ್‌ನಲ್ಲಿ ಟೀ ಕುಡಿಯವುದಕ್ಕೆ ಆಗಲಿಲ್ಲ. ಅವರಿಗೆ ಅಂತಾನೇ ಪ್ರತ್ಯೇಕವಾಗಿ ಟೀ ಇಟ್ಟಿದ್ದಾರೆ. ಆ ಲೋಟದಲ್ಲಿ ಟೀಯನ್ನು ಹಾಕಿಕೊಂಡು ಕುಡಿದ ನಂತರ, ಆ ಲೋಟವನ್ನು ತೊಳೆದು ಅಲ್ಲಿಯೇ ಇಡಬೇಕು. ಅವರು ದೇವಸ್ಥಾನದೊಳಗಡೆ ಹೋಗುವಂತಿಲ್ಲ.

**(ಗೊಂದಲ)**

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಸತ್ಯ ಎಂಬುದು ಹೊರಗೆ ಬರಬೇಕು. ಯಾವ ದೇವಸ್ಥಾನದಲ್ಲಿಯೂ ಇಂತಹ ಅಸ್ಪೃಶ್ಯತೆ ಆಚರಣೆಯಲ್ಲಿ ಇಲ್ಲವೆಂದು ಹೇಳಿಬಿಡಲಿ, ಇವತ್ತೇ ನಾನು ರಾಜಿನಾಮೆಯನ್ನು ಕೊಡುತ್ತೇನೆ. ಇಲ್ಲಿ ಶೂದ್ರರು ಪ್ರತಿಪಾದನೆ ಮಾಡತಕ್ಕಂತಹದ್ದಾಗಬೇಕು ನೀವು ಸಚಿವರಿದ್ದೀರಿ, ಏನಾದರೂ ಕೇಳಿಕೊಳ್ಳಿ. ಅದನ್ನು ಮಾನ್ಯ ಸಚಿವರು ಸರಿಪಡಿಸಬಹುದು.

**(ಗೊಂದಲ)**

(ಮುಂದು)

(416) 12.03.2020 11.40 ಟಿಸಿಹೆಚ್–ಎಂಡಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಇವತ್ತಿನ ದಿವಸ ರಾಜ್ಯದಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅಸ್ಪೃಶ್ಯತೆ ಬಂದಿರುವುದೇ? ಅದನ್ನು ಕೂಡ ಮಾನ್ಯ ಶ್ರೀ ಆರ್.ಬಿ.ತಿಮ್ಮಾಪೂರ ಹೇಳಲಿ. ಸಮಾಜದಲ್ಲಿ ಇನ್ನೂ ಅಸ್ಪೃಶ್ಯತೆ ಜೀವಂತವಾಗಿದೆ ಎಂದರೆ, ಅದಕ್ಕೆ ನಾವು ನೀವು ಮಾತ್ರವಲ್ಲ, ಅದಕ್ಕೆ ನಾವೆಲ್ಲರೂ ಕಾರಣೀಕರ್ತರು. ನಾವೆಲ್ಲರೂ ಅದನ್ನು ಒಟ್ಟಾಗಿ ಸರಿಪಡಿಸಬೇಕಾದರೆ, ಅದಕ್ಕೆ ನಿರ್ದಿಷ್ಟವಾದಂತಹ ಪ್ರಕರಣಗಳನ್ನು ಹೇಳಲಿ. ನಾನು ವಿರೋಧಪಕ್ಷದಲ್ಲಿದ್ದಾಗ ಚಿತ್ರದುರ್ಗ ಜಿಲ್ಲೆಯಲ್ಲಿ ಯಾವುದೋ ಒಂದು ಗ್ರಾಮದಲ್ಲಿ ಅಸ್ಪೃಶ್ಯತೆ ನಡೆದಾಗ ಅದರ ಬಗ್ಗೆ ನಾನು ಶೂನ್ಯ ವೇಳೆಯಲ್ಲಿ ಪ್ರಶ್ನೆ ಮಾಡಿದ್ದೆನು. ಆಗ ಸರ್ಕಾರದಲ್ಲಿದ್ದಂತಹ ಮಾನ್ಯ ಮುಜರಾಯಿ ಸಚಿವರು ಅಲ್ಲಿಗೆ ಭೇಟಿಕೊಟ್ಟು ಸರಿಪಡಿಸಿ ಬಂದಿದ್ದರು. ಇವತ್ತು ಕೂಡ ಶ್ರೀ ಆರ್.ಬಿ.ತಿಮ್ಮಾಪೂರ ರವರು ಮಾತನಾಡುವಾಗ, ಇಂತಹ ನಿರ್ದಿಷ್ಟ ಪ್ರಕರಣಗಳಿವೆಯೆಂದು ಅದು ಯಾವುದೇ ರೂಪದಲ್ಲಿ ತರಲಿ, ಅದಕ್ಕೆ ಸರ್ಕಾರ ನಿಮ್ಮ ಪರವಾಗಿದ್ದು, ಆ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಅಸ್ಪೃಶ್ಯತೆ ...

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈಗ ಅಸ್ಪೃಶ್ಯತೆ ಬಗ್ಗೆ ಚರ್ಚೆ ನಡೆಯುತ್ತಿದೆ, ಆಡಳಿತ ಪಕ್ಷದಲ್ಲಿ ಮಾನ್ಯ ಮುಜರಾಯಿ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಕೂಡ ಇದ್ದಾರೆ. ಅವರು ಇದಕ್ಕೆ ಉತ್ತರ ಕೊಡಲಿ. ರಾಜ್ಯದಲ್ಲಿ ಇಂತಹ ಅಸ್ಪೃಶ್ಯತೆ ಜೀವಂತವಾಗಿದ್ದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಲಿ.

**ಶ್ರೀ ಅರುಣ ಶಹಾಪುರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,... ಶ್ರೀ ಆರ್.ಬಿ.ತಿಮ್ಮಾಪೂರ ರವರೇ, ತಾವು ಒಂದೇ ಒಂದು ನಿಮಿಷ yield ಆಗಬೇಕು.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಹಳ್ಳಿಗಳಲ್ಲಿ ಅಸ್ಪೃಶ್ಯತೆ ಇನ್ನೂ ತಾಂಡವವಾಡುತ್ತಿದೆ. ಈ ರಾಜಕಾರಣಿಗಳು ನನ್ನನ್ನು ಪದೇ ಪದೇ ಚುನಾವಣೆಯಲ್ಲಿ ಆಯ್ಕೆ ಮಾಡಿ ಕಳುಹಿಸಬೇಕಾದರೆ, ನಾನು ಅಸ್ಪೃಶ್ಯತೆಗೆ ಒಳಗಾಗಬೇಕು. ನಾನು ಅಸ್ಪೃಶ್ಯತೆಗೆ ಒಳಗಾದರೆ ಮಾತ್ರ 1, 5, 6 ಮತ್ತು 10 ಬಾರಿ ನನ್ನನ್ನು ಆಯ್ಕೆ ಮಾಡಿ ಕಳುಹಿಸಲು ಸಾಧ್ಯ. ಯಾರು ಮಸಿ ಇರತಕ್ಕಂಥ ಲೋಟವನ್ನು ಜೇಬಿನಲ್ಲಿಟ್ಟುಕೊಂಡು ಟೀ ಕುಡಿಯುತ್ತಾರಲ್ಲಾ, ಅಂತಹವರು ನಮಗೆ ಸರಿಯಾದ ವ್ಯಕ್ತಿ ಆಗಿದ್ದಾನೆಂದು ಸಾಕಷ್ಟು ಬಾರಿ ಆಯ್ಕೆ ಮಾಡಿ ಕಳುಹಿಸುತ್ತಾರೆ. ಇದು ನನಗೆ ಚೆನ್ನಾಗಿ ಗೊತ್ತಿದೆ.

**ಡಾ|| ವೈ.ಎ.ನಾರಾಯಣಸ್ವಾಮಿ:–** ಶ್ರೀ ಆರ್.ಬಿ.ತಿಮ್ಮಾಪೂರರವರೇ ತಾವು ಸಂವಿಧಾನದ ಬಗ್ಗೆ ಚರ್ಚೆ ಮಾಡಿ. ತಾವು ಕೂಡ ಈ ರಾಜ್ಯದಲ್ಲಿ ಎರಡು ಬಾರಿ ಸಚಿವರಾಗಿದ್ದೀರಿ, ಈ ರಾಜ್ಯಕ್ಕೆ ನಿಮ್ಮ ಕೊಡುಗೆ ಏನು ಹೇಳಿ?

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಡಾ|| ವೈ.ಎ.ನಾರಾಯಣಸ್ವಾಮಿ ಯವರೇ, ನಾನು ಅನುಭವಿಸಿದ ನೋವು ಏನೆಂದು ತಮಗೆ ಗೊತ್ತಿಲ್ಲ. ನಾನು ಹೇಳಿದ್ದನ್ನು ಕೇಳುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ? ನಿಮಗೆ ಆ ಸಹನೆ ಕೂಡ ಇಲ್ಲವಲ್ಲಾ.

**ಡಾ|| ವೈ.ಎ.ನಾರಾಯಣಸ್ವಾಮಿ:–** ಶ್ರೀ ಆರ್.ಬಿ.ತಿಮ್ಮಾಪೂರವರೇ, ತಾವು ಈ ರಾಜ್ಯದಲ್ಲಿ ಎರಡು ಬಾರಿ ಸಚಿವರಾಗಿದ್ದೀರಿ, ಈ ರಾಜ್ಯಕ್ಕೆ ನಿಮ್ಮ ಕೊಡುಗೆ ಏನು ಹೇಳಿ?

**ಶ್ರೀ ಆರ್.ಬಿ.ತಿಮ್ಮಾಪೂರ:–** ಡಾ|| ವೈ.ಎ.ನಾರಾಯಣಸ್ವಾಮಿಯವರೇ, ಆಯಿತು, ಹೇಳುತ್ತೇನೆ ತಾವು ದಯವಿಟ್ಟು ಕುಳಿತುಕೊಳ್ಳಿ, ಹೆಚ್ಚಿಗೆ ಅಸ್ಪೃಶ್ಯತೆಯನ್ನು ಯಾರು ಆಚರಿಸಿಕೊಂಡಿರುತ್ತಾನೋ ಅಂತಹ ವ್ಯಕ್ತಿಯನ್ನು ಆರಿಸಿ ಕಳುಹಿಸುತ್ತಿದ್ದಾರೆ. ಅವನು ಏನಾದರೂ ಲೋಟ ತೊಳೆದುಕೊಳ್ಳದೆ ನೇರವಾಗಿ ಟೀ ಕುಡಿದರೆ, ಅಂತಹವರನ್ನು ಚುನಾವಣೆಯಲ್ಲಿ ಆಯ್ಕೆ ಮಾಡುವುದಿಲ್ಲ. ಅಸ್ಪೃಶ್ಯತೆ ಆಚರಿಸದವನು ಒಂದು ಬಾರಿ ಗೆದ್ದರೆ, ಎರಡನೆಯ ಬಾರಿಗೆ ಮತ್ತೆ

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಅವನು ಚುನಾವಣೆಯಲ್ಲಿ ಆಯ್ಕೆಯಾಗಿ ಬರುವುದಿಲ್ಲ. ಎಂತಹ ಅದ್ಭುತವಾದ ಮನಸ್ಥಿತಿ ಇದೆ ನೋಡಿ. ಅವನು ಅದೇ ಜಾಗದಲ್ಲಿ ಇರಬೇಕು, ಅವನು ಹಾಗೆಯೇ ಇರಬೇಕು ಎಂಬ ವ್ಯಕ್ತಿ ಮಾತ್ರ ಇಲ್ಲಿಗೆ ಬರಬೇಕು, ಕುಳಿತುಕೊಂಡು ಹೋಗಬೇಕು ಅಷ್ಟೆ. ಇದು ಒಂದು ರಾಜಕಾರಣವಾಗಿದೆ. ಆದ್ದರಿಂದ ಅಧಿಕಾರದಲ್ಲಿರತಕ್ಕಂಥ ಪಕ್ಷಗಳ ಬಗ್ಗೆ ನಾನು ಚರ್ಚೆ ಮಾಡುತ್ತಿಲ್ಲ. ಹಿಂದೂ ರಾಷ್ಟ್ರ ಮಾಡಬೇಕೆಂದು ಹೊರಟಿದ್ದಾರೆ. ನಾನು ಕೂಡ ಒಬ್ಬ ಹಿಂದೂ ಆಗಿದ್ದೇನೆ. ಈ ರೀತಿಯಾದರೆ ನನ್ನ ಪರಿಸ್ಥಿತಿ ಏನು? ಹಾಗಾದರೆ, ನಾನು ಕೂಡ ಅಸ್ಪೃಶ್ಯತೆಯನ್ನು ಆಚರಿಸಿಕೊಂಡೇ ಇರಬೇಕೆ? ನಾವು ಸುಮಾರು 2000 ವರ್ಷಗಳಿಂದ ಈ ನೋವನ್ನು ಅನುಭವಿಸುತ್ತಿದ್ದೇವೆ. ನಮ್ಮ ತಂದೆ–ತಾಯಿಗಳು, ನಾವ್ಯಾರು ಮನೆಯಲ್ಲಿ ಎತ್ತುಗಳನ್ನು ಸಾಕುತ್ತಿರಲಿಲ್ಲ. ಸಾಹುಕಾರರ ಮನೆಯಲ್ಲಿ ದನಗಳನ್ನು ಸಾಕಿದ್ದರು, ನಾವು ಆ ದನಗಳ ಮೈ ತೊಳೆಯಬೇಕಿತ್ತು ಮತ್ತು ಸಗಣಿ ಬಳಿಯಬೇಕಿತ್ತು. ನಾವು ಆ ಕೆಲಸವನ್ನು ಮುಗಿಸಿಕೊಂಡು ಬರುವಾಗ ಹಿಂದಿನ ದಿವಸ ರಾತ್ರಿ ಉಳಿದಿರತಕ್ಕಂಥ ಆ ರೊಟ್ಟಿ ಮತ್ತು ತಂಗಳು ಅನ್ನವನ್ನು ಕೊಡುತ್ತಿದ್ದರು, ಅದನ್ನೇ ತಿಂದುಕೊಂಡು ಬರುತ್ತಿದ್ದೆವು. ನಮ್ಮ ಕಡೆ 200–300 ಚೀಲ ಜೋಳವನ್ನು ಬೆಳೆಯುತ್ತಾರೆ. ನನಗೆ ನಮ್ಮ ತಂದೆಯಿಂದ ಬಂದಂತಹ ಜಮೀನು ಇದ್ದು, ಅದರಲ್ಲಿ ಸುಮಾರು 200 ಚೀಲ ಜೋಳ ಬೆಳೆಯುತ್ತೇವೆ. ಈ ರೀತಿ ಇರುವಾಗ ಅನ್ಯೋನ್ಯತೆ ಬರುವುದಕ್ಕೆ ಹೇಗೆ ಸಾಧ್ಯ. ಈ ಸಮಾಜದಲ್ಲಿ ನಾನು ಒಬ್ಬನೇ ನೋವು ಅನುಭವಿಸದೇ, ನನ್ನ ಇಡೀ ಸಮುದಾಯವೇ ಅನುಭವಿಸತಕ್ಕಂಥ ನೋವು ಆಗಿದೆ. ಹಿಂದೂ ರಾಷ್ಟ್ರ ಕಟ್ಟತಕ್ಕಂಥವರಿಗೆ ಅಸ್ಪೃಶ್ಯತೆ ಬಗ್ಗೆ ಏನಾದರೂ ಗಮನ ಇದೆಯೇ ಎಂದು ನಾನು ಕೇಳುತ್ತಿದ್ದೇನೆ. ರಾಜಕಾರಣ ನಡೆಯುತ್ತದೆ ಮತ್ತು ನಡೆಯುತ್ತಿರುತ್ತದೆ. ಎಲ್ಲಿ ಯಾವಾಗ ಆಗಬೇಕಿದೆಯೋ ಅದು ಆಗುತ್ತಿದೆ. ಬಹಳ ಜನ ಮಾನ್ಯ ಸದಸ್ಯರು ರಾಮಮಂದಿರ ನಿರ್ಮಾಣ ಮಾಡಿ ಹಿಂದುತ್ವ ಮಾಡಲಾಗುತ್ತಿದೆಯೆಂದು ಹೇಳುತ್ತಿದ್ದಾರೆ. ಪಾಪ, ಕಂಬಾರರು, ಕುಂಬಾರರು, ದೋಬಿಗಳು ಮತ್ತು ಕ್ಷೌರಿಕರ ಗತಿ ಏನಾಗಬೇಕು. ಇವತ್ತಿನ ದಿವಸ ಅವರ್‍ಯಾರು ರಾಜಕಾರಣದ ನೆರಳನ್ನೇ ಕಂಡಿಲ್ಲ. ಹಾಗಾದರೆ, ಅವರ್‍ಯಾರು ಹಿಂದು ಧರ್ಮದವರಲ್ಲವೇ?

**ಶ್ರೀ ಲಹರ್ ಸಿಂಗ್ ಸಿರೋಯಾ(ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಅದಕ್ಕೆ ಅವರುಗಳೇ ಕಾರಣ. . .

**ಶ್ರೀ ಆರ್.ಬಿ.ತಿಮ್ಮಾಪೂರ:–** ಶ್ರೀ ಲಹರ್ ಸಿಂಗ್ ಸಿರೋಯಾ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಮೊದಲು ಅವರ ಮನಸ್ಸುಗಳು ಬದಲಾವಣೆ ಆಗಿಲ್ಲ. ಅವರವರ ಮನಸ್ಸುಗಳು ಬದಲಾವಣೆ ಆಗಬೇಕು. ಅಸ್ಪೃಶ್ಯತೆಯನ್ನು ಹೋಗಲಾಡಿಸುವುದಕ್ಕೋಸ್ಕರವೇ ಸಂವಿಧಾನವನ್ನು ರಚಿಸಿರುವ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್‌ರವರನ್ನು ನೆನಪಿಸಿಕೊಳ್ಳುತ್ತಾ ನಾನು ಇವತ್ತಿನ ದಿವಸ ಈ ಸದನದಲ್ಲಿ ನಿಂತು ಮಾತನಾಡುತ್ತಿದ್ದೇನೆ. ಇವತ್ತಿನ ದಿವಸ ನಾನು ಅವರನ್ನು ನೆನಪಿಸಿಕೊಳ್ಳುತ್ತಿದ್ದೇನೆ. ಮೈಸೂರು ಮಹಾರಾಜರನ್ನು ನೆನಪಿಸಿಕೊಳ್ಳುತ್ತಿದ್ದೇನೆ. ಶಾಹು ಮಹಾರಾಜರನ್ನು ನೆನಪಿಸಿಕೊಳ್ಳುತ್ತಿದ್ದೇನೆ. ಸ್ವಾತಂತ್ರ್ಯ ದೊರಕಿಸಿಕೊಡುವ ಸಂದರ್ಭದಲ್ಲಿ ನಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುತ್ತಿರಲಿಲ್ಲ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಗಿನ ಕಾಲದಲ್ಲಿ ಮೈಸೂರು ಮಹಾರಾಜರು ನಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿಕೊಂಡರು. Christian Missionaries ಕೂಡ ನಮ್ಮ ಮಕ್ಕಳನ್ನು ಸೇರಿಸಿಕೊಂಡರು. ನಮ್ಮನ್ನು ಎಲ್ಲೋ ದೂರ ಇಟ್ಟಾಗ, Christian Missionaries ಗಳು ನಮ್ಮನ್ನು ಒಳಗಡೆ ಕರೆದುಕೊಂಡರು. ಇವತ್ತಿನ ದಿವಸ Christian Missionaries ಗಳು ನನಗೆ ಸಹಾಯ ಮಾಡಿದ್ದೇವೆಂದು ಹೇಳಲಿ. ಹಿಂದೂ ಸಂಘಟನೆಗಳು ಏನು ಶ್ರೀ ಆರ್.ಬಿ.ತಿಮ್ಮಾಪೂರ ರವರು ಸದನದಲಿ ಕ್ರಿಶ್ಚಿಯನ್ ಬಗ್ಗೆ ಮಾತನಾಡಿದ್ದಾರೆಂದು ಹೇಳುತ್ತಾರೆ. ಅವೊತ್ತು ನಮ್ಮ ಸಮುದಾಯವನ್ನು ಒಳಗೆ ಕರೆದುಕೊಳ್ಳದೇ, ಹೊರಗಡೆ ಇಟ್ಟಿದ್ದಾಗ ನಾವು ಉಂಡಂತಹ ಆ ನೋವು ನಿಮಗೆ ಗೊತ್ತಾಗಲಿಲ್ಲವೇ?

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವೀರಶೈವ ಮಠಗಳು ನಿಮ್ಮನ್ನು ಹೊರಗಡೆ ಇಟ್ಟಿದ್ದಾವೊ, ಇಲ್ಲವೋ?

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ಕೆಲವು ಮಠಾಧಿಪತಿಯವರು ಮಾಡಿರುವುದರ ಬಗ್ಗೆ ಆಗಲೇ ಹೇಳಿದ್ದೇನೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶ್ರೀ ಆರ್.ಬಿ.ತಿಮ್ಮಾಪೂರ ರವರೇ, ಸಮಾನವಾಗಿ ಎಲ್ಲರ ಬಗ್ಗೆಯೂ ಹೇಳಿ. ನಾನು ನಿಮಗೆ ಸಹಾಯ ಮಾಡುತ್ತೇನೆ. 12ನೇ ಶತಮಾನದಿಂದಲೂ ಕೂಡ ವೀರಶೈವ ಲಿಂಗಾಯಿತ ಧರ್ಮ ಇದೇ ಹಿಂದೂ ಸಮಾಜದ ಭಾಗವಾಗಿರತಕ್ಕಂಥದ್ದಾಗಿದೆ. ಮಠ ಮಾನ್ಯಗಳಲ್ಲಿ ಆ ರೀತಿಯ ಅಸಮಾನತೆಯನ್ನು ಹೋಗಲಾಡಿಸಿ ಅಸ್ಪೃಶ್ಯತೆಯನ್ನು ತೊಲಗಿಸತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೊ, ಇಲ್ಲವೋ? ಆ ರೀತಿಯ ಜನಾಂಗದವರಿಗೆ ಶರಣರ ಪಟ್ಟವನ್ನು ಕೊಟ್ಟಿರುವುದನ್ನೂ ಕೂಡ ಹೊಗಳಿ. ಆರ್.ಬಿ.ತಿಮ್ಮಾಪೂರ ರವರು ಮಾತನಾಡುತ್ತಿರುವುದರ ಬಗ್ಗೆ ನಮಗೆ ಏನೂ ಅಭ್ಯಂತರವಿಲ್ಲ, ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ. ರಾಜಕಾರಣದ ಹಿನ್ನೆಲೆಯಲ್ಲಿ ಎಲ್ಲೋ ಒಂದು ಕಡೆ ಅಲ್ಪಸಂಖ್ಯಾತರನ್ನು ಓಲೈಸತಕ್ಕಂಥ ಮಾತುಗಳನ್ನು ಆಡಬಾರದು. ನನ್ನದು ಕೂಡ ಒಂದೇ ಒಂದು ಪ್ರಶ್ನೆ ಇದೆ, ಅದಕ್ಕೆ ತಾವು ಉತ್ತರಿಸಲಿ. ಹಿಂದೂ ಸಮಾಜ ಮತ್ತು ರಾಮ ಮಂದಿರ ನಿರ್ಮಾಣ ಮಾಡುತ್ತಿರುವುದು ತಪ್ಪಿದೆಯೆಂದು ಹೇಳುತ್ತಿರುವ ನಿಮ್ಮ ವಾದವನ್ನು ನಾನು ಒಪ್ಪುತ್ತೇನೆ. ನೀವು ಇಷ್ಟು ವರ್ಷ ರಾಜಕಾರಣದಲ್ಲಿ ಏನಾದರೂ ಬದಲಾವಣೆ ಮಾಡತಕ್ಕಂಥ ನಾಲ್ಕು ಪ್ರಯತ್ನಗಳನ್ನು ದಿಟ್ಟವಾಗಿ ಮಾಡಿದ್ದರೆ, ಅದನ್ನು ಈ ಸದನಕ್ಕೆ ತೆಗೆದುಕೊಂಡು ಬನ್ನಿ. ಅದು ದಾಖಲೆಗೆ ಹೋಗಲಿ. ಅದರಿಂದ high degree hypocrisy ಯ ಈ ಭಾಷಣ ಮಾಡುವುದು ಬೇಡ. ನಿಮ್ಮ ಇಡೀ ರಾಜಕೀಯ ಜೀವನದಲ್ಲಿ ದಿಟ್ಟವಾಗಿ ಎದುರಿಸಿ ಬದಲಾವಣೆ ಮಾಡಿದ್ದೇನೆಂದು ನಾಲ್ಕೇ ನಾಲ್ಕು ಪ್ರಕರಣಗಳನ್ನು ಹೇಳಿದರೆ, ನಾವು ನಿಮ್ಮನ್ನು ಗೌರವಿಸುತ್ತೇವೆ. ತಾವು ತುಂಬಾ ಚೆನ್ನಾಗಿ ಮಾತನಾಡಿದ್ದೀರಿ, ನಾವು ನಿಮಗೆ ಅಡಚಣೆ ಮಾಡುತ್ತಿಲ್ಲ. ಆತ್ಮ

ಸಾಕ್ಷಿ ಇಟ್ಟುಕೊಂಡು ತಮ್ಮ ಮಾತನ್ನು ದಯಮಾಡಿ ಮುಂದುವರೆಸಿ. hypocrisy ಯಿಂದ ಹೊರಗೆ ಬಂದು ಮಾತನಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಶ್ರೀ ಆರ್.ಬಿ.ತಿಮ್ಮಾಪೂರ ರವರು. . .

**ಸಭಾಪತಿಯವರು:–** ಶ್ರೀ ಕೆ.ಟಿ.ಶ್ರೀಕಂಠೇಗೌಡರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಬಹಳ ಮಠಾಧೀಶರು ನಮಗೆ ಅವಕಾಶ ಕೊಡಲಿಲ್ಲವೆಂದು ಹೇಳಲಿಲ್ಲ. ನಾನು ಮೊದಲೇ ಹೇಳಿಬಿಟ್ಟೆನು. ಹಲವಾರು ಮಠಾಧಿಪತಿಗಳು ಇದರ ಪ್ರಯತ್ನ ಮಾಡಿದರು. ಬಸವಣ್ಣನವರು ಬಂದ ನಂತರ ಅವರ ಕಾಲಾವಧಿಯಲ್ಲಿ ಹಲವಾರು ಬದಲಾವಣೆಗಳನ್ನು ತರುವುದಕ್ಕೆ ಪ್ರಯತ್ನಪಟ್ಟರು. ಈಗ ಬಸವಣ್ಣವರು ಎಲ್ಲಿದ್ದಾರೆ? ಅವರು ಗರ್ಭ ಗುಡಿಯಲ್ಲಿದ್ದಾರೆ. ಆರ್.ಬಿ.ತಿಮ್ಮಾಪೂರ ರವರು ಎಲ್ಲಿ ನಿಂತುಕೊಂಡರು, ಅವರು ದೇವಾಲಯದ ಕೆಳಗಡೆ ನಿಂತುಕೊಂಡರು. ಲಿಂಗಾಯಿತ ಧರ್ಮ ಒಂದು ಜಾತಿಯಾಗಿ ಪರಿಣಮಿಸಿತು. ಅದರ ಅನುಯಾಯಿಗಳೆಲ್ಲರೂ ಅದನ್ನು ಪ್ರಯತ್ನ ಮಾಡಿದ್ದರೆ, ಇವತ್ತಿನ ದಿವಸ ಈ ಸ್ಥಿತಿ ಇರುತ್ತಿರಲಿಲ್ಲ. ಅವೊತ್ತಿನ ದಿವಸ ಬಸವಣ್ಣನವರ ಅನುಯಾಯಿಗಳು ಏನಾದರು ಜಾತೀಯತೆಯನ್ನು ಹೋಗಲಾಡಿಸಬೇಕು, ಬಸವ ತತ್ವಗಳನ್ನು ನಾವು ಅಳವಡಿಸಿಕೊಳ್ಳಬೇಕು ಎನ್ನತಕ್ಕಂಥ ಭಾವನೆ ತಮಗೆ ಏನಾದರು ಬಂದಿದ್ದರೆ, ಇವತ್ತಿನ ದಿವಸ ನಮಗೆ ಈ ಪರಿಸ್ಥಿತಿ ಇರುತ್ತಿರಲಿಲ್ಲ. ನಾವು ಯಾವೊತ್ತೋ ಬದಲಾವಣೆ ಆಗುತ್ತಿದ್ದೆವು. ಆದರೆ, ಅವರು ಆ ಮನಸ್ಥಿತಿಗೆ ಹೋಗಲಿಲ್ಲ. ಮಾನ್ಯ ಆಯನೂರು ಮಂಜುನಾಥ್‌ರವರು ಈ ರಾಜ್ಯಕ್ಕೆ ನಿಮ್ಮ ಪ್ರಯತ್ನವೇನು ಎಂದು ಕೇಳಿದರು. ನನ್ನ ಪ್ರಯತ್ನ ಬಿಡಿ. ಈ ದೇಶದ ಪ್ರಧಾನ ಮಂತ್ರಿಗಳು, ಉಪ ಪ್ರಧಾನ ಮಂತ್ರಿಗಳು ಏನೆಲ್ಲಾ ಪ್ರಯತ್ನಪಟ್ಟಿದ್ದಾರೆ, ಅದರ ಜೊತೆಗೆ ನಾನು ಕೂಡ ಒಬ್ಬ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶ್ರೀ ಆರ್.ಬಿ.ತಿಮ್ಮಾಪೂರವರೇ, ನಿಖರವಾಗಿ ನಿಮ್ಮ ಪ್ರಯತ್ನವೇನು, ತಾವು ಸಚಿವರಾಗಿದ್ದವರು, ತಾವು ಇಷ್ಟು ವರ್ಷ ಆ ಸಮಾಜದ ಪ್ರತಿನಿಧಿಯಾಗಿ ಸಚಿವರಾಗಿದ್ದವರು, ಸಮಾಜ ನಿಮಗೆ ಅವಕಾಶ ಕೊಟ್ಟಿತ್ತು. ಹಾಗಾಗಿ, ತಾವು ಏನು ಮಾಡಿದ್ದೀರಿ, ನಿಖರವಾಗಿ ನಿಮ್ಮ ಪ್ರಯತ್ನವೇನೆಂದು ಹೇಳಿ.

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ಅಸ್ಪೃಶ್ಯತೆಗೆ ಒಳಗಾದವನು ನಾನು ಏನು ಮಾಡುವುದಕ್ಕೆ ಆಗುತ್ತದೆ ಹೇಳಿ. ಮೊದಲು ನಿಮ್ಮ ಮನಸ್ಸು ಬದಲಾವಣೆ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ನಿಮ್ಮ ಮನಸ್ಸು ಬದಲಾವಣೆ ಆಗುವವರೆಗೆ ನಾನು ನಮ್ಮ ಸಮಾಜದ ಉದ್ಧಾರಕ್ಕೆ ಎಂತಹ ಪ್ರಯತ್ನಪಟ್ಟರೂ ಕೂಡ ಸೊನ್ನೆ ಫಲಿತಾಂಶ ಬರುತ್ತಿದೆ. ಬಸವಣ್ಣನವರು ಪ್ರಯತ್ನಪಟ್ಟಿದ್ದರೆ ಅದು ಕಡಿಮೆ ಆಗುತ್ತಿತ್ತು. ನನ್ನ ಪ್ರಯತ್ನವನ್ನು ನಾನು ಮಾಡುವುದಕ್ಕೆ ಹೋಗಿ, ಮೂರು ಬಾರಿ ಎಡವಿದೆನು. ಆ ಪ್ರಯತ್ನ ಮಾಡಲು ಹೋಗಿ ಮೂರು ಬಾರಿ defeat ಆದೆನು. ಬರೀ ನಿಮ್ಮ ಪ್ರಯತ್ನವೇನು ಎಂದು ಕೇಳುತ್ತಿದ್ದೀರಿ. ಎಂತೆಂತಹವರ ಪ್ರಯತ್ನಕ್ಕೆ ಫಲಿತಾಂಶ ಕೂಡ ಸಿಕ್ಕಿಲ್ಲ. ಇನ್ನು ನನ್ನ ಪ್ರಯತ್ನ ಪ್ರತಿದಿನ ನಡೆಯುತ್ತಿರುತ್ತದೆ. ಅದು ಇವತ್ತು ನಿನ್ನೆಯ ಪ್ರಯತ್ನವಲ್ಲ. ಅಸ್ಪೃಶ್ಯತೆ ಅನುಭವಿಸುತ್ತಿರುವ ಪ್ರಯತ್ನ, ದಿನಃಪ್ರತಿ ದಿನಾಲು ಒಬ್ಬರಿಗೆ ಆಗುತ್ತಿರುತ್ತದೆ. ಇನ್ನು ನನ್ನ ಪ್ರಯತ್ನವೆಂದರೆ ನನಗಿಂತಲೂ ಹೆಚ್ಚಿಗೆ ಅಸ್ಪೃಶ್ಯತೆಯನ್ನು ಆಚರಣೆಗೆ ತರುತ್ತಾರಲ್ಲಾ, ಮೊದಲು ಅವರ ಮನಸ್ಸುಗಳು ಬದಲಾವಣೆ ಆಗಬೇಕು. ಒಬ್ಬ ಮನುಷ್ಯ ಬಾಂಬ್ ಅನ್ನು ತನ್ನ ದೇಹದಲ್ಲಿ ಕಟ್ಟಿಕೊಂಡು ಸಾವಿರ ಜನರನ್ನು ಕೊಲ್ಲಬೇಕೆಂಬ ಮನಸ್ಸುಗಳನ್ನು ತಯಾರು ಮಾಡತಕ್ಕಂಥ ಭಯೋತ್ಪಾದಕರ ಗುಂಪುಗಳಿವೆ. ಇವತ್ತಿನ ದಿವಸ ಮನುಷ್ಯರನ್ನು ಮನುಷ್ಯರನ್ನಾಗಿ ಕಾಣತಕ್ಕಂಥ ಎಷ್ಟು ಮನಸ್ಸಿನ ಮಠಗಳಿವೆ? ಮನುಷ್ಯರನ್ನು ಮನುಷ್ಯರನ್ನಾಗಿ ಕಾಣತಕ್ಕಂಥ, ಆ ಮನಸ್ಸನ್ನು ಪರಿವರ್ತನೆ ಮಾಡತಕ್ಕಂಥ ಎಷ್ಟೋ ಮಠಗಳಿವೆ, ಅವು ಎಷ್ಟು ಬದಲಾವಣೆಗಳಾಗಿವೆ? ಇತ್ತೀಚಿನ ದಿನಗಳಲ್ಲಿ ಒಬ್ಬ ಉಗ್ರ ತನ್ನ ದೇಹದಲ್ಲಿ ಬಾಂಬ್‌ಗಳನ್ನು ಕಟ್ಟಿಕೊಂಡು ಎಲ್ಲರನ್ನು ಕೊಂದು ಹಾಕಿಬಿಡುತ್ತೇನೆಂಬ ಮನಸ್ಸುಗಳು ತಯಾರಾಗಿವೆ. ಆದರೆ, ಮನುಷ್ಯರನ್ನು ಮನುಷ್ಯರನ್ನಾಗಿ ಕಾಣತಕ್ಕಂಥ ಭಾವನೆಗಳನ್ನು ತಯಾರು ಮಾಡತಕ್ಕಂಥ ಆ ಸಂಘಟನೆಗಳು ನನಗಂತೂ ಇವತ್ತಿನವರೆಗೂ ಕಾಣಲಿಲ್ಲ.

**(ಮುಂದು...)**

(417)16.3.2020/11.50/ಎಂ.ಎಂ–ಎಂ.ಡಿ
**ಶ್ರೀ ಆರ್.ಬಿ. ತಿಮ್ಮಾಪೂರ (ಮುಂದು)**

ನಾನು ಇಷ್ಟೇ ಹೇಳುವುದಕ್ಕೆ ಇಷ್ಟಪಡುತ್ತೇನೆ. 'ಅಸ್ಪೃಶ್ಯತೆ' ಈ ದೇಶಕ್ಕೆ ಕಳಂಕ ತರುತ್ತಿದೆ. ನೀವು ಅದ್ಭುತವಾದ ಹಿಂದು ಸಮಾಜವನ್ನು ಕಟ್ಟುವುದಕ್ಕೆ ನಿಮ್ಮಿಂದ ಸಾಧ್ಯವಾಗುವುದಿಲ್ಲ. ಶ್ರೇಣೀಕೃತ ಜಾತಿಯಲ್ಲಿ ನನ್ನ ಕೆಳಗಡೆ ಒಂದು ಜಾತಿಯನ್ನು ಇಟ್ಟಿದ್ದಾರೆ. ಗೌಡರ ಕೆಳಗಡೆ ಕುರುಬರು, ಕುರುಬರ ಕೆಳಗಡೆ ಮಾನ್ಯ ಸದಸ್ಯರಾದ ರವಿಕುಮಾರ್‌ರವರ ಜಾತಿಯವರ ಕೆಳಗಡೆ ಸಾವಿರಾರು ಜಾತಿಗಳಿವೆ. ಶ್ರೇಣೀಕೃತ ಜಾತಿ ವ್ಯವಸ್ಥೆ ಏನಾಗಿದೆ ಎಂದರೆ, ಮೇಲೆ ಕುಳಿತಿರುವವರು ಆಟವಾಡಿಸುತ್ತಿದ್ದಾರೆ. ಅದಕ್ಕೆಲ್ಲಾ 2000 ವರ್ಷಗಳ ಇತಿಹಾಸವಿದೆ. ದಯಮಾಡಿ 'ಅಸ್ಪೃಶ್ಯತೆ'ಯನ್ನು ತಾವು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಆ ದಿಸೆಯಲ್ಲಿ ಬರೀ ಸರ್ಕಾರ ಮಾತ್ರವಲ್ಲ ಪ್ರಯತ್ನ ಮಾಡಿದಲೆ ಆಗುವುದಿಲ್ಲ. ಮಾನ್ಯ ಸಚಿವರಾದ ಪಾಟೀಲರೇ, ನೀವು ಶೂದ್ರ ಜೋಡಿ ಸಂಬಂಧವನ್ನು ಮಾಡುತ್ತೀರಾಹೇಳಿ. ಇಲ್ಲಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕುಳಿತವರಲ್ಲಿ ಯಾರಾದರೂ ತಯಾರಾಗುತ್ತೀರಾ? ಅದು ನಿಮ್ಮಿಂದ ಪ್ರಾರಂಭವಾಗಲಿ, come on, ನಾನು ಇವತ್ತು ನಾವೆಲ್ಲರೂ ಜಾತೀಯತೆ ಉಲ್ಲಂಘಿಸಲು ತಯಾರಿದ್ದೇವೆ ಎಂದು ಹೇಳಿದರೆ ಅದನ್ನು ಒಪ್ಪುತ್ತೀರಾ?

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಮಾನ್ಯ ತಿಮ್ಮಾಪೂರರವರೇ, ನಮ್ಮ ಎಲ್ಲಾ ಮಕ್ಕಳ ಮದುವೆಯಾಗಿದೆ.

(ಗೊಂದಲ)

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಆಗುವುದಿಲ್ಲ.

**ಡಾ: ವೈ.ಎ.ನಾರಾಯಣಸ್ವಾಮಿ:–** ಮಾನ್ಯ ತಿಮ್ಮಾಪೂರರವರೇ, ಈ ರಾಜ್ಯದಲ್ಲಿ ತಾವು ಎರಡು ಬಾರಿ ಸಚಿವರಾಗಿದ್ದಿರಿ.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಅವರು ಏನು ಹೇಳಿದ್ದಾರೆ ಎಂದರೆ, . . .

**ಡಾ: ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಬಿ. ತಿಮ್ಮಾಪೂರರವರೇ, ಎರಡು ಸಾರಿ ತಾವು ಮಂತ್ರಿಯಾಗಿದ್ದೀರಿ, ನಿಮ್ಮ ಸಮುದಾಯದಲ್ಲಿ ಉಪ ಜಾತಿಯವರೊಡನೆ ನಿಮ್ಮ ಸಮುದಾಯದವರು ಮದುವೆ ಮಾಡಿಕೊಳ್ಳುತ್ತಾರಾ? ದಯವಿಟ್ಟು ನೀವು ಹೇಳಬೇಕು. ಸುಮ್ಮನೇ hypocrisy ಯಲ್ಲಿ ಮಾತನಾಡುವುದು ಬೇಡ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಈ ಸಂವಿಧಾನ ಹಲವಾರು ಬದಲಾವಣೆಗಳನ್ನು; ಆರ್ಥಿಕ ಬದಲಾವಣೆ, ಸಾಮಾಜಿಕ ಬದಲಾವಣೆ, ಶೈಕ್ಷಣಿಕ ಬದಲಾವಣೆ; ಈ ಸಂವಿಧಾನ ಬಂದ ನಂತರ ಏನೂ ಬದಲಾವಣೆ ಆಗಿಲ್ಲ ಎಂಬ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸಂವಿಧಾನ ಬಂದ ನಂತರ; left, right ಎಂಬುದನ್ನು ಯಾರು ಹುಟ್ಟು ಹಾಕಿದ್ದಾರೆ ಎಂಬುದು ನಮಗೆ ಗೊತ್ತಿದೆ. ಸಂವಿಧಾನ ಬಂದ ನಂತರ ಇವತ್ತು ನಾನು ಎಂ.ಎಲ್.ಸಿ., ಆಗಿ ಹಿಂದುಳಿದ ಜಾತಿಯ ನೋವನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಕೊಟ್ಟಂತಹ ಆ ಮಹಾನುಭಾವ ಡಾ|| ಬಿ.ಆರ್. ಅಂಬೇಡ್ಕರ್‌ರವರನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ನಾವು ನಿಮಗೆ ಕೇಳಬೇಕು, ನೀವು ನಮಗೆ ಕೇಳಬೇಕೋ;

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನೋವನ್ನು ಹೊರಗೆ ಹಾಕುವ . . .

**ಶ್ರೀ ಲಹರ್ ಸಿಂಗ್ ಸಿರೋಯಾ:–** ಅವರು ಏನು ಪ್ರಶ್ನೆ ಕೇಳುತ್ತಿದ್ದಾರೆ ನಮಗೆ ಅರ್ಥವಾಗುತ್ತಿಲ್ಲ. ಇಂದಿರಾಜೀ ಅವರು ಸೃಷ್ಟಿ ಮಾಡಿದ್ದು ಯಾರು?

**ಶ್ರೀ ಆರ್.ಬಿ.ತಿಮ್ಮಾಪೂರ:–** ಇಂದಿರಾಜೀಯವರು ಬಹಳ ಬದಲಾವಣೆ ತರುವುದಕ್ಕೆ ಪ್ರಯತ್ನ ಪಟ್ಟರು.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ಮುಖ್ಯಮಂತ್ರಿ ಮಾಡಲು . . .

(ಗೊಂದಲ)

**ಡಾ: ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್‌ನವರು 50 ವರ್ಷಗಳ ಕಾಲ ಆಳಿ ಏನು ಮಾಡುವುದಕ್ಕಾಗಲಿಲ್ಲ. ಈಗ ಅರಣ್ಯರೋದನ ಭಾಷಣ ಮಾಡುತ್ತಾ ಇದ್ದಾರೆ.

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, "ಗರೀಬಿ ಹಠಾವೋ" ಮೂಲಕ ಈ ಜನಾಂಗದವರಿಗೆ ಆರ್ಥಿಕ ನೆರವನ್ನು ಕೊಡುವಂತಹ ಪ್ರಯತ್ನ ಮಾಡಿದರು. ನಾನು ಚಿಕ್ಕವನಿದ್ದಾಗ, ಗುಡಿಸಿಲಿನಲ್ಲಿರುವವಳೊಬ್ಬಳ ಸೀರೆಯೆಲ್ಲಾ ಹರಿದಿತ್ತು. ಅವಳು ಹೇಳುತ್ತಿದ್ದಳು, 'ನನ್ನನ್ನು ಮುಟ್ಟಿದರೆ ನೋಡಿ ಗೌಡರೇ, ನನ್ನ ಹಿಂದೆ ಶ್ರೀಮತಿ ಇಂದಿರಾಗಾಂಧಿಯವರಿದ್ದಾರೆ ನಿನ್ನನ್ನು ನೋಡಿಕೊಳ್ಳುತ್ತೀನಿ' ಎಂಬಂತಹ ಧೈರ್ಯ ಕೊಟ್ಟಂತಹ ಪಕ್ಷ ನಮ್ಮದು. ಆ ಹರಕು ಸೀರೆ ಹಾಕಿಕೊಂಡು ಗುಡಿಸಲಿನಲ್ಲಿರುವವರಿಗೆ ಮನೆ ಕೊಡುವ ಸಮಯದಲ್ಲಿ ನೀವೆಲ್ಲಾ ನಗುತ್ತಿದ್ದೀರಿ ಗೊತ್ತಾ? ಜನತಾ ಮನೆಗಳನ್ನು ಕೊಡುತ್ತಾರೆ ಎನ್ನುವುದಕ್ಕೆ ಬಹಳ ಜನರು ನಕ್ಕಿದ್ದಾರೆ. ಬ್ಯಾಂಕ್ ರಾಷ್ಟ್ರೀಕರಣ ಮಾಡುವ ಸಮಯದಲ್ಲಿ ಬಹಳ ಜನರು ನಗುತ್ತಿದ್ದರು ಇದು ಇತಿಹಾಸ. ಬ್ಯಾಂಕ್ ರಾಷ್ಟ್ರೀಕರಣ ಮಾಡದಿದ್ದರೆ ನೀವ್ಯಾರೂ ಆರ್ಥಿಕ ದೃಷ್ಟಿಯಲ್ಲಿ ಇಲ್ಲಿ ಕುಳಿತುಕೊಳ್ಳುವುದಕ್ಕೆ ನಿಮಗೂ,ನಮಗೂ ಸಾಧ್ಯವಾಗುತ್ತಿರಲಿಲ್ಲ. ಆ ರೀತಿ ಬದಲಾವಣೆಗಳಾಗುತ್ತವೆ. ಆಕೆಯ ದೇಶಭಕ್ತಿ ಕೆಲಸ; ದೇಶಕ್ಕಾಗಿ ನಾನು, ನನಗಾಗಿ ದೇಶ ಅಲ್ಲ ಎನ್ನುವಂತಹ ವ್ಯಾಖ್ಯಾನವನ್ನು ನಮ್ಮ ಸಂವಿಧಾನದಲ್ಲಿ ಕೊಟ್ಟಿದ್ದಾರೆ. ಶ್ರೀಮತಿ ಇಂದಿರಾ ಜೀಯವರು ಪಂಜಾಬ್‌ನಲ್ಲಿ ಬ್ಲೂ ಸ್ಟಾರ್ ಆಪರೇಷನ್ ಮಾಡದೇ ಇದ್ದರೆ ಪಂಜಾಬ್ ಒಂದು ದೇಶವಾಗುತ್ತಿತ್ತು, ದೇಶವು ಛಿದ್ರವಾಗುತ್ತಿತ್ತು. ಈ ದೇಶವನ್ನು ಉಳಿಸುವುದಕ್ಕೆ ಶ್ರೀಮತಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಂದಿರಾಜೀಯವರು ತಮ್ಮ ಪ್ರಾಣವನ್ನೇ ಕೊಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಹಾಗಿದ್ದರೆ ಅವರೇನು ಕೆಲಸ ಮಾಡಿಯೇ ಇಲ್ಲವೇ? ಬ್ಯಾಂಕ್ ರಾಷ್ಟ್ರೀಕರಣದ ಜೊತೆಗೆ ಕೃಷಿಯಲ್ಲಿ ತುಂಬಾ ದೊಡ್ಡ ಬದಲಾವಣೆಗಳಾದವು.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಮಾನ್ಯ ತಿಮ್ಮಾಪೂರರವರೇ, *Sant Jarnail Singh Bhindranwale* ರವರನ್ನು ಬೆಳೆಸಿದವರು ಯಾರು? *Operation Blue Star* ಗೆ ಕಾರಣವೇನು? *Operation Blue Star* " ಆದಮೇಲೆ (**ಗೊಂದಲ**)Emergency ಗೆ ಕಾರಣ ಏನು?

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಆರ್ಥಿಕ ದೃಷ್ಟಿಯಿಂದ ಅಲ್ಪಮಟ್ಟಿಗೆ ಸುಧಾರಣೆಗಳಾಗಿವೆ ಸುಧಾರಣೆ ಎಲ್ಲವೂ ಆಗಿದೆ ಎಂದು ಹೇಳುವುದಕ್ಕೆ ತಯಾರಾಗಿಲ್ಲ. ಶ್ರೀಮತಿ ಇಂದಿರಾಜೀಯವರು ಆರ್ಥಿಕ ದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ಮಾಡಿದ್ದರು. ಆ ಕಾರ್ಯಕ್ರಮಗಳಡಿಯಲ್ಲಿ ನಾವು ಅಲ್ಪ ಸ್ವಲ್ಪ ಆರ್ಥಿಕ ಹಾಗೂ ರಾಜಕೀಯ ಬದಲಾವಣೆಗಳನ್ನು ಹೊಂದಿದ್ದೇವೆ. ರಾಜಕೀಯವಾಗಿ ನಮ್ಮ ಪರಿಸ್ಥಿತಿಗಳ ಬಗ್ಗೆ ತಮಗೆ ಗೊತ್ತಿದೆ ಈಗಾಗಲೇ ನಾನು ಹೇಳಿದ್ದೇನೆ. ಆ ಪರಿಸ್ಥಿತಿ ನಿರ್ಮಾಣ ಹಾಗೂ ಸುಧಾರಣೆ ಏನು ಎನ್ನುವುದನ್ನು ತಾವು ಹೇಳಿದ್ದೀರಿ. ಅಲ್ಪ ಸ್ವಲ್ಪ ಮಟ್ಟಿಗೆ ರಾಜಕಾರಣದಲ್ಲಿ ನಾವು ಬದಲಾವಣೆಯನ್ನು;

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ತಿಮ್ಮಾಪೂರರವರೇ, ಒಂದು ನಿಮಿಷ, *Sant Jarnail Singh Bhindranwale* ಅವರನ್ನು ಯಾರು ಸೃಷ್ಟಿ ಮಾಡಿದರು?

**ಶ್ರೀ ಆರ್.ಬಿ. ತಿಮ್ಮಾಪೂರ:–** ಸಾಮಾಜಿಕವಾಗಿ ಮಾತ್ರ ನಾವು ಹಿಂದುಳಿದಿದ್ದೇವೆ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಆ *Operation Blue Star* ಗೆ ಕಾರಣ *Sant Jarnail Singh Bhindranwale.* ಅವರನ್ನು ಸೃಷ್ಟಿ ಮಾಡಿದವರು ಯಾರು?

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಆ ಅಸ್ಪೃಶ್ಯತೆಯ ನೋವು ನಮ್ಮನ್ನು ಇವತ್ತಿಗೂ ಕಾಡುತ್ತಿದೆ ಎಂದು ಹೇಳಬಯಸುತ್ತೇನೆ. ಶ್ರೀಮತಿ ಇಂದಿರಾಜೀಯವರು ಮಾಡಿದ ಕಾರ್ಯಕ್ರಮವನ್ನು ಹಾಗೂ ಘಟನಾವಳಿಗಳ ಬಗ್ಗೆ ನಾನು ಹೇಳುತ್ತಿದ್ದೇನೆ. ಈ ದೇಶದಲ್ಲಿ 'ಕಾರ್ಗಿಲ್' ಯುದ್ಧವಾಯಿತು, 'ಕಂದಹಾರ್'ಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉಗ್ರಗಾಮಿಗಳನ್ನು ಬಿಟ್ಟು ಬರಬೇಕಾದಂತಹ ಪರಿಸ್ಥಿತಿ ಬಂತು. ಅದರ ಜೊತೆಗೆ ಉಗ್ರರು ಪಾರ್ಲಿಮೆಂಟ್‌ನೊಳಗೆ ನುಗ್ಗಿದರು ಇದು ಇತಿಹಾಸ. ಈ ಇತಿಹಾಸದ ಜೊತೆಗೆ ಮಾನ್ಯ ವಾಜಪೇಯಿಯವರು 'ಗೋಧ್ರಾ' ರಾಜಧರ್ಮ ಪಾಲನೆ ಮಾಡಬೇಕೆಂಬ ಮಾತನ್ನು ಹೇಳಿದರು, ಎಂತಹ ಅದ್ಭುತವಾದಂತಹ ಮಾತು ಅದು. ಈಗ ಮಾನ್ಯ ವಾಜಪೇಯಿಯವರು ಇಲ್ಲ, ರಾಜಧರ್ಮ ಪಾಲನೆ ಮಾಡಬೇಕೆಂದು ಯಾರಿಗೆ ಹೇಳಿದರು? ಆ ರಾಜಧರ್ಮ ಪಾಲನೆ ಮಾಡಬೇಕಾದಂತಹ ವಾತಾವರಣ ಅದರ ಜೊತೆಗೆ ಹೇಳುತ್ತೇನೆ, 370ನೇ ವಿಧಿಯನ್ನು ಜಾರಿಗೆ ತಂದರು. 370ನೇ ವಿಧಿಯನ್ನು ಜಾರಿಗೆ ತಂದಿರುವುದನ್ನು ನಾನು ಒಪ್ಪುತ್ತೇನೆ. 370ನೇ ವಿಧಿಗೆ ವಿರೋಧ ವ್ಯಕ್ತಪಡಿಸುವಂತಹ ವ್ಯಕ್ತಿ ನಾನಾಗುವುದಿಲ್ಲ. 370ನೇ ವಿಧಿ ತಂದಿರುವುದರಿಂದ ಅಲ್ಲಿನ ಪರಿಸ್ಥಿತಿಯನ್ನು ಆದಷ್ಟು ಬೇಗ ತಿಳಿಗೊಳಿಸುವಂತಹ ಕೆಲಸ ಈ ದೇಶದ ನಾನಾ ನಾಯಕರುಗಳು ಮಾಡುವಂತಹ ಕೆಲವು ಕೆಲಸವನ್ನು ನಾನು ಮೆಲುಕು ಹಾಕಬೇಕಾಗುತ್ತದೆ. 'ಪುಲ್ವಾಮಾ'ದಲ್ಲಿ ಸೈನಿಕರು ಸತ್ತು ಹೋದರು. ಅಲ್ಲಿ "Surgical Strike" ನಿಂದ ಅಧಿಕಾರಕ್ಕೆ ಬರುವಂತಹ ಏನೇನೋ ಬದಲಾವಣೆಗಳಾದವು. Note ban ಮಾಡಿದರ ಪರಿಣಾಮ, ಬ್ಯಾಂಕುಗಳನ್ನು ವಿಲೀನಗೊಳಿಸುವುದು, GDP (Gross Domestic Product) ದರ ಕುಸಿದಿರುವಂತಹದ್ದು, ಇವೆಲ್ಲವೂ ಈ ದೇಶದಲ್ಲಿ ನಾವು ಕಾಣುವಂತಹದ್ದು, ಅದರ ಜೊತೆಗೆ 'ಶ್ರೀ ಜಗಜೀವನ್‌ರಾಮ್' ರವರಿಂದ "ಹಸಿರು ಕ್ರಾಂತಿ" ತರುವಂತಹ ಕೆಲಸ ಆಯಿತು. ನಾನು ಎಲ್ಲೋ ಮಾತನಾಡುವಂತಹ ವಿಷಯದಲ್ಲಿ ಡಾ: ಜಿ. ಪರಮೇಶ್ವರ್‌ರವರು ಏನಿದು ಸಂವಿಧಾನದ ಬಗ್ಗೆ ಏಕೆ ಚರ್ಚೆ ತರುತ್ತಿದ್ದಾರೆ? ಇದರಲ್ಲಿ ಬೇರೆ ಏನಾದರೂ ವಿಚಾರಗಳಿವೆ ಎನ್ನುವಂತಹ ಮಾತನ್ನು ಕೆಳಮನೆಯಲ್ಲಿ ಮಾತನಾಡಿದರು. ಅದಕ್ಕೆ ಪೂರಕವಾಗಿ 'ಜಂತರ್-ಮಂತರ್'ನಲ್ಲಿ ದಿನಾಂಕ 13–8–2018ರಂದು ಸಂವಿಧಾನದ ಪ್ರತಿಯನ್ನು ಸುಡುತ್ತಾರೆ. ಆ ಸಂವಿಧಾನದ ಪ್ರತಿಯನ್ನು ಸುಟ್ಟಿದ್ದು ಯಾರು? ಅವರು ಏತಕ್ಕೆ ಸುಟ್ಟು ಹಾಕಿದರು ಅವರ ವಿಚಾರಧಾರೆಗಳೇನು, ಯಾವ ರೀತಿಯಿಂದ ಆ ಭಾವನೆಗಳನ್ನು ಹುಟ್ಟು ಹಾಕುತ್ತಿದ್ದಾರೆ? ಕೆಲವು ಕಡೆ ಮೀಸಲಾತಿಯನ್ನು ತೆಗೆದು ಹಾಕುವುದಕ್ಕೆ ನಾವು ಬಂದಿದ್ದೇವೆ, ಇದರ ಅರ್ಥ ಜನರ ಭಾವನೆಗಳನ್ನು ಕೆರಳಿಸುವಂತಹದ್ದು, ಅದರ ಲಾಭ ಪಡೆಯುವಂತಹದ್ದು ಆಗಬಾರದು. ಅಲ್ಲಿ ಇವರು ಸಂವಿಧಾನದ ಪ್ರತಿ ಸುಡುತ್ತಾರೆ, ಶ್ರೀ ಪ್ರಜ್ಞಾ ಠಾಕೂರ್‌ರವರು ಶ್ರೀ ನಾಥೂರಾಮ್ ಗೋಡ್ಸೆಯವರು ದೇಶಭಕ್ತ ಎಂದು ಹೇಳುತ್ತಾರೆ, ಹಾಗಾದರೆ ಮಹಾತ್ಮ ಗಾಂಧೀಜಿಯವರು ದೇಶದ್ರೋಹಿಯೇ? ಶ್ರೀ ನಾಥೂರಾಮ್ ಗೋಡ್ಸೆಯವರು ಯಾರನ್ನು ಕೊಂದರು ಅವರು ದೇಶಭಕ್ತರೇ ಅಥವಾ ನಾಥೂರಾಮ್ ಗೋಡ್ಸೆಯವರು ದೇಶಭಕ್ತರೇ? ಅವರ ಸಾವಿಗೆ ಕಾರಣ ಏನು? 'ಹಿಂದು ಮಹಾಸಭಾ'ದ ಪೂಜಾ ಪಾಂಡೆ ಅವನು ಸತ್ತು ಹೋಗಿದ್ದಾನೆ ಪಾಪ! ಮಹಾತ್ಮ ಗಾಂಧಿ ಫೋಟೋಗೆ ಶೂಟ್ ಮಾಡುತ್ತಾರಲ್ಲಾ ಎಂತಹ ವಿಕೃತ ಮನಸ್ಸಿದು? ಅಂದರೆ, ನಿಮ್ಮ ಭಾವನೆಗಳೇನು? ಜನರಲ್ಲಿ ಆ ಗೊಂದಲ ಸೃಷ್ಟಿ ಮಾಡತಕ್ಕಂತಹದ್ದು, ಗೊಂದಲಕ್ಕೆ ಪರಿಹಾರವನ್ನೇ ಕೊಡಲಾರತಕ್ಕಂತಹದ್ದು ಇಷ್ಟೆಲ್ಲಾ ನಡೆಯುತ್ತಿದೆ, ಇಲ್ಲಿ ಸಂವಿಧಾನದ ಬಗ್ಗೆ ಚರ್ಚೆಯಾಗುತ್ತಿದೆ. ಶ್ರೀ ನಾಥೂರಾಮ್ ಗೋಡ್ಸೆ ಮಹಾತ್ಮ ಗಾಂಧಿಯವರ ಕಾಲಿಗೆ ಬೀಳುತ್ತಾನೆ ಮಹಾತ್ಮ ಗಾಂಧಿಯವರಿಗೆ ಗುಂಡು ಹೊಡೆಯುತ್ತಾನೆ ಇಂತಹ ಪ್ರವೃತ್ತಿಗಳು ಈ ದೇಶದಲ್ಲಿ ಆಗಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ತಿಮ್ಮಾಪೂರರವರೇ, ಇನ್ನು ಐದು ನಿಮಿಷದಲ್ಲಿ ಮುಗಿಸಿ.

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ಐದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ, ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಅನುಸೂಚಿತ ಜಾತಿ ಹಾಗೂ ಪಂಗಡ, ಹಿಂದುಳಿದ ವರ್ಗದವರು ಇಲ್ಲಿ ಮೀಸಲಾತಿ ಬಗ್ಗೆ ಏನು ಕೊಡುತ್ತಿದ್ದಾರೆ ಎಂದರೆ, ಬಹುಶಃ 'ಮಂಡಲ್ ವರದಿ' ಬಂದಾಗ ಆ ಪ್ರತಿಭಟನೆಯಲ್ಲಿ ಭಾಗಿಯಾದವರೆಲ್ಲಾ ಹಿಂದುಳಿದ ವರ್ಗದವರೇ ಆಗಿದ್ದರು. ಆ ಪ್ರತಿಭಟನೆಯಲ್ಲಿ ಏತಕ್ಕಾಗಿ 'ಮಂಡಲ್ ವರದಿ', ಏನಾಯಿತು ಎಂಬತಕ್ಕಂತಹ ಚರ್ಚೆಯಾಗಲಿಲ್ಲ. 'ಮಂಡಲ್ ವರದಿ' ಜಾರಿಗೆ ತರುವ ಹೊತ್ತಿನಲ್ಲಿಯೇ ಹಿಂದುಳಿದ ವರ್ಗಗಳು ಅವತ್ತು ಧರಣಿ ಮಾಡುವುದು, ಅದರಲ್ಲಿ ಭಾಗಿಯಾಗುವಂತಹ ನೋವನ್ನು ಕಾಣುತ್ತಿದ್ದೇವೆ. ಅದರ ಜೊತೆಗೆ ಹಿಂದುಳಿದ ವರ್ಗಗಳಲ್ಲಿ ಏನೇನು ಮೀಸಲಾತಿ ಇದೆ, ಎಷ್ಟೆಷ್ಟು ಪರ್ಸೆಂಟ್ ಮೀಸಲಾತಿ ಇದೆ ಎನ್ನುವಂತಹದ್ದನ್ನು ತಾವು ಆಗಲೇ ಗಮನಕ್ಕೆ ತೆಗೆದುಕೊಂಡು ಬಂದಿದ್ದೀರಿ ಎಂಬ ಭಾವನೆ ನನ್ನದು. ಹಲವಾರು ವಿಚಾರಗಳಲ್ಲಿ ಮೀಸಲಾತಿ ಬಂದಿವೆ, 2ಎ, 2ಬಿ, 2ಸಿ ಎ, ಬಿ, ಸಿ ಎಂಬಂತಹ ಕ್ಯಾಟಗರಿ ತೆಗೆದುಕೊಂಡು ಬಂದಿದ್ದಾರೆ.

(ಮುಂದು)

(418) 16–03–2020/ 12–00/ ಕೆಹೆಚ್–ಎಕೆ
**ಶ್ರೀ ಆರ್.ಬಿ.ತಿಮ್ಮಾಪೂರ (ಮುಂದು):**

ಆವೊತ್ತಿನ ದಿವಸ ಈ ವರ್ಣಾಶ್ರಮದಲ್ಲಿ ಇರುವಂತಹ ಆ ಕ್ಯಾಟಗರಿ ಇಲ್ಲಿಯೂ ಮುಂದುವರೆಯುತ್ತಿದೆ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುವುದೇನೆಂದರೆ, ಐಟಿ/ಬಿಟಿ ಕ್ಷೇತ್ರದಲ್ಲಿ ಯಾವ ಜನಾಂಗದವರು ಎಷ್ಟು ಜನ ಇದ್ದಾರೆ, ಒಂದೇ ಜನಾಂಗದವರು ಹೆಚ್ಚಾಗಿ ಇದ್ದಾರೆಯೇ? ನಮ್ಮ ಹಿಂದುಳಿದ ಜಾತಿಯ ಜನಾಂಗದವರು ಶೇಕಡಾ 0.1 ರಷ್ಟು ಇರಬಹುದು. ಅಂದರೆ ನಾವು ಯಾರು ಸಹ ವಿದ್ಯಾವಂತರಲ್ಲವೇ, ಜಾತೀಯತೆ ವಿಜೃಂಭಿಸುವಂತಹ ಪರಿಸ್ಥಿತಿ ಇವತ್ತು ಐಟಿ/ಬಿಟಿ ಕ್ಷೇತ್ರದಲ್ಲಿ ನಡೆಯುತ್ತಿದೆ. ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುವಂತಹ ಕೆಲಸವನ್ನು ನಾನು ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಹೆಚ್.ಎಂ.ರಮೇಶ್‌ಗೌಡರವರೇ ...

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇನ್ನೆರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ಕ್ರಿಕೆಟ್ ಟೀಮ್, ಮತ್ತೊಂದು, ಮಗದೊಂದು ಅಲ್ಲಿ ಏನು ಜಾತಿ ನಡೆಯುತ್ತಿದೆ ಎಂಬುದರ ಬಗ್ಗೆಯೂ ಸಹ ತಮ್ಮ ಗಮನಕ್ಕೆ ತರುತ್ತೇನೆ. ಸರ್ಕಾರವು ಎಲ್ಲೋ ಒಂದು ಕಡೆ ಈ ವ್ಯವಸ್ಥೆ ಹೀಗೆಯೇ ಹೋಗಬೇಕು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ ಹೋಗುತ್ತದೆ ಎನ್ನುವ ಭಾವನೆಯನ್ನು ನಾವೆಲ್ಲರೂ ಇಟ್ಟುಕೊಂಡಿದ್ದೇವೆ ಎಂದು ನನಗನಿಸುತ್ತಿದೆ. ಮೊನ್ನೆಯ ದಿವಸ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ನನಗೆ ಕಾಲಾವಕಾಶ ಕೊಡಲಿಲ್ಲ. ಆವತ್ತು ಸಹ 5 ನಿಮಿಷಗಳಲ್ಲಿ ಮಾತನಾಡಬೇಕೆಂದು ತಾವು ನನಗೆ ಹೇಳಿದ್ದಿರಿ. ನಂತರ 10 ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿದ್ದಿರಿ, ನಾನು 12 ನಿಮಿಷಗಳಲ್ಲಿ ಮಾತನಾಡಿ ಮುಗಿಸಿದ್ದೇನೆ. ಮಾನ್ಯ ಸಭಾಪತಿಯವರು ಏಕೋ ಬೇಗ ಮಾತನಾಡಿ ಮುಗಿಸಿ ಎಂದು ಹೇಳುತ್ತಿದ್ದಾರೆ. ಆದ್ದರಿಂದ, ಇವತ್ತು ಸಹ ಅಷ್ಟೇ ಕಾಲಾವಧಿಯಲ್ಲಿ ಮಾತನಾಡಿ ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಆರ್.ಬಿ.ತಿಮ್ಮಾಪೂರರವರೇ ಈಗಾಗಲೇ ತಾವು ಜಾಸ್ತಿ ಮಾತನಾಡಿದ್ದೀರಾ, ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 45 ನಿಮಿಷಗಳಾಯಿತು.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಈ ಶಿಕ್ಷಣ ವ್ಯವಸ್ಥೆಯನ್ನು ತೆಗೆದುಕೊಂಡಾಗ ಈ ಶಿಕ್ಷಣ ವ್ಯವಸ್ಥೆಯು ಹೀಗೆ ಮುಂದುವರೆಯುತ್ತಿರಬೇಕು, ಬಡವರ ಮಕ್ಕಳೇ ಸರ್ಕಾರಿ ಶಾಲೆಗೆ ಹೋಗಬೇಕು. ಶ್ರೀಮಂತರ ಮಕ್ಕಳು ಶಿಕ್ಷಣ ನೀಡುವಂತಹ ಸಂಘ-ಸಂಸ್ಥೆಗಳನ್ನು ಕಟ್ಟಿಕೊಂಡಿದ್ದಾರೆಯಲ್ಲವೇ, ಆ ಶಾಲೆಗೆ ಹೋಗಬೇಕು. ಅದು ಬಹಳ superior ಶಾಲೆಯಾಗಿದೆ. ಅವರ ಮಕ್ಕಳು ಇಂಗ್ಲೀಷ್ ಕಲಿಯಬೇಕು, ನಮ್ಮ ಮಕ್ಕಳು ಕನ್ನಡ ಶಾಲೆಗೆ ಹೋಗಿ ಕನ್ನಡ ಮಾತ್ರ ಕಲಿಯಬೇಕು. ಆ ಕನ್ನಡ ಶಾಲೆಯಿಂದ ನನ್ನ ಹಣೆಬರಹ ಏನಾಯಿತು ಎಂದರೆ, ಎಸ್.ಎಸ್.ಎಲ್.ಸಿ.,ಯವರೆಗೆ ಕನ್ನಡ ಭಾಷೆಯನ್ನು ಓದಿ, ಪಿ.ಯು.ಸಿ., ವಿದ್ಯಾಭ್ಯಾಸಕ್ಕಾಗಿ ಗೋಕಾಕ್‌ಗೆ ಹೋದೆ. ಆ ಪುಣ್ಯಾತ್ಮ ಪ್ರೋಫೆಸರ್ ಒಂದು ಪದ ಕನ್ನಡದಲ್ಲಿ ಮಾತನಾಡುತ್ತಿರಲಿಲ್ಲ. ಕೇವಲ ಇಂಗ್ಲೀಷ್‌ನಲ್ಲಿಯೇ ಪಾಠ ಮಾಡುತ್ತಿದ್ದರು. ನನ್ನ ಕಥೆ ಏನೆಂದರೆ, ಎಸ್.ಎಸ್.ಎಲ್.ಸಿ.,ಯವರೆಗೆ ನಾನು merit student ಇದ್ದವನೂ, ಅಲ್ಲಿಗೆ ಹೋದ ಕೂಡಲೇ ಶೇಕಡಾ 35 ರಷ್ಟಕ್ಕೆ ಬಂದೆ. ಅಲ್ಲಿಯೇ ವಿಜ್ಞಾನ ವಿಷಯವನ್ನು ಬಿಟ್ಟು, ಕಲೆ ವಿಷಯಕ್ಕೆ ಬಂದೆ. ಇಂತಹ ಪರಿಸ್ಥಿತಿ ಎಷ್ಟೋ ವಿದ್ಯಾರ್ಥಿಗಳದ್ದಾಗಿರುತ್ತದೆ. ಇನ್ನೊಂದು ವಿಚಾರವೇನೆಂದರೆ, ಮೆರಿಟ್ ವಿಚಾರಕ್ಕೆ ಬಂದರೆ ಹಣವಂತರಿಗೆ ಒಂದು ರೀತಿಯ ಮೆರಿಟ್ ಇದೆ. ಮೆಡಿಕಲ್ ಕಾಲೇಜಿನಲ್ಲಿ ಮೆರಿಟ್, ಅದು ಹಣವಂತರಿಗೆ ಕೊಡುತ್ತಾರೆ, ಮೆಡಿಕಲ್ ಕಾಲೇಜಿನಲ್ಲಿ ರೊಕ್ಕ ಇದ್ದವರಿಗೆ ಒಂದು,ಇದನ್ನು ಕ್ಯಾಟಗರಿ ಎಂದು ಹೇಳುತ್ತೀರೋ ಅಥವಾ reservation ಎಂದು ಹೇಳುತ್ತೀರೋ,

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ...

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಮ್ಮನ್ನೂ ಸೇರಿಸಿಯೇ ನಾನು ಹೇಳುತ್ತಿದ್ದೇನೆ. ನಾನು ಸರ್ಕಾರದ ಬಗ್ಗೆ ಹೇಳುತ್ತಿದ್ದೇನೆ. ಈಗ ಸರ್ಕಾರ ನಿಮ್ಮದಿದೆ, ಹಾಗಾಗಿ ನಾನು ನಿಮಗೆ ಹೇಳುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ಕೆ.ಪಾಣೇಶ್:–** ಮಾನ್ಯ ಆರ್.ಬಿ.ತಿಮ್ಮಾಪೂರರವರೇ, ...

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾವು ಸಹ ಹೇಳಬೇಕಲ್ಲವೇ? ತಾವು ಆಗ ಅಧಿಕಾರದಲ್ಲಿ ಇದ್ದಾಗ ತಾವು ಹೇಳಿರುವ ವಿಚಾರಗಳನ್ನು ಕೇಳಿದ್ದೇವೆ. ಈಗ ನಾನು ಹೇಳುವ ವಿಚಾರವನ್ನು ತಾವು ಕೇಳಬೇಕಲ್ಲವೇ, ಇದೇ ಮೆರಿಟ್ ಸಂವಿಧಾನದಲ್ಲಿ ಇದೆಯೇ, ಹಣವಂತರಿಗೆ medical seat reservation. ಅವರಿಗೆ ಪರೀಕ್ಷಾ ವಿಧಾನ ಬೇರೆ ರೀತಿ ಇರುತ್ತದೆ. ಈ ರೀತಿ ನಮ್ಮ ಸಿ.ಇ.ಟಿ., ಯಲ್ಲಿ ಮಾಡುವುದಿಲ್ಲ. ಅವರಿಗೆ ಅವರದೇ ಆದಂತಹ ಒಂದು ಪರೀಕ್ಷೆ ಇರುತ್ತದೆ. ಇದಕ್ಕೆ ಶ್ರೀಮಂತರ ಮಕ್ಕಳು ಬರುತ್ತಾರೋ, ಹಣವಂತರ ಮಕ್ಕಳು ಬರುತ್ತಾರೋ ಅವರಿಗೆ ಒಂದು ರೀತಿಯ ಪರೀಕ್ಷೆ ನಡೆಯುತ್ತದೆ. ಅವರು ಹೇಗಾದರೂ ಪಾಸ್ ಆಗುತ್ತಾರೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಆರ್.ಬಿ.ತಿಮ್ಮಾಪೂರರವರೇ, ...

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಈಗ ನಾನು ಕುಳಿತುಕೊಳ್ಳಬಹುದೇ, ನಮ್ಮ ಸಮಯವನ್ನು ಕಡಿತಗೊಳಿಸಬಾರದು,

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆರ್.ಬಿ.ತಿಮ್ಮಾಪೂರರವರು ನಾನು ಹೇಳುವ ವಿಚಾರವನ್ನು ನಿಂತುಕೊಂಡು ಕೇಳಿಸಿಕೊಳ್ಳಲಿ. ಅವರು ಕುಳಿತುಕೊಳ್ಳುವುದು ಬೇಡ. ಮಾನ್ಯ ಸದಸ್ಯರು ಮೆಡಿಕಲ್ ಕಾಲೇಜಿನ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದಾರಲ್ಲವೇ, ಇದರ ಬಗ್ಗೆ ನಾನು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಎರಡು ವರ್ಷಗಳ ಮುಂಚೆ ಮೆಡಿಕಲ್ ಕಾಲೇಜುಗಳ ವ್ಯವಸ್ಥೆ ಹೇಗೆ ಇದ್ದವು, ಇವತ್ತಿನ ಮೆಡಿಕಲ್ ಕಾಲೇಜುಗಳ ವ್ಯವಸ್ಥೆ ಹೇಗಿದೆ, ಇದನ್ನು ಯಾರು ತಂದವರು? ಇದರ ಬಗ್ಗೆ ಮಾನ್ಯ ಸದಸ್ಯರು ವ್ಯವಸ್ಥಿತವಾಗಿ ಹೇಳಿದರೆ ನಾವೆಲ್ಲಾ ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರೇ, ಸಂತೋಷ. ತಾವು ಉಪ ಮುಖ್ಯಮಂತ್ರಿಗಳಾಗಿದ್ದೀರಿ. ಇವರು ಇದರಲ್ಲಿ ಬದಲಾವಣೆ ತರುತ್ತಾರೆ ಎಂಬ ಭಾವನೆ ನನಗಿದೆ. ಏಕೆಂದರೆ, ಇವರು ಕೆಳಹಂತದಿಂದ ಬಂದಂತಹವರು. ಇವರು ಹಳ್ಳಿಗಾಡಿನ ಬದುಕನ್ನು ಚೆನ್ನಾಗಿ ಅರಿತುಕೊಂಡಿರುವಂತಹವರು.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಆರ್.ಬಿ.ತಿಮ್ಮಾಪೂರರವರೇ ನಾನು ತಮಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ?

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಎಂ.ಕೆ.ಪ್ರಾಣೇಶ್‌ರವರೇ, ಮಾನ್ಯ ಆರ್.ಬಿ.ತಿಮ್ಮಾಪೂರರವರು ಮಾತನಾಡಿ ಮುಗಿಸಲಿ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಹಣವಂತರಿಗೆ ಈ ರೀತಿಯ reservation ಏಕೆ? ಮಾನ್ಯ ಉಪ ಮುಖ್ಯಮಂತ್ರಿಯವರು ಇದನ್ನು ಹೋಗಲಾಡಿಸುತ್ತಾರೆಯೇ? ನಾವು ಬದಲಾವಣೆಯನ್ನು ಕೇಳುತ್ತೇವೆ. ತಾವು ನನಗಿಂತ ಚೆನ್ನಾಗಿಯೇ ಬದಲಾವಣೆಯನ್ನು ಮಾಡಿರಬಹುದು; ಈ ಡೋನೇಷನ್ ಪದ್ಧತಿಯನ್ನು ತೆಗೆದು ಹಾಕುತ್ತಾರೆಯೇ?

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆರ್.ಬಿ.ತಿಮ್ಮಾಪೂರರವರು ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕೆಂದು ನಾನು ಆಗಲೇ ಹೇಳಿದ್ದೇನೆ. ಆದರೆ ಇವರು ಇದರ ಬಗ್ಗೆ ನನ್ನನ್ನೇ ಕೇಳುತ್ತಿದ್ದಾರೆ. 2–3 ವರ್ಷಗಳ ಪೂರ್ವದಲ್ಲಿ ಕೇಂದ್ರ ಸರ್ಕಾರದ ನಿಲುವು ಏನಿತ್ತು, ಇವತ್ತಿನ ಕೇಂದ್ರ ಸರ್ಕಾರದ ನಿಲುವು ಏನಿದೆ ಎಂಬ ಬಗ್ಗೆ ಈ ಮೆಡಿಕಲ್ ಕಾಲೇಜುಗಳ ಬಗ್ಗೆ ಸಹ ಅವರು ಸ್ವಲ್ಪ ಸವಿಸ್ತಾರವಾಗಿ ಹೇಳಬೇಕು.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–**ಮಾನ್ಯ ಸಭಾಪತಿಯವರೇ,...

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿ ಮುಗಿಸುತ್ತೇನೆ. ಆಗಾಗ ಈ ರೀತಿ ಹೋಗಬಾರದು, ಇದರಲ್ಲಿ ವ್ಯತ್ಯಾಸ ಬಹಳ ಇದೆ. ಇಡೀ ಸಮಾಜದ ...

**ಸಭಾಪತಿಯವರು:–** ಮಾನ್ಯ ಆರ್.ಬಿ.ತಿಮ್ಮಾಪೂರರವರೇ, ತಾವು ಪ್ರಶ್ನೆಯನ್ನು ಕೇಳುವುದು, ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು ಉತ್ತರವನ್ನು ಕೊಡುವುದು, ಈ ರೀತಿ constitution ಬಗ್ಗೆ ಮಾತನಾಡುವುದೇ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ಇದಕ್ಕೆ ಅವಕಾಶ ಕೊಡುವುದಿಲ್ಲ. ಎಲ್ಲರಿಗೂ ನಾವು ಸಮಾನ ಶಿಕ್ಷಣವನ್ನು ಕೊಡಬೇಕಲ್ಲವೇ, ಹಣವಂತರಿಗೆ ಬೇರೆ ಶಿಕ್ಷಣ, ಬಡವರಿಗೆ ಬೇರೆ ಶಿಕ್ಷಣವಾದರೆ ಇದು ಸಂವಿಧಾನದ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಇದೆಯೇ, ಇದನ್ನು ಸಂವಿಧಾನದ ಚರ್ಚೆ ಆಧಾರದ ಮೇಲೆ ನಾನು ಕೇಳುತ್ತಿದ್ದೇನೆ. ಅವರೇ ಮೆಡಿಕಲ್ ಕಾಲೇಜುಗಳನ್ನು ಮಾಡುವುದು, ಅವರೇ ದೊಡ್ಡ ದೊಡ್ಡ contractor ಆಗುವುದು, merit ವಿದ್ಯಾರ್ಥಿಗಳೆಲ್ಲಾ ಇವರ ಕೈಕೆಳಗೆ ಕೆಲಸಕ್ಕೆ ಹೋಗುವುದು, ಇದು ಎಂತಹ ಕರ್ಮವಾಗಿದೆ. ಇವತ್ತಿನ ದಿವಸ ಈ ವ್ಯವಸ್ಥೆಯನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗುವಂತಹ ಸ್ಥಿತಿ ಇದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಯವರೇ, ತಾವು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ನಾನು ಇನ್ನು ಹಲವಾರು ವಿಚಾರಗಳ ಬಗ್ಗೆ ಪ್ರಸ್ತಾವ ಮಾಡಬೇಕಾಗಿದ್ದರೂ ಕೂಡ ತಮ್ಮ ಆಜ್ಞೆ ಪಾಲಕ ನಾನು. ನಾನು ಮಾತನ್ನು ಮುಗಿಸುತ್ತಿದ್ದೇನೆ. ಆದರೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ, ನೋವು ಮಾಗಿರಬಹುದು; ಆದರೆ ಆ ಶೂದ್ರತೆಯ ಗಾಯ ಇನ್ನೂ ನನ್ನನ್ನು, ನನ್ನ ಮಕ್ಕಳನ್ನು ಮತ್ತು ನನ್ನ ಸಮಾಜವನ್ನು ಕಾಡುತ್ತಿದೆ. ಆ ಹಿಂದುಳಿದ ಜಾತಿಯಲ್ಲಿಯೂ ಸಹ ಹಲವಾರು ನೋವುಗಳು ಇವೆ. ಈ reservation ನಲ್ಲಿ ಶೇಕಡಾ 24 ರಷ್ಟು ಇದ್ದದ್ದನ್ನು ಶೇಕಡಾ 18 ರಷ್ಟು ಏಕೆ ಕೊಡುತ್ತೀರಿ. ಹಿಂದುಳಿದ ವರ್ಗದವರಿಗೆ ಯಾವ ರೀತಿ reservation ಕೊಟ್ಟಿದ್ದೀರೋ, ಆ ರೀತಿ ಏಕೆ ಕೊಡುವುದಕ್ಕೆ ಆಗುವುದಿಲ್ಲ ಎಂಬ ಅಂಶವನ್ನು ಹೇಳಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಆರ್.ಬಿ.ತಿಮ್ಮಾಪೂರರವರೇ ಈಗಾಗಲೇ ತಾವು 50 ನಿಮಿಷಗಳ ಕಾಲ ಮಾತನಾಡಿದ್ದೀರಿ. ಇದು ಕಡಿಮೆ ಸಮಯ ಎಂದು ತಿಳಿದುಕೊಳ್ಳಬಾರದು.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಈ ರೀತಿ ಏಕೆ ಹೇಳುತ್ತೀರಿ?

**ಸಭಾಪತಿಯವರು:–** ಮಾನ್ಯ ಆರ್.ಬಿ.ತಿಮ್ಮಾಪೂರರವರೇ ತಮ್ಮ ಗಮನಕ್ಕೆ ನಾನು ತಂದಿದ್ದೇನೆ ಅಷ್ಟೇ. ಮತ್ತೇನು ಇಲ್ಲ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಶುಕ್ರವಾರದಂದು ನಾನು ಅರ್ಧಕ್ಕೆ ಮಾತನಾಡಿ ಮುಗಿಸಿದ್ದೆ.

**ಸಭಾಪತಿಯವರು:–** ಮಾನ್ಯ ಎಸ್.ರವಿಯವರೇ, ಹೌದು, ಸರಿ. ತಾವು ನಂತರ ಸದನಕ್ಕೆ ಹಾಜರಾಗಿರಲಿಲ್ಲ. ಆಗ ಏನು ಮಾಡುವುದು?

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ಎರಡು ನಿಮಿಷ ಕಾಲಾವಕಾಶ ಕೊಡಿ. ನಾನು ಮಾತನಾಡಿ ಪೂರ್ಣಗೊಳಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಎಸ್.ರವಿಯವರೇ, ನಂತರ ನೋಡೋಣ, ಈಗ ಮಾನ್ಯ ಹೆಚ್.ಎಂ.ರಮೇಶ್‌ಗೌಡರವರೇ, ತಾವು ತಮ್ಮ ಚರ್ಚೆಯನ್ನು ಪ್ರಾರಂಭಿಸಿ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, . . .

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ರುದ್ರೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಸಹ ಮಾತನಾಡಲು ಇಚ್ಚಿಸುತ್ತಿದ್ದೇವೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಎಸ್.ರವಿಯವರೇ ತಮಗೆ ಮಾತನಾಡಲು ನಂತರ ಅವಕಾಶವನ್ನು ಕೊಡುತ್ತೇನೆ. ಕಳೆದ ಬಾರಿ ತಮ್ಮ ಹೆಸರನ್ನು ಕರೆದೆ, ತಾವು ಹಾಜರಾಗಿರಲಿಲ್ಲ. ಎರಡನೇ ಬಾರಿಯೂ ಇವತ್ತು ತಾವು ಬೆಳಿಗ್ಗೆ ಹಾಜರಾಗಿರಲಿಲ್ಲ. ಆದ್ದರಿಂದ, ಮೊದಲು ಮಾನ್ಯ ಎಸ್.ರುದ್ರೇಗೌಡರವರು ಮಾತನಾಡಿದ ನಂತರ ತಮಗೆ ಅವಕಾಶವನ್ನು ಕೊಡುತ್ತೇನೆ. ಮಾನ್ಯ ಹೆಚ್.ಎಂ.ರಮೇಶ್‌ಗೌಡರವರೇ, ತಾವೀಗ ಚರ್ಚೆಯನ್ನು ಪ್ರಾರಂಭಿಸಿ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ. ಸ್ವಾತಂತ್ರ ಬಂದು 73 ವರ್ಷಗಳಾದ ನಂತರ, ಸಂವಿಧಾನ ರಚನೆಯಾಗಿ 70 ವರ್ಷಗಳಾದ ನಂತರ ಎರಡೂ ಸದನಗಳಲ್ಲಿ ವಿಶೇಷವಾಗಿ ಸಂವಿಧಾನದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ತಮಗೆ ಹೃದಯ ತುಂಬಿದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಏಕೆಂದರೆ, ಈಗಾಗಲೇ ಹಿರಿಯರಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ಮಾನ್ಯ ಆಯನೂರು ಮಂಜುನಾಥ್‌ರವರು, ಮಾನ್ಯ ಎಸ್.ಆರ್.ಪಾಟೀಲ್‌ರವರು ಮತ್ತು ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಇರಬಹುದು, ಈ ಎಲ್ಲಾ ಮಾನ್ಯ ಸದಸ್ಯರುಗಳು ಸಹ ಒಂದು ವಾರದಿಂದ ಅವರದೇ ಆದಂತಹ ರೀತಿಯಲ್ಲಿ ಸಾಕಷ್ಟು ವಿಚಾರಗಳನ್ನು ತಿಳಿಸಿದ್ದಾರೆ. ನಾವು ಶಾಲೆ ಮತ್ತು ಕಾಲೇಜುಗಳಿಗೆ ಹೋಗುವಾಗ ಮಾಸ್ಟರ್‌ಗಳು ಪಾಠ ಮಾಡುವಾಗ ಎಲ್ಲಿಯೋ ಒಂದೊಂದು ಸಂವಿಧಾನದ ಅನುಚ್ಛೇದದ ಬಗ್ಗೆ ಹೇಳುತ್ತಿದ್ದರು. ಆದರೆ, ಸಂವಿಧಾನದ ಆಳ ಮತ್ತು ಅಗಲ ಎಷ್ಟಿದೆ ಎಂದು ಈ ಸದನದಲ್ಲಿ ಚರ್ಚೆ ಮಾಡಬೇಕೆಂದು, ನಾವು ಆ ಪುಸ್ತಕವನ್ನು ಸುಮಾರು ಒಂದು ವಾರದಿಂದ ಓದಬೇಕಾದರೆ ನೀವು ಶಾಲೆಯಲ್ಲಿ ಓದಬೇಕಾದರೆ ಈ ರೀತಿ ಓದಿದ್ದರೆ ಐ.ಎ.ಎಸ್., ಐ.ಪಿ.ಎಸ್., ಪರೀಕ್ಷೆಯನ್ನು ಪಾಸ್ ಮಾಡುತ್ತಿದ್ದೀರಿ ಎಂದು ಮನೆಯಲ್ಲಿ ನನ್ನ ಹೆಂಡತಿ ರೇಗಿಸುತ್ತಿದ್ದರು. ಸ್ವಾತಂತ್ರ ಬಂದ ನಂತರ 2ನೇ ಮಹಾಯುದ್ಧ ಆದ ಮೇಲೆ ಸಾಕಷ್ಟು ಈ ಒಂದು ದೇಶಗಳಲ್ಲಿ ನಮ್ಮದೇ ಆದಂತಹ ಒಂದು ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪನೆಯಾದ ಮೇಲೆ ಲಿಖಿತ ರೂಪದಲ್ಲಿರುವಂತಹ ಪ್ರಜಾಪ್ರಭುತ್ವದ ಈ ಸಂವಿಧಾನ ಬಹಳ ಶ್ರೇಷ್ಠವಾದಂತಹ ಒಂದು ಗ್ರಂಥ ಎಂದು ನಾವೆಲ್ಲರೂ ಸಹ ಭಾವಿಸಿದ್ದೇವೆ. ಈಗಾಗಲೇ ಡಾ॥ಬಿ.ಆರ್.ಅಂಬೇಡ್ಕರ್‌ರವರು ಆ ಒಂದು ಸಮಿತಿಯಲ್ಲಿರುವಂತಹ ಎಲ್ಲರೂ ಒಗ್ಗೂಡಿ ನಮ್ಮ ದೇಶಕ್ಕೆ ಸಂವಿಧಾನವನ್ನು ತಂದಿರುವಂತಹ ಸಂದರ್ಭದಲ್ಲಿ, ಇದುವರೆಗೂ ಸಹ ಸಂವಿಧಾನದಲ್ಲಿ 124 amendment ಗಳಾಗಿ ಅದರಲ್ಲಿ 103 ಚಾಲ್ತಿಯಲ್ಲಿದ್ದು, ಅದರಲ್ಲಿ ಮೊಟ್ಟಮೊದಲನೆ ಬಾರಿಗೆ ಈ ದೇಶದ ಪ್ರತಿಯೊಬ್ಬ ರೈತರ ಬೆನ್ನೆಲುಬು ಭೂಮಿ ಇರಬೇಕೆಂದು 1951 ರಲ್ಲಿ ಮೊದಲ amendment ಆಗುತ್ತದೆ. ನಮಗೆ ಸ್ವಾತಂತ್ರ ಮತ್ತು ಸಂವಿಧಾನ ಬಂದ ನಂತರವೂ ಸಹ ಡಾ॥ ಬಿ.ಆರ್. ಅಂಬೇಡ್ಕರ್ ರವರು, ಶ್ರೀ ನಂದಾ ಎನ್ನುವ ಆಂಧ್ರಪ್ರದೇಶ ಸರ್ಕಾರದ ಮುಖ್ಯಮಂತ್ರಿಯವರ ಕಾಲದಲ್ಲಿ ಒಂದು

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಘಟನೆಯಾಗುತ್ತದೆ. ಅದರ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. "ಹಸಿದ ಜನರು ಅನ್ನವನ್ನು ಬೇಡುತ್ತಾರೆ, ಹೈದರಾಬಾದ್ ಸರ್ಕಾರ ಪರಿಶಿಷ್ಟ ಜಾತಿಯ ಜನತೆಗೆ ಭೂಮಿಯನ್ನು ಮಂಜೂರು ಮಾಡಲು ಚಿಂತಿಸಿತ್ತು.

(ಮುಂದು)

**(419) 16/03/2020/12:10/ಎಸ್‌ಪಿಆರ್/ಎಕೆ**
**ಶ್ರೀ ಹೆಚ್.ಎಂ.ರಮೇಶ್ ಗೌಡ(ಮುಂದು)**

ಆಂಧ್ರಪ್ರದೇಶದ ಮಾನ್ಯ ಮಂತ್ರಿಗಳಾದ ಶ್ರೀ ಬಿಂದು ಅವರು ಈ ವಿಷಯವನ್ನು ಡಾ॥ ಬಿ.ಆರ್.ಅಂಬೇಡ್ಕರ್‌ರವರನ್ನು ದೆಹಲಿಯಲ್ಲಿ ಭೇಟಿ ಮಾಡಿದಾಗ ತಿಳಿಸಿದರು. ಆದಷ್ಟು ಬೇಗನೆ, ಸದರಿ ಆದೇಶದ ಪ್ರತಿಯನ್ನು ತಮಗೆ ಕಳುಹಿಸಿ ಕೊಡುವಂತೆ ಡಾ॥ ಬಿ.ಆರ್.ಅಂಬೇಡ್ಕರ್‌ರವರು ಶ್ರೀ ಬಿಂದುರವರನ್ನು ವಿನಂತಿಸಿಕೊಂಡರು. ಹೈದರಾಬಾದ್ ಸರ್ಕಾರವು ಪರಿಶಿಷ್ಟ ಜಾತಿಯ ಜನರಿಗೆ ಮಂಜೂರು ಮಾಡಿದ್ದ ಭೂಮಿಯನ್ನು ಹಿಂದಕ್ಕೆ ಪಡೆದುಕೊಂಡಿದ್ದನ್ನು ವಿರೋಧಿಸಿ ಪರಿಶಿಷ್ಟ ಜಾತಿಯ ಜನರು ಸತ್ಯಾಗ್ರಹವನ್ನು ಪ್ರಾರಂಭಿಸಿದರು; ಮತ್ತು 1,700 ಜನರನ್ನು ಬಂಧಿಸಲಾಯಿತು. ಆಗ ಡಾ॥ ಬಿ.ಆರ್.ಅಂಬೇಡ್ಕರ್‌ರವರು ಶ್ರೀ ಬಿಂದುರವರಿಗೆ ಅತ್ಯಂತ ಕಟುವಾಗಿ ಪತ್ರವನ್ನು ಬರೆದು 'ಸರ್ಕಾರವು ಈ ನಿರ್ಧಾರವನ್ನು ಹಿಂಪಡೆಯಬೇಕು; ಆಗ ಮಾತ್ರವೇ ತಾವು ಪರಿಶಿಷ್ಟ ಜಾತಿಯ ಜನರಿಗೆ ಸತ್ಯಾಗ್ರಹವನ್ನು ಹಿಂಪಡೆಯಲು ತಿಳಿಸುವುದಾಗಿ' ಹೇಳಿದರು. ಈ ಪತ್ರದ ಸಾರಾಂಶ ಈ ಕೆಳಗಿನಂತಿದೆ.

**"ಪ್ರೀತಿಯ ಶ್ರೀ ಬಿಂದು,**

**ಪರಿಶಿಷ್ಟ ಜಾತಿಯ ಜನರಿಗೆ ಭೂಮಿಯನ್ನು ಮಂಜೂರು ಮಾಡಿರುವ ಹೈದರಾಬಾದ್ ಸರ್ಕಾರದ ಆದೇಶದ ಪ್ರತಿಯನ್ನು ನನಗೆ ಕಳುಹಿಸಿಕೊಡುವುದಾಗಿ ತಾವು ನನ್ನನ್ನು ದೆಹಲಿಯಲ್ಲಿ ಭೇಟಿಯಾದಾಗ ತಿಳಿಸಿದ್ದೀರಿ. ಇದಾಗಿ ಈಗಾಗಲೇ ಒಂದು ವಾರ ಕಳೆದಿದ್ದು ನನಗೆ ಆದೇಶದ ಪ್ರತಿ ಇನ್ನೂ ದೊರೆತಿಲ್ಲ. ಆದರೆ ದಿನಪತ್ರಿಕೆಗಳಿಂದ ನನಗೆ ತಿಳಿದು ಬಂದಿರುವ ಮಾಹಿತಿ ಪ್ರಕಾರ ಪರಿಶಿಷ್ಟ ಜಾತಿಗೆ ಸೇರಿರುವ 1,700 ಪುರುಷರು ಹಾಗೂ ಸ್ತ್ರೀಯರನ್ನು ಔರಂಗಾಬಾದ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ ಹಾಗೂ ಸತ್ಯಾಗ್ರಹ ಮಾಡಿದ್ದಕ್ಕಾಗಿ ಅವರನ್ನು ಕಾರಾಗೃಹಕ್ಕೆ ಕಳುಹಿಸಲಾಗಿದೆ. ಸರ್ಕಾರ ಇರಾದೆ ಏನೆಂಬುದು ನನಗೆ ತಿಳಿಯುತ್ತಿಲ್ಲ. ಅವರನ್ನು ಅಪರಾಧಿಗಳ ಪಟ್ಟಿಗೆ ಸೇರ್ಪಡೆ ಮಾಡಿ ಜೈಲಿಗೆ ಕಳುಹಿಸುವುದೇ? ಇದು ನಿಜವಾದರೆ, ಇದೊಂದು ದೊಡ್ಡ ದುರಂತ. ಹಸಿದ ಜನರು ಅನ್ನ ಕೇಳಿದರು ಎಂಬ ಕಾರಣಕ್ಕೆ ಅವರನ್ನು ಜೈಲಿಗೆ ಕಳುಹಿಸುವುದು ಯಾವುದೇ ಸರ್ಕಾರಕ್ಕೆ ಶೋಭೆ ತರುವುದಿಲ್ಲ. ನೀವು ಅವರನ್ನು ಬಿಡುಗಡೆಗೊಳಿಸಲೇ ಬೇಕು. ಕಾನೂನಿನ ಸಮರ್ಥನೆ ಇದೆ. ಒಂದು ವೇಳೆ ನಿಮ್ಮ ಮಂತ್ರಿ ಮಂಡಲವು ತೆಗೆದುಕೊಳ್ಳುವ ನಿರ್ಧಾರ ನನ್ನ ದೃಷ್ಟಿಯಿಂದ ತೃಪ್ತಿಕರವಾಗಿದ್ದರೆ, ಪರಿಶಿಷ್ಟ ಜಾತಿಯವರಿಗೆ ಸತ್ಯಾಗ್ರಹ ಕೈಬಿಡುವಂತೆ ನಾನೇ ಹೇಳುತ್ತೇನೆ. ತ್ವರಿತವಾಗಿ ಉತ್ತರವನ್ನು ನೀಡಿದರೆ, ನಾನು ಋಣಿಯಾಗಿರುತ್ತೇನೆ.**

ತಮ್ಮ ವಿಶ್ವಾಸಿ
ಡಾ॥ ಬಿ.ಆರ್.ಅಂಬೇಡ್ಕರ್.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇವರಿಗೆ,**
**ಶ್ರೀ ಬಿಂದು,**
**ಮಾನ್ಯ ಗೃಹ ಸಚಿವರು,**
**ಹೈದರಾಬಾದ್ ರಾಜ್ಯ,**
**ಹೈದರಾಬಾದ್."**

ಈ ಪತ್ರವನ್ನು 1953 ನೇ ಇಸ್ವಿಯಲ್ಲಿ ಬರೆಯಲಾಗಿದೆ. ನಾನು ಯಾವ ಕಾರಣಕ್ಕಾಗಿ ಈ ಪತ್ರವನ್ನು ಓದಿದ್ದೇನೆ ಎಂದರೆ, ಶ್ರೀ ಆರ್.ಬಿ.ತಿಮ್ಮಾಪೂರರವರು ಈಗಷ್ಟೆ ಮಾತನಾಡುವಾಗ ಸಾಕಷ್ಟು ವಿಷಯಗಳನ್ನು ಪ್ರಸ್ತಾಪಿಸಿದರು. ಅದಕ್ಕೆ ಉದಾಹರಣೆ ಎಂದರೆ ಇತ್ತೀಚೆಗೆ ರಾಜ್ಯದ ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದ ಘಟನೆಯಾಗಿದ್ದು, ಆ ಸಂದರ್ಭದಲ್ಲಿ ಮಾನ್ಯ ಲೋಕಸಭಾ ಸದಸ್ಯರು ಮಾತನಾಡುತ್ತಿದ್ದರು. ಇಂದಿಗೂ ಸಹ ಹಳ್ಳಿಗಳಲ್ಲಿ ಇಂತಹ ಸಾಕಷ್ಟು ಪ್ರಸಂಗಗಳು ನಡೆಯುತ್ತಿರುತ್ತವೆ. ಇಂದಿನ 21ನೇ ಶತಮಾನದಲ್ಲಿಯೂ ಸಹ ಇಂತಹ ಪ್ರಸಂಗಗಳು ನಡೆಯುತ್ತಿರುವುದು ನಮಗೆಲ್ಲರಿಗೂ ನೋವನ್ನುಂಟು ಮಾಡುವ ಘಟನೆಗಳಾಗಿವೆ. ಈ ಸದನದಲ್ಲಿ ಈಗಾಗಲೇ ಬಹಳ ಹಿರಿಯ ಸದಸ್ಯರು ಸಾಕಷ್ಟು ವಿಷಯಗಳನ್ನು ಪ್ರಸ್ತಾಪಿಸಿದ ಸಂದರ್ಭದಲ್ಲಿ ಯುವಕರು ರಾಜಕಾರಣದಲ್ಲಿ ಅತಿ ಹೆಚ್ಚಾಗಿ ಬರಬೇಕು ಎಂಬ ಆಶಯವನ್ನು ಎಲ್ಲರೂ ವ್ಯಕ್ತಪಡಿಸುತ್ತಾರೆ. ಆದರೆ, ಇವತ್ತಿನ ದಿವಸ ಯುವಕರು ಶಾಸನ ಸಭೆಗಳಿಗೆ ಬರುವುದು ಅಷ್ಟೊಂದು ಸುಲಭವಾಗಿಲ್ಲ. ಇತ್ತೀಚೆಗೆ ಮಾನ್ಯ ಶ್ರೀಕಂಠೇಗೌಡರು ಮಾತನಾಡುತ್ತಿರುವಾಗ, ತ್ರಿ ಪಕ್ಷೀಯ ಪದ್ಧತಿ ಬಗ್ಗೆ ಪ್ರಸ್ತಾಪಿಸಿದರು. ಈ ದೇಶದಲ್ಲಿ ಕಾಂಗ್ರೆಸ್ ಪಕ್ಷವು 130 ವರ್ಷಕ್ಕೂ ಹೆಚ್ಚು ಇತಿಹಾಸವನ್ನು ಹೊಂದಿದ್ದು, ಅದು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದ್ದು, ತನ್ನದೇ ಆದ ಕೊಡುಗೆಗಳನ್ನು ದೇಶಕ್ಕೆ ಹಾಗೂ ನಾಡಿಗೆ ನೀಡಿದೆ. ಇದೇ ರೀತಿಯಾಗಿ ಈ ದೇಶದ ಅತ್ಯುನ್ನತ ಹುದ್ದೆಯನ್ನು ಅಲಂಕರಿಸಿದ ಪ್ರಧಾನ ಮಂತ್ರಿಗಳು... ಈ ಹಿಂದೆ ಇದ್ದ ಪ್ರಧಾನ ಮಂತ್ರಿ ಇರಬಹುದು ಅಥವಾ ಅವತ್ತಿನ ದಿವಸ ಅತೀ ಹೆಚ್ಚಾಗಿ ಶೋಷಿತ ಮಹಿಳೆಯವರ ಪರವಾಗಿ ಮೊಟ್ಟಮೊದಲನೇಯ ಬಾರಿಗೆ ಗಟ್ಟಿಯಾಗಿ ಧ್ವನಿ ಎತ್ತಿ ಹೋರಾಟ ಮಾಡಿದವರೆಂದರೆ, ಡಾ॥ ಬಿ.ಆರ್.ಅಂಬೇಡ್ಕರ್‌ರವರು. ಅಂತಹ ಸಂದರ್ಭದಲ್ಲಿ ದಿವಂಗತ ಇಂದಿರಾ ಗಾಂಧಿಯವರನ್ನು ಉಕ್ಕಿನ ಮಹಿಳೆ ಎಂದು ಕರೆಯುತ್ತಿದ್ದರು. ಅವರ ಅಧಿಕಾರಾವಧಿಯಲ್ಲಿ ... ರಾಜಕಾರಣಗೋಸ್ಕರ ಇವತ್ತಿನ ದಿವಸ ಆಡಳಿತ ಪಕ್ಷದವರನ್ನು ವಿರೋಧ ಪಕ್ಷದವರು ವಿರೋಧಿಸುವುದು ಹಾಗೂ ವಿರೋಧ ಪಕ್ಷದವರನ್ನು ಆಡಳಿತ ಪಕ್ಷದವರು ವಿರೋಧಿಸುವುದು ಬೇರೆ ವಿಷಯವಾಗಿದೆ. ಆದರೆ ಈ ದೇಶಕ್ಕೆ ನೀಡಿದ ಕೊಡುಗೆಗಳನ್ನು ನಾವು ಸ್ಮರಿಸಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

12ನೇ ಶತಮಾನದಲ್ಲಿ ಬಸವಣ್ಣನವರು **"ಇವನಾರವ ಇವನಾರವನೆಂದೆಣಿಸದಿರಯ್ಯ ಇವ ನಮ್ಮವ ಇವ ನಮ್ಮವನೆಂದೆಣಿಸೆನ್ನಯ್ಯ ಮನೆಯ ಮಗನೆಂದೆಣಿಸಯ್ಯ ಕೂಡಲ ಸಂಗಮ ದೇವಾ"** ಎಂದು ಹೇಳಿದರು. ಅಂದಿನಿಂದ ಇವತ್ತಿನವರೆಗೂ ಯಾರ್ಯಾರು ವಚನಕಾರರಿದ್ದರು ಹಾಗೂ ಜಾತಿ ಪದ್ಧತಿಯನ್ನು ನಿರ್ಮೂಲನ ಮಾಡಬೇಕೆಂದು ಪ್ರತಿಪಾದಿಸಿದ ಮಹನೀಯರುಗಳು ತಮ್ಮದೇ ಆದ ವಚನಗಳಲ್ಲಿ ಇದನ್ನು ಪ್ರತಿಪಾದಿಸಿದ್ದರು. ಅವರುಗಳನ್ನು ನಾವ್ಯಾರೂ

ನೋಡಿಲ್ಲ. ಆದರೆ ಅವರು ಬಿಟ್ಟು ಹೋಗಿರುವ ಅವರ ಬರವಣಿಗೆಯ ರೂಪದಲ್ಲಿರುವ ಪುಸ್ತಕಗಳನ್ನು ನಾವು ಓದಿ, ತಿಳಿದುಕೊಳ್ಳಲು ಹೊರಟರೆ, ನಿಜವಾಗಿಯೂ ಸಹ ಇನ್ನೂ 20–30 ವರ್ಷಗಳು ನಾವು ಅದನ್ನು ಓದಿದರೂ ಸಹ ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಅಂದಿನ ಆದಿ ಪಂಪ ರವರೂ ಸಹ ಇದೇ ತತ್ವವನ್ನು ಪ್ರತಿಪಾದಿಸಿತ್ತಾ **"ಮನುಷ್ಯ ಜಾತಿ ತಾನು ಒಂದೇ ವಲಂ"** ಎಂದು ಹೇಳುತ್ತಾ, ಇಡೀ ವಿಶ್ವದ ಜನರು ಒಂದೇ ಎನ್ನುವ ಸಂದೇಶವನ್ನು ನೀಡುತ್ತಾರೆ. ಆಧುನಿಕ ಯುಗದಲ್ಲಿ ರಾಷ್ಟ್ರಕವಿ ಕುವೆಂಪುರವರು **"ಗುಡಿ, ಚರ್ಚು, ಮಸೀದಿಗಳನ್ನು ಬಿಟ್ಟು ಹೊರಬನ್ನಿ, ವಿಜ್ಞಾನ ದೀವಿಗೆಯನ್ನು ಹಿಡಿಯಲ್ಕೆ ತನ್ನಿ"**ಎನ್ನುವ ವಿಶ್ವ ಮಾನವ ಸಂದೇಶವನ್ನು ಕೊಡುತ್ತಾರೆ. ಇದೇ ರೀತಿಯಾಗಿ ಬುದ್ಧ, ಬಸವ, ಅಂಬೇಡ್ಕರ್‌ರವರುಗಳು ನೀಡಿರುವ ಸಿದ್ಧಾಂತವು ಒಂದೇಯಾಗಿರುತ್ತದೆ. ಇವರುಗಳು ಹಾಕಿಕೊಟ್ಟ ಸಿದ್ಧಾಂತಗಳು ಹಾಗೂ ಅವರ ಬರವಣಿಗೆಗಳನ್ನು ನಾವು ತಿಳಿದುಕೊಳ್ಳಕೊಂಡು ಅವರ ಮಾರ್ಗದರ್ಶನದಲ್ಲಿ ನಡೆದರೆ, ನಮ್ಮ ದೇಶಕ್ಕೆ ಹಾಗೂ ರಾಜ್ಯಕ್ಕೆ ನಮ್ಮದೇ ಆದ ಕೊಡುಗೆಯನ್ನು ಒಳ್ಳೆಯ ಕೆಲಸಗಳನ್ನು ಮಾಡುವುದರ ಮೂಲಕ ಮಾಡಬೇಕು ಹಾಗೂ ಅದು ನಮ್ಮ ಭಾಗ್ಯವೆಂದು ನಾವು ಭಾವಿಸಬೇಕು.

ನಾನು ಏಕೆ ಆ ಪತ್ರವನ್ನು ಓದಿದ್ದೇನೆ ಎಂದರೆ, ಇವತ್ತಿನ ದಿವಸ ಹಿಂದುಳಿದ ಅಥವಾ ತುಳಿಕ್ಕೆ ಒಳಗಾದ ವರ್ಗಗಳ ಪರವಾಗಿ ಯಾರು ನಿಜವಾದ ಕಾಳಜಿಯನ್ನಿಟ್ಟುಕೊಂಡಿದ್ದಾರೆ ಹಾಗೂ ದೇಶ–ರಾಜ್ಯಗಳ ಬಗ್ಗೆ ಕಾಳಜಿಯನ್ನಿಟ್ಟುಕೊಂಡಿದ್ದಾರೆ, ಅವರುಗಳು ತಮ್ಮದೇ ಆದ ಹೋರಾಟಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಹಿಂದುಳಿದ ವರ್ಗದವರಿಗೆ ಅವರ ವರ್ಗಕ್ಕೆ ಸೇರಿದ ಕೆಲವು ಜನರು ಅನ್ಯಾಯ ಮಾಡುತ್ತಿದ್ದಾರೆ. ಎಲ್ಲರೂ ಈ ಕೆಸಲವನ್ನು ಮಾಡುವುದಿಲ್ಲ. ಆ ವರ್ಗಕ್ಕೆ ಸೇರಿದ ಕೆಲವರು ಯಾವುದೋ ಒಂದ ಸಂಘವನ್ನು ನೋಂದಾಯಿಸಿ, ಅವರುಗಳೇ ಆ ಸಂಘದ ರಾಜ್ಯಾಧ್ಯಕ್ಷ ಹಾಗೂ ಸಂಸ್ಥಾಪಕ ಅಧ್ಯಕ್ಷರಾಗಿ, ಅವರುಗಳ car ಮೇಲೆ ಬೋರ್ಡ್‌ವೊಂದನ್ನು ಹಾಕಿಸಿಕೊಳ್ಳುತ್ತಾರೆ. ನಂತರ ಜಿಲ್ಲಾಧಿಕಾರಿ, ಸಹಾಯಕ ಆಯುಕ್ತರುಗಳ ಹತ್ತಿರ ಹೋಗಿ ಆ ವರ್ಗದವರ ಜಾಗವನ್ನು ತಮ್ಮ ಹೆಸರುಗಳಿಗೆ ಬರೆಸಿಕೊಳ್ಳುತ್ತಾರೆ. ನಂತರದಲ್ಲಿ ಒಂದು ಕರಾರು ಹಾಗೂ G.P.A. (General Power of Attorney) ಗಳನ್ನು ಮಾಡಿಕೊಂಡು ಇಂದಿಗೂ ಆ ವರ್ಗದ ಜನರನ್ನು ಶೋಷಣೆ ಮಾಡುತ್ತಿದ್ದಾರೆ. ಅಂತಹವರು ತಮ್ಮನ್ನು ತಾವು ಸಮಾಜದಲ್ಲಿ ಬುದ್ಧಿವಂತರು ಮತ್ತು ಮೇಧಾವಿಗಳು ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ. ನಾವು ಇವತ್ತಿಗಾದರೂ ಸರಿ ಇಂತಹ ಕೃತ್ಯಗಳನ್ನು ಕೊನೆಗಾಣಿಸಬೇಕು. ಇತ್ತೀಚೆಗೆ ಮಾನ್ಯ ಡಾ॥ ತೇಜಸ್ವಿನಿ ಗೌಡರವರು ಮಹಿಳೆಯರ ಬಗ್ಗೆ ಈ ಸದನದಲ್ಲಿ ಮಾತನಾಡುತ್ತಿರುವಾಗ ಇವತ್ತಿನ ದಿವಸ ಮಹಿಳೆಯವರಿಗೆ ಯಾವ ರೀತಿಯ ಅನ್ಯಾಯಗಳಾಗುತ್ತಿವೆ ಎಂದು ಎಳೆ ಎಳೆಯಾಗಿ ಬಿಡಿಸಿ ಹೇಳಿದ್ದಾರೆ. ಲೋಕಸಭೆಯ ಅಧ್ಯಕ್ಷೆಯಾಗಿದ್ದ ಶ್ರೀಮತಿ ಸುಮಿತ್ರಾ ಮಹಾಜನ್ ಅಥವಾ ಶ್ರೀಮತಿ ಮೀರಾ ಕುಮಾರ್ ಇವರುಗಳು ತಮ್ಮ ಅಧಿಕಾರಾವಧಿಯಲ್ಲಿ ಯಾವ ರೀತಿಯಾಗಿ ಅಲ್ಲಿನ ಕಲಾಪಗಳನ್ನು ನಡೆಸುತ್ತಿದ್ದರು ಎನ್ನುವುದನ್ನು ನಾವು ನೋಡಿದ್ದೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂವಿಧಾನದ ಅಧ್ಯಾಯ–2 ರ ಅನುಚ್ಛೇದ 256 ರಡಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧಗಳ ಬಗ್ಗೆ ನಾನು ಹೇಳಲಿಚ್ಛಿಸುತ್ತೇನೆ. 1960–70 ರ ದಶಕದಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧ ತುಂಬಾ ಹದಗೆಟ್ಟಿತ್ತು. ಆಗ ದಕ್ಷಿಣ ಭಾರತದ ರಾಜ್ಯಗಳು ಮತ್ತು ಪಶ್ಚಿಮ ಭಾಗದ ರಾಜ್ಯಗಳು ಕೇಂದ್ರದ ಹಲವಾರು ಮಲತಾಯಿ ರೀತಿಯ ಧೋರಣೆಗಳನ್ನು ವಿರೋಧಿಸಿದಾಗ 1983 ರಲ್ಲಿ ಕೇಂದ್ರ ಸರ್ಕಾರವು ನ್ಯಾಯಮೂರ್ತಿ ಎಸ್.ಆರ್.ಸರ್ಕಾರಿಯಾರವರ ನೇತೃತ್ವದಲ್ಲಿ ಆಯೋಗವನ್ನು ರಚಿಸಿತ್ತು. ಆಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಸಂಬಂಧಗಳ ಬಗ್ಗೆ ಮತ್ತು ರಾಜ್ಯಗಳ ಸ್ವಾಯತ್ತತೆ ಅಂದರೆ State Autonomy ಯನ್ನು ನಿರ್ಧರಿಸಿದರು. ಸರ್ಕಾರಿಯಾ ಆಯೋಗವು 1988ನೇ ಇಸ್ವಿಯಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಕೇಂದ್ರ ಸರ್ಕಾರ ಅಂದರೆ ರಾಜೀವ್ ಗಾಂಧಿ ಮತ್ತು ವಿ.ಪಿ.ಸಿಂಗ್‌ಗಳ ಸರ್ಕಾರಗಳು ಈ ವರದಿಯ ಮೇಲೆ ಯಾವುದೇ ರೀತಿಯ ಕ್ರಮಗಳನ್ನು ಜರುಗಿಸಲಿಲ್ಲ. ಆದರೆ 1996 ರಲ್ಲಿ ಪ್ರಧಾನ ಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡ ಶ್ರೀ ಹೆಚ್.ಡಿ.ದೇವೇಗೌಡರವರು ಸದರಿ ವರದಿಯ ಕೆಲವು ಭಾಗಗಳನ್ನು ಅಂದರೆ, Inter-State Council ಸ್ಥಾಪನೆ ಮುಂತಾದವುಗಳನ್ನು ಜಾರಿಗೆ ತಂದರು.

**(ಮುಂದು)**

(420)/16–3–2020/12–20/ಎಲ್‌ಎಂ/ಆರ್‌ಎನ್
**ಶ್ರೀ ಎಚ್.ಎಂ.ರಮೇಶ ಗೌಡ**(ಮುಂದು)

ನಂತರ ಶ್ರೀ ಅ.ಬಿ.ವಾಜಪೇಯಿಯವರ ನೇತೃತ್ವದ ಸರ್ಕಾರ ಇನ್ನುಳಿದ ಶಿಫಾರಸ್ಸುಗಳನ್ನು ಜಾರಿಗೊಳಿಸಿತು. Article 356 ದುರುಪಯೋಗವಾಗದಂತೆ ಎಚ್ಚರವಹಿಸಬೇಕೆಂದು ಅದರ ಬಗ್ಗೆಯು ಕ್ರಮ ಕೈಗೊಳ್ಳುತ್ತಾರೆ. ಸಂವಿಧಾನದ CHAPTER-IX and CHAPTER-IXA ನಲ್ಲಿ ಮತ್ತು Article 243 ರಲ್ಲಿ ಪಂಚಾಯಿತಿಗಳು ಮತ್ತು ಪುರಸಭೆಗಳ ನಿರ್ವಹಣೆ ಬಗ್ಗೆ ಪ್ರಸ್ತಾಪವಾಗುತ್ತದೆ. 73ನೇ ತಿದ್ದುಪಡಿ ತಂದು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಒದಗಿಸಲು, ಹೆಚ್ಚಿನ ಅಧಿಕಾರವನ್ನು ನೀಡಲು ಮತ್ತು ಅತಿ ಹೆಚ್ಚಿನ ಸಂಪನ್ಮೂಲಗಳನ್ನು ನೀಡಲು ವ್ಯವಸ್ಥೆ ಮಾಡಲಾಗಿದೆ. ಈ ಸ್ಥಳೀಯ ಸಂಸ್ಥೆಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬರುವ ಅನುದಾನವನ್ನು ಉಪಯೋಗಿಸಲು ಇನ್ನು ಹೆಚ್ಚಿನ ಅನುದಾನವನ್ನು ಒದಗಿಸಬೇಕೆಂದು ಒತ್ತಾಯಿಸುತ್ತೇನೆ. ಅಲ್ಲದೆ ಈ ಸ್ಥಳೀಯ ಸಂಸ್ಥೆಗಳಿಗೆ ಕೇಂದ್ರ ಮತ್ತು ಆರ್ಥಿಕ ಆಯೋಗಗಳು ಮೂಲಕ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಹೆಚ್ಚು ಅನುದಾನವನ್ನು ಒದಗಿಸಬೇಕೆಂದು ಒತ್ತಾಯಿಸುತ್ತೇನೆ. ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳು.

**ಶ್ರೀ ಎಸ್.ರುದ್ರೇಗೌಡ(ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಗಳೆ, ಸಂವಿಧಾನದ ಕುರಿತು ವಿಶೇಷ ಚರ್ಚೆಯಲ್ಲಿ ನನ್ನ ವಿಚಾರಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಭಾರತ ಸಂವಿಧಾನವು ಅತ್ಯಂತ ಉತ್ಕೃಷ್ಟವಾದದ್ದು. ಕಾರಣ ಏನು ಎದರೆ, ವಿಶ್ವದಲ್ಲಿಯೇ ಭಾರತ ವೈವಿಧ್ಯಮಯವಾದ ದೇಶ. ಸುಮತು 4635 ವಿವಿಧ ಜನಾಂಗೀಯ ಪಂಗಡಗಳು, ವರ್ಣ ಸಂಕೀರ್ಣಗಳು, ಸುಮಾರು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

325 ಭಾಷೆಗಳು. 25 ಲಿಪಿಗಳು ನಮ್ಮ ದೇಶದಲ್ಲಿದೆ. ಎಲ್ಲರಿಗೂ ಒಪ್ಪಿಗೆಯಾಗುವಂತಹ ಎಲ್ಲರಿಗೂ ನ್ಯಾಯ ಸಿಗುವಂತಹ ಒಂದು ಸಂವಿಧಾನವನ್ನು ರಚಿಸುವುದು ಅಷ್ಟು ಸುಲಭದ ಕೆಲಸವಲ್ಲ. ಹಲವಾರು ವರ್ಷಗಳಿಂದ ವರ್ಣಾಶ್ರಮ ಪದ್ಧತಿ, ರಾಜ–ಮಹಾರಾಜರುಗಳ ಆಡಳಿತ, ಪರಕೀಯರ ದಾಳಿ, ಈ ಎಲ್ಲದರ ದಾಳಿಗೆ ಒಳಗಾದ ಈ ದೇಶದಲ್ಲಿ ಬ್ರಿಟೀಷರ ಆಳ್ವಿಕೆಯಲ್ಲಿ ಸುಧೀರ್ಘವಾಗಿ ನಲುಗಿದಂತಹ ಈ ರಾಷ್ಟ್ರಕ್ಕೆ ಎರಡನೇ ಮಹಾಯುದ್ಧದ ನಂತರ ಸ್ವಾತಂತ್ರ್ಯ ಕೊಡುವ ಇಂಗಿತವನ್ನು 1946ರಲ್ಲಿ ಬ್ರಿಟೀಷ್ ಸರ್ಕಾರ ತಿಳಿಸುತ್ತಾ, ಇಲ್ಲಿ ಇರುವ ವ್ಯವಸ್ಥೆಯನ್ನು ಗಮನಿಸಿ ಸಂವಿಧಾನ ರಚನೆಗೆ ಒಂದು ಸಮಿತಿಯನ್ನು ರಚನೆ ಮಾಡಲು ಅವಕಾಶವನ್ನು ಕಲ್ಪಿಸಿಕೊಡುತ್ತಾರೆ. ಆ ಸಮಿತಿಗೆ ಸದಸ್ಯರಾಗಲು ಸುಮಾರು 389ಜನ ಸದಸ್ಯರು ಆಯ್ಕೆಯಾಗುತ್ತಾರೆ. ಇದರಲ್ಲಿ ಬೇರೆ–ಬೇರೆ ಮತ, ಪಂಗಡ, ಸಂಘಟನೆ ಸದಸ್ಯರಿರುತ್ತಾರೆ. ಇದರ ಜೊತೆಗೆ 93 ಜನ ರಾಜಮಹಾರಾಜರ ಆಳ್ವಿಕೆಯ ಸದಸ್ಯರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡುತ್ತಾರೆ. ಅದರಲ್ಲಿ ಯಾವ–ಯಾವ ವಿಷಯಗಳು ಇರಬೇಕು, ಯಾವ ರೀತಿ ಸಂವಿಧಾನವನ್ನು ರಚಿಸಬೇಕೆಂದು ಎನ್ನುವುದನ್ನು ಚರ್ಚಿಸಲಾಗುತ್ತದೆ. ಈ ಸಮಿತಿಗೆ ಡಾ: ರಾಜೇಂದ್ರ ಪ್ರಸಾದ್‌ರವರು ಅಧ್ಯಕ್ಷರಾಗಿರುತ್ತಾರೆ. ಈ ಸಂವಿಧಾನ ಕರಡನ್ನು ರಚಿಸುವಂತಹ ಗುರುತರವಾದ ಜವಾಬ್ದಾರಿಯನ್ನು ಡಾ: ಅಂಬೇಡ್ಕರ್‌ರವರಿಗೆ ವಹಿಸಲಾಗುತ್ತದೆ. ಡಾ: ಅಂಬೇಡ್ಕರ್‌ರವರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇಡೀ ಜೀವನದಲ್ಲಿ ಸಂಪೂರ್ಣವಾಗಿ ನಲುಗಿ ಅತ್ಯಂತ ಹೆಚ್ಚಿನ ಜ್ಞಾನ ಜೊತೆಗೆ ಅಂತರರಾಷ್ಟ್ರೀಯಮಟ್ಟದಲ್ಲಿ ಅವರು ಪದವಿಗಳನ್ನು ಪಡೆದರೂ ಸಹ ಭಾರತಕ್ಕೆ ಬಂದ ನಂತರ ಅವರು ಸ್ವತಂತ್ರವಾಗಿ ತಮ್ಮ ಪ್ರತಿಭೆಯನ್ನು ಹೊರಹಾಕುವಂತಹ ಸಂದರ್ಭದಲ್ಲಿ ಸಮಾಜ ಅದಕ್ಕೆ ಅವಕಾಶ ಕೊಡುವುದಿಲ್ಲ. ಇಂತಹ ಧೀಮಂತ ವ್ಯಕ್ತಿಯ ಕೈಗೆ ಸಂವಿಧಾನದ ಕರಡನ್ನು ರಚಿಸುವಂತಹ ಅವಕಾಶ ಸಿಕ್ಕಿರುವುದು ಬಹುಶ: ಭಾರತ ದೇಶದ ಪುಣ್ಯ ಎಂದು ನಾನು ಭಾವಿಸುತ್ತೇನೆ. ಈ ಸಂವಿಧಾನದ ರಚನೆಯ ಪ್ರಕ್ರಿಯೆ 1920ರಿಂದ ಪ್ರಾರಂಭವಾಗಿದೆ. ಕಾಂಗ್ರೆಸ್ ಸರ್ಕಾರ ಪ್ರತ್ಯೇಕ ಸಂವಿಧಾನ ರಚನೆಗೆ ಒತ್ತಾಯ ಮಾಡುತ್ತಲೇ ಬಂದಿದೆ. 1928ರಲ್ಲಿ ಶ್ರೀ ಮೋತಿಲಾಲ ನೆಹರುರವರ ಅಧ್ಯಕ್ಷತೆಯಲ್ಲಿ ಒಂದು ವರದಿ ಸಿದ್ಧವಾಗುತ್ತದೆ. ಅದನ್ನು ಬ್ರಿಟೀಷ್ ಸರ್ಕಾರ ಒಪ್ಪಿಕೊಳ್ಳುವುದಿಲ್ಲ. ನಂತರ 1933ರಲ್ಲಿ ಪುನ: ಸಂವಿಧಾನ ರಚನೆಗೆ ಪ್ರಸ್ತಾಪವನ್ನು ಕಾಂಗ್ರೆಸ್ ತನ್ನ ಕಾರ್ಯಕಾರಣಿ ಸಭೆಯಲ್ಲಿ ಮಂಡಿಸಿ ಆ ನಿರ್ಣಯವನ್ನು ಬ್ರಿಟೀಷ್ ಸರ್ಕಾರಕ್ಕೆ ಕಳುಹಿಸುತ್ತಾರೆ. ಅದನ್ನು ಕೂಡಾ ಬ್ರಿಟೀಷ್ ಸರ್ಕಾರ ಒಪ್ಪುವುದಿಲ್ಲ. 2ನೇ ಮಹಾಯುದ್ಧವಾದ ನಂತರ ಸಂವಿಧಾನ ರಚನೆಗೆ ಅವಕಾಶ ಮಾಡಿಕೊಡಲಾಗುತ್ತದೆ ಎಂದು ತಿಳಿಸಿರುವ ಹಿನ್ನಲೆಯಲ್ಲಿ ಸಂವಿಧಾನದ ಕರಡು ಸಮಿತಿಯ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಡಾ: ಅಂಬೇಡ್ಕರ್‌ರವರು ಅನುಭವಿಸಿದ್ದ ಅಷ್ಟೊಂದು ನೋವುಗಳ ಮಧ್ಯದಲ್ಲಿಯು ಅವರು ಸಂವಿಧಾನವನ್ನು ರಚನೆ ಮಾಡಿದರು. ಸಂವಿಧಾನದಲ್ಲಿರುವ ವಿಷಯಗಳನ್ನು ಗಮನಿಸಿದರೆ ನೋವಿನ ಯಾವುದೇ ಸೋಂಕು ಇಲ್ಲದಂತೆ, ತಮ್ಮ ನೋವನ್ನು ಎಲ್ಲಿಯೂ ವ್ಯಕ್ತಪಡಿಸದಂತೆ ಇಡೀ ಭಾರತ ದೇಶವನ್ನು ಸಮಗ್ರ ಭಾರತವನ್ನಾಗಿ, ಸಮಾಜದಲ್ಲಿಯ ಎಲ್ಲ ಧರ್ಮಗಳಿಗೆ ಎಲ್ಲ ರೀತಿಯ ಸ್ವಾತಂತ್ರ್ಯ ಸಿಗಬೇಕೆಂದು ಸಂವಿಧಾನದ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. "ಭಾರತದ ಜನತೆಯಾದ ನಾವು, ಭಾರತವನ್ನು ಸಾರ್ವಭೌಮ ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸಲು, ಭಾರತದ ಎಲ್ಲ ನಾಗರೀಕರಿಗೆ ಸಾಮಾಜಿಕ, ಆರ್ಥಿಕ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತು ರಾಜಕೀಯ ನ್ಯಾಯವನ್ನು, ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು ಉಪಾಸನೆಯ ಸ್ವಾತಂತ್ರ್ಯವನ್ನು, ಸ್ಥಾನ–ಮಾನ ಮತ್ತು ಅವಕಾಶಗಳ ಸಮಾನತೆಯನ್ನು, ಸಮತೆಯು ದೊರೆಯುವಂತೆ ಮಾಡಲು, ಇಲ್ಲಿ ಮುಖ್ಯವಾಗಿ, ವ್ಯಕ್ತಿ ಗೌರವ, ದೇಶದ ಏಕತೆ, ಸಮಗ್ರತೆಗಾಗಿ ಎಲ್ಲರಲ್ಲಿಯು ಸಹೋದರತ್ವ ಭಾವನೆಯನ್ನು ಮೂಡಿಸಲು ದೃಢ ಸಂಕಲ್ಪ ಮಾಡಿ, ನಮ್ಮ ಸಂವಿಧಾನ ಸಭೆಯಲ್ಲಿ 1949ನೇ ನವೆಂಬರ್ 26ರಂದು ಈ ಸಂವಿಧಾನವನ್ನ ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ" ಈ ರೀತಿ ಪ್ರಸ್ತಾವನೆಯಲ್ಲಿ ಸಮಗ್ರವಾಗಿ ಏನೇನು ಇರಬೇಕು ಎನ್ನುವುದು ಸ್ಪುಟವಾಗಿ ಮೂಡಿಬಂದಿದೆ. ನಮ್ಮ ಸಂವಿಧಾನದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದರೆ, ಸಂವಿಧಾನ ರಚನೆ ಸಂದರ್ಭದಲ್ಲಿ ಯಾವ–ಯಾವ ದೇಶಗಳ ಯಾವ ಅಂಶಗಳು ಪ್ರಭಾವ ಬೀರಿವೆ ಎನ್ನುವುದನ್ನು ಇಲ್ಲಿ ಗಮನಿಸಬೇಕಾಗಿದೆ. ಸಂವಿಧಾನ ರಚನಾಕಾರರ ಮೇಲೆ ಪ್ರಭಾವ ಬೀರಿದ ಅಂಶಗಳು ಎಂದರೆ, 1776ರ ಅಮೇರಿಕಾ ಕ್ರಾಂತಿಯ ಘೋಷಣೆ, ಅಲ್ಲಿ "ಸೃಷ್ಟಿಯಲ್ಲಿ ಎಲ್ಲ ಮನುಷ್ಯರು ಸಮಾನರು". 1789ರ ಫ್ರೆಂಚ್ ಕ್ರಾಂತಿ, "ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತ್ವ". ನಂತರ 1917ರ ರಷ್ಯಾ ಕ್ರಾಂತಿ, "ಸಾಮರ್ಥ್ಯಕ್ಕೆ ಅನುಸಾರವಾಗಿ ದುಡಿಯಬೇಕು, ಅಗತ್ಯಕ್ಕೆ ಅನುಸಾರವಾಗಿ ಪಡೆಯಬೇಕು" 1948ರ ವಿಶ್ವ ಸಂಸ್ಥೆಯಿಂದ ಮಾನವ ಹಕ್ಕುಗಳ ಘೋಷಣೆ. ಇದೆಲ್ಲವನ್ನು ಸಮಗ್ರವಾಗಿ ಅಧ್ಯಯನ ಮಾಡಿ ಒಂದು ಕರಡನ್ನು ರಚಿಸಲಾಯಿತು. ಆದರೆ 29ನೇ ಫೆಬ್ರವರಿ 1948ರ ಸಮಯದಲ್ಲಿ ಈ ಕರಡನ್ನು ನೇರವಾಗಿ ಒಪ್ಪಿಕೊಳ್ಳದೆ. ಜನತೆಯ ಮುಂದೆ ಚರ್ಚೆಗೆ ಇಡಲಾಯಿತು. ಸುಮಾರು 167 ದಿನಗಳ ಚರ್ಚೆಯ ನಂತರ ಈ ಸಂವಿಧಾನವನ್ನು ಒಪ್ಪಿಕೊಳ್ಳಲಾಯಿತು. ಅನೇಕ ವಿಚಾರಗಳ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಸಮಾಜದಲ್ಲಿ ಶೋಷಣೆಯಾಗುತ್ತಿದೆ. ಜಾತಿ ಪದ್ಧತಿ ಹೋಗುತ್ತಿಲ್ಲ. ನಾವು 'ಸಮಾನತೆಯ ಪರಿಕಲ್ಪನೆಯಲ್ಲಿಯೇ ಇದ್ದೇವೆ. ಸಮಾನತೆ ಸಮಾಜದ ಮಧ್ಯ ಇಲ್ಲ'. ಇದು ಅಕ್ಷರಶಃ ನಿಜ. ಅದನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕು. ಇದು ಆಗುತ್ತಿರುವುದು ನಮ್ಮ ಮನಃಸ್ಥಿತಿಯ ಕಾರಣದಿಂದ. ಮೊನ್ನೆ ಒಬ್ಬರು ಸದಸ್ಯರು ಮಾತನಾಡುತ್ತಾ, ಆರ್ಥಿಕ ಸಮಾನತೆ ಬಂದರೆ ಇದೆಲ್ಲವನ್ನು ಹೋಗಲಾಡಿಸಬಹುದು ಎಂದು ಹೇಳಿದರು. ಭಾಗಶ: ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆರ್ಥಿಕ ಸಮಾನತೆ ತಂದಾಗ ಎಲ್ಲರೂ ಸಮಾನರು ಎಂಬ ಭಾವನೆ ಈ ಸಮಾಜದಲ್ಲಿ ಬರುತ್ತದೆ. ಆದರೆ ನಾವು ಅವಲೋಕನೆ ಮಾಡಿದರೆ, ಶ್ರೀ ಬಸವಣ್ಣನವರು ತಮ್ಮ ಒಂದು ವಚನದಲ್ಲಿ, "ಉತ್ತಮ ಕುಲದಲ್ಲಿ ಹುಟ್ಟಿದನೆಂದು ಕಷ್ಟತನದ ಹೊರೆಯನ್ನು ಹೊರೆಸದಿರಯ್ಯ, ಒಕ್ಕಯ್ಯನ ಒಕ್ಕದಿಕ್ಕ ನೋಡಯ್ಯ, ಮನ್ನಣೆಯ ಚನ್ನ, ಚನ್ನಯ್ಯ ನನ್ನ ಮನ್ನಿಸು, ಉನ್ನತ ಮಹಿಮಾ ಕೂಡಲ ಸಂಗಮದೇವ" ಎಂದು ಹೇಳುತ್ತಾರೆ

(ಮುಂದು)

421/16-03-2020/12-30/ಬಿಎಸ್‌ಡಿ–ಆರ್‌ಎನ್

**ಶ್ರೀ ಎಸ್.ರುದ್ರೇಗೌಡ (ಮುಂದು)**

ಇಲ್ಲಿ ಅವರ ಅನಿಸಿಕೆ ಏನೆಂದರೆ, ಉತ್ತಮ ಸಮಾಜದಲ್ಲಿ ಹುಟ್ಟಿ, ಇವತ್ತು ಈ ಕೆಳ ಸಮಾಜದ ನೋವುಗಳನ್ನು ನನ್ನನ್ನು ನೋಡುವಂತೆ ಮಾಡಬಾರದು ಎಂದಾಗಿದೆ. ಇದರ ಅರ್ಥ ಅವರು ಬ್ರಾಹ್ಮಣ ಸಮಾಜದಲ್ಲಿ ಹುಟ್ಟಿ, ಹಲವಾರು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಯಮ–ನಿಷ್ಠೆಗಳನ್ನು ಪಾಲಿಸುವ ಸಂದರ್ಭ ಬಂದಾಗ ಅದನ್ನು ಧಿಕ್ಕರಿಸಿದರು. ಅವರ ಅಕ್ಕನಿಗೆ ಈ ಎಲ್ಲಾ ಆಚಾರ ವಿಚಾರಗಳು ಅನ್ವಯಿಸುವುದಿಲ್ಲ ಎಂದು ಕೇಳಿದಾಗ ಈ ನಿಯಮ ನಿಷ್ಠೆಗಳನ್ನು ಮಹಿಳೆಯರಿಗೆ ಮಾಡುವ ವಿಚಾರವಲ್ಲ, ಕೇವಲ ಪುರುಷರಿಗೆ ಮಾತ್ರ ಇದು ಎಂದಾಗ ಆಗ ಹೆಣ್ಣಿಗಿಲ್ಲದ ಸಮಾನತೆ ನನಗೆ ಬೇಡ ಎಂದು ಧಿಕ್ಕರಿಸಿ ಬಂದಿರುವುದನ್ನು ಕೇಳಿದ್ದೇವೆ ಮತ್ತು ಸಾಕಷ್ಟು ಸದಸ್ಯರು ಚರ್ಚೆಗಳನ್ನು ಮಾಡಿದ್ದಾರೆ.

ಇನ್ನು ಅದೇ ರೀತಿ ಇನ್ನೊಂದು ತುದಿಯ ವ್ಯಕ್ತಿಯನ್ನು ನೋಡುವುದಾದರೆ ಶ್ರೀ ಕನಕದಾಸರು ಸ್ವತಃ ಜಾತಿ–ಜಾತಿಗಳ ನೋವನ್ನು ಅನುಭವಿಸಿ, "ಕುಲಕುಲ ಎನ್ನದಿರಯ್ಯಾ, ಕುಲವ್ಯಾವುದು ಸತ್ಯ–ಸುಖವುಳ್ಳ ಜನರಿಗೆ, ಕುಲದ ಬೇರು, ಮೂಲವನ್ನು ಯಾರಾದರೂ ಬಲ್ಲಿರಾ" ಎಂದು ದಾಸರ ಪದಗಳಲ್ಲಿ ಹೇಳಿರುವುದಲ್ಲದೇ, ಬೋಧಿಸಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಇದು ಇತಿಹಾಸವಾದರೆ, ಇತ್ತೀಚಿನ ದಿನಗಳಲ್ಲಿ ನಾವು ಈ ಜಾತಿ ಪದ್ಧತಿಯ ಬಗ್ಗೆ ಬಿಂಬಿಸುವ ಹಲವಾರು ಬರಹಗಾರರು ಮತ್ತು ಚಿಂತಕರಾದ ಶ್ರೀ ಶಿವರಾಮ ಕಾರಂತರ ಚೋಮ, ಶ್ರೀ ಭೈರಪ್ಪನವರ ಮೋಹನದಾಸ, ಶ್ರೀ ದೇವನೂರು ಮಹಾದೇವರ ಸಾಕವ್ವ ಕೃತಿಗಳಲ್ಲೂ ಸಮಸ್ಯೆಗಳನ್ನು ಎತ್ತಿ ತೋರಿಸುವ ಕೆಲಸ ಮಾಡಿದ್ದಾರೆ. ಇತಿಹಾಸದಿಂದಲೂ ಈ ಸಮಸ್ಯೆ ಹಾಗೆ ಉಳಿದಿದೆ. ಏಕೆಂದರೆ ಅಲ್ಲಿನ ಬೇರುಗಳು ಈಗಲೂ ಇವೆ. ಇದು ನನ್ನ ಅನಿಸಿಕೆಯಾಗಿದ್ದು, ಇವತ್ತಿನ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರಾದ ತಾವು ಅತ್ಯಂತ ಉತ್ಕೃಷ್ಟವಾದ ವಿಷಯಗಳನ್ನು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಪ್ರಸ್ತಾಪಿಸಿದ್ದೀರಿ. ಶಾಸಕರಾದ ನಮಗೆಲ್ಲರಿಗೂ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಈ ಸಮಾಜದಲ್ಲಿ ನಡೆಯುತ್ತಿರುವ ಈ ರೀತಿ ಶೋಷಣೆಯಿಂದ ಹೊರಗೆ ಬರಬೇಕು ಮತ್ತು ಸಂವಿಧಾನದ ಘನತೆ–ಗಾಂಭೀರ್ಯಗಳನ್ನು ಹೇಗೆ ಕಾಪಾಡಬೇಕು ಎನ್ನುವ ನಿಟ್ಟಿನಲ್ಲಿ ಚಿಂತನೆ ನಡೆದಿದೆ. ಸಾಕಷ್ಟು ವಿಚಾರಗಳು ಈಗಾಗಲೇ ಚರ್ಚೆಯಾಗಿದ್ದು, ಮೂಲ ಆಶಯಕ್ಕೆ ನಾವೆಲ್ಲರೂ ಒಂದು ಅರ್ಥವನ್ನು ಕೊಡೋಣ ಎಂದು ಹೇಳುತ್ತಾ, ಈಗಾಗಲೇ ಎಲ್ಲಾ ಶಾಲೆಗಳಲ್ಲಿ ಸಂವಿಧಾನದ ಬಗ್ಗೆ ಮಕ್ಕಳಿಗೆ ತಿಳಿಸಿ ಹೇಳುವ ಕೆಲಸ ಮಾಡಿದ್ದೇವೆ. ಮತ್ತೊಬ್ಬರು ಪತ್ರಿಕೆಯಲ್ಲಿ "ಎಲ್ಲಿಯವರೆಗೆ ಸರ್ಕಾರವು ಹೆಚ್ಚೆಚ್ಚು ಅವಕಾಶಗಳನ್ನು ಸೃಷ್ಟಿಸುವುದಿಲ್ಲವೋ, ದುಡಿಮೆಗೆ ಸಮಾನವಾದ ಫಲವನ್ನು ಮತ್ತು ಉದ್ಯೋಗದ ಪ್ರತಿಭೆಯನ್ನು ನೀಡುವುದಿಲ್ಲವೋ, ಅಲ್ಲಿಯವರೆಗೆ ಮೀಸಲಾತಿ, ಒಳ ಮೀಸಲಾತಿ, ಬಡ್ತಿ ಮೀಸಲಾತಿ, ಬೇರೆ ಬೇರೆಯವರ ಮೀಸಲಾತಿ ಬೇಡಿಕೆ, ಇತ್ಯಾದಿಗಳು ಮುಂದುವರೆಯುತ್ತವೆ, ಈ ಸಮಸ್ಯೆಗೆ ಶಾಶ್ವತ ಪರಿಹಾರವೆಂದರೆ ಸರ್ಕಾರ ತನ್ನ ನೀತಿಯಲ್ಲಿ ಸೂಕ್ತ ಬದಲಾವಣೆಗಳನ್ನು ತಂದು ಹೆಚ್ಚೆಚ್ಚು ಉದ್ಯೋಗವಕಾಶಗಳನ್ನು ಸೃಷ್ಟಿಸಬೇಕು. ಸರ್ಕಾರ ಈ ಕೆಲಸ ಮಾಡಿದಾಗ ಮೀಸಲಾತಿಗೆ ಸಂಬಂಧಪಟ್ಟ ಹಲವು ಪ್ರಶ್ನೆಗಳು ಹಿಂದಕ್ಕೆ ಸರಿಯುತ್ತವೆ. ಸರ್ಕಾರ ಕಡ್ಡಾಯವಾಗಿ ಈ ಕೆಲಸವನ್ನು ಮಾಡಬೇಕಾಗಿದ್ದು, ಉದ್ಯೋಗ ಪ್ರತಿಯೊಬ್ಬ ಪ್ರಜೆಯ ಮೂಲಭೂತ ಹಕ್ಕಾಗಬೇಕು" ಎಂದು ಹೇಳಿದ್ದಾರೆ. ಮೊಟ್ಟಮೊದಲಿಗೆ ನಾವೆಲ್ಲರೂ ಸಂವಿಧಾನವನ್ನು ಓದಬೇಕು, ಅರ್ಥೈಸಬೇಕು, ಸಂವಿಧಾನದ ಮೂಲ ತತ್ವಗಳನ್ನು ಮೈಗೂಡಿಸಿದೊಂದು, ಅದರಂತೆ ನಡೆದುಕೊಳ್ಳಬೇಕು. ಸಂವಿಧಾನದ ಆಶಯಗಳನ್ನು ಬದುಕಿನ ವಿಧಾನವಾಗಿಸಿಕೊಳ್ಳಬೇಕು. ನಮ್ಮ ಕುಟುಂಬದ ಸದಸ್ಯರಿಗೆ ಸಂವಿಧಾನದ ಮಹತ್ವವನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮನವರಿಕೆ ಮಾಡಿಕೊಡಬೇಕು. ನಮ್ಮ ಸುತ್ತಲಿನ ಬಂಧು–ಬಳಗ, ಗೆಳೆಯರು, ವಿದ್ಯಾರ್ಥಿ, ಯುವ ಜನರ ಮಧ್ಯೆ ಸಂವಿಧಾನದ ತಿಳುವಳಿಕೆಯನ್ನು ಹಂಚಿಕೊಳ್ಳಬೇಕು. ಸಂವಿಧಾನದ ಪ್ರತಿಯೊಂದು ಆಶಯಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನ ಮಾಡಿದಾಗ ಮಾತ್ರ ಈ ಸಂವಿಧಾನಕ್ಕೆ ನಾವು ಕೊಡಬಹುದಾದ ಅತ್ಯಂತ ದೊಡ್ಡ ಗೌರವ ಮತ್ತು ಈ ರಾಷ್ಟ್ರಕ್ಕೆ ಕೊಟ್ಟ ಅದ್ಭುತವಾದ ಸಂವಿಧಾನವನ್ನು ನಾವು ನಿರಂತರವಾಗಿ ಅದಕ್ಕೆ ಬೆಲೆಯನ್ನು ಕೊಡುವ ಕೆಲಸವನ್ನು ಮಾಡಬಹುದೆಂದು ತಿಳಿಸಿ, ನನ್ನ ಎರಡು ವಿಚಾರಗಳನ್ನು ಹಂಚಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರುಃ–** ನಂತರ ಮಾನ್ಯ ಎಸ್. ರವಿಯವರು 10 ನಿಮಿಷಗಳಲ್ಲಿ ಮಾತನಾಡಿ ಮುಗಿಸಿ.

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕನಿಷ್ಠ ನನಗೆ ಅರ್ಧ ಗಂಟೆ ಅವಕಾಶ ಕೊಡಿ. ತಾವು ಮಾತನಾಡುತ್ತಿರುವಾಗ ನಿಲ್ಲಿಸುವ ಬಗ್ಗೆ ತಿಳಿಸಿದ್ದೀರಿ.

**ಸಭಾಪತಿಯವರುಃ–** ಈಗಾಗಲೇ 40 ನಿಮಿಷ ಮಾತನಾಡಿದ್ದೀರಿ.

**ಶ್ರೀ ಎಸ್. ರವಿಃ–** ಆಯಿತು, ಎಷ್ಟಾಗುತ್ತದೋ ಅಷ್ಟು synchronize ಮಾಡಿ ಮಾತನಾಡುತ್ತೇನೆ. ಇನ್ನೊಂದು 10 ನಿಮಿಷ ತೆಗೆದುಕೊಂಡು ಮುಕ್ತಾಯ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದು, ಸಂವಿಧಾನದ ಬಗ್ಗೆ ಮೂಲ ಇತಿಹಾಸ, ನಮ್ಮಲ್ಲಿನ ಜಾತಿ ಪದ್ಧತಿಯಿಂದ ಹಿಡಿದು, ಸ್ವಾತಂತ್ರ್ಯ ಹೋರಾಟ, ಗಾಂಧೀಜಿಯವರ ಹೋರಾಟ, ತೀವ್ರ ಮತ್ತು ಮಂದಗಾಮಿಗಳ ಹೋರಾಟ, ಸ್ವಾತಂತ್ರ್ಯ ಯಾವ ರೀತಿ ಬಂತು, ನಂತರ ಸಂವಿಧಾನ ರಚನೆ, ಡಾ॥ ಬಿ.ಆರ್. ಅಂಬೇಡ್ಕರ್ ಪಾತ್ರ, ಮಹತ್ವ, ಅವರು ತೆಗೆದುಕೊಂಡ ನಿರ್ಣಯ, ಅವರ ಹಿರಿತನ ಇವುಗಳೆಲ್ಲವೂ ಪ್ರಸ್ತಾಪ ಮಾಡಿದ್ದೇನೆ. ಇದಾದ ನಂತರ ಸಂವಿಧಾನ ರಚನೆ, ರಚನೆಯಾದ ಸಂದರ್ಭ, ದೇಶ ವಿಭಜನೆಯಾಗಿ ವಲಸಿಗರಾಗಿ ಅಸಂಖ್ಯಾತ ಹಿಂದೂಗಳು, ಸಿಕ್ಕರು, ಜೈನರು ಇತ್ಯಾದಿಯವರು ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನ ಬಂದಿದ್ದು, ನಮ್ಮ ದೇಶ ಶಕ್ಯವಾಗಿಲ್ಲದ ಸಂದರ್ಭದಲ್ಲಿ ಅಂದಿನ ಪ್ರಧಾನಿಗಳಾದ ನೆಹರೂರವರು ನಿರಾಶ್ರಿತರಾಗಿ ಬಂದವರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವ ಮಹತ್ತರವಾದ ಹೊಣೆ ಹೊತ್ತಿದ್ದು, ಇನ್ನು ಪಂಚವಾರ್ಷಿಕ ಯೋಜನೆ, ಶ್ರೀ ಸರ್ದಾರ್ ವಲ್ಲಭಬಾಯಿ ಪಟೇಲರು 600 ಸಂಸ್ಥಾನಗಳನ್ನು ಅಖಂಡವಾಗಿ ರಾಷ್ಟ್ರವನ್ನಾಗಿ ಮಾಡಿದ್ದು, ಸಾರ್ವಜನಿಕ ವಲಯ, ಉದ್ಯಮಗಳನ್ನು HAL, BHEL, BEL ಗಳಂತಹ ಕಾರ್ಖಾನೆಗಳ ಸ್ಥಾಪನೆ ಜೊತೆಗೆ ಹಸಿವಿನಿಂದ ನರಳುತ್ತಿದ್ದ ದೇಶಕ್ಕೆ ಆಹಾರ ಒದಗಿಸಲು ಮಾಡಿದಂತಹ ಬೃಹತ್ ನೀರಾವರಿ ಯೋಜನೆ, ನಂತರ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರ ತಾಷ್ಕೆಂಟ್ ಒಪ್ಪಂದ, ಇಂಡಿಯಾ–ಪಾಕಿಸ್ತಾನದ ಯುದ್ಧ, ಯುದ್ಧದಲ್ಲಿ ಗೆದ್ದು ಜೈ ಜವಾನ್, ಜೈ ಕಿಸಾನ್

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಂಬ ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿರವರ ಮಂತ್ರ ಘೋಷಣೆ, ತಾಷ್ಕೆಂಟ್‌ನಲ್ಲಿ ಅವರ ಸಾವಿನವರೆಗೂ ನಾನು ಮಾತನಾಡಿದ್ದೆನು. ಮಾನ್ಯ ತಿಮ್ಮಾಪುರ್ ರವರು ಮಾತನಾಡುತ್ತಾ, ಶ್ರೀಮತಿ ಇಂದಿರಾ ಗಾಂಧಿಯವರ ಬಗ್ಗೆ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪಿಸಿ, ಅವರ ಕಾಲದಲ್ಲಿ ನಡೆದಂತಹ ಹಲವಾರು ಕಾರ್ಯಕ್ರಮಗಳ ಬಗ್ಗೆ ಸ್ಮರಣೆ ಮಾಡಿದರು. ವಿಶೇಷವಾಗಿ ಭೂಹೀನರಿಗೆ ಭೂಮಿ ಹಂಚಿಕೆ, ನೀರಾವರಿ ಯೋಜನೆಗಳು, 20 ಅಂಶಗಳ ಕಾರ್ಯಕ್ರಮಗಳ ಜೊತೆಗೆ ಶ್ರೀಮತಿ ಇಂದಿರಾ ಗಾಂಧಿಯವರನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. 'Smiling Buddha' ಅಂದರೆ ನಗುವ ಬುದ್ಧನ ಬಗ್ಗೆ ಬಹಳಷ್ಟು ಜನ ಮರೆತು ಹೋಗಿದ್ದೇವೆ. Pokhran ನಲ್ಲಿ ಮೊದಲನೆಯ Nuclear Bomb Test ಅನ್ನು ಮಾಡಿದ್ದ್ಯಾರು? 1974 ರಲ್ಲಿ ಭಾರತವನ್ನು ಅಣುಶಕ್ತಿ ರಾಷ್ಟ್ರವನ್ನಾಗಿ ಮಾಡುವ ಕನಸನ್ನು ಕಂಡಿದ್ದರು. ನಮ್ಮ ರಾಷ್ಟ್ರ ಬಲಿಷ್ಠವಾಗಿರಬೇಕೆಂದು ಶ್ರೀಮತಿ ಇಂದಿರಾಗಾಂಧಿರವರು ತೆಗೆದುಕೊಂಡ ನಿರ್ಣಯ ಮತ್ತು ಶ್ರೀ ರಾಕೇಶ್ ಶರ್ಮಾರನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಭಾರತದ ಮೊದಲನೆಯ ಅಂತರಿಕ್ಷ ಗಗನ ಯಾನಿ ಶ್ರೀ ರಾಕೇಶ್ ಶರ್ಮಾ ಆಗಿದ್ದಾರೆ. ಸಾರೇ ಜಹಾಸೆ ಅಚ್ಚಾ ಎಂದು ಶ್ರೀಮತಿ ಇಂದಿರಾಗಾಂಧಿರವರ ಜೊತೆ ಸಂಪರ್ಕ ಮಾಡಿದ ಸಂದರ್ಭದಲ್ಲಿ ಅವರು ನುಡಿದಂತಹ ನುಡಿಗಳನ್ನು ನಾವು ಚಿಕ್ಕ ಹುಡುಗರಾಗಿ ಟಿ.ವಿ.ಗಳಲ್ಲಿ ನೋಡಿದ್ದೇವೆ. ಆವತ್ತಿನ ದಿವಸ ಖಖಖಔ ಸ್ಥಾಪನೆ ಮಾಡಿದ್ದರಿಂದ ಭಾರತ ಬಹಳಷ್ಟು ಸಾಧನೆ ಮಾಡಿರುವುದನ್ನು ನೋಡಬೇಕಾಗುತ್ತದೆ. ನಂತರ ಶ್ರೀಮತಿ ಇಂದಿರಾಗಾಂಧಿಯವರ ಸಾವಿನ ಬಗ್ಗೆ ಹೇಳಬೇಕೆಂದರೆ, ಖಲಿಸ್ತಾನದ ಹೋರಾಟದ ವಿಷಯವಾಗಿ ಸ್ವಂತ ಅಂಗರಕ್ಷಕನ ಗುಂಡಿಗೆ ಬಲಿಯಾದರು. ಅದರ ಮಧ್ಯೆ ತುರ್ತು ಪರಿಸ್ಥಿತಿ ಎಲ್ಲವೂ ಬಂತು, ಆ ಪರಿಸ್ಥಿತಿ ಏಕೆ ನಿರ್ಮಾಣ ಆಯಿತು, ಆ ಪರಿಸ್ಥಿತಿಯಲ್ಲಿ ಕೆಲವು ಅವಗಢಗಳು ನಡೆದಿವುದು ನಿಜ. ನಾವು ಇತಿಹಾಸದಲ್ಲಿ ಇರುವುದೆಲ್ಲವನ್ನೂ ಸರಿ ಎಂದು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಆದಷ್ಟು ತಪ್ಪುಗಳನ್ನು ತಪ್ಪು ಎಂದು ಕೆಲವು ಸಂದರ್ಭಗಳಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ. ಅದಕ್ಕೆ ಹೊಣೆಗಾರರಾಗಿ ಶ್ರೀಮತಿ ಇಂದಿರಾಗಾಂಧಿಯವರು ಜೈಲಿಗೆ ಹೋಗಬೇಕಾಯಿತು, ಚುನಾವಣೆಯಲ್ಲಿ ಸೋಲಬೇಕಾಯಿತು, ಮತ್ತೆ ಶ್ರೀಮತಿ ಇಂದಿರಾಗಾಂಧಿಯವರು Phoenix ಪಕ್ಷಿಯಂತೆ ಗೆದ್ದು ಬಂದು ದೇಶ ಕಟ್ಟಲು ತೋರಿಸಿದ ಬದ್ಧತೆಯನ್ನು ನೋಡಿದ್ದೇವೆ. ಶ್ರೀಮತಿ ಇಂದಿರಾಗಾಂಧಿಯವರ ಬಾಲ್ಯ ಹೇಗಿತ್ತು ಎನ್ನುವುದನ್ನು ಕೂಡ ನೆನಪು ಮಾಡಿಕೊಳ್ಳಬೇಕಲ್ಲವೇ? ತಂದೆಯಾದ ಜವಹರಲಾಲ್ ನೆಹರು ಮತ್ತು ತಾಯಿಯಾದ ಶ್ರೀಮತಿ ಕಮಲನೆಹರೂ ರವರು ಜೈಲಿನಲ್ಲಿದ್ದ ಸಂದರ್ಭದಲ್ಲಿ ಅವರ ಬಾಲ್ಯ ಹೇಗಿತ್ತು? ಸ್ವಾತಂತ್ರ್ಯಕ್ಕಾಗಿ ನಡೆದ ಹೋರ್ರಾಟಗಳು, ಗಾಂಧಿಯವರ ಸಾನಿಧ್ಯ, ಎಂತಹ ವ್ಯಕ್ತಿತ್ವದ ಜೊತೆಯಲ್ಲಿದ್ದರು ಎಂಬುದೇ ಅವರಿಗೆ ಪಾಠವಾಗಿದೆ. ಶ್ರೀಮತಿ ಇಂದಿರಾಗಾಂಧಿಯವರು ತೆಗೆದುಕೊಂಡ ಕ್ರಮಗಳು ಇವತ್ತಿಗೂ ದೇಶದಲ್ಲಿ ಸಂವಿಧಾನದ ಮುಖೇನ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಿದೆ. ಆವತ್ತು ಅಮೇರಿಕಾ ಪಾಕಿಸ್ತಾನದ ಜೊತೆ ನಿಂತಿತ್ತು. ಅಮೇರಿಕಾ ಜೊತೆಯಲ್ಲಿದ್ದರೂ ಬಾಂಗ್ಲಾವನ್ನು ವಿಭಜನೆ ಮಾಡಿದರು.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(422)16.03.2020/12.40/ಹೆಚ್‌ವಿ–ವಿಕೆ
**ಎಸ್.ರವಿ(ಮುಂದುವರೆದದ್ದು):–**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಲೋಕಸಭೆಯಲ್ಲಿಯೇ ಶ್ರೀಮತಿ ಇಂದಿರಾ ಗಾಂಧಿಯವರನ್ನು 'ದುರ್ಗೆ' ಎಂದು ಕರೆದಿದ್ದರು. ಶ್ರೀಮತಿ ಇಂದಿರಾ ಗಾಂಧಿಯವರ ಸಾವಿನ ನಂತರ ಮಾನ್ಯ ರಾಜೀವ ಗಾಂಧಿಯವರು ಪ್ರಧಾನ ಮಂತ್ರಿಗಳಾದರು. ಪ್ರಧಾನ ಮಂತ್ರಿಗಳಾಗಿ ಅಧಿಕಾರವನ್ನು ಸ್ವೀಕರಿಸಿದಂತಹ ಮಾನ್ಯ ರಾಜೀವ ಗಾಂಧಿಯವರು, 18 ವರ್ಷದ ಎಲ್ಲ ಯುವಕ–ಯುವತಿಯರಿಗೆ ಮತದಾನದ ಹಕ್ಕು ಮತ್ತು ಶಿಕ್ಷಣದ ಹಕ್ಕನ್ನು ನೀಡುವುದರ ಜೊತೆಗೆ ಮಾಹಿತಿ ತಂತ್ರಜ್ಞಾನಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಿದರು. ಇಂದಿನ ಮಾಹಿತಿ ತಂತ್ರಜ್ಞಾನದಲ್ಲಿನ ಸಾಧನೆಗೆ ಅಂದೇ ತಳಪಾಯ ಹಾಕಿದ್ದರು. ಇದರ ಜೊತೆಗೆ ವಿ.ಪಿ.ಸಿಂಗ್‌ರವರ ಮಂಡಲ್ ಆಯೋಗದ ವರದಿಯನ್ನು ಜಾರಿಗೊಳಿಸಲಾಯಿತು. ಇದೊಂದು ಐತಿಹಾಸಿಕ ಘಟನೆಯಾಗಿದೆ. ಶ್ರೀ ರಾಜೀವ ಗಾಂಧಿಯವರು ಪೆರಂಬೂರ್‌ನಲ್ಲಿ ಭಯೋತ್ಪಾದಕರ ಅಟ್ಟಹಾಸಕ್ಕೆ ತುತ್ತಾಗಿ ಮಾನವ ಬಾಂಬ್‌ನಿಂದ ನಲುಗಿ ಹೋದರು.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ವಿ.ನರಸಿಂಹರಾಯರ ಕಾಲದಲ್ಲಿ ಜಾಗತಿಕರಣ ಮತ್ತು ಆರ್ಥಿಕ ಕ್ರಾಂತಿಯುಂಟಾಗಿತ್ತು. ಸಮಾಜವಾದದ ಹಿನ್ನೆಲೆಯಲ್ಲಿ ನಮ್ಮ ಪ್ರಜಾಪ್ರಭುತ್ವದ ರೀತಿನೀತಿಗಳು ಇದ್ದಂತಹ ಸಂದರ್ಭದಲ್ಲಿ ಭಾರತ ಬದಲಾವಣೆಯ ಗಾಳಿಗೊಡ್ಡಿಗೊಂಡಿತ್ತು. ನಂತರ ಪ್ರಧಾನ ಮಂತ್ರಿಗಳಾಗಿ ಅಧಿಕಾರವನ್ನು ವಹಿಸಿಕೊಂಡಂತಹ ಡಾ॥ಮನಮೋಹನ್ ಸಿಂಗ್‌ರವರ ಕಾಲದಲ್ಲಿ ಆಹಾರ ಭದ್ರತಾ ಕಾಯಿದೆ, ಶಿಕ್ಷಣ ಹಕ್ಕು ಕಾಯಿದೆ ಮುಂತಾದವುಗಳನ್ನು ಜಾರಿಗೊಳಿಸಲಾಗಿತ್ತು.

ಸನ್ಮಾನ್ಯ ಸಭಾಪತಿಯವರೇ, ಯು.ಪಿ.ಎ. ಸರ್ಕಾರ ಅಧಿಕಾರದಲ್ಲಿದ್ದ ಕಾಲದಲ್ಲಿ ಆಧಾರ್ ಕಾರ್ಡ್ ಮತ್ತು ಜಿ.ಎಸ್.ಟಿ.ಯನ್ನು ತರುವಂತಹ ಪ್ರಯತ್ನ ಮಾಡಿದಾಗ, ವಿರೋಧ ಪಕ್ಷದವರು ಬಹಳ ದೊಡ್ಡ ಪ್ರಮಾಣದಲ್ಲಿ ಅದನ್ನು ವಿರೋಧಿಸಿದ್ದರು. ಅದೇ ಇವರು ಮಧ್ಯರಾತ್ರಿಯಲ್ಲಿ ಜಿ.ಎಸ್.ಟಿ.ಯನ್ನು ಜಾರಿಗೊಳಿಸಿ, ಆರ್ಥಿಕ ಸ್ವಾತಂತ್ರ್ಯ ಎಂದು ಘೋಷಣೆ ಮಾಡಿದರು. ಇವತ್ತು ಆಧಾರ್ ಕಾರ್ಡ್ ಇಲ್ಲದಿದ್ದರೆ ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಇವತ್ತಿನ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಸಿ.ಎ.ಎ. ಮತ್ತು ಎನ್.ಆರ್.ಸಿ. ಬಗ್ಗೆ ನಾವೆಲ್ಲರೂ ಮಾತನಾಡುತ್ತಿದ್ದೇವೆ. ಇದಕ್ಕೆಲ್ಲ ಆಧಾರ್‌ಕಾರ್ಡ್ ಮೂಲವಾಗಿದೆ. ಬ್ಯಾಂಕ್‌ನಲ್ಲಿ ಅಕೌಂಟ್ ತೆರೆಯುವುದಕ್ಕೆ ಆಧಾರ್‌ಕಾರ್ಡ್‌ನ ಅಗತ್ಯವಿದೆ. ಮೊಬೈಲ್ ಫೋನ್ ತೆಗೆದುಕೊಳ್ಳುವುದಕ್ಕೆ ಆಧಾರ್ ಕಾರ್ಡ್ ಬೇಕಾಗಿದೆ. ಆ ಆಧಾರ್ ಕಾರ್ಡ್ ವ್ಯವಸ್ಥೆಯನ್ನು ಜಾರಿಗೆ ತಂದು ನಾವು ಬಹಳಷ್ಟು ದೂಷಣೆಗೆ ಒಳಗಾಗಿದ್ದೆವು. ಆಧಾರ್ ಕಾರ್ಡ್ ಜಾರಿಗೊಳಿಸಿರುವುದೇ ಅಪರಾಧ ಎನ್ನುವ ದೃಷ್ಟಿಯಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಪ್ರಚಾರ ಮಾಡಲಾಗಿತ್ತು. ವ್ಯವಸ್ಥಿತವಾಗಿ ಅಪಪ್ರಚಾರ ಮಾಡಿ, ಜನರ ಮನಸ್ಸಿನಲ್ಲಿ ಅದರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಕೀಳು ಭಾವನೆಯನ್ನು ಯಾವ ರೀತಿಯಲ್ಲಿ ಮೂಡಿಸಬಹುದು ಎನ್ನುವುದನ್ನು ನನ್ನ ಕೆಲವು ಮಿತ್ರರಿಂದ ಕಲಿತುಕೊಳ್ಳಬೇಕಾಗಿದೆ. ಇದರ ಬಹಳಷ್ಟು ಸಾಧನೆ ಮಾಡಿ ಡಾಕ್ಟರೇಟ್ ಪಡೆದುಕೊಂಡಿರುವುದನ್ನು ಸಹ ನಾವು ನೋಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಬಂದ ನಂತರ ಚೀನಾ ದೇಶದೊಂದಿಗೆ ಮಾಡಿದಂತಹ ಯುದ್ಧವನ್ನು ಬಿಟ್ಟರೆ ಬೇರೆ ಯಾವ ಯುದ್ಧದಲ್ಲಿಯೂ ನಮ್ಮ ದೇಶ ಸೋಲನ್ನು ಕಂಡಿಲ್ಲ. ಪಾಕಿಸ್ಥಾನದೊಂದಿಗೆ ನಡೆದಂತಹ ಎಲ್ಲ ಯುದ್ಧಗಳಲ್ಲಿಯೂ ನಾವು ಗೆದ್ದಿದ್ದೇವೆ. ಚೀನಾ ದೇಶದೊಂದಿಗೆ ನಡೆದಂತಹ ಯುದ್ಧದಲ್ಲಿ ನಮ್ಮ ದೇಶದ ಅಂದಿನ ಪರಿಸ್ಥಿತಿಯ ಕಾರಣದಿಂದಾಗಿ ನಾವು ಸೋಲಬೇಕಾಗಿ ಬಂದಿತು. ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಾವು ಯಾವುದೇ ಸಾಧನೆಯನ್ನು ಮಾಡಲಿಲ್ಲವೇ ಎನ್ನುವ ಪ್ರಶ್ನೆ ಬಂದಾಗ, ಎಲ್ಲ ಅಸಮತೋಲನಗಳ ನಡುವೆಯೂ ಸಹ ನಾವು ಸಾಕಷ್ಟು ಸಾಧನೆಯನ್ನು ಮಾಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಶೇಕಡಾ 20ರಷ್ಟಿದ್ದ ಅಕ್ಷರಸ್ಥರ ಸಂಖ್ಯೆ ಇವತ್ತು ಶೇಕಡಾ 70ಕ್ಕೇರಿದೆ. ಸ್ವಾತಂತ್ರ್ಯ ಬಂದಾಗ ಒಬ್ಬ ಮನುಷ್ಯನ ಜೀವಿತಾವಧಿ ಸರಾಸರಿ 32 ವರ್ಷಗಳಾಗಿತ್ತು, ಈಗ ಅದು 69 ವರ್ಷಕ್ಕೆ ಬಂದು ನಿಂತಿದೆ. ಆಗ ಶೇಕಡ 50 ದಶಲಕ್ಷ ಟನ್ ಆಹಾರ ಉತ್ಪಾದನೆಯ ಪ್ರಮಾಣವಿತ್ತು. ಈಗ ಸುಮಾರು 280 ದಶಲಕ್ಷ ಟನ್‌ಗಳಷ್ಟು ಆಹಾರಧಾನ್ಯಗಳನ್ನು ಉತ್ಪಾದನೆ ಮಾಡುವ ಸಾಧನೆಯನ್ನು ಮಾಡಿದ್ದೇವೆ. ಉದ್ಯೋಗ, ವಸತಿ, ಆರೋಗ್ಯ, ಕುಡಿಯುವ ನೀರು, ರಸ್ತೆ, ಬೀದಿದೀಪ, ಸಾರಿಗೆ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಪ್ರಗತಿಯನ್ನು ಕಂಡಿದ್ದೇವೆ. ಎಲ್ಲದಕ್ಕೂ ಮಿಗಿಲಾಗಿ, ಖಗೋಳ ವಿಜ್ಞಾನ, ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಮತ್ತು ಅಣುಶಕ್ತಿ ರಕ್ಷಣೆ ಇಂತಹ ಹಲವು ಕ್ಷೇತ್ರಗಳಲ್ಲಿ ನಾವು ವಿಶ್ವದ ಹಲವು ರಾಷ್ಟ್ರಗಳ ಸರಿಸಮಾನ ಸ್ಥಾನದಲ್ಲಿ ನಿಂತಿದ್ದೇವೆ. ಜನರಿಗೆ ಉತ್ತಮ ಆಡಳಿತವನ್ನು ನೀಡುವ ನಿಟ್ಟಿನಲ್ಲಿ ಜನಪರವಾಗಿರುವ ಯೋಜನೆಗಳನ್ನು ರೂಪಿಸುವುದಕ್ಕೆ ಲೋಕಸಭೆಯಿಂದ ಹಿಡಿದು ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ತು, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ಮಹಾನಗರ ಪಾಲಿಕೆಗಳಿಂದ ಹಿಡಿದು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಸಂಘಸಂಸ್ಥೆಗಳಲ್ಲಿಯೂ ಸಹ ಚುನಾಯಿತ ವ್ಯವಸ್ಥೆಯನ್ನು ಅಳವಡಿಸಬೇಕೆನ್ನುವ ವ್ಯವಸ್ಥೆಯನ್ನು ತರಲಾಗಿದೆ. ಅದೇ ರೀತಿಯಲ್ಲಿ ನ್ಯಾಯಾಂಗ ವ್ಯವಸ್ಥೆಯನ್ನು ನೋಡಿದರೆ, ಸರ್ವೋಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯ ಮತ್ತು ಜಿಲ್ಲಾ ನ್ಯಾಯಾಲಯದಿಂದ ಹಿಡಿದು ತಾಲ್ಲೂಕು ನ್ಯಾಯಾಲಯದವರೆಗೆ ಕೋ–ಜುಡಿಶಿಯಲ್ ವ್ಯವಸ್ಥೆಯನ್ನು ನಾವು ಅಳವಡಿಸಿಕೊಂಡಿದ್ದೇವೆ. ಕಾರ್ಯಾಂಗದಲ್ಲಿಯೂ ಸಾಕಷ್ಟು ಬದಲಾವಣೆಗಳಾಗಿವೆ. ಗ್ರಾಮ ಸೇವಕ, ಬಾಪೂಜಿ ಸೇವಾ ಕೇಂದ್ರದಿಂದ ಹಿಡಿದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಕಛೇರಿಯವರೆಗೆ ನೂರಾರು–ಸಾವಿರಾರು ವಿಭಾಗಗಳನ್ನು ಮಾಡಿ ಜನರಿಗೆ ವ್ಯವಸ್ಥಿತವಾದ, ಸುಭದ್ರವಾದ ಆಡಳಿತವನ್ನು ನೀಡುವಂತಹ ವ್ಯವಸ್ಥೆಯನ್ನು ನಿರ್ಮಾಣ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಬೇಕೆನ್ನುವ ನಿಟ್ಟಿನಲ್ಲಿ ನಾವು ಸಾಕಷ್ಟು ಪ್ರಯತ್ನವನ್ನು ಮಾಡಿದ್ದೇವೆ. ದುರ್ದೈವವೆಂದರೆ, ಹಿನ್ನೋಟವನ್ನು ನೋಡಿದರೆ ಎಷ್ಟು ಸಾಧನೆಯನ್ನು ನೋಡಿದ್ದೇವೆಯೋ ಅಷ್ಟೇ ವಿಫಲತೆಯನ್ನು ನೋಡಿದ್ದೇವೆ. ಎಲ್ಲದಕ್ಕೂ ಮಿಗಿಲಾಗಿ ರಾಜಕೀಯ ಭ್ರಷ್ಟಾಚಾರ ಎನ್ನುವುದು ತಾಂಡವವಾಡುತ್ತಿದೆ. ಭ್ರಷ್ಟಾಚಾರಗಳಲ್ಲಿಯೇ ಅತ್ಯಂತ ಅಪಾಯಕಾರಿಯಾಗಿರುವ ಭ್ರಷ್ಟಾಚಾರ ಯಾವುದೆಂದರೆ ರಾಜಕೀಯ ಭ್ರಷ್ಟಾಚಾರವೆಂದರೆ ತಪ್ಪಾಗಲಾರದು. ಇವತ್ತು ನಮ್ಮ ಚುನಾವಣೆ ವ್ಯವಸ್ಥೆ ಎಲ್ಲಿಗೆ ಬಂದು ನಿಂತಿದೆ ಎಂದರೆ, ಹಣಬಲ, ತೋಳ್ಬಲ, ಜಾತಿ ಬಲವಿಲ್ಲದೆ ಇವತ್ತು ಚುನಾವಣೆಗಳನ್ನು ಎದುರಿಸುವುದಕ್ಕೆ ಸಾಧ್ಯವೇ ಇಲ್ಲ. ಒಬ್ಬ ವ್ಯಕ್ತಿ ತನ್ನ ಕ್ಷೇತ್ರದ ಭೌಗೋಳಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಪರಿಚಯವೇ ಇಲ್ಲದೇ ಇರುವವರು ಮೇಲ್ಮನೆಗೆ ಹಾಗೂ ಕೆಳಮನೆಗೆ ಬೇರೆ ಬಲಗಳ ಸಹಾಯದಿಂದಾಗಿ ಚುನಾವಣೆಗಳಲ್ಲಿ ಗೆಲುವನ್ನು ಸಾಧಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಚುನಾವಣೆಗಳು ಯಾವ ರೀತಿಯಲ್ಲಿ ನಡೆಯುತ್ತವೆ ಎನ್ನುವುದನ್ನು ಕರ್ನಾಟಕ ವಿಧಾನ ಸಭೆ ಚುನಾವಣೆಗೆ ಸೀಮಿತವಾಗಿ ಹೇಳುವುದಾದರೆ, ಪಕ್ಷಾಧಾರಿತ ಚುನಾವಣೆಗಳು ನಡೆಯುತ್ತಿವೆ ಎಂದರೆ ಅದು ನಮ್ಮ ಭ್ರಮೆ. ಇವತ್ತು ಇವರುಗಳು ಮಾನ್ಯ ಯಡಿಯೂರಪ್ಪನವರನ್ನು ಬಿಟ್ಟು ರಾಜಕಾರಣ ಮಾಡುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಮೌಲ್ಯಾಧಾರಿತ ಚುನಾವಣೆಗಳು ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲಕ್ಕೆ ಮುಕ್ತಾಯವಾಯಿತು. ಚುನಾವಣೆಯ ನೇತೃತ್ವವನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗುವವರು ವಹಿಸುತ್ತಿದ್ದಾರೆಯೇ ಅಥವಾ ಪಕ್ಷದ ಅಧ್ಯಕ್ಷರು ವಹಿಸುತ್ತಿದ್ದಾರೆಯೇ ಎನ್ನುವುದು ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ವ್ಯಕ್ತಿಗೆ ಅಲ್ಲ, ಜಾತಿಗೆ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ. ಆ ರಾಜ್ಯದಲ್ಲಿರುವ ಪ್ರಬಲವಾಗಿರುವ ಜಾತಿಯ ವ್ಯಕ್ತಿಗೆ ನಾಯಕತ್ವವನ್ನು ನೀಡಲಾಗುತ್ತದೆ. ಆ ವ್ಯಕ್ತಿ ಅಥವಾ ಆ ಪಕ್ಷ ಇನ್ನಿತರ ವ್ಯಕ್ತಿ ಅಥವಾ 3–4 ಇನ್ನಿತರ ಪ್ರಬಲ ಜಾತಿಗಳನ್ನು ಕ್ರೋಢೀಕರಿಸಿಕೊಳ್ಳಬೇಕಾಗುತ್ತದೆ. ಯಾರು ಈ ರೀತಿ ಕ್ರೋಢೀಕರಿಸುತ್ತಾರೋ ಅವರು ಈ ಚುನಾವಣೆಯಲ್ಲಿ ಗೆಲುವು ಸಾಧಿಸುವುದು ಖಚಿತವಾಗಿರುವುದನ್ನು ನಾವು ಎಲ್ಲ ಚುನಾವಣೆಗಳಲ್ಲಿ ನೋಡುತ್ತಿದ್ದೇವೆ. ಹಣಬಲ ಮತ್ತು ತೋಳ್ಬಲಗಳು ಇದರ ಜೊತೆಗೆ ಸೇರಿಕೊಳ್ಳುತ್ತವೆ. ಒಂದು ಸಮಾಧಾನಕರವಾದ ವಿಚಾರವೆಂದರೆ, ಮುಂದಿನ ಚುನಾವಣೆಯಲ್ಲಿ ಬದಲಾವಣೆ ಕಾಣುತ್ತದೆ. ಯಾವ ಜಾತಿಯವರು ಚುನಾವಣೆಯನ್ನು ಗೆಲ್ಲಿಸುವುದರಿಂದ ಹೊರಗೆ ಉಳಿದಿದ್ದರು, ಆ ಜಾತಿಯವರೆಲ್ಲ ಒಂದುಗೂಡುತ್ತಾರೆ. ಅಧಿಕಾರಿಗಳು ಪೋಸ್ಟಿಂಗ್‌ನಿಂದ ಪ್ರಾರಂಭ ಮಾಡುತ್ತಾರೆ. ಒಂದೇ ಜಾತಿಯವರು ಒಂದೇ ವರ್ಗಕ್ಕೆ ಸೀಮಿತಗೊಂಡಿರುವವರು ಪ್ರಮುಖವಾಗಿರುವ ಹುದ್ದೆಗಳನ್ನು ಅಲಂಕರಿಸುತ್ತಾರೆ. ಬಿ.ಡಿ.ಎ. ಕಾರ್ಪೋರೇಶನ್, ಸಬ್ ರಿಜಿಸ್ಟ್ರಾರ್ ಮತ್ತು ಕಂದಾಯ ಇಲಾಖೆ ಇವುಗಳಲ್ಲಿ ಒಂದೇ ವರ್ಗದವರು, ಹಿಂಬಾಲಕರು, ಸ್ವಜನ ಪಕ್ಷಪಾತ ಎನ್ನುವುದು ಪ್ರಾರಂಭವಾಗುತ್ತದೆ. ಇದೆಲ್ಲವನ್ನು ನಾವು ಕಣ್ಣಾರೆ ನೋಡಿದ್ದೇವೆ ಮತ್ತು ನಮ್ಮ ಅನುಭವಕ್ಕೂ ಬಂದಿರುತ್ತದೆ. ಆಗ ಉಳಿದ ಜಾತಿ ಸಬ್ ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್ ಆದಿಯಾಗಿ ಮತ್ತು ಬೇರೆ ಜಾತಿಯವರು ಸೇರಿ ಈ ಸರ್ಕಾರವನ್ನು ಅಧಿಕಾರದಿಂದ ಇಳಿಸಲೇಬೇಕೆಂದು ಎಲ್ಲರೂ ದುಡ್ಡು ಹಾಕುವುದಕ್ಕೆ ಪ್ರಾರಂಭ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಾರೆ. ಇಲ್ಲಿಂದ ಸರ್ಕಾರವನ್ನು ಉರುಳಿಸುವುದಕ್ಕೆ ಬೀಜ ಬಿತ್ತನೆಯಾಗುತ್ತದೆ. ಇದರ ಜೊತೆಗೆ ಅಧಿಕಾರದಲ್ಲಿರುವ ಒಂದು ಜಾತಿಯ ಸೆಟ್‌ಅಪ್ ನಮ್ಮ ಜಾತಿಯ, ನಮ್ಮ ಪಕ್ಷದ ಸರ್ಕಾರ ಬರಬೇಕು, ನಮ್ಮ ಜಾತಿಯವರು ಮುಖ್ಯಮಂತ್ರಿಗಳಾಗಬೇಕು ಎಂದು ಯಾರು ದುಡ್ಡು ಹಾಕಿ ಸರ್ಕಾರವನ್ನು ಅಧಿಕಾರಕ್ಕೆ ತಂದಿರುತ್ತಾರೆ, ಆ ಸೀಮಿತ ಜನರಿಗೆ ಮಾತ್ರ ಸೌಲಭ್ಯಗಳು ದೊರೆತಿರುತ್ತದೆ. ಸಂಪೂರ್ಣವಾಗಿ ಆ ಜಾತಿ ಅಥವಾ ಆ ವರ್ಗದ ಜನರಿಗೆ ಹಂಚಿಕೆಯಾಗಿರುವುದಿಲ್ಲ. ಆತನಿಗೆ ಅಧಿಕಾರ ಸಿಕ್ಕರೆ, ಅವರ ಮನೆಯವರಿಗೆ ಅಣ್ಣ– ತಮ್ಮಂದಿರಿಗೆ ಅವರ ಅಕ್ಕಪಕ್ಕ ಓಡಾಡುವವರಿಗೆ, ಅವರ ಹಿಂಬಾಲಕರಿಗೆ, ಅವರ ಚೇಲಾಗಳಿಗೆ ಮತ್ತು ಅವರ ಬೆಂಬಲಿಗರಿಗೆ ಮಾತ್ರ ಅನುಕೂಲ ಮಾಡಿಕೊಟ್ಟಿದ್ದಾನೆ. ಮುಂದಿನ ಬಾರಿಯೂ ಇದೇ ಸರ್ಕಾರವನ್ನು ನಾವು ತಂದರೆ, ನಮ್ಮ ಸ್ಥಿತಿ ಹೀಗೆಯೇ ಇರುತ್ತದೆಂದು ಇವರುಗಳು ನಿಷ್ಕ್ರಿಯರಾಗುತ್ತಾರೆ. ಆಗ ಅಧಿಕಾರ ಸಿಗದೇ ಇದ್ದ ಮತ್ತೊಂದು ವರ್ಗದವರು ಪ್ರಬಲರಾಗುತ್ತಾರೆ. ಈ ರೀತಿ ಅಧಿಕಾರ ಬದಲಾವಣೆಯಾಗುತ್ತದೆ. ಈ ವ್ಯವಸ್ಥೆಗೆ ನಾವು ಬಂದಿದ್ದೇವೆ. ಚುನಾವಣೆಯ ಸಂದರ್ಭದಲ್ಲಿ ನಾವು 140 ಪ್ರಣಾಳಿಕೆಯನ್ನು ಕೊಟ್ಟಿದ್ದೆವು, ಅದರಲ್ಲಿ 04 ಪ್ರಣಾಳಿಕೆಗಳನ್ನು ಮಾತ್ರ ಅನುಷ್ಠಾನಗೊಳಿಸಿಲ್ಲ, ದಯಮಾಡಿ ಮತ ಹಾಕಿ ಎಂದು ಹೇಳಿದರೆ ಯಾರೂ ನಮ್ಮ ಮಾತನ್ನು ಕೇಳಲ್ಲ. ಯಾರೂ ಮತ ಹಾಕ್ತೋಲ್ಲ.

(ಮುಂದುವರಿದಿದೆ)

(423) 16.3.2020 12.50 ಪಿಕೆ:ವಿಕೆ

**ಎಸ್.ರವಿ (ಮುಂದುವರೆದಿದೆ)**

ಆ ಸಂದರ್ಭಗಳಲ್ಲಿ ಅವೆಲ್ಲವೂ ನಡೆಯುವುದನ್ನು ನಾವು ನೋಡುತ್ತಿದ್ದೇವೆ. ಇದು ಕೂಡ ಎಲ್ಲೋ ಒಂದು ಕಡೆ ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಮಾರಕವಾಗುವ ವಿಚಾರವಾಗಿದೆ. ಇನ್ನು ಕಾರ್ಯಾಂಗದ ಬಗ್ಗೆ ಹೇಳುವುದಾದರೆ, ಅವರೇ ಯಜಮಾನರಾಗಿರುತ್ತಾರೆ. ನಾವು 5 ವರ್ಷಕ್ಕೆ ಒಂದು ಸಲ ಚುನಾವಣೆಯನ್ನು ಎದುರಿಸುತ್ತೇವೆ. ಆಗ ಜನ ಒಂದು ತೀರ್ಮಾನ ಮಾಡಿ ನಮ್ಮನ್ನು ಆರಿಸಿ ಮುಂದೆ ಕಳುಹಿಸುತ್ತಾರೆ ಅಥವಾ ಹಿಂದಕ್ಕೆ ಎಳೆದು ಕೂರಿಸುತ್ತಾರೆ. ಅಪ್ಪಿತಪ್ಪಿ ಏನಾದರೂ ಭ್ರಷ್ಟಾಚಾರ ಮಾಡಿದರೆ ಅದರ ಪರಿಣಾಮವನ್ನೂ ಎದುರಿಸಬೇಕಾಗುತ್ತದೆ. ಆದರೆ ಕಾರ್ಯಾಂಗದ ಮಿತ್ರರು Revenue Inspector, Village Accountant ಆದರೆ ಸಾಕು. ಸರ್ಕಾರವೇ ಅವನದಾಗುತ್ತದೆ. ನಾವು ರೂಪಿಸುವಂತಹ ಕಾರ್ಯಕ್ರಮಗಳನ್ನು ಜನರಿಗೋಸ್ಕರ ಅನುಷ್ಠಾನಗೊಳಿಸಬೇಕು ಎಂದರೆ ಅವನಿಗೇನೋ ಸಂಕಟ, ಅವನಿಗೆ ಏನೋ ನೋವು, ತಾನೇ ಜನರಿಗೆ ಪುಗಸಟ್ಟೆ ಯೋಜನೆಗಳನ್ನು ಕೊಡುತ್ತಿದ್ದೇನೆ ಎನ್ನುವ ಮನೋಭಾವ ಹೊಂದಿರುತ್ತಾನೆ. 30 ವರ್ಷ ಅವನೇ ಸುಲ್ತಾನನಾಗಿರುತ್ತಾನೆ. ರಾಜಕಾರಣಿಗಳು ಏಕ್ ದಿನ್ ಕಾ ಸುಲ್ತಾನರಾದರೆ ಆತ 30 ವರ್ಷಗಳ ಸುಲ್ತಾನನಾಗಿರುತ್ತಾನೆ. ಇದು ಅಧಿಕಾರಿಗಳ ಮನೋಭಾವ.

**ಶ್ರೀ ಪಿ.ಆರ್.ರಮೇಶ್:–** ಅವರು owners, ನಾವು leaseholders ಆಗಿಬಿಡುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ರವಿ:–** ಕಾರ್ಯಾಂಗದ ಎಲ್ಲಾ ಅಧಿಕಾರಿಗಳು ಹಾಗೆಯೇ ಇರುತ್ತಾರೆ ಎಂದು ಹೇಳುವುದಿಲ್ಲ. ಪ್ರಾಮಾಣಿಕವಾಗಿ ತಮ್ಮ ಕೆಲಸ ನಿರ್ವಹಣೆ ಮಾಡುವವರೂ ಇದ್ದಾರೆ. ಇನ್ನು ಕೆಲವು ಅಧಿಕಾರಿಗಳು, ನಕ್ಕುಬಿಟ್ಟರೆ ಏನಾದರೂ ಕೇಳಿಬಿಡಬಹುದು ಎನ್ನುವ ಯೋಚನೆ ಮಾಡುತ್ತಾರೆ. ಕಾರ್ಯಾಂಗದ ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಮಾತನಾಡಬೇಕಾದರೆ ಅಧಿವೇಶನದಲ್ಲಿ ಅದಕ್ಕೆಂದು ನಿರ್ದಿಷ್ಟ ಸಮಯವನ್ನು ನಿಗದಿ ಮಾಡಬೇಕಾಗುತ್ತದೆ. ನಮ್ಮ ಪಂಚಾಯಿತಿಯ ಪಿಡಿಓಯಿಂದ ಹಿಡಿದು, ಬಿಲ್ ಕಲೆಕ್ಟರ್‌ಗಳಿಂದ ಹಿಡಿದು ವಿಧಾನಸೌಧದ ಮೂರನೆಯ ಮಹಡಿಯಲ್ಲಿ ಕುಳಿತಿರುವ ಅಧಿಕಾರಿಗಳವರೆಗೆ ಮಾತನಾಡುತ್ತಾ ಹೋದರೆ ಅದಕ್ಕೆ ಕೊನೆ ಇರುವುದಿಲ್ಲ. ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ಅಥವಾ ಕಮ್ಯುನಿಸ್ಟ್ ಪಕ್ಷಗಳ ಯಾವುದೇ ಸರ್ಕಾರ ಇರಲಿ ಜನವಿರೋಧಿ ಕಾರ್ಯಕ್ರಮಗಳನ್ನು ತರುವುದಕ್ಕೆ ಸಾಧ್ಯವಿಲ್ಲ. ಎಲ್ಲಾ ಸರ್ಕಾರಗಳು ಕೆಲವು ಉತ್ತಮ ಯೋಜನೆಗಳನ್ನು ತಂದಿರುತ್ತದೆ. ಆದರೆ ನಿರೀಕ್ಷಿತ ಮಟ್ಟದಲ್ಲಿ ಆ ಕಾರ್ಯಕ್ರಮಗಳು ಏಕೆ ಅನುಷ್ಠಾನಗೊಳ್ಳುವುದಿಲ್ಲ ಎಂದು ನೋಡಿದಾಗ, ಅನುಷ್ಠಾನಗೊಳಿಸುವ ಈ ಚಿರಂಜಟಿಭಿಥಿ ಏನಿವೆ ಇವು ಭ್ರಷ್ಟಾಚಾರದಲ್ಲಿ ತೊಡಗಿರುತ್ತವೆ. ಇವರಿಗೆ ಸೇವಾ ಭದ್ರತೆ ಕೊಟ್ಟ ತಕ್ಷಣ ಇವರ ಮನೋಭಾವವೇ ಬೇರೆಯಾಗುತ್ತದೆ. ಸರ್ಕಾರವನ್ನು ಬದಲಾವಣೆ ಮಾಡುವಂಥದ್ದು, ಸರ್ಕಾರವನ್ನೇ ತೆಗೆಯುವವರು ಇವರೇ ಆಗಿರುವಂಥದ್ದನ್ನು ನಾವು ನೋಡಿದ್ದೇವೆ. ಶಿಕ್ಷಣ ಕ್ಷೇತ್ರ ಅಭಿವೃದ್ಧಿ ಹೊಂದಿದರೆ ಪ್ರಜಾಪ್ರಭುತ್ವ ಉಳಿಯುತ್ತದೆ. ಆ ಮೂಲಕ ಸಂವಿಧಾನದ ಬೇರುಗಳು ಗಟ್ಟಿಯಾಗುತ್ತವೆ. ಆದರೆ, ಯಾರು ಶಿಕ್ಷಣವಂತರಾಗಿರುತ್ತಾರೋ, ಸರ್ಕಾರಿ ನೌಕರಿಯಲ್ಲಿ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡುತ್ತಾರೋ, ಇಂಥವರು ಬಿತ್ತುವಂತಹ ಜಾತಿಯ ವ್ಯವಸ್ಥೆ, ಜಾತಿಯ ಬೀಜವನ್ನು ಇನ್ಯಾರು ಬಿತ್ತುವುದಕ್ಕೆ ಸಾಧ್ಯವಿಲ್ಲ. ಇವರು ಅನುಕೂಲ ಪಡೆಯುವುದಕ್ಕೆ, ಆ ಸಂದರ್ಭಕ್ಕೆ ಜಾತಿಯನ್ನು ಎಲ್ಲಿ tres ಮಾಡಬೇಕು, caste card ಎಲ್ಲಿ play ಮಾಡಬೇಕು ಎಂದು ತಿಳಿದುಕೊಂಡಿರುತ್ತಾರೆ. ಇದು ಅವರ ಪೋಸ್ಟಿಂಗ್‌ನ ಸಂದರ್ಭದಲ್ಲಿ ಇರಬಹುದು ಅಥವಾ ಇನ್ನಿತರ ಬೇರೆ ರೀತಿಯ ವಿಚಾರಗಳಲ್ಲಿ ಇರಬಹುದು.

ಮಾನ್ಯ ಸಭಾಪತಿಯವರೇ, ನ್ಯಾಯಾಂಗದ ವಿಚಾರವಾಗಿ ಹೇಳುವುದಾದರೆ, ಕಾನೂನುಗಳನ್ನು ವ್ಯಾಖ್ಯಾನ ಮಾಡುವುದಕ್ಕೆ, ತಪ್ಪುಗಳು ನಡೆದಾಗ ಅದನ್ನು ಸರಿ ದಾರಿಗೆ ತರಲು ನ್ಯಾಯಾಂಗದ ಮೊರೆ ಹೋಗುತ್ತೇವೆ. ಆದರೆ ಇಂದಿನ ದಿನಗಳಲ್ಲಿ ಎಲ್ಲಾ ಕಡೆಯಲ್ಲೂ ನ್ಯಾಯಾಂಗದ ಹಸ್ತಕ್ಷೇಪವನ್ನು, ಮೂಗು ತೂರಿಸುವುದನ್ನು ನೋಡುತ್ತಿದ್ದೇವೆ. ಯಾವುದೇ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದಕ್ಕೆ ನ್ಯಾಯಾಂಗದ ನೆರವನ್ನು ಪಡೆಯುವ ಸಂದರ್ಭ ಬಂದಿದೆ. ಎಲ್ಲಿ ಕಾರ್ಯಾಂಗ ವಿಫಲವಾಗುತ್ತದೆಯೋ, ಎಲ್ಲಿ ಶಾಸಕಾಂಗ ವಿಫಲವಾಗುತ್ತದೆಯೋ ಅಲ್ಲಿ ನ್ಯಾಯಾಂಗ ಸಹಜವಾಗಿ ತನ್ನ ಪ್ರಾಬಲ್ಯವನ್ನು ತೋರಿಸುವುದನ್ನು, ಮೂಗು ತೂರಿಸುವುದನ್ನು ನಾವು ನೋಡುತ್ತಿದ್ದೇವೆ. ಅದರಲ್ಲೂ ವಿಶೇಷವಾಗಿ ನ್ಯಾಯಾಂಗದಲ್ಲಿ ನ್ಯಾಯದಾನ ವಿಳಂಬದಿಂದ ಬಹಳಷ್ಟು ಪರಿಸ್ಥಿತಿ ಹದಗೆಡುವುದಕ್ಕೆ ಪ್ರಮುಖವಾದ ಕಾರಣವಾಗುತ್ತದೆ. ಕ್ರಿಮಿನಲ್ ಕೇಸ್‌ಗಳು 2–3–4 ವರ್ಷಗಳಲ್ಲಿ ಒಂದಷ್ಟು ಕೊನೆ ಕಾಣುತ್ತವೆ. ಸಿವಿಲ್ ವ್ಯಾಜ್ಯಗಳಂತೂ ಕೊನೆಗಾಣುವುದಕ್ಕೆ ಸಾಧ್ಯವೇ ಇಲ್ಲ. ಸರ್ವೋಚ್ಚ ನ್ಯಾಯಾಲಯದಲ್ಲಿ ಶೇಕಡ 20 ರಷ್ಟು ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಅದೇರೀತಿ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

High Court, JMFC, Divisional Court, ಈ ಕೋರ್ಟ್‌ಗಳಲ್ಲಿ ಬೆಂಚ್ ಕ್ಲರ್ಕ್‌ಗಳೇ ಇರುವುದಿಲ್ಲ, ಟೈಪಿಂಗ್ ಮೆಷಿನ್‌ಗಳಿಲ್ಲ, ಅಟೆಂಡರ್‌ಗಳು ಇಲ್ಲ. ಕೇಸ್‌ಗಳನ್ನು ನಡೆಸುವುದಕ್ಕೆ ಮೂಲಭೂತ ಸೌಕರ್ಯಗಳಿಲ್ಲ. ಆದರೆ, ಸಿವಿಲ್ ವಿಷಯವಾಗಿ ಹೋದಾಗ ಸ್ಟೇ ಒಂದನ್ನು ಕೊಡುತ್ತಾರೆ. ಸಿವಿಲ್ ವ್ಯಾಜ್ಯಗಳಲ್ಲಿ ಅಂತಿಮ ತೀರ್ಪುಗಳು ಬರುವುದೇ ಇಲ್ಲ. ಚುನಾವಣೆ ವಿಚಾರ ಇರಬಹುದು, ಮೀಸಲಾತಿ ವಿಚಾರಗಳಿರಬಹುದು, ವರ್ಷಗಟ್ಟಲೆ, ದಿನಗಟ್ಟಲೆ ನಡೆಯುತ್ತಿರುತ್ತವೆ. ಇದರಿಂದ ನ್ಯಾಯಾಂಗ ವ್ಯವಸ್ಥೆಯಲ್ಲಿ ಜನ ನಂಬಿಕೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಇದರ ಪರಿಣಾಮವೇನೆಂದರೆ ಪೊಲೀಸ್ ಸ್ಟೇಷನ್‌ಗಳ ಪೊಲೀಸರೆ ರಾಜರಾಗುತ್ತಿದ್ದಾರೆ. ಜಮೀನು ವ್ಯಾಜ್ಯದ ಪ್ರಕರಣಗಳಲ್ಲಿ ಕೋರ್ಟ್‌ಗೆ ಹೋದರೆ ತೀರ್ಮಾನವಾಗಲು 5–10–20 ವರ್ಷಗಳಾಗುತ್ತವೆ, ಆ ಸಂದರ್ಭದಲ್ಲಿ ಆತ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾನೆ. ಆಗ ಸಮಸ್ಯೆಗಳನ್ನು ಪರಿಹರಿಸಲು ನಮ್ಮಂಥ ರಾಜಕಾರಣಿಗಳು ಪ್ರವೇಶ ಮಾಡುತ್ತಾರೆ. ಯಾರು ಪ್ರಬಲರಿರುತ್ತಾರೋ, ಯಾರಿಗೆ ತೋಳು ಬಲ ಇರುತ್ತದೆಯೋ, ಯಾರನ್ನು ಮಾಫಿಯಾ ಎಂದು ಹೇಳುತ್ತಾರೋ, ಗೂಂಡಾಗಳು ಎಂದು ಹೇಳುತ್ತಾರೋ ಅವರ ಪ್ರವೇಶವಾಗುತ್ತದೆ. ನ್ಯಾಯದಾನ ನೀಡುವಲ್ಲಿ ವಿಳಂಬವಾದಾಗ ಜನತೆ ತುರ್ತು ನ್ಯಾಯವನ್ನು ಪಡೆಯಲು ಪರ್ಯಾಯ ಮಾರ್ಗಗಳನ್ನು ಹುಡುಕಿಕೊಳ್ಳುತ್ತಾರೆ. ಆಗ ಈ ರೀತಿ ವ್ಯವಸ್ಥೆ ನಿರ್ಮಾಣವಾಗಿ, ಮತ್ತೊಂದು ರೀತಿಯ ಭ್ರಷ್ಟಾಚಾರ, ಗೂಂಡಾಗಿರಿ, ತೋಳ್ಬಲ ಇವೆಲ್ಲಕ್ಕೂ ದಾರಿ ಮಾಡಿಕೊಡುತ್ತವೆ.

ಮಾನ್ಯ ಸಭಾಪತಿಯವರೇ, ನಿರ್ಭಯಾ ಪ್ರಕರಣದ ಬಗ್ಗೆ ಇಡೀ ದೇಶ ನೋಡುತ್ತಿದೆ. ಈ ಪ್ರಕರಣ ನಡೆದು ಎಷ್ಟು ವರ್ಷವಾಯಿತು? ಆ ಅಬಲೆ ಹೆಣ್ಣು ಮಗಳ ಮೇಲೆ ನಡೆದಂತಹ ಅತ್ಯಾಚಾರಕ್ಕೆ ಇಡೀ ದೇಶವೇ ಮರುಗಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಒಂದಾಗಿ ಪ್ರತಿಭಟನೆ ಮಾಡಿತು. ನಿರ್ಭಯ ಘಟನೆಯಾಗಿ ಎಷ್ಟು ವರ್ಷವಾಯಿತು? ಇದರಲ್ಲಿ ಅಪರಾಧಿಗಳ ಬಂಧನವಾಯಿತು, ಕೇಸ್ ಆಯಿತು, ವಿಚಾರಣೆಯಾಯಿತು, ಅಂತಿಮ ಆದೇಶಗಳಾಯಿತು. ರಾಷ್ಟ್ರಪತಿಗಳ ಹತ್ತಿರ ಕ್ಷಮಾದಾನದ ಅರ್ಜಿ ಹೋಗಿದ್ದೂ ಆಯಿತು. ಸರ್ವೋಚ್ಛ ನ್ಯಾಯಾಲಯದ 3 ಜನ ಬೆಂಚ್, 5 ಜನರ ಬೆಂಚ್ ಎಲ್ಲವೂ ಮುಗಿತು. ಇನ್ನೂ ಇವತ್ತಿಗೂ ಕೂಡ ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿರುವ ಲೋಪಗಳನ್ನು ಇಟ್ಟುಕೊಂಡು ಅಪರಾಧಿಗಳು ಬದುಕಿರುವುದನ್ನು ನಾನು ನೋಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, ನಾವು ಮಹಿಳೆಯರ ದೌರ್ಜನ್ಯದ ಬಗ್ಗೆ ಮಾತನಾಡಿದೆವು. ಮಹಿಳೆಯ ಮೇಲಿನ ದೌರ್ಜನ್ಯ ಇನ್ನೂ ನಿಂತಿಲ್ಲ. National Crime Records Bureau ದ ವರದಿ ಪ್ರಕಾರ 77 ನಿಮಿಷಗಳಿಗೆ ಒಮ್ಮೆ ಒಬ್ಬ ಮಹಿಳೆ ನಾನಾ ಹಿಂಸೆಗಳನ್ನು ಅನುಭವಿಸಿ ಸಾಯುತ್ತಿದ್ದಾರೆ; ಪ್ರತಿ 6 ಗಂಟೆಗೆ ಒಮ್ಮೆ ವಿವಾಹಿತ ಮಹಿಳೆಯನ್ನು ಜೀವಂತವಾಗಿ ಸುಡಲಾಗುತ್ತಿದೆ ಅಥವಾ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಂದರ್ಭವನ್ನು ನೋಡುತಿದ್ದೇವೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದ ವಿಚಾರ ಎಂದರೆ ಅದು ಭ್ರಷ್ಟಾಚಾರ. ರಾಜಕೀಯ ಭ್ರಷ್ಟಾಚಾರದ ಜೊತೆಗೆ ದೇಶದ ಸೂಕ್ಷ್ಮ ಕ್ಷೇತ್ರಗಳಾದ ರಕ್ಷಣೆ, ಸಂಶೋಧನೆ, ನ್ಯಾಯಾಂಗ, ಶಿಕ್ಷಣ, ಆರೋಗ್ಯ ಇತ್ಯದಿ ಕ್ಷೇತ್ರಗಳಿಗೂ ಹಬ್ಬಿರುವುದು ನಮ್ಮ ದುರ್ದೈವ. ಅದೇರೀತಿ, ಸ್ವಾಯತ್ತ ಸಂಸ್ಥೆಯಾಗಿರುವಂತಹ IT (Income Tax), ED (Enforcement Directorate), RBI (Reserve Bank of India), ಇವುಗಳೂ ಕೂಡ ಹೊರತಲ್ಲ, ಚುನಾವಣಾ ಕಮಿಷನ್ ಕೂಡ ಹೊರತಲ್ಲ. ಇವೆಲ್ಲವೂ ರಾಜಕೀಯ ಹಸ್ತಕ್ಷೇಪಕ್ಕೆ ಒಳಗಾಗಿವೆ. ಈ ರೀತಿ ಈಗ ಮಾತ್ರ ಅಲ್ಲ ಹಿಂದೆಯೂ ಕೂಡ ಆಗಿದೆ. ಆದರೆ ಈ ಮಟ್ಟದಲ್ಲಿ, ಈಗ ನಡೆಯುತ್ತಿರುವ ಪ್ರಮಾಣದಲ್ಲಿ ಹಿಂದೆಂದೂ ನಡೆದಿರಲಿಲ್ಲ. ಇದು ಪ್ರಜಾಪ್ರಭುತ್ವದ ವ್ಯವಸ್ಥೆಗೆ ಮಾರಕವಾಗುವ ರೀತಿಯಲ್ಲಿ ಘಳಕೆ ಆಗುತ್ತಿದೆ, ಹಸ್ತಕ್ಷೇಪವಾಗುತ್ತಿದೆ. ಇದು ಪ್ರಗತಿಗೆ ಉತ್ತಮವಾದುದಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, ನಾವು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ, ಸೇವಾ ಕ್ಷೇತ್ರದಲ್ಲಿ ಬೇರೆ ದೇಶಗಳಿಗೆ ಹೊಲಿಸಿದಾಗ ನಮ್ಮ ದೇಶ ಮುಂಚೂಣಿಯಲ್ಲಿರುವುದನ್ನು ಕಾಣುತ್ತೇವೆ. ಅದರ ಮುಖೇನ ಕೈಗಾರಿಕಾ ಕ್ಷೇತ್ರದಲ್ಲಿ, ಸೇವಾ ಕ್ಷೇತ್ರದಲ್ಲಿ, ಕೃಷಿ ಕ್ಷೇತ್ರದಲ್ಲಿ ಅಪರಿಮಿತವಾದ ಸಂಪತ್ತು ಉತ್ಪಾದನೆ ಮಾಡುತ್ತಿದ್ದೇವೆ. ಆದರೆ ಉತ್ಪಾದನೆ ಆಗುತ್ತಿರುವ ಸಂಪತ್ತು, ಹನಿಹನಿಯಾಗಿ ಕಡೆಯ ಹಂತದ ಮನುಷ್ಯವನರೆಗೆ ತಲುಪಿ, ಎಲ್ಲಾ ವ್ಯವಸ್ಥೆಗಳು ಸುಭದ್ರಗೊಳ್ಳುವುದಕ್ಕೆ, ಜಾಗೃತಗೊಳ್ಳುವುದಕ್ಕೆ, ಉತ್ತಮಗೊಳ್ಳುವುದಕ್ಕೆ ಆಗುತ್ತಿಲ್ಲ. ಕೆಲವೇ ಬೆರಳಿಣಿಕೆಯ ಜನರ ಕೈಗಷ್ಟೇ ಆ ಸಂಪತ್ತು ಕ್ರೋಡೀಕರಣವಾಗುತ್ತಿದೆ. ಹಣ ಹಣವನ್ನು ದುಡಿಯುತ್ತದೆ. ಯಾರು ಬಡವನಾಗಿದ್ದಾನೋ ಅಂಥವನ್ನು ಮತ್ತಷ್ಟು ಬಡವನಾಗುತ್ತಿದ್ದೇನೆ. ಯಾರು ಹಣವಂತನಿದ್ದಾನೋ ಅವನು ಮತ್ತಷ್ಟು ಶ್ರೀಮಂತನಾಗುತ್ತಾನೆ. ಬಡವ ಮತ್ತು ಶ್ರೀಮಂತ ಎಂಬ ಬಂಡವಾಳಶಾಹಿ ವ್ಯವಸ್ಥೆಯ ರೀತಿಯಲ್ಲಿ ಬಹಳಷ್ಟು ಅಂತರ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಗ್ರಾಮೀಣ ಭಾಗಗಳು ವಾಸಿಸಲು ಯೋಗ್ಯವಲ್ಲದೇ ಇರುವ ಪರಿಸ್ಥಿತಿಗೆ ತಲುಪಿ ಶರವೇಗದಲ್ಲಿ ನಗರೀಕರಣವಾಗುತ್ತಿದೆ. ಗ್ರಾಮೀಣ ಭಾಗದ ಜನರಿಗೆ ಸೂಕ್ತ ವ್ಯವಸ್ಥೆಗಳನ್ನು ಕೊಡದೇ ಹೋದರೆ ಮುಂದಿನ ದಿನಗಳಲ್ಲಿ ಅದೇ ಒಂದು ಅಪಾಯಕಾರಿ ವ್ಯವಸ್ಥೆಯಾಗಿ ನಿರ್ಮಾಣವಾಗುವ ಸಾಧ್ಯತೆ ಇರುತ್ತದೆ. ಇತ್ತೀಚಿನ ದಿನಗಳಲ್ಲಿ ವಿಜಯ್‌ಮಲ್ಯ, ನೀರವ್‌ಮೋದಿ ಮತ್ತು ಮೆಹುಲ್ ಚೌಕ್ಸಿ ಇಂತಹ ಹಲವಾರು ಜನರು ಸಾರ್ವಜನಿಕ ವಲಯಗಳಲ್ಲಿ ಸ್ಥಾಪನೆಯಾಗಿರುವಂತಹ ಹಣಕಾಸು ಸಂಸ್ಥೆಗಳಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದಾರೆ.

(ಮುಂದು)

(424)16-03-2020 1.00 ಡಿಎಸ್-ಬಿಎನ್‌ಎಸ್
**ಶ್ರೀ ಎಸ್.ರವಿ(ಮುಂದು):**

ಪಡೆದಂತಹ ಸಾಲವನ್ನು ಸಕಾಲಕ್ಕೆ ಮರು ಪಾವತಿ ಮಾಡದೆ ಇಲ್ಲಿಂದ ಪಲಾಯನ ಮಾಡಿ ವಿದೇಶಗಳಲ್ಲಿ ನೆಲಸಿ ಇವತ್ತು ಐಷರಾಮಿಯಾದಂತಹ ಜೀವನವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅಂದರೆ, ನಮ್ಮ ಸಾರ್ವಜನಿಕರ ಹಣವನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೆಲವಷ್ಟೇ ಜನ ಲೂಟಿ ಮಾಡುವುದಕ್ಕೆ ಸಾಧ್ಯವಾಯಿತು. ಇಂದಿಗೂ ಕೂಡ ಅವರನ್ನು ಕರೆದುಕೊಂಡು ಬಂದು ಇಲ್ಲಿ ಶಿಕ್ಷೆಗೆ ಒಳಪಡಿಸುವುದಕ್ಕಾಗಲಿಲ್ಲವೇ? ಎಲ್ಲೋ ಒಂದು ಕಡೆ ನಾವು ವಿಫಲರಾಗಿದ್ದೇವೆ. 2007 ರಿಂದ 2017 ರವರೆಗೆ NPA-ಅನುತ್ಪಾದಕ ಆಸ್ತಿಯ ಹೆಸರಿನಲ್ಲಿ ಇಂಥವರಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿರುವಂತಹ ಉದಾಹರಣೆಗಳು ನಮ್ಮ ಮುಂದಿವೆ. ಕಾರ್ಪೋರೇಟ್ ಸಂಸ್ಥೆಗಳಿಗೆ NPA-ಅನುತ್ಪಾದಕ ಆಸ್ತಿಯ ಹೆಸರಿನಲ್ಲಿ ಸಾರ್ವಜನಿಕರ ಹಣದಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದ್ದೇವೆ. ಇದನ್ನು ಬಡವ ನೋಡುತ್ತಿರುತ್ತೇನೆ. ಎಲ್ಲೋ ಒಂದು ಕಡೆ ಆ ವ್ಯತ್ಯಾಸಗಳು ನಿರ್ಮಾಣವಾಗುತ್ತವೆ. ಇದು ಕೂಡ ಒಳ್ಳೆಯದಲ್ಲ. ನಮಗೊಂದು ಆಶಯವಿದೆ. ಈ ವ್ಯವಸ್ಥೆಯಲ್ಲಿ ನನಗೆ ಬಹಳ ಆಶ್ಚರ್ಯವಾಯಿತು. ಅಮೇರಿಕಾದವರು ಅವರ ದೇಶದಲ್ಲಿ ಒಸಮಾ ಬಿನ್ ಲಾಡನ್ ಬಾಂಬ್ ಸ್ಫೋಟ ಮಾಡಿದಂತಹ ಸಂದರ್ಭದಲ್ಲಿ ಒಸಮಾ ಬಿನ್ ಲಾಡನ್‌ನನ್ನು ಇಸ್ಲಾಮಾಬಾದ್‌ಗೆ ಹೋಗಿ ಹೊಡೆದು ಹಾಕಿದರು. ಕರಾಚಿಯಲ್ಲಿರತಕ್ಕಂಥ ದಾವೂದ್ ಇಬ್ರಾಹಿಂ ಅನ್ನು ಹೆಡೆಮುರಿಕಟ್ಟಿ ತಂದು, ನಮ್ಮ ಆರ್ಥಿಕ ರಾಜಧಾನಿಯಾಗಿರುವಂತಹ ಬಾಂಬೆಯಲ್ಲೇನು ಸ್ಫೋಟ ನಡೆಯಿತು, ಕರಾಳವಾದಂತಹ ದುರ್ಘಟನೆ ನಡೆಯಿತು ಆ ದಾವೂದ್ ಇಬ್ರಾಹಿಂ ಅನ್ನು ತಂದು ವಿಚಾರಣೆ ಮಾಡಿ ಗುಂಡಿಗೇರಿಸುತ್ತಾರೆ ಅಥವಾ ಗಲ್ಲಿಗೇರಿಸುತ್ತಾರೆ ಎನ್ನುವ ಆಶಯವನ್ನು ಈ ಆರು ವರ್ಷದಲ್ಲಿ ಈಡೇರಿಸುತ್ತಾರೆ ಅಂದುಕೊಂಡಿದ್ದೆ. ಆದರೆ ಈಡೇರಲಿಲ್ಲ. ಈ ರಾಜಕೀಯ ಭ್ರಷ್ಟಾಚಾರಕ್ಕೆ ಕೊನೆ ಹಾಡುತ್ತಾರೆ ಎಂದುಕೊಂಡಿದ್ದೆ. ಏಕೆಂದರೆ, absolute majority ಕೊಟ್ಟಿರತಕ್ಕಂಥದ್ದು. ನಾವು ಮಾಡಿರುವಂತಹ ಕೆಲವು ತಪ್ಪುಗಳ ಹಿನ್ನಲೆಯಲ್ಲಿ ನೀವು ಸಾಕು, ನಾವು ಮತ್ತೊಂದು ವ್ಯವಸ್ಥೆಯನ್ನು ನೋಡಬೇಕು, ನಮ್ಮ ಆಶಯಗಳನ್ನು ಈ ಪುಣ್ಯಾತ್ಮರ ಮೂಲಕ ಈಡೇರಿಸಿಕೊಳ್ಳಬೇಕು, ಯಾರು ಬಹಳ ದಕ್ಷರಿದ್ದಾರೆ, ಪ್ರಾಮಾಣಿಕರಿದ್ದಾರೆ, 56 ಇಂಚು ಗುಂಡಿಗೆ ಇರತಕ್ಕಂಥವರಿಗೆ ನಾವು ಅಧಿಕಾರ ಕೊಡುತ್ತಿದ್ದೇವೆ, ಅವರು ರಾಜಕೀಯ ಭ್ರಷ್ಟಾಚಾರದಿಂದ ಭಾರತದಲ್ಲಿ ಲೂಟಿ ಮಾಡಿರುವಂತಹ ಹಣವನ್ನೆಲ್ಲಾ ತೆಗೆದುಕೊಂಡು ಹೋಗಿ Swiss Bank ನಲ್ಲಿ ಇಟ್ಟಿರುವುದನ್ನು ಇನ್ನು ಆರು ತಿಂಗಳು, ವರ್ಷದಲ್ಲಿ ತರುತ್ತಾರೆಂದು ಅಧಿಕಾರ ಕೊಟ್ಟರೆ, ಇನ್ನು ತರಲಿಲ್ಲ. ಆ ಹಣವನ್ನು ತರಬೇಕೆನ್ನುವುದು ನನ್ನ ಆಸೆಯಾಗಿದೆ. ಈಗ ಆರು ವರ್ಷವಾದರೂ Swiss Bank ನಿಂದ ನಮಗೆ ಹಣ ಬರಲಿಲ್ಲ. ಮಾಜಿ ಸಚಿವರು ಮಾತನಾಡುತ್ತಾ ಹೇಳಿದರು, ಕಂದಹಾರ್‌ನಲ್ಲಿ ಹೈಜಾಕ್ ಮಾಡಿರುವಂತಹ ಮೌಲಾನ ಮಸೂದ್ ಅಜ಼ರ್ ರವರು ಇವತ್ತು ಪಾಕಿಸ್ತಾನದಲ್ಲಿ ಓಡಾಡಿಕೊಂಡಿದ್ದಾರೆ. ಮೌಲಾನ ಮಸೂದ್‌ಅಜ಼ರ್ ರವರ ಹೆಡೆಮುರಿ ಕಟ್ಟಿ ಇಲ್ಲಿಗೆ ಕರೆದುಕೊಂಡು ಬಂದು ವಿಚಾರಣೆ ಮಾಡಿ ಗಲ್ಲಿಗೇರಿಸಬೇಕು. ನಾನು ಟೀಕೆ ಮಾಡುವುದಲ್ಲ. ಅವರನ್ನು ಗಲ್ಲಿಗೇರಿಸಬೇಕು. ಆ ಬದ್ಧತೆಯಿಂದ ಮುಂದಿನ ದಿನಗಳಲ್ಲಾದರೂ ಮಾಡಬೇಕು. ಮುಂದಿನ ದಿನಗಳಲ್ಲಾದರೂ ಈ ಕೆಲಸ ಆಗಬೇಕೆನ್ನುವ ನನ್ನ ಆಶಯವನ್ನು ತಮ್ಮ ಮುಖಾಂತರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಾಲಾಕೋಟ್‌ನಲ್ಲಿ ನೀವು ಯಾವುದೋ ಮರಕ್ಕೆ ಬಾಂಬ್ ಹಾಕಿಬಿಟ್ಟು ಎಲೆ ಉದುರಿಸಿಬಿಟ್ಟಿರಿ ಎಂದು ಶತ್ರು ರಾಷ್ಟ್ರವಾಗಿರುವಂತಹ ಪಾಕಿಸ್ತಾನದವರು ಹೇಳುತ್ತಾರೆ. ನಮ್ಮ ನೆರೆ ರಾಷ್ಟ್ರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳತಕ್ಕಂಥದ್ದಕ್ಕೆ ತಕ್ಕ ಪಾಠ ಕಲಿಸಬೇಕು ಎಂದರೆ ದಾವೂದ್ ಇಬ್ರಾಹಿಂ ರವರನ್ನು ಕರೆದುಕೊಂಡು ಬಂದು ಇಲ್ಲಿ ಗಲ್ಲಿಗೇರಿಸಬೇಕು. ಮಸೂದ್ ಅಜ್ಹರ್‌ರವರನ್ನು ಇಲ್ಲಿ ನೇಣಿಗೇರಿಸಬೇಕು. ಆಗ ಭಯೋತ್ಪಾದಕ ಕೃತ್ಯಗಳನ್ನು ಯಾರು ಮಾಡುತ್ತಾರೆಯೋ ಅವರಿಗೆ ತಕ್ಕನಾದ ಪಾಠವನ್ನು ಕಲಿಸಿದ ಹಾಗೆ ಆಗುತ್ತದೆ. ಆ ಪಕ್ಷಕ್ಕೆ ನಾನು ಮತ ಹಾಕದಿರಬಹುದು, ವಿರೋಧ ಮಾಡಿರಬಹುದು, ಈ ಆಶಯಗಳನ್ನು ಈಡೇರಿಸುತ್ತೇವೆ ಎಂದು ಹೇಳಿರುವ ಪಕ್ಷಕ್ಕೆ ನಾನು ಮತ ಹಾಕಿಲ್ಲ. ಸುಮಾರು 384 ಸ್ಥಾನ ಕೊಟ್ಟಿದ್ದಾರಲ್ಲಾ ಅವರ ಈ ಆಶಯಗಳನ್ನು ತೀರಿಸಬೇಕು. ಈಗಾಗಲೇ ಆರು ವರ್ಷವಾಯಿತು. ಉಳಿದ ಅವಧಿ ಬರೀ ಭರವಸೆಯ ಮಾತುಗಳಾಗಬಾರದು. ವರ್ಣ ರಂಜಿತ ಭಾಷಣಗಳಿಂದ ದೇಶ ಉಳಿಯಬಾರದು. ನಮ್ಮ ಸಂವಿಧಾನವನ್ನು ಬದಲಾಯಿಸಬೇಕೆನ್ನುವುದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಗಾಂಧೀಜಿಯವರಿಗೆ ಗುಂಡಿಟ್ಟವರು ಕೂಡ ಎಂ.ಪಿ. ಗಳಾಗಿಬಿಟ್ಟರು. ನಾಥುರಾಮ್ ಗೋಡ್ಸೆಗೆ ಹಾರ ಹಾಕಿ, ಗಾಂಧೀಜಿಯವರಿಗೆ ಗುಂಡಿಟ್ಟವರನ್ನು ಸಮರ್ಥಿಸಿಕೊಳ್ಳುವ ವ್ಯವಸ್ಥೆಗೆ ನಾವು ಬಂದು ನಿಂತಿದ್ದೇವೆ. ಸಂವಿಧಾನವನ್ನು ಬದಲಾವಣೆ ಮಾಡುತ್ತೇವೆಂದು ನೇರವಾಗಿ ಮಂತ್ರಿಯಾಗಿ ಹೇಳತಕ್ಕಂಥವರು ಕೂಡ ಮತ್ತೆ ಸಂಸದರಾಗಿ ಆಯ್ಕೆಯಾಗುವಂತಹ ವ್ಯವಸ್ಥೆಯಲ್ಲಿ ನಾವು ನಿಂತಿದ್ದೇವೆ. ಕೆಲವು ಬದಲಾವಣೆಗಳಾಗಬೇಕು. ಸಂವಿಧಾನದಲ್ಲಿ 104 ತಿದ್ದುಪಡಿಯಾಗಿದೆ. ಸಮಯ, ಸಂದರ್ಭಕ್ಕನುಗುಣವಾಗಿ ಯಾವ್ಯಾವ ಸಂದರ್ಭಕ್ಕೆ ಏನೇನು ಆಗಬೇಕು, ಯಾವ್ಯಾವ ಸಂದರ್ಭದಲ್ಲಿ ಏನೇನು ಬದಲಾವಣೆಗಳಾಗಬೇಕು ಅದಕ್ಕೆ ಡಾ॥ಬಿ.ಆರ್.ಅಂಬೇಡ್ಕರ್‌ರವರೇ ಸಂವಿಧಾನದಲ್ಲಿ ಅವಕಾಶ ಮಾಡಿಕೊಟ್ಟಿರುವುದನ್ನು ನಾವು ಒಪ್ಪಿ ಮುಂದಿನ ದಿನಗಳಲ್ಲಿ ನಾವೆಲ್ಲಾ ಮತ್ತಷ್ಟು ಐಕ್ಯರಾಗಿ ಈ ದೇಶದ ಸಂವಿಧಾನವನ್ನು, ನಮ್ಮ ವ್ಯವಸ್ಥೆಯನ್ನು ಉತ್ತಮಗೊಳಿಸುತ್ತಾ, ಎಲ್ಲಾ ಜನರ ಆಶೋತ್ತರಗಳನ್ನು ಈಡೇರಿಸುವಂತಹ ವ್ಯವಸ್ಥೆಯಾಗಬೇಕು. ಶ್ರೀ ಕುವೆಂಪು ರವರು ಒಂದು ಮಾತನ್ನು ಹೇಳುತ್ತಾರೆ, ಆ ಸಂದರ್ಭವನ್ನು ನೆನೆಸುತ್ತಾ ನನ್ನ ಮಾತುಗಳನ್ನು ಮುಗಿಸುವುದಕ್ಕೆ ಇಚ್ಛೆಪಡುತ್ತೇನೆ. "ಸಂವಿಧಾನವನ್ನು ಶಾಸ್ತ್ರವೆಂದು ತಿಳಿಯುವ ಬದಲು ಸಂವೇದನೆಯನ್ನುಂಟು ಭಾದಿಸಬೇಕು. ಸಂವೇದನೆಯ ಭಾವನೆ ಮತ್ತು ಚಿಂತನೆ ಉಂಟಾಗಿ ಸಂವಿಧಾನ ಎದೆಯ ದನಿಯಾಗಬೇಕು, 'ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು, ಎದೆಯ ದನಿಗೂ ಮಿಗಿಲು, ಶಾಸ್ತ್ರವಿಹುದೇನು' ಎಂಬುದನ್ನು ನಮ್ಮ ಸಂವಿಧಾನಕ್ಕೆ ಅನ್ವಯಿಸಬೇಕೆಂದು ಹೇಳಿ ನನಗೆ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ವಂದನೆಗಳನ್ನರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇವತ್ತು ನಮ್ಮ ದೇಶದಲ್ಲಿ ಪ್ರಧಾನ ಮಂತ್ರಿಯಿಂದ ಹಿಡಿದು, ರಾಷ್ಟ್ರಪತಿಯಿಂದ ಹಿಡಿದು ಕಟ್ಟಕಡೆಯ ಮನುಷ್ಯನವರೆಗೂ ಈ ಸಂವಿಧಾನದ ಬಗ್ಗೆ ಗೊತ್ತಿರಬೇಕಾಗುತ್ತದೆ. ಈ ಸಂವಿಧಾನದ ಪ್ರಾಮುಖ್ಯತೆ ಬಗ್ಗೆ ವಿಧಾನಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಚರ್ಚೆ ಮಾಡುತ್ತಿರುವುದು ಬಹಳ ಪ್ರಶಂಸನೀಯವೆಂದು ನಾನು ಭಾವಿಸುತ್ತೇನೆ. ನಮ್ಮ ವಿಧಾನ ಪರಿಷತ್ತಿನಲ್ಲಿ ಹಿರಿಯ ಸದಸ್ಯರುಗಳು ಈ ವಿಷಯದ ಬಗ್ಗೆ ಬಹಳ ಅಧ್ಯಯನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ. ನಮ್ಮ ಸ್ನೇಹಿತರು ಹೇಳುತ್ತಿದ್ದರು, ನಾವು ವಿದ್ಯಾರ್ಥಿಗಳು ಯಾವ ರೀತಿ ಪರೀಕ್ಷೆಗೆ ತಯಾರಾಗಿ ಪರೀಕ್ಷೆ ಬರೆಯುತ್ತಾರೆಯೋ ಆ ರೀತಿ ನಾವು ತಯಾರಾಗಿ ಇಲ್ಲಿ ಮಾತನಾಡುವಂತಹ ಅವಕಾಶವನ್ನು ತಾವು ಕಲ್ಪನೆ ಮಾಡಿರುವುದಕ್ಕೆ ನಾನು ಮತ್ತೊಮ್ಮೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. 1934 ರಲ್ಲಿ ಮೊದಲ ಬಾರಿಗೆ ಸಂವಿಧಾನದ ರಚನೆ ಅಗತ್ಯವೆಂದು ಎಂ.ಎನ್.ರಾಯ್ ರವರು ಹೇಳಿದರು. ನಂತರ 1938 ರಲ್ಲಿ ಜವಾಹರ್‌ಲಾಲ್ ನೆಹರು ರವರು, ಅನಂತರ 1940 ರಲ್ಲಿ ಬ್ರಿಟನ್‌ನ ಪ್ರಧಾನಿ ಆಟ್ಲೆ ರವರು ಬ್ರಿಟನ್‌ನ ಪಾರ್ಲಿಮೆಂಟ್‌ನಲ್ಲಿ "ಭಾರತ ತನ್ನದೇ ಆದ ಸಂವಿಧಾನ ರಚಿಸಿಕೊಳ್ಳಬಹುದಾಗಿದೆ ಎಂದು ಘೋಷಣೆ ಮಾಡಿದರು. ಇದನ್ನೇ 1940 ರಲ್ಲಿ ಆಗಸ್ಟ್ ಕೊಡುಗೆ ಎಂದು ಪ್ರಚಲಿತವಾಗಿದೆ. ಆನಂತರ ಬ್ರಿಟನ್‌ನ ಕ್ಯಾಬಿನೆಟ್ ಮಿಷನ್ 1946 ರಲ್ಲಿ ಈ ಸಂವಿಧಾನದ ರಚನೆಗೆ ಅವಕಾಶ ಮಾಡಿಕೊಟ್ಟಿತ್ತು. ನಂತರ ಭಾರತ ಸಂವಿಧಾನ ರಚನಾ ಸಭೆಯ ಅಧಿವೇಶನ ಡಿಸೆಂಬರ್ 9, 1946 ರಂದು ನಡೆಯಿತು. ಅದರಲ್ಲಿ ಒಟ್ಟು 296 ಜನ ಸದಸ್ಯರು ಇದ್ದರು. ಅದರಲ್ಲಿ ಮುಸ್ಲಿಂಲೀಗ್‌ನ ಸದಸ್ಯರು ಗೈರು ಹಾಜರಾಗಿದ್ದರು. ಉಳಿದಂತೆ 295 ಜನರು ಹಾಜರಾಗಿದ್ದರು. ಡಾ:ಸಿನ್ಹಾ ರವರ ನೇತೃತ್ವದಲ್ಲಿ ಸಭೆ ನಡೆಯಿತು. ನಂತರ ಸಂವಿಧಾನ ರಚನಾ ಸಭೆಯಲ್ಲಿ ಪ್ರಮುಖರು ಕೃಷ್ಣಮಾಚಾರಿರವರು, ಮುಖರ್ಜಿಯವರು, ಜವಾಹರ್‌ಲಾಲ್ ನೆಹರು, ಇತರರು ಇದ್ದರು. ಅದರಲ್ಲಿ ಮುಖ್ಯವಾಗಿ ನಮ್ಮ ಕರ್ನಾಟಕ ರಾಜ್ಯದಿಂದ ಶ್ರೀ ಕೆಂಗಲ್ ಹನುಮಂತಯ್ಯರವರು, ಶ್ರೀ ಎಸ್. ನಿಜಲಿಂಗಪ್ಪನವರು, ಶ್ರೀ ಕೆ.ಸಿ.ರೆಡ್ಡಿಯವರು, ಶ್ರೀ ಟಿ.ಸಿದ್ದಲಿಂಗಯ್ಯನವರು, ಶ್ರೀ ಕೃಷ್ಣಮೂರ್ತಿಯವರು, ಶ್ರೀ ಸಿದ್ದವೀರಪ್ಪನವರು, ಶ್ರೀ ಟಿ.ಚೆನ್ನಯ್ಯರವರು, ಇವರು ಕೋಲಾರದವರು. ಶ್ರೀ ಟಿ.ಸುಬ್ರಮಣ್ಯರವರು, ಶ್ರೀ ಕೆ.ಎಂ.ಪೂಣಚ್ಚರವರು, ಶ್ರೀ ಆರ್.ದಿವಾಕರರವರು, ಶ್ರೀ ಬಿ.ಎನ್.ರಾಯ್‌ರವರು, ಇವರು ಸಂವಿಧಾನ ರಚನೆಯ ಸಲಹೆಗಾರರು. ಇವರು ಮಂಗಳೂರಿನವರಾಗಿದ್ದು ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ಕಾರ್ಯನಿರ್ವಹಣೆ ಮಾಡಿದ್ದರು. ನಮ್ಮ ಸಂವಿಧಾನ ರಚನೆಗೆ ಮೂಲ ಏನು? ಯಾವ್ಯಾವ ರಾಷ್ಟ್ರಗಳಿಂದ ಸಂವಿಧಾನ ರಚನೆ ಮಾಡಿದ್ದೇವೆ. ಯಾವ್ಯಾವ ದೇಶದಲ್ಲಿ ಒಳ್ಳೆಯ ವಿಷಯಗಳಿತ್ತು ಅವುಗಳನ್ನು ನಾವು ಕ್ರೋಢೀಕರಣ ಮಾಡಿ ಸಂವಿಧಾನ ರಚನೆ ಮಾಡಿದ್ದೇವೆ. ಪ್ರಸ್ತಾವನೆಯಲ್ಲಿ ಜವಾಹರ್‌ಲಾಲ್ ನೆಹರು ರವರ ಉದ್ದೇಶಗಳು, ನಾವು ಭಾರತೀಯ ಪ್ರಜೆಗಳಾದ ಎಂದು ತೆಗೆದುಕೊಳ್ಳುತ್ತೇವೆ, ಅದರ ಬಗ್ಗೆ ಈಗ ಬಹಳಷ್ಟು ಜನರು ಮಾತನಾಡಿರುವುದರಿಂದ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಂತರ ಮೂಲಭೂತ ಹಕ್ಕುಗಳು, ಮೂಲಭೂತ ಹಕ್ಕುಗಳನ್ನು ಅಮೇರಿಕಾದ ಸಂವಿಧಾನದಿಂದ ಹಕ್ಕುಗಳ ಘೋಷಣೆ. ಫ್ರಾನ್ಸಿನ ಹಕ್ಕುಗಳ ಘೋಷಣೆ, ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣೆ. ಈ ಮೂಲಭೂತ ಹಕ್ಕುಗಳನ್ನು ನಾವು ಇವರಿಂದ ತೆಗೆದುಕೊಂಡಿದ್ದೇವೆ. ಏಕ ಪೌರತ್ವ, ಸಂಸದೀಯ ಸರ್ಕಾರ, ಲೋಕಸಭೆ ಜೇಷ್ಠತೆಯನ್ನು ಬ್ರಿಟನ್‌ನ ಸಮುದಾಯದಿಂದ ತೆಗೆದುಕೊಂಡಿದ್ದೇವೆ.

(ಮುಂದು)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

425/16-3-2020/1-10/bkp-bns
**ಶ್ರೀ ಎನ್. ಅಪ್ಪಾಜಿಗೌಡ(ಮುಂದು)**

ಅಮೇರಿಕಾ ದೇಶದ ಸಂವಿಧಾನದಿಂದ ಲಿಖಿತ ಸಂವಿಧಾನ, ಉಪ ರಾಷ್ಟ್ರಪತಿ, ಸ್ವತಂತ್ರ ನ್ಯಾಯಾಂಗ ಮತ್ತು ಸುಪ್ರೀಂಕೋರ್ಟ್, ಇದನ್ನು ತೆಗೆದುಕೊಂಡಿದ್ದೇವೆ. ಕೆನಡಾ ದೇಶದ ಸಂವಿಧಾನದಿಂದ ರಾಜ್ಯ ನೀತಿ ನಿರ್ದೇಶನ ತತ್ವಗಳು, ಕೇಂದ್ರ–ರಾಜ್ಯ ಸಂಬಂಧಗಳನ್ನು ತೆಗೆದುಕೊಂಡಿದ್ದೇವೆ. ಆಸ್ಟ್ರೇಲಿಯಾ ದೇಶದ ಸಂವಿಧಾನದಿಂದ ಸಂಯುಕ್ತ ಪದ್ಧತಿ, ಕೇಂದ್ರ–ರಾಜ್ಯ ಸಂಬಂಧಗಳು, ರಾಜ್ಯ ಪಟ್ಟಿ ಮತ್ತು ಸಮವರ್ತಿ ಪಟ್ಟಿಯನ್ನು ತೆಗೆದುಕೊಂಡಿದ್ದೇವೆ, ಹಿಂದಿನ ಸೋವಿಯತ್ ರಾಷ್ಟ್ರದಿಂದ ಮೂಲಭೂತ ಕರ್ತವ್ಯಗಳನ್ನು ತೆಗೆದುಕೊಂಡಿದ್ದೇವೆ. ದಕ್ಷಿಣ ಆಫ್ರಿಕಾ ದೇಶದ ಸಂವಿಧಾನದಿಂದ ಸಂವಿಧಾನ ತಿದ್ದುಪಡಿ ವಿಧಾನ, ರಾಜ್ಯ ಸಭೆ ಮತ್ತು ಸದಸ್ಯರ ಆಯ್ಕೆಯನ್ನು ತೆಗೆದುಕೊಂಡಿದ್ದೇವೆ. ಜರ್ಮನ್‌ದೇಶದ ಸಂವಿಧಾನದಿಂದ ತುರ್ತು ಪರಿಸ್ಥಿತಿ ಅಧಿಕಾರಿಗಳು, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಮೂಲಭೂತ ಹಕ್ಕುಗಳನ್ನು ಯಾವ ರೀತಿ ನಿಷೇಧ ಮಾಡಿದ್ದೇವೆ ಎನ್ನುವುದರ ಬಗ್ಗೆ ತೆಗೆದುಕೊಂಡಿದ್ದೇವೆ. ಈ ನಮ್ಮ ಸಂವಿಧಾನವು ಈ ರೀತಿಯಲ್ಲಿ ಬೇರೆ ಬೇರೆ ರಾಷ್ಟ್ರದಲ್ಲಿ ಯಾವ್ಯಾವ ಉತ್ತಮವಾದ ಅಂಶಗಳಿವೆ, ಅವುಗಳನ್ನೆಲ್ಲಾ ಸೇರಿಸಿ ನಮ್ಮ ಸಂವಿಧಾನ ರಚನೆ ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷವು ಫೆಬ್ರವರಿ 22, 2002 ರಂದು ಸಂವಿಧಾನ ಪರಾಮರ್ಶೆ ಆಯೋಗವನ್ನು ನೇಮಕ ಮಾಡಿತ್ತು. ನಮ್ಮ ನ್ಯಾಯಮೂರ್ತಿ ಶ್ರೀ ಎಂ. ಎನ್.ವೆಂಕಟಾಚಲಯ್ಯನವರು ಅದಕ್ಕೆ ಅಧ್ಯಕ್ಷರಾಗಿದ್ದರು. ಅವರ ಜೊತೆಯಲ್ಲಿ ಶ್ರೀ ಬಿ.ಪಿ. ಜೀವನರೆಡ್ಡಿಯವರು, ಶ್ರೀ ಪೊನ್ನಯ್ಯನವರು, ಶ್ರೀ ಸೋಲಿ ಸೊರಾಬ್ಜಿಯವರು, ಶ್ರೀ ಕೆ. ಪರಸರನ್ ರವರು ಶ್ರೀ ಸುಭಾಷ್ ಕಶ್ಯಪ್‌ರವರು ಶ್ರೀ ಸಿ.ಆರ್.ಇರಾನಿಯವರು, ಶ್ರೀ ಅಬಿದ್ ಹುಸೇನ್ ರವರು ಶ್ರೀಮತಿ ಸುಮಿತ್ರ ಕುಲಕರ್ಣಿಯವರು, ಶ್ರೀ ಪಿ.ಎ.ಸಂಗ್ಮ ರವರು ಸದಸ್ಯರಾಗಿದ್ದರು. ಈ ಸಮಿತಿಯು 2002 ರ ಮಾರ್ಚ್ ತಿಂಗಳಿನಲ್ಲಿ ತನ್ನ ವರದಿಯನ್ನು ಮಂಡನೆ ಮಾಡಿತು. ಅದರ ಮುಖ್ಯವಾದ ಶಿಫಾರಸ್ಸು ಏನೆಂದರೆ ಆಡಳಿತ ವ್ಯವಸ್ಥೆಯನ್ನು ಸುಧಾರಣೆ ಮಾಡಬೇಕು, ಚುನಾವಣೆ ಸುಧಾರಣೆ ಮಾಡಬೇಕು, ಕೇಂದ್ರ–ರಾಜ್ಯ ಸಂಬಂಧ, ಅಧಿಕಾರ ವಿಕೇಂದ್ರೀಕರಣ, ಮೂಲಭೂತ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಬೇಕು, ರಾಜ್ಯ ನೀತಿ ನಿರ್ದೇಶನ ತತ್ವಗಳನ್ನು ಜಾರಿ ಮಾಡಬೇಕೆನ್ನುವುದಾಗಿದೆ. ಮತ್ತೊಂದು ಸೂಕ್ಷ್ಮವಾದ ವಿಚಾರ ಎಂದರೆ ಶ್ರೀಮತಿ ಸೋನಿಯಾ ಗಾಂಧಿಯವರ ವಿದೇಶ ಪೌರತ್ವದ ಬಗ್ಗೆ ಈ ಒಂದು ಸಮಿತಿ ಪರಾಮರ್ಶೆ ಮಾಡಬೇಕೆಂದು ಇತ್ತು. ಆದರೆ ಅದರ ಬಗ್ಗೆ ಸಮಿತಿ ಚರ್ಚೆ ಮಾಡಲಿಲ್ಲ. ಸಮಿತಿಯು ಅದರ ಬಗ್ಗೆ ವರದಿಯನ್ನೂ ಸಹ ಕೊಡಲಿಲ್ಲ.

ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನ ಲಿಖಿತ ನವ್ಯ ಹಾಗೂ ಅನನ್ಯ ಸಂವಿಧಾನವಾಗಿದ್ದು, ಜೂನ್ 18, 1951 ರಂದು 1ನೇ ತಿದ್ದುಪಡಿಯಾಯಿತು. ಈಗಾಗಲೇ ನಮ್ಮ ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಂ. ರಮೇಶ್ ಗೌಡರವರು ಹೇಳಿದ್ದಾರೆ. ಆದ್ದರಿಂದ, ಅದರ ಬಗ್ಗೆ ನಾನು ಮತ್ತೆ ಮಾತನಾಡಲಿಕ್ಕೆ ಹೋಗುವುದಿಲ್ಲ. 42ನೇ ಸಂವಿಧಾನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಿದ್ದುಪಡಿ ಜನವರಿ 3, 1977 ರಲ್ಲಿ ಜಾರಿ ಆಯಿತು. ಇದರಲ್ಲಿ 10 ಮೂಲಭೂತ ಕರ್ತವ್ಯಗಳನ್ನು ಸೇರ್ಪಡೆ ಮಾಡಲಾಯಿತು. ಜೊತೆಗೆ ಜಾತ್ಯಾತೀತ ಮತ್ತು ಸಮಾಜವಾದಿ ಎನ್ನುವುದನ್ನು 42ನೇ ಸಂವಿಧಾನ ತಿದ್ದುಪಡಿಯಲ್ಲಿ ಸೇರ್ಪಡೆ ಮಾಡಲಾಯಿತು. ಇದರ ಜೊತೆಗೆ ಜನವರಿ 24, 1985 ರಲ್ಲಿ 52ನೇ ತಿದ್ದುಪಡಿಯಾಯಿತು. ಇದು ಪಕ್ಷಾಂತರ ನಿಷೇಧ ಕಾಯಿದೆ. ಇವತ್ತಿನ ದಿನಮಾನದಲ್ಲಿ ಈ ಪಕ್ಷಾಂತರ ನಿಷೇಧ ಕಾಯಿದೆ ಬಗ್ಗೆ ನಾವು ಇವತ್ತು ಕೂಡ ಪತ್ರಿಕೆಗಳಲ್ಲಿ ಓದಿದ್ದೇವೆ. ಮಧ್ಯಪ್ರದೇಶದಲ್ಲಿ ಯಾವರೀತಿ ಆಗುತ್ತಿದೆ ಎನ್ನುವುದನ್ನು ನೋಡಬಹುದಾಗಿದೆ. ಈಗ ಸರ್ಕಾರ ರಚನೆ ಮಾಡುವುದರಲ್ಲಿ ಸದಸ್ಯರ ಸಂಖ್ಯೆ ಕಡಿಮೆ ಇದ್ದರೆ ಪಕ್ಷಾಂತರ ಮಾಡಿಸಿ, ಸರ್ಕಾರ ಮಾಡುವುದನ್ನು ಇತ್ತೀಚಿನ ದಿನಗಳಲ್ಲಿ ಜಾಸ್ತಿ ಗಮನಿಸುತ್ತಿದ್ದೇವೆ. ರಾಜ್ಯಸಭೆಯ ಒಂದು ಸೀಟ್‌ಗೂ ಕೂಡ ಗುಜರಾತಿನಲ್ಲಿ, ಬಿಹಾರ್‌ನಲ್ಲಿ ಇರುವಂತಹ ಎಂ.ಎಲ್.ಎ.ಗಳನ್ನು ರಾಜೀನಾಮೆ ಕೊಡಿಸಿ, ಹೊಸದಾಗಿ ಆಕರ್ಷಣೆ ಮಾಡುವಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, ಪಕ್ಷಾಂತರ ನಿಷೇಧ ಕಾಯಿದೆಯನ್ನು ಇಂಗ್ಲೀಷ್‌ನಲ್ಲಿ 'defection' ಎಂದು ಕರೆಯುತ್ತಾರೆ. ಇಂಗ್ಲೆಂಡ್‌ನಲ್ಲಿ ಇದನ್ನು 'floor crossing' ಎನ್ನುವಂತಹ ಒಂದು ವರ್ಡ್‌ನಿಂದ ಕರೆಯುತ್ತಾರೆ. ನಮ್ಮ ಸುಭಾಷ್ ಕಶ್ಯಪ್‌ನವರ 'The Politics of Defection', ಈ ಪುಸ್ತಕದಲ್ಲಿ ಏನು ಹೇಳುತ್ತಾರೆಂದರೆ ಒಬ್ಬ ನಾಯಕ ಪಕ್ಷವನ್ನು, ಒಂದು ಗುಂಪನ್ನು ತ್ಯಜಿಸುವುದು. ಆಯ್ಕೆಯಾಗಿ ಬಂದಿರುವ ಮೂಲ ಪಕ್ಷವನ್ನು ತ್ಯಜಿಸಿ, ಅಥವಾ ಅದಕ್ಕೆ ರಾಜೀನಾಮೆಯನ್ನು ನೀಡಿ, ಪಕ್ಷೇತರರಾಗಿ ಮುಂದುವರಿಯುವುದು. ಪಕ್ಷೇತರರಾಗಿ ಆಯ್ಕೆಯಾದ ನಂತರ ಯಾವುದಾದರೊಂದು ಪಕ್ಷವನ್ನು ಸೇರುವುದರ ಬಗ್ಗೆ ಹೇಳಿದ್ದಾರೆ. ಈಗ 8 ತಿಂಗಳ ಹಿಂದೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಪಕ್ಷಾಂತರವನ್ನು ಯಾವ ರೀತಿ ಮಾಡಿದ್ದಾರೆನ್ನುವುದನ್ನು ನಾವೆಲ್ಲರೂ ನೋಡಿದ್ದೇವೆ. ದಿವಂಗತ ರಾಜೀವ್ ಗಾಂಧಿಯವರು ಪಕ್ಷಾಂತರ ನಿಷೇಧ ಕಾಯಿದೆಯನ್ನು 1985 ರಲ್ಲಿ ತಂದರೂ ಕೂಡ ನಮ್ಮ ಕಾನೂನಿನಲ್ಲಿ ಎಲ್ಲಿಯೋ ಒಂದು ಕಡೆ ನಾವು ಚಾಪೆ ಕೆಳಗಡೆ ನುಗ್ಗಿದರೆ ಅವರು ರಂಗೋಲಿ ಕೆಳಗಡೆ ನುಗ್ಗುತ್ತಾರೆನ್ನುವುದು ಇದೆ. ಆ ಒಂದು ಪರಿಸ್ಥಿತಿಯಲ್ಲಿ ನಾವುಗಳಿದ್ದೇವೆ. ನಮ್ಮ ಈ ಕಾನೂನನ್ನು ಬದಲಾವಣೆ ಮಾಡದೇ ಇದ್ದರೆ ಯಾವ ವ್ಯಕ್ತಿ, ಯಾವ ಒಂದು ಪಕ್ಷದಿಂದ ಗೆಲ್ಲುತ್ತಾರೆ, ಯಾವ ಪಕ್ಷ ಸೇರುತ್ತಾರೆನ್ನುವುದು ಯಾರಿಗೂ ಅರ್ಥವಾಗುವುದಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ನಾವುಗಳು ಇದ್ದೇವೆ. ಪಕ್ಷಾಂತರ ನಿಷೇಧ ಕಾಯಿದೆಯನ್ನು ತಂದರೂ ಕೂಡ ಅದು ಉಪಯೋಗವಾಗುತ್ತಿಲ್ಲ. ಅದರ ಜೊತೆಗೆ 101ನೇ ಸಂವಿಧಾನ ತಿದ್ದುಪಡಿ ಜುಲೈ 01, 2017 ರಲ್ಲಿ ಆಯಿತು. ಇದು GST (Goods and Service Tax) ಬಗ್ಗೆ, ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ ಬಗ್ಗೆ ಆಯಿತು. ಇದು ಬಹಳ ಅಂದರೆ, 'one nation, one tax', ಇದನ್ನು ಕೇಳಲಿಕ್ಕೆ ಬಹಳ ಚೆನ್ನಾಗಿದೆ. ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ಮೊದಲು ವ್ಯಾಟ್ ಇತ್ತು, ನಾವು ಏನು ಟ್ಯಾಕ್ಸ್ ಕಟ್ಟುತ್ತಿದ್ದೆವು, ಅದು ನಮ್ಮ ರಾಜ್ಯಕ್ಕೆ ಬರುತ್ತಿತ್ತು. ಈಗ CGST

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(Central Goods and Service Tax) ಗೆ ಕಟ್ ಆದ ಮೇಲೆ ಕೇಂದ್ರ ಸರ್ಕಾರದಲ್ಲಿ ಅವರು ಯಾವಾಗ ದುಡ್ಡು ಕೊಡುತ್ತಾರೆ, ಅದನ್ನೇ ಕಾಯ್ದು ಕುಳಿತುಕೊಳ್ಳಬೇಕಾದಂತಹ ಮತ್ತು ಚಾತಕ ಪಕ್ಷಿಯಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ನಮ್ಮದು percentage ಏನಿದೆ ಎನ್ನುವುದನ್ನು ನೋಡುವುದಾದರೆ ಬಿಹಾರ್‌ನವರು 1 ರೂಪಾಯಿ ಟ್ಯಾಕ್ಸ್ ಕಟ್ಟಿದರೆ ಅವರಿಗೆ 2.50 ರೂಪಾಯಿ ದುಡ್ಡು ಸಿಗುತ್ತಿದೆ. ಆದರೆ, ನಮ್ಮ ರಾಜ್ಯದವರು 1 ರೂಪಾಯಿ ಟ್ಯಾಕ್ಸ್ ಕಟ್ಟಿದರೆ 50 ಪೈಸೆಯೂ ಸಿಕ್ಕುತ್ತಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** 41 ಪೈಸೆ ಸಿಕ್ಕುತ್ತಿದೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಹೌದು. ನಮ್ಮ ಹಿರಿಯ ಸದಸ್ಯರಾದ ಶ್ರೀ ಹೆಚ್.ಎಂ.ರೇವಣ್ಣನವರು ಹೇಳಿದ ಹಾಗೆ ನಮ್ಮ ರಾಜ್ಯಕ್ಕೆ 41 ಪೈಸೆ ಸಿಕ್ಕುತ್ತಿದೆ. ಅಂತಹ ಒಂದು ಅನಿವಾರ್ಯ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಇದರ ಬಗ್ಗೆ ನಮ್ಮ ಎಲ್ಲಾ ರಾಜ್ಯಗಳು ಅಂದರೆ ನಮ್ಮ ಜಿಎಸ್‌ಟಿ ಕೌನ್ಸಿಲ್ ಇದೆ, ಅಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಇದರ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ನೋಡಬೇಕಾಗುತ್ತದೆ. ಒಂದು ವಾರದ ಹಿಂದೆ ಒಂದು ಆರ್ಟಿಕಲ್ ನೋಡಿದ್ದೇವೆ. ಜೊತೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು, ಪ್ರಧಾನ ಮಂತ್ರಿಗಳು ಬೆಳಗಾವಿ ಮತ್ತು ತುಮಕೂರಿಗೆ ಬಂದಾಗ ನಮ್ಮ ರಾಜ್ಯದ ಪಾಲಾದ 10,000 ಕೋಟಿ ರೂಪಾಯಿಗಳನ್ನು ನೀಡಬೇಕೆಂದು ಕೇಳಿದರು. ಅದರೂ ಸಹ ಕೇಂದ್ರ ಸರ್ಕಾರ ಮೀನಾಮೇಷ ಎಣಿಸುತ್ತಿದೆ. ಈ ಒಂದು CGST ರ ಬಗ್ಗೆ ತಿದ್ದುಪಡಿಯಾಗಿದೆ. ಅದರೆ, ಅದರ ಉಪಯೋಗ ಮಾತ್ರ ರಾಜ್ಯಕ್ಕೆ ಸಿಕ್ಕುತ್ತಿಲ್ಲ.

ಮಾನ್ಯ ಸಭಾಪತಿಯವರೇ, ಜಮ್ಮು ಮತ್ತು ಕಾಶ್ಮೀರ ವಿಚಾರದಲ್ಲಿ ಸಂವಿಧಾನ ತಿದ್ದುಪಡಿಯಾಗಬೇಕಾಗಿತ್ತು. ರಾಷ್ಟ್ರಪತಿಗಳಿಗೆ ಇರುವ ವಿಶೇಷ ಅಧಿಕಾರವನ್ನು ಬಳಸಿ, ಸಂವಿಧಾನ ತಿದ್ದುಪಡಿಯನ್ನು ಮಾಡಲಿಲ್ಲ. ಅದೇ ರೀತಿ ರಾಷ್ಟ್ರಪತಿಗಳಿಗೆ ಇದ್ದಂತಹ ಸೆಕ್ಷನ್ 3ರ ನಿಷ್ಕ್ರಿಯ ನಿಯಮವನ್ನು ಬಳಸಿ ಜಾಣ್ಮೆಯಿಂದ ತಿದ್ದುಪಡಿ ಮಾಡಿದ್ದಾರೆ. ಅದರ ಬಗ್ಗೆ ಹೆಚ್ಚು ಚರ್ಚೆಗೆ ನಾನು ಹೋಗುವುದಿಲ್ಲ. ಹೀಗಾಗಿ, ಸಂವಿಧಾನ ತಿದ್ದುಪಡಿಗೆ ಸುಮಾರು 131 ಮಸೂದೆಗಳು ಮಂಡನೆಯಾಗಿವೆ. ಅದರ ಪೈಕಿ ಅಂಗೀಕಾರವಾಗಿರುವುದು 104 ಮಾತ್ರ.

ಭಾರತದ ಪ್ರಧಾನ ಮಂತ್ರಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು 1975 ರಲ್ಲಿ ಮೂಲಭೂತ ಕರ್ತವ್ಯಗಳ ಸೇರ್ಪಡೆಗೆ ಶ್ರೀ ಸ್ವರ್ಣಸಿಂಗ್‌ರವರ ನೇತೃತ್ವದಲ್ಲಿ ಸಮಿತಿ ರಚನೆಯಾಯಿತು. ಸಂವಿಧಾನದ 42ನೇ ತಿದ್ದುಪಡಿಯಲ್ಲಿ 51ನೇ ವಿಧಿಯನ್ನು ಸೇರ್ಪಡೆ ಮಾಡಿ ಅದರಲ್ಲಿ ಸಂವಿಧಾನ, ರಾಷ್ಟ್ರಧ್ವಜ, ರಾಷ್ಟ್ರಗೀತೆಗೆ ಗೌರವ ಕೊಡಬೇಕೆನ್ನುವುದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆಯಿತು. ಮತ್ತೆ ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದಂತಹ ಸ್ವಾತಂತ್ರ್ಯ ಸೇನಾನಿಗಳನ್ನು ಆದರ್ಶವಾಗಿ ಗೌರವಿಸಬೇಕೆನ್ನುವುದು ಬಹಳ ಮುಖ್ಯ. ವಿಧಾನಸಭೆಯಲ್ಲಿ ಇದರ ವಿಚಾರವಾಗಿ ಅಂದರೆ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ದೊರೆಸ್ವಾಮಿ ರವರ ಪ್ರಕರಣದ ವಿಚಾರವಾಗಿ ಚರ್ಚೆಯಾಗಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಅದರ ಬಗ್ಗೆ ಜಾಸ್ತಿ ಮಾತನಾಡಲಿಕ್ಕೆ ಹೋಗುವುದಿಲ್ಲ. ಸಂವಿಧಾನದ 42ನೇ ತಿದ್ದುಪಡಿಯಲ್ಲಿ ಭಾರತದ ಪರಮಾಧಿಕಾರ, ಏಕತೆ, ಸಮಗ್ರತೆಯನ್ನು ಕಾಪಾಡುವುದು ಸೇರ್ಪಡೆಯಾಗಿರುತ್ತದೆ. ಭಾರತದ ಸಂವಿಧಾನದ ತಿದ್ದುಪಡಿ ಇದ್ದರೂ ಕೂಡ ಈಗಿನ ಸುಪ್ರೀಂ ಕೋರ್ಟ್ ಕೆಲವೊಂದು ವಿಷಯಗಳಲ್ಲಿ ಭಾಗಿಯಾಗಿ ಸಂವಿಧಾನವನ್ನು ತಿದ್ದುಪಡಿ ಮಾಡುವುದರ ಬಗ್ಗೆ ಕೂಡ ಅವರದ್ದೇ ಆದಂತಹ ಒಂದು restriction ಇದೆ ಎನ್ನುವುದನ್ನು ಮಾನ್ಯ ಸಭಾಪತಿಯವರ ಗಮನಕ್ಕೆ ತರಬಯಸುತ್ತೇನೆ.

ಮುಂದು. .

**(426) 16.03.2020 01.20 ಎಸ್‌ವಿ–ಜಿಆರ್**
**ಶ್ರೀ ಎನ್.ಅಪ್ಪಾಜಿಗೌಡ (ಮುಂದು):**

ಭಾರತ ಸಂವಿಧಾನ ಪರಾಮರ್ಶೆ ಸಮಿತಿಯ ಪ್ರಮುಖ ಶಿಫಾರಸ್ಸುಗಳಲ್ಲಿ ರಾಜ್ಯನೀತಿ ನಿರ್ದೇಶಕ ತತ್ವಗಳಿಗೆ ಬದಲಾಗಿ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಬಹಳ ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡಬೇಕೆಂಬುದೂ ಒಂದು. ಸಂವಿಧಾನದ ವಿಧಿ 21ರಲ್ಲಿ ಇದ್ದ right to live ಎಂದೇನಿತ್ತು, ಅದನ್ನು right to health ಎಂಬುದಾಗಿ ತಿದ್ದುಪಡಿ ಮಾಡಲಾಗಿದೆ.

ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನದ 11ನೇ ಭಾಗ 7ನೇ ಅನುಸೂಚಿ 245ರಿಂದ 255ನೇ ವಿಧಿಯವರೆವಿಗೆ ಕೇಂದ್ರ ಮತ್ತು ರಾಜ್ಯಗಳ ಸಂಬಂಧದ ಬಗ್ಗೆ ಪ್ರಸ್ತಾಪವಾಗಿದೆ. ಭಾರತದಲ್ಲಿ ಯುದ್ಧ ಪರಿಸ್ಥಿತಿಯಲ್ಲಿ ಮಾತ್ರ strong unitary State ಇರಬೇಕು, ಬಲಿಷ್ಠ ಕೇಂದ್ರ ಸರ್ಕಾರ ಇರಬೇಕು, ಶಾಂತಿ ಸಂದರ್ಭದಲ್ಲಿ strong federal system ಇರಬೇಕು ಎನ್ನುವುದು ಡಾ:ಬಿ.ಆರ್.ಅಂಬೇಡ್ಕರ್ ಅವರ ಆಶಯವಾಗಿತ್ತು. ಆದರೆ ಇಂದಿನ ಪರಿಸ್ಥಿತಿ ಏನಾಗಿದೆಯೆಂದರೆ ಕೇಂದ್ರ ಸರ್ಕಾರ ತನ್ನೆಲ್ಲಾ ಪರಮಾಧಿಕಾರವನ್ನು ಚಲಾವಣೆ ಮಾಡುತ್ತಿದೆ. ಪ್ರತಿಯೊಂದಕ್ಕೂ ಕೇಂದ್ರದಿಂದ ಭಿಕ್ಷೆ ಬೇಡುವ ಪರಿಸ್ಥಿತಿಯಲ್ಲಿ ಇಂದು ನಾವಿದ್ದೇವೆ. ಅದರಲ್ಲಿಯೂ ಬಹಳ ಮುಖ್ಯವಾಗಿ 356ನೇ ವಿಧಿಯಡಿಯಲ್ಲಿ ಕೇಂದ್ರ ಸರ್ಕಾರದ ಮುಂದೆ ರಾಜ್ಯ ಸರ್ಕಾರವು ಭಿಕ್ಷೆ ಬೇಡುವಂತಹ ಪರಿಸ್ಥಿತಿಯಲ್ಲಿದೆ. ಜೊತೆಯಲ್ಲಿ ಈ federal system ನಲ್ಲಿ ಕೇಂದ್ರ ಮತ್ತು ರಾಜ್ಯಕ್ಕೆ ಕೇಂದ್ರ 100 ವಿಷಯಗಳು, ರಾಜ್ಯ ಸರ್ಕಾರದ ವಿಷಯದಲ್ಲಿ 61 ವಿಷಯಗಳು, ಸಮವರ್ತಿ ಪಟ್ಟಿಯಲ್ಲಿ 52 ವಿಷಯಗಳಿವೆ. ಇನ್ನುಳಿದ ವಿಷಯಗಳು residuary powers ನಲ್ಲಿ ಇದೆ. ಈಗಿರುವ ಸರ್ಕಾರ ಅಥವಾ ಹಿಂದಿದ್ದಂತಹ ಸರ್ಕಾರದ ಪ್ರಶ್ನೆಯಲ್ಲ. ಮೊದಲನೆಯ ಸರ್ಕಾರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಚನೆಯಾದಂದಿನಿಂದಲೂ ಕೇಂದ್ರ ಸರ್ಕಾರಗಳು ರಾಜ್ಯಗಳನ್ನು ಮಲತಾಯಿ ಧೋರಣೆಯಿಂದಲೇ ನೋಡುತ್ತಿವೆ. ಮುಖ್ಯವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬೇರೆ ಬೇರೆ ಇದ್ದರೆ ಬಹಳ ಸೂಕ್ತವಾದುದು. ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಸುಮಾರು 10–15 ವರ್ಷಗಳ ಹಿಂದೆ ಹೋದಾಗಲೇ ಅಲ್ಲಿನ ರಸ್ತೆಗಳು ಅಷ್ಟು ಉತ್ಕೃಷ್ಟವಾಗಿದ್ದವು. ಅಲ್ಲಿ ಡಿ.ಎಂ.ಕೆ., ಸರ್ಕಾರ ಇರಲಿ ಅಥವಾ ಅಣ್ಣಾ ಡಿ.ಎಂ.ಕೆ., ಸರ್ಕಾರ ಇರಲಿ, ಕೇಂದ್ರ ಸರ್ಕಾರದಿಂದ ಅವರ ರಾಜ್ಯದ ಪಾಲನ್ನು ನಿರ್ದಾಕ್ಷಿಣ್ಯವಾಗಿ ಪಡೆದುಕೊಳ್ಳುತ್ತಿದ್ದಾರೆ. ಈ ಮೊದಲು ನಮ್ಮ ರಾಜ್ಯದಲ್ಲಿ ಒಂದು ಪಕ್ಷದ ಸರ್ಕಾರ, ಕೇಂದ್ರದಲ್ಲಿ ಒಂದು ಪಕ್ಷದ ಸರ್ಕಾರವಿತ್ತು. ಈಗ ಕೇಂದ್ರ ಮತ್ತು ರಾಜ್ಯದಲ್ಲಿ ಎರಡೂ ಒಂದೇ ಸರ್ಕಾರವಿರುವುದರಿಂದ ನಮ್ಮ ರಾಜ್ಯ ರಾಮರಾಜ್ಯವಾಗುತ್ತದೆಯೆಂದು ನಾವು ಭಾವಿಸಿದ್ದೆವು. ಆದರೆ ಇಂದಿನ ಪರಿಸ್ಥಿತಿ ಏನು? ನಮ್ಮ ರಾಜ್ಯದಲ್ಲಿ ನೆರೆ ಹಾವಳಿ ಉಂಟಾಯಿತು. ಕೇಂದ್ರದಿಂದ ಬಂದ ಪರಿಹಾರವೆಷ್ಟು? ರೂ.1850 ಕೋಟಿ ಮಾತ್ರ. ನಾವು ರೂ.40,000 ಕೋಟಿಗಳನ್ನು ಕೇಳಿದ್ದೆವು. ಹಾಗಾಗಿ ನಮ್ಮ ಸರ್ಕಾರಗಳು ರಾಜ್ಯಪಟ್ಟಿಯಲ್ಲಿರುವ ಪರಮಾಧಿಕಾರವನ್ನು ಚಲಾವಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

1969ರಲ್ಲಿ ಕೆಂಗಲ್ ಹನುಮಂತಯ್ಯನವರ ನೇತೃತ್ವದ ಆಡಳಿತ ಸುಧಾರಣಾ ಆಯೋಗವು ರಾಜ್ಯಪಾಲರನ್ನು ನೇಮಕ ಮಾಡುವಾಗ ರಾಜಕೀಯ ಪಕ್ಷಗಳು ದೂರವಿರಬೇಕೆಂದು ಹೇಳಿತ್ತು. ಬಹುಮತವನ್ನು ಸದನದಲ್ಲಿಯೇ ಸಾಬೀತು ಮಾಡಬೇಕೆಂದು ಹೇಳಿದರು. ಹಣಕಾಸು ಆಯೋಗದ ಬಗ್ಗೆ ಹೇಳಿದರು. 1983ರಲ್ಲಿ Justice Sarkaria ಅವರ ಆಯೋಗವು ಪಾರ್ಲಿಮೆಂಟ್‌ನ ಶೇಷಾಧಿಕಾರವನ್ನು ಸಮವರ್ತಿ ಪಟ್ಟಿಗೆ ಸೇರಿಸಬೇಕು. Inter-State Council ರಚನೆ ಮಾಡಬೇಕು. ರಾಜ್ಯಪಾಲರು ರಾಜಕೀಯದಿಂದ ದೂರವಿರಬೇಕೆಂದು ಶಿಫಾರಸ್ಸು ಮಾಡಿತ್ತು. ಇಂದಿನ ಪರಿಸ್ಥಿತಿಯಲ್ಲಿ ರಾಜಕೀಯ ಸನ್ಯಾಸತ್ವವನ್ನು ಪಡೆದುಕೊಂಡವರು ಯಾವುದೇ ಒಂದು ರಾಜ್ಯದ ರಾಜ್ಯಪಾಲರಾಗಿ ನೇಮಕಗೊಳ್ಳುತ್ತಾರೆ. 2007ರಲ್ಲಿ Justice Madan Mohan Punchhiಅವರ ಆಯೋಗವು 356ನೇ ವಿಧಿಯನ್ನು ಇಡೀ ದೇಶಕ್ಕೆ ಅನ್ವಯಿಸಬಾರದು ಎಂದು ಶಿಫಾರಸ್ಸು ಮಾಡಿ ಚುನಾವಣೆಗೆ ಮೊದಲೇ ಚುನಾವಣಾ ಮೈತ್ರಿಕೂಟ ರಚನೆ ಮಾಡಬೇಕೆಂದು ಹೇಳಿತು. ರಾಜ್ಯಪಾಲರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿದರೆ ಅವರನ್ನು ಪದಚ್ಯುತಗೊಳಿಸುವ ಅಧಿಕಾರ ಆಯಾ ರಾಜ್ಯಗಳ ವಿಧಾನಮಂಡಲಗಳಿಗೆ ಇರಬೇಕೆಂದು ಹೇಳಿದರು. ಆದರೆ ಇದು ಯಾವುದೂ ನಡೆಯುತ್ತಿಲ್ಲ. ಮಾನ್ಯ K.C.Veer ಅವರು ಭಾರತ ಸಂಯುಕ್ತ ಲಕ್ಷಣವಷ್ಟೇ ಹೊಂದಿದೆ. ಇದು ನಕಾರಾತ್ಮಕವೇ ವಿನಃ ಸಂಯುಕ್ತ ಸರ್ಕಾರವಲ್ಲ. ಅಂಬೇಡ್ಕರ್ ಅವರು ಭಾರತ ಸಂವಿಧಾನವು ಸಂಯುಕ್ತದ ಸರ್ಕಾರವಲ್ಲ. ಅಂಬೇಡ್ಕರ್ ಅವರು ಭಾರತ ಸಂವಿಧಾನವು ಶಾಂತಿ ಸಂದರ್ಭದಲ್ಲಿ ಸಂಯುಕ್ತ ಸರ್ಕಾರ, ಯುದ್ಧ ಮತ್ತು ವಿಪತ್ತಿನ ಸಂದರ್ಭದಲ್ಲಿ ಏಕಾತ್ಮಕ ಸರ್ಕಾರ ಎಂದು ಹೇಳಿದ್ದರೂ ಕೂಡ ಇದು ನಡೆಯುತ್ತಿಲ್ಲ.

ನಾನು ಮಾನ್ಯ ಕೆಂಗಲ್ ಹನುಮಂತಯ್ಯನವರು ಹೇಳಿದ ಎರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಭಾರತ ಸಂವಿಧಾನದಲ್ಲಿ ಪಾಶ್ಚಿಮಾತ್ಯ ಸಂವಿಧಾನಗಳ ಅನುಕರಣೆಯಾಗಿದ್ದು, ಭಾರತದ ಆಶೋತ್ತರಗಳಿಗೆ ಅನ್ವಯಿಸುವುದಿಲ್ಲವೆಂದು ಟೀಕಿಸಲಾಗಿದೆ. ಭಾರತ ಸಂವಿಧಾನದಲ್ಲಿ ಗಾಂಧೀಜಿಯವರ ತತ್ವಗಳನ್ನು ಬಾಯಿಮಾತಿಗೆ ಅಂದರೆ ತೋರಿಕೆಗೆ ಅಳವಡಿಸಿಕೊಳ್ಳಲಾಗಿದೆಯೆಂದು ಕೆಂಗಲ್ ಹನುಮಂತಯ್ಯನವರು ಟೀಕಿಸಿದ್ದಾರೆ. ಭಾರತ ಸಂವಿಧಾನವು un-Indian or anti-Indian ಆಗಿದ್ದು, ಭಾರತದ polity ಯನ್ನು ಪ್ರತಿನಿಧಿಸುತ್ತಿಲ್ಲ. We wanted the music of Veena or Sitar, but here we have the music of English band ಎಂದು ಕೆಂಗಲ್ ಹನುಮಂತಯ್ಯನವರು ಹೇಳಿದ್ದಾರೆ. ಶ್ರೀ ಕಾಮತ್ ಎನ್ನುವವರು ಭಾರತ ಸಂವಿಧಾನ ಸಭೆಯ ಸಂಕೇತ 'ಆನೆ'. ಅಂತೆಯೇ ಭಾರತ ಸಂವಿಧಾನವೂ ಗಜಗಾತ್ರದ ಸಂವಿಧಾನವಾಗಿದೆ ಎಂದು ಹೇಳಿದ್ದಾರೆ. ಧನ್ಯವಾದಗಳು.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸುಮಾರು 73 ವರ್ಷಗಳ ನಂತರ ಈಗ ಕೆಲವು ದಿನಗಳಿಂದ ಸಂವಿಧಾನದ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೆ. ಈ ಒಂದು ಅವಕಾಶ ಏತಕ್ಕಾಗಿ ಬಂದಿತು? ಯಾರು ತೀರ್ಮಾನ ಮಾಡಿದರು? ಏತಕ್ಕಾಗಿ ಈ ಒಂದು ಅಧಿವೇಶನದಲ್ಲಿ ಬಂದಿತು ಎಂಬುದು ನನಗೆ ತಿಳಿದಿಲ್ಲ. ನೂರಾರು ವರ್ಷಗಳ ಹೋರಾಟದ ಫಲವಾಗಿ ಸ್ವಾತಂತ್ರ್ಯವು ನಮಗೆ ದೊರೆತಿದೆ. ನಂತರ ಇಂದಿನ ದಿನಮಾನದಲ್ಲಿ ಇಡೀ ರಾಷ್ಟ್ರದಲ್ಲಿ ನಡೆಯುತ್ತಿರುವ ಈ ಚಳುವಳಿಯನ್ನು ನಾವು ಇದುವರೆವಿಗೂ ನೋಡಿಲ್ಲ. ಇಡೀ ರಾಷ್ಟ್ರದಲ್ಲಿ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೆ, ಬಂಗಾಳದಿಂದ ಹಿಡಿದು ಗುಜರಾತ್‌ನವರೆಗೆ 'Save Constitution, save democracy' ಎಂಬ ಕೂಗು ಕೇಳಿಬರುತ್ತಿದೆ. ಸಂವಿಧಾನವನ್ನು ಉಳಿಸಿ, ಪ್ರಜಾಪ್ರಭುತ್ವವನ್ನು ಉಳಿಸಿ ಎಂದು ಇಡೀ ರಾಷ್ಟ್ರದಲ್ಲಿ ಕೋಟ್ಯಂತರ ಜನ ಹೋರಾಟವನ್ನು ಮಾಡುತ್ತಿದ್ದಾರೆ. ನಾವು ದೆಹಲಿಯ ಶಾಹಿನ್ ಬಾಗ್ ಬಗ್ಗೆ ತಿಳಿದುಕೊಂಡಿರಬಹುದು. ಇಲ್ಲವೆ ಬೆಂಗಳೂರಿನ ಬಿಲಾಲ್ ಬಾಗ್ ಬಗ್ಗೆ ತಿಳಿದುಕೊಂಡಿರಬಹುದು. ನಾನು ಈ ಸದನದ ಗಮನಕ್ಕೆ ತರಬಯಸುವುದೇನೆಂದರೆ, ಈ ರಾಷ್ಟ್ರದಲ್ಲಿ ಸುಮಾರು 163 ಕಡೆ ಮಹಿಳೆಯರು ಹಗಲು ರಾತ್ರಿ ಧರಣಿಯನ್ನು ಮಾಡಿ ಎರಡು–ಎರಡೂವರೆ ತಿಂಗಳಿನಿಂದ ಸಂವಿಧಾನವನ್ನು ಉಳಿಸಿ ಎನ್ನುವ ಕಾರಣಕ್ಕಾಗಿ ಹೋರಾಟ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು ಸದನದಲ್ಲಿ ಸಂವಿಧಾನದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ನನಗೆ ಇದು ನಿಜವಾಗಿಯೂ co-incidence ಆಗಿದೆಯೋ ಅಥವಾ ಇದನ್ನು ನೋಡಿಕೊಂಡು ತಾವೇನಾದರೂ ಸಂವಿಧಾನದ ಬಗ್ಗೆ ಚರ್ಚೆಯಾಗಲಿ ಎಂದು ತೀರ್ಮಾನ ಮಾಡಿದ್ದೀರೋ ಅದು ನನಗೆ ಗೊತ್ತಿಲ್ಲ. ಇಂದಿನ ದಿವಸ ಹಲವಾರು ಮಾನ್ಯ ಸದಸ್ಯರು ಸಂವಿಧಾನದ ಬಗ್ಗೆ ಉಭಯ ಸದನಗಳಲ್ಲಿ ಮಾತನಾಡಿದ್ದಾರೆ. ಸಾಕಷ್ಟು ವಿಷಯಗಳ ಬಗ್ಗೆ ಇಂದು ಬೆಳಕು ಚೆಲ್ಲಿದ್ದಾರೆ. ಸುಮಾರು ದಿನಗಳಿಂದ ನಾವು ಕೇವಲ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂವಿಧಾನದ ಬಗ್ಗೆ ಚರ್ಚೆಯಾಗುತ್ತಿರುವುದನ್ನು ಕೇಳಿಕೊಂಡು ಬಂದಿದ್ದೇವೆ. ಇಂದು ಈ ಹೋರಾಟವಾಗಬೇಕಾದರೆ ಕಾರಣಗಳೇನು?

ಕೆಲವು ವಿಷಯಗಳು ಇಡೀ ಸದನಕ್ಕೆ ತಿಳಿದಿದೆ ಹಾಗೂ ಇಡೀ ದೇಶಕ್ಕೂ ತಿಳಿದಿದೆ. ತ್ರಿವಳಿ ತಲಾಖ್ ವಿಧೇಯಕವನ್ನು ಸಂಸತ್ತಿನಲ್ಲಿ ಜಾರಿ ಮಾಡಲಾಯಿತು. ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳು ವಿಶೇಷವಾಗಿ ಮಹಿಳೆಯರಿಗೆ ರಕ್ಷಣೆಯನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ಇದನ್ನು ತರಲಾಗಿದೆಯೆಂದು ಹೇಳಿ ಘೋಷಣೆಯನ್ನು ಮಾಡಿದರು. ಈ ಮಸೂದೆ ಜಾರಿಗೆ ಬಂದ ಮೇಲೆ ನಮಗೆ ತ್ರಿವಳಿ ತಲಾಖ್ ಕೂಗಿರುವುದರಿಂದ ಕಷ್ಟವಾಗಿದೆ ಎಂದು ಎಷ್ಟು ಜನ ಹೋಗಿ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದಾರೆ ಎಂದು ನಮ್ಮ ಬಳಿ ಯಾವುದೇ ರೀತಿಯ ಅಂಕಿ–ಸಂಖ್ಯೆಗಳು ಇಲ್ಲ. ಕಾರಣ ಆ ರೀತಿಯ ಘಟನೆಗಳು ಆಗುವುದೇ ಇಲ್ಲ. ಈ ಮಸೂದೆಯು ಕೇವಲ ಒಂದು ಸಮಾಜವನ್ನು ಗುರಿಯನ್ನಾಗಿಟ್ಟುಕೊಂಡು ಮಾಡಿರುವ ಒಂದು ಮಸೂದೆಯಾಗಿದೆ.

(ಮುಂದು)

(427) 16–03–2020(1–30) ಕೆಜಿ ಜಿಆರ್
**ಶ್ರೀ ನಸೀರ್ ಅಹ್ಮದ್ (ಮುಂದು)**

ನಮ್ಮ ಇಡೀ ರಾಷ್ಟ್ರದಲ್ಲಿ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೂ ನಡೆಯುತ್ತಿರುವಂತಹ ಧರಣಿಗಳಲ್ಲಿ ಹಲವಾರು ಲಕ್ಷಾಂತರ ಜನ ಮಹಿಳೆಯರು ಅದರಲ್ಲಿ ಭಾಗವಹಿಸಿದ್ದಾರೆ. ಅದರ ಬಗ್ಗೆ ಏಕೆ ಚಿಂತನೆ ಮಾಡಿಲ್ಲ? ಅದೇರೀತಿ ಶಬರಿಮಲೈನ ಒಂದು ವಿಷಯ ಬಂತು. ಆಗ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಶಬರಿಮಲೈಗೆ ಮಹಿಳೆಯರಿಗೆ ಹೋಗಲು ಅವಕಾಶ ಮಾಡಿಕೊಡಬೇಕೆಂದು ಆದೇಶ ಮಾಡಿತ್ತು. ಆದರೆ, ಅಲ್ಲಿಗೆ ಮಹಿಳೆಯರು ಹೋಗಬಾರದೆಂದು ಒಂದು ಹೋರಾಟ ಮಾಡಿದರು. ಶಬರಿಮಲೈಗೆ ಮಹಿಳೆಯರು ಹೋಗಬಾರದೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯ ಆದೇಶ ಮಾಡಿದಾಗ, ಅಲ್ಲಿಗೆ ಮಹಿಳೆಯರನ್ನು ಕಳುಹಿಸಬೇಕೆಂದು ಹೋರಾಟ ನಡೆಯಿತು. ಒಂದು ಕಡೆ ಒಂದು ರೂಲ್, ಇನ್ನೊಂದು ಕಡೆ ಇನ್ನೊಂದು ರೂಲ್ ಎಂದು ತೋರಿಸುತ್ತದೆ. ಇವತ್ತಿನ ದಿವಸ ರಾಷ್ಟ್ರದಲ್ಲಿ ಸಂವಿಧಾನವನ್ನು ಉಳಿಸಿ, ಪ್ರಜಾಪ್ರಭುತ್ವನ್ನು ಉಳಿಸಿ ಎಂದು ಬಂದಿರುವಂತಹ ಕೂಗು. ನಾವು ಇವತ್ತು ಸಂವಿಧಾನದ ಬಗ್ಗೆ ಮಾತನಾಡುತ್ತಿದ್ದೇವೆ. ಸಂವಿಧಾನ ಒಂದು foundation. ನಾವು ಯಾವುದೇ ಒಂದು law ತೆಗೆದುಕೊಳ್ಳಿ, ಯಾವುದೇ ರೂಲ್ ತೆಗೆದುಕೊಳ್ಳಿ, Courts ಇವೆ, ಸದನ ಇದೆ, Legislature ಇದೆ. These are all ಸಂವಿಧಾನದಿಂದಲೇ ಬಂದಿರುವಂತಹದ್ದು, ನಾವು ನ್ಯಾಯಾಲಯಕ್ಕೆ ಹೋಗಬೇಕಾದರೆ, ಸಂವಿಧಾನದಲ್ಲಿರುವಂತಹ ಅನುಚ್ಛೇಧಗಳನ್ನು ಉಲ್ಲೇಖಿಸಿ ಹೋಗಬೇಕಾಗುತ್ತದೆ. ನಮ್ಮಲ್ಲಿ ಯಾವುದೇ ತೆರಿಗೆಗಳು ಇರಬಹುದು, ಮೋಟಾರ್ ವಾಹನ ತೆರಿಗೆ ಇರಬಹುದು, ಆದಾಯ ತೆರಿಗೆ ಇರಬಹುದು, ಬಿ.ಬಿ.ಎಂ.ಪಿ., ತೆರಿಗೆ ಇರಬಹುದು, ಯಾವುದೇ ರೀತಿಯ ಸ್ವತ್ತಿನ ಮೇಲಿನ ತೆರಿಗೆಗಳು ಇರಬಹುದು, ಯಾವುದೇ ಒಂದು ರೂಲ್

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರಬಹುದು, ಇದೆಲ್ಲಾ ಸಂವಿಧಾನದಿಂದ ಬಂದಿರುವಂಥದ್ದು, ಇದನ್ನೆಲ್ಲಾ ಸಂವಿಧಾನದಿಂದ ತೆಗೆದುಕೊಂಡು ಇವತ್ತಿನ ದಿವಸ ಇದನ್ನೆಲ್ಲಾ ಮಾಡುತ್ತಿದ್ದೇವೆ. ನಮಗೆ ಅದರ ಅರಿವು ಇಲ್ಲ. ಇದೆಲ್ಲಾ ಸಂವಿಧಾನದ ಅಂಗವಾಗಿ ನಡೆಯುತ್ತಿದೆ ಎಂಬುದನ್ನು ನಾವು ತಿಳಿದುಕೊಳ್ಳುವುದಿಲ್ಲ. ಅದು ಪ್ರತ್ಯೇಕವಾಗಿ ಒಂದು ಕಾನೂನು ಎಂದು ತಿಳಿದುಕೊಳ್ಳುತ್ತೇವೆ. ನಿಜವಾಗಲೂ ನಮ್ಮ ಜೀವನದಲ್ಲಿ we will be given a Birth Certificate, under the Constitution Act, 1956. Birth Certificate ತೆಗೆದುಕೊಳ್ಳಬೇಕಾದರೂ ಸಹ ಅದನ್ನು ಸಂವಿಧಾನದ ಅಡಿಯಲ್ಲಿಯೇ ತೆಗೆದುಕೊಳ್ಳುತ್ತೇವೆ. ನಾವು ಸತ್ತು ಹೋದ ಮೇಲೆ ಮರಣ ಪ್ರಮಾಣ ಪತ್ರವನ್ನು ಸಂವಿಧಾನದ ಅಡಿಯಿಂದಲೇ ತೆಗೆದುಕೊಳ್ಳುತ್ತೇವೆ. ಇಂತಹ ವ್ಯವಸ್ಥೆ ನಮ್ಮಲ್ಲಿ ಇದೆ. ಸಂವಿದಾನದ foundation ಬಾರಿ strong foundation ಇರುವುದರಿಂದ ಸುಮಾರು 73 ವರ್ಷಗಳವರೆಗೆ ಹೆಚ್ಚಾಗಿ ಯಾವುದೇ ಬದಲಾವಣೆಗಳು ಆಗಿಲ್ಲ. ಕೆಲವು ತಿದ್ದುಪಡಿಗಳು ಆಗಿವೆ. ಅದನ್ನು ಲೋಕಸಭೆಯಲ್ಲಿ ಮತ್ತು ರಾಜ್ಯ ಸಭೆಯಲ್ಲಿ ಒಪ್ಪಿಗೆ ಪಡೆದುಕೊಂಡು ಸಂವಿಧಾನದಲ್ಲಿ ತಿದ್ದುಪಡಿಗಳು ಆಗಿವೆ. ಇವತ್ತಿನ ದಿವಸ ಸದನದಲ್ಲಿ ಹಲವಾರು ಮಾನ್ಯ ಸದಸ್ಯರುಗಳು ಡಾ||ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನನ್ನ ಗೆಳೆಯರಾದ ಶ್ರೀ ಗೌಡರವರು ಡಾ||ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ಮಾತನಾಡಿದ್ದಾರೆ. 1946 ರಲ್ಲಿ ಇರಬಹುದು, Constituent Assembly ಯಲ್ಲಿ ಚರ್ಚೆಯಾದಾಗ, ಶ್ರೀ ಜವರಾಲಾಲ್ ನೆಹರೂರವರು ಯಾವುದೇ ಒಂದು ಸಂವಿಧಾನವಾಗಲಿ, ಯಾವುದೇ ಒಂದು ರೂಲ್ ಆಗಲಿ ಪ್ಲೇಸ್ ಮಾಡಿದಾಗ ಇಲ್ಲಿ ಬಿಲ್ಲು ಸಹ ಬರುತ್ತದೆ. ಆ ಬಿಲ್ಲು ಸಹ ಪ್ಲೇಸ್ ಮಾಡಬೇಕಾದರೆ, ಅದರ 'Aims and objects' ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಅದೇರೀತಿ ಆ ಸಂದರ್ಭದಲ್ಲಿ 'Aims and objects' ಪ್ರಸ್ತಾಪ ಮಾಡಿದಾಗ, ಸಂವಿಧಾನದ ಬಗ್ಗೆ ಆ Constituent Assembly ಯಲ್ಲಿ ಚರ್ಚೆ ಆಗಬೇಕಾದರೆ, ಅಲ್ಲಿ ಮುಸ್ಲಿಂಲೀಗ್ ಸದಸ್ಯರು ಇರುವುದಿಲ್ಲ. ಅಲ್ಲಿ 72 ಮುಸ್ಲಿಂಲೀಗ್ ಸದಸ್ಯರು ಇರುತ್ತಾರೆ. ಅವರ absence ನಲ್ಲಿ ಅಲ್ಲಿ Dr.M.R.Jayakar, who was a Member of the Constituent Assembly, ಅವರು ಒಂದು ತಕರಾರು ಮಾಡುತ್ತಾರೆ. ಸ್ವಾಮಿ ಇಲ್ಲಿ ಮುಸ್ಲಿಂಲೀಗ್ ಸದಸ್ಯರು ಇಲ್ಲ, ಅವರ ಗೈರು ಹಾಜರಿಯಲ್ಲಿ ನಾವು ಇದನ್ನು ಚರ್ಚೆ ಮಾಡುವುದು ಬೇಡವೆಂದು ಹೇಳುತ್ತಾರೆ. ಆಗ ಶ್ರೀ ಶ್ಯಾಂಪ್ರಸಾದ್ ಮುಖರ್ಜಿಯವರು ಎದ್ದು ನಿಂತು "ಈ ದೇಶ ಯಾವ ರೀತಿ ಇರಬೇಕು, ಈ ದೇಶದಲ್ಲಿ ಯಾವುದೇ ರೀತಿಯ ತಾರತಮ್ಯಗಳು ಇರಬಾರದು, ಈ ದೇಶದಲ್ಲಿ ವಾಸ ಮಾಡುವಂತಹ ಪ್ರತಿಯೊಂದು ಸಮಾಜವನ್ನು ಸಾಮರಸ್ಯದಿಂದ ನೋಡಬೇಕು, ಹಾಗಾಗಿ, ಇವತ್ತಿನ ದಿವಸ ಚರ್ಚೆ ಮಾಡುತ್ತೇವೆ. ಹಾಗಾಗಿ, ಇವತ್ತು ಅವರು ಇಲ್ಲದಿದ್ದರೂ ಸಹ ಚರ್ಚೆಯನ್ನು ಮುಂದುವರೆಸಬೇಕೆಂದು" ಹೇಳಿದ್ದಾರೆ. ಆ ಶ್ರೀ ಶ್ಯಾಂಪ್ರಸಾದ್ ಮುಖರ್ಜಿಯವರೇ ಇವತ್ತಿನ ದಿವಸ ನಮ್ಮ ರಾಷ್ಟ್ರದಲ್ಲಿ ಆಡಳಿತ ಮಾಡುವಂತಹ ಪಕ್ಷದ foundation ಹಾಕಿದಂತಹವರು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಯವರೇ, ಆದರೆ, ಇವತ್ತು ಏನು ನಡೆಯುತ್ತಿದೆ? ನಮ್ಮಲ್ಲಿ ಸಾಕಷ್ಟು ಇತಿಹಾಸಗಳು ಇರುತ್ತವೆ. ನಮ್ಮ ಶರೀರದಲ್ಲೂ ಎಲ್ಲಾ ಅಂಗಗಳು ಸರಿಯಾಗಿ ಇದ್ದರೆ, ನಾವು ಸರಿಯಾಗಿ ಇರುತ್ತವೆ. ಆದರೆ, ಯಾವುದಾದರೊಂದು ಅಂಗವೈಕಲ್ಯತೆ ಇದ್ದರೆ, ನಮ್ಮನ್ನು ಅಂಗವಿಕಲ ಎಂದು ಕರೆಯುತ್ತಾರೆ. ಅದೇ ರೀತಿ ಕಾಡಿನಲ್ಲಿಯೂ ಸಹ ಸಾಕಷ್ಟು ಕಾಡು ಪ್ರಾಣಿಗಳು ಜೀವನ ಮಾಡುತ್ತವೆ. ಅದರಲ್ಲಿ ಸಿಂಹಗಳು ಇರುತ್ತವೆ, ಜಿಂಕೆಗಳು ಇರುತ್ತವೆ, ಸಣ್ಣ ಸಣ್ಣ reptiles ಗಳು ಇರುತ್ತವೆ. There is a nature management. ಎಲ್ಲರಿಗೂ ಅವರಿಗೆ ಬೇಕಾದಂತಹ ಆಹಾರ ಸಿಗುತ್ತದೆ. ಎಲ್ಲರಿಗೂ ಜೀವನ ಮಾಡುವುದಕ್ಕೆ ಬೇಕಾದಂತಹ ಅವಕಾಶಗಳನ್ನು ಪ್ರಕೃತಿ ಒದಗಿಸಿಕೊಟ್ಟಿದೆ. ಅದೇರೀತಿ ಇವತ್ತಿನ ದಿವಸ ಸಂವಿಧಾನವು ಸಹ ನಮಗೆ ಎಲ್ಲಾ ವ್ಯವಸ್ಥೆ ಮಾಡಿಕೊಟ್ಟಿದೆ. ಶ್ರೀ ಮೌಲಾನಾ ಅಬ್ದುಲ್ ಕಲಾಂ ಆಜಾದ್ ರವರು ಅಕ್ಟೋಬರ್ 23, 1947 ರಲ್ಲಿ ದೆಹಲಿಯಲ್ಲಿರುವ ಜಾಮೀಯ ಮಸೀದಿಯಲ್ಲಿ public meeting ನಲ್ಲಿ ಹೀಗೆ ಹೇಳಿದ್ದಾರೆ:–

> "I do not want to lead a life of sycophancy as you did during the foreign rule. …. Like their worthy inheritors, and, rest assured, that if you do not wish to flee from this scene, nobody can make you flee. Come, today let us pledge that this country is ours, we belong to it and any fundamental decision about its destiny will remain incomplete without our consent."

ಇದನ್ನು ಯಾರನ್ನು ಉದ್ದೇಶಿಸಿ ಹೇಳಿದ್ದಾರೆ? ಇದನ್ನು ಸಮಾಜದಲ್ಲಿರುವಂತಹ ಒಂದು ದೊಡ್ಡ ಅಂಗವಾದ ಮುಸಲ್ಮಾನರಿಗೆ ಹೇಳಿದ್ದಾರೆ. ಅದರ ಜೊತೆಗೆ ಅದೇ ಭಾಷಣದಲ್ಲಿ ಹೀಗೆ ಹೇಳಿದ್ದಾರೆ:

> "Do you remember? I hailed you, you cut off my tongue; I picked my pen, you severed my hand; I wanted to move forward, you broke off my legs; I tried to turn over, and you injured my back. .."

ಅಂತಹ ಒಂದು ಭಾಷಣವನ್ನು ಮಾಡುತ್ತಾರೆ. ಕಾರಣವೆಂದರೆ, ಈ ರಾಷ್ಟ್ರದಲ್ಲಿ ನಾವೆಲ್ಲರೂ ಒಂದಾಗಿ ಇರಬೇಕು. ಈ ರಾಷ್ಟ್ರ ನಮಗೆ ಸೇರಿದ್ದು, ಈ ರಾಷ್ಟ್ರಕ್ಕೆ ಎಲ್ಲಾ ರೀತಿಯ ಕೊಡುಗೆಗಳನ್ನು ಕೊಟ್ಟಿದ್ದೇವೆ. ಸ್ವಾತಂತ್ರ್ಯ ಹೋರಾಟದಲ್ಲಿ ಇದು ತಮಗೂ ಗೊತ್ತಿರಬಹುದು, ಮೊದಲನೆ ಸ್ವಾತಂತ್ರ್ಯ ಹೋರಾಟ Siraj ud-Daulah ಎಂದು West Bengal ನ ನವಾಬ್ ಆಗಿದ್ದವರು,he was only twenty-four years old, fought with East India Company. That was the first battle fought against the British. ಅಲ್ಲಿಂದ ಹಿಡಿದು ಟಿಪ್ಪು ಸುಲ್ತಾನ್ ಕಥೆ ಎಲ್ಲರಿಗೂ ಗೊತ್ತಿದೆ. ನಂತರ ಸಾಕಷ್ಟು ಜನ I want to mention. ಆಗ ಶ್ರೀ ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರವರ ವಯಸ್ಸು 36 ಇರುತ್ತದೆ. ಆ ವಯಸ್ಸಿನಲ್ಲಿ he becomes an elected

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

President of All India Congress Committee in 1933. 1933 ರಲ್ಲಿ 36 ನೇ ವಯಸ್ಸಿನಲ್ಲಿ All India Congress Committee President ಆಗುತ್ತಾರೆ. ಅವರು ಆಗುವುದಕ್ಕೆ ತಯಾರು ಇರುವುದಿಲ್ಲ. ಆಗ ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಹೋಗಿ ಅವರನ್ನು ನಿಮ್ಮಂತಹ ಜನ ಈ ಸಂದರ್ಭದಲ್ಲಿ ಆಗಬೇಕೆಂದು convince ಮಾಡುತ್ತಾರೆ. 1993ರಲ್ಲಿ he becomes a President of All India Congress Committee. ಮತ್ತೆ 1940 ರಲ್ಲಿ ಇನ್ನೊಂದು ಬಾರಿ ಅಧ್ಯಕ್ಷರು ಆಗುತ್ತಾರೆ. He continues as a President till 1946. 'Quit India Movement' ಅವರ ನೇತೃತ್ವದಲ್ಲಿ ನಡೆಯುತ್ತದೆ. ಇದು ಏನ್ನನ್ನು ತೋರಿಸುತ್ತದೆ ಎಂದರೆ, in those days, there were no differences between leaders. There was no divide and there was no discrimination. ಎಲ್ಲರೂ ಒಂದಾಗಿ ಹೋರಾಟ ಮಾಡಿದರು. ದೆಹಲಿಯಲ್ಲಿರುವಂತಹ India Gate ಅನ್ನು ನೋಡಿರಬಹುದು, ಅಲ್ಲಿ inscribe ಮಾಡಿದ್ದಾರೆ. The names of people, who have fought for the independence, have been inscribed there. ಅಲ್ಲಿ ಎಲ್ಲರ ಹೆಸರುಗಳನ್ನು inscribe ಮಾಡಿದ್ದಾರೆ. ಸುಮಾರು 96 ಸಾವಿರ ಹೆಸರುಗಳನ್ನು inscribe ಮಾಡಿದ್ದಾರೆ. ಅದರಲ್ಲಿ nearly about 66,000 people belong to one community. This is the contribution of this community. ನಾವು ಇವತ್ತಿನ ದಿವಸ ಎಲ್ಲಿದ್ದೇವೆಂದು ನಮಗೆ ಗೊತ್ತಿಲ್ಲ, ನಮ್ಮನ್ನು ಎಲ್ಲಿ ತೆಗೆದುಕೊಂಡು ಹೋಗಿ ಹಾಕುತ್ತಾರೆ ಎನ್ನುವುದು ಗೊತ್ತಿಲ್ಲ. ಈಗ ಪ್ರತಿ ದಿವಸ ಒಂದೊಂದು ಹೇಳಿಕೆ ದಿನಪತ್ರಿಕೆಗಳಲ್ಲಿ ಬರುತ್ತದೆ. ತಾವು ಸುಮಾರು ತಿಂಗಳುಗಳಿಂದ ನಡೆಯುತ್ತಿರುವಂತಹ ಘಟನೆಗಳನ್ನು ನೋಡಿರಬಹುದು. ಮಾನ್ಯ ಕೇಂದ್ರ ಗೃಹ ಮಂತ್ರಿಯವರು ಲೋಕಸಭೆಯಲ್ಲಿ ಒಂದು ಹೇಳಿಕೆ ನೀಡುತ್ತಾರೆ. ರಾಜ್ಯಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಡುತ್ತಾರೆ. ಅದೇ ರೀತಿ ನಮ್ಮ ದೇಶದ ಮಾನ್ಯ ಪ್ರಧಾನ ಮಂತ್ರಿಯುವರು ಸಾರ್ವಜನಿಕರ ಸಭೆಯಲ್ಲಿ ಅದಕ್ಕೂ ನಮಗೂ ಸಂಬಂಧ ಇಲ್ಲ, ಸರ್ಕಾರ ಯಾವತ್ತು N.R.C., ಬಗ್ಗೆ ಚರ್ಚೆ ಮಾಡಿಲ್ಲವೆಂದು ಹೇಳುತ್ತಾರೆ. ನಂತರ ರಾಜ್ಯ ಸಭೆಯಲ್ಲಿ 12ನೇ ತಾರೀಖಿನಂದು ಈ ದೇಶದ ಗೃಹಮಂತ್ರಿಯುವರು ನೀವೆಲ್ಲರೂ ತಪ್ಪಾಗಿ ತಿಳಿದುಕೊಂಡಿದ್ದೀರಿ,

**(ಮುಂದು...)**

(428)16–03–2020(1–40)ಎಂವಿ–ಎಂಡಿ(ವಿಕೆ)
**ಶ್ರೀ ನಸೀರ್ ಅಹ್ಮದ್ (ಮುಂದು...)**

NPR (National Population Register) ನಲ್ಲಿ ಯಾವುದೇ ರೀತಿಯಲ್ಲೂ ಸಹ ತಂದೆ ಹೆಸರು ಮತ್ತು ಅವರ ಹುಟ್ಟಿದ ಸ್ಥಳದ ಹೆಸರನ್ನು ಕೇಳುವುದಿಲ್ಲ ಹಾಗೂ doubtful ಎಂದು ಬರೆಯುವುದಕ್ಕೆ ಅವಕಾಶವೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲ್ಲವೆಂದು ಹೇಳುತ್ತಾರೆ. ಆದರೆ, ನಾವು ನೋಡಿರುವಂತಹ manual ನಲ್ಲಿ ಈ ರೀತಿ ಬರೆದಿದ್ದಾರೆ, wherever the officer goes for enumeration, ಅದು ನಮ್ಮ ಟೀಚರ್ಸ್ ಆಗಿರಬಹುದು, ಕಂದಾಯ ಅಧಿಕಾರಿಗಳು ಆಗಿರಬಹುದು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಆಗಿರಬಹುದು, ಅವರಿಗೆ satisfaction ಇಲ್ಲದೆ ಇದ್ದರೆ doubtful ಎಂದು ಬರೆಯಬೇಕೆಂದು manual ನಲ್ಲಿ ಕೊಟ್ಟಿದ್ದಾರೆ. ಮೊನ್ನೆಯ ದಿವಸ NPR form ಬಿಡುಗಡೆಯಾಗಿದೆ. ಅದರಲ್ಲಿ ತಂದೆ ಮತ್ತು ತಾಯಿಯ ಹೆಸರು, ಅವರು ಹುಟ್ಟಿದ ಸ್ಥಳ ಮತ್ತು ಹುಟ್ಟಿದ ದಿನಾಂಕ ಬರೆಯಬೇಕೆಂದು ಇದೆ. ಈಗ ರಾಜ್ಯಸಭೆಯಲ್ಲಿ ಕೊಟ್ಟಿರತಕ್ಕಂಥ ಹೇಳಿಕೆ ನಿಜವಾದರೆ ಮತ್ತೆ ಈ form ನಲ್ಲಿ ಇದು ಏಕೆ ಬೇಕು. ಇವತ್ತಿನ ದಿವಸ ಈ ರೀತಿಯ ಗೊಂದಲಗಳು ನಡೆಯುತ್ತಿವೆ. ಆದುದರಿಂದ ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಬೇರೆ ಸಮಯದಲ್ಲಿ ಅವಕಾಶ ಕೊಡುತ್ತೀರಾ ಎಂದು ನಂಬಿದ್ದೇನೆ. ನಾವು ನಿಜವಾಗಿಯೂ ಸ್ವಾತಂತ್ರ್ಯವನ್ನು ಪಡೆಯಬೇಕಾದರೆ, ಸುಮಾರು 554 Princely State ಗಳು ಇದ್ದವು. Reconciliation ಮಾಡಿ, negotiation ಮಾಡಿ, ಎಲ್ಲರ ಜೊತೆಗೆ ಅದರಲ್ಲಿ ಸಾಕಷ್ಟು ಜನ ಈ ಸಮಾಜಕ್ಕೆ ಸೇರಿದಂತಹ ರಾಜರು ಇದ್ದರು. ಉದಾಹರಣೆಗೆ; Nizams of Hyderabad, it was a very big State. ಅವರನ್ನು convince ಮಾಡಲೇಬೇಕಾಗಿತ್ತು. ಏಕೆಂದರೆ ಅದು ಮಧ್ಯದಲ್ಲಿ ಇರುವಂತಹ ಒಂದು ಪ್ರದೇಶ. ಅದನ್ನು ಬಿಟ್ಟು ಪೂರ್ತಿ ಹಿಂದೂಸ್ತಾನ ಮಾಡುವುದಕ್ಕೆ ಆಗುವುದಿಲ್ಲ. ಅಂತಹ ಒಂದು ಸಂದರ್ಭದಲ್ಲಿ ಅವರ ಹತ್ತಿರ ಹೋಗಿ ಅವರನ್ನು convince ಮಾಡಿ, ಅದನ್ನು ಸಹ ಸೇರಿಸಿಕೊಂಡರು. ಈಗ ನಿಜಾಮರ ಬಗ್ಗೆ ಮಾತನಾಡಿದಾಗ, ನನಗೆ ಇನ್ನೊಂದು ಜ್ಞಾಪಕಕ್ಕೆ ಬರುತ್ತಿದೆ. ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರೀಯವರು ಪ್ರಧಾನ ಮಂತ್ರಿಗಳಾಗಿದ್ದಾಗ, 1962ರಲ್ಲಿ ಪಾಕಿಸ್ತಾನ ಜೊತೆ ಯುದ್ಧ ನಡೆಯುತ್ತಿತ್ತು. ಆ ಯುದ್ಧದ ಸಮಯದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಈ ರೀತಿಯ ಒಂದು ಕರೆ ಕೊಡುತ್ತಾರೆ, ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ. ತಾವೆಲ್ಲರೂ ಸಹ voluntary ಆಗಿ ಬಂದು donation ಕೊಡಬೇಕೆಂದು ಒಂದು ಮನವಿ ಮಾಡಿದಾಗ, ನಿಜಾಮ ಶ್ರೀ ಉಸ್ಮಾನ ಆಲಿಯವರು ತಮ್ಮಲ್ಲಿ ಇದ್ದಂತಹ ಸುಮಾರು ಐದು ಸಾವಿರ ಕೆ.ಜಿ. (ಸುಮಾರು 5 ಟನ್) ಚಿನ್ನವನ್ನು ಈ ರಾಷ್ಟ್ರಕ್ಕಾಗಿ ಕೊಡುತ್ತಾರೆ. ಇದೆಲ್ಲಾ ದಾಖಲೆಯಲ್ಲಿ ದಾಖಲಾಗಿರುವಂಥದ್ದು, ಈಗ ಅದು ಇತಿಹಾಸ. ಆದರೆ, ಇವತ್ತು ಏಕೆ ನಮ್ಮನ್ನು ಈ ರೀತಿಯಾಗಿ ಬೇರೆ ಕಣ್ಣಿನಲ್ಲಿ ನೋಡುತ್ತಿರುವುದು, ಇದು ನಮಗೆ ನೋವು ತಂದಿದೆ. ಇದಕ್ಕೆ ನಮ್ಮ ಕೊಡುಗೆ ಇಲ್ಲವೇ? ಒಂದು ಕ್ರಿಕೆಟ್ ಮ್ಯಾಚ್ ನಡೆಯಬೇಕಾದರೆ, ಶ್ರೀ ಮೊಹಮ್ಮದ್ ಅಜರುದ್ದೀನ್ ಆಗಿರಬಹುದು, ಶ್ರೀ ಪಟೌಡಿಯವರು ಆಗಿರಬಹುದು ಇಲ್ಲವೇ ಪಠಾಣ್ ಬ್ರದರ್ಸ್ ಆಗಿರಬಹುದು. ಅವತ್ತಿನ ದಿವಸ ಇಡೀ ದೇಶ ಕುಳಿತುಕೊಂಡು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದೆವು. ಏಕೆಂದರೆ, ಅವರು ಆವತ್ತಿನ ದಿವಸ Test Match ಅನ್ನು ಗೆಲ್ಲಿಸಿ ಕೊಟ್ಟರು ಎಂದು. ಈಗ ಆ ಭಾವನೆ ಎಲ್ಲಿಗೆ ಹೊರಟು ಹೋಯಿತು. ಈಗ ಸಾನಿಯಾ ಮಿರ್ಜಾ ಆಗಿರಬಹುದು ಮತ್ತು ನಮ್ಮ ಮಾಜಿ ರಾಷ್ಟ್ರಪತಿಗಳಾದ ದಿವಂಗತ ಅಬ್ದುಲ್ ಕಲಾಂರವರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇರಬಹುದು, ಮಾನ್ಯ ಫಕ್ರುದ್ದೀನ್ ಆಲಿ ಅಹಮದ್ ಇರಬಹುದು ಮತ್ತು ಮಾನ್ಯ ಝೂಕೀರ್ ಹುಸೇನ್ ಇರಬಹುದು ಇವರುಗಳ ಕೊಡುಗೆ ಇಲ್ಲವೆ. ಇನ್ನು ಸುಮಾರು ಪಟ್ಟಿ ಇದೆ. ಆದರೆ ಅದನ್ನು ಹೇಳುವುದಕ್ಕೆ ಹೆಚ್ಚಿನ ಸಮಯವಿಲ್ಲ. ಈಗ ಶ್ರೀ ಮಹಮ್ಮದ್ ರಫೀ ರವರ ಹಾಡುಗಳನ್ನು ಇಡೀ ದೇಶದ ಜನ, ಮ್ಯೂಸಿಕ್‌ನಲ್ಲಿ ಆಸಕ್ತಿ ಇರುವಂತಹವರು ಇಂದಿಗೂ ಸಹ collection ಇಟ್ಟುಕೊಂಡಿದ್ದಾರೆ. ಗಾಯಕಿ ಲತಾ ಮಂಗೇಶ್ಕರ್‌ರವರು ಹಾಡಿರುವಂತಹ 'ಏ ಮೇರೆ ವಥನ್ ಕೆ ಲೋಗೋ, ಜ಼ರ ಆಂಕ್‌ಮೆ ಬರ್‌ಲೋ ಪಾನಿ', ಶ್ರೀ ಮೊಹಮ್ಮದ್ ಇಕ್ಬಾಲ್‌ರವರು ಬರೆದಿರುವ 'ಸಾರೇ ಜಹಾ ಸೇ ಅಚ್ಚಾ ಹಿಂದೂಸ್ತಾನ್ ಹಮಾರ, ಹಮ್ ಬುಲ್ ಬುಲೆ ಹೇ ಹಿಸಕಿ ಯೇ ಗುಲಿಸ್ತಾ ಹಮಾರ' ಎಂಬ ಹಾಡು, ಈ ಹಾಡುಗಳನ್ನು ಕೇಳಿದಾಗ ನಮ್ಮ ಮೈಯಲ್ಲಿ ಒಂದು ತರಹ ರೋಮಾಂಚನವಾಗುತ್ತದೆ. These are the contributions. ಈ ದೇಶದಲ್ಲಿ ಪ್ರತಿಯೊಬ್ಬರು ಸಹ ತಮ್ಮ ಕೊಡುಗೆಯನ್ನು ಕೊಟಿದ್ದಾರೆ. ಆದುದರಿಂದ ನಾನು ಒಬ್ಬರ ಬಗ್ಗೆ ಮಾತ್ರ ಮಾತನಾಡುವುದಕ್ಕೆ ಇಚ್ಛೆಪಡುವುದಿಲ್ಲ. ನಮ್ಮ ಶಕ್ತಿಯೇ ಅದು, ಅಂದರೆ, Diversity, patience and tolerance ಇದರಿಂದ ಇವತ್ತಿನ ದಿವಸ ಈ ದೇಶ ಇಡೀ ಜಗತ್ತಿನಲ್ಲಿ ಹೆಸರು ಪಡೆದಿರುವಂತಹ ಯಾವುದಾದರು ದೇಶ ಇದ್ದರೆ, ಅದು ಹಿಂದೂಸ್ತಾನ್, ಅದು ಭಾರತ. Because of the people of this country, we believe in unity and diversity, we believe the words of Mahatma Gandhiji. ಅವರ ಕೊಡುಗೆ ಏನು? ಇದು ಪ್ರತಿಯೊಬ್ಬರಿಗೂ ಸಹ ಗೊತ್ತಿರುವಂಥದ್ದು ಇದನ್ನು ನಾನು ಹೇಳುವುದು ಬೇಕಾಗಿಲ್ಲ. ಶ್ರೀಮತಿ ಕಸ್ತೂರಬಾ ಗಾಂಧೀಯವರು ಪೂನಾದ ಜೈಲಿನಲ್ಲಿ ಸತ್ತು ಹೋಗುತ್ತಾರೆ. ಅವರ ಮೈಯಲಿ 'Do or Die' ಎಂದು ಇರುತ್ತದೆ. ಪ್ರತಿಯೊಬ್ಬರು ಸಹ 'Do or Die' ಎಂಬ Badge ಅನ್ನು ಹಾಕಿಕೊಂಡಿರಬೇಕೆಂದು ಮಹಾತ್ಮ ಗಾಂಧೀಜಿಯವರು ಕರೆ ಕೊಟ್ಟಿರುತ್ತಾರೆ. ಶ್ರೀಮತಿ ಕಸ್ತೂರಬಾ ಗಾಂಧೀಯವರು 1944ರಂದು ಜೈಲಿನಲ್ಲಿ ಸಾಯುತ್ತಾರೆ. ಅದೇ ರೀತಿ ಎಷ್ಟು ಜನ ಎಂದರೆ, ಶ್ರೀ ಮೌಲಾನಾ ಅಬ್ದುಲ್ ಕಲಾಂ ಅಜಾದ್, ಡಾ॥ ರಾಜೇಂದ್ರ ಪ್ರಸಾದ್, ಶ್ರೀ ಜವಾಹರ್ ಲಾಲ್ ನೆಹರು ಇವರುಗಳೆಲ್ಲರೂ ಎಷ್ಟು ವರ್ಷ ಜೈಲಿನಲ್ಲಿ ವಾಸ ಮಾಡಿದ್ದಾರೆಂದರೆ, ಒಂದು ವರ್ಷವಲ್ಲ, ಎರಡು ವರ್ಷವಲ್ಲ ಅಥವಾ ಮೂರು ವರ್ಷವಲ್ಲ. ಜವಾಹರ್ ಲಾಲ್ ನೆಹರುರವರು ವಿದೇಶದಿಂದ ಶಿಕ್ಷಣವನ್ನು ಮುಗಿಸಿಕೊಂಡು ಬಂದಾಗ ಅವರಿಗೆ ಸುಮಾರು 23 ರಿಂದ 24 ವರ್ಷ ವಯಸ್ಸಾಗಿರುತ್ತದೆ. ಅವರ ಹೋರಾಟ ಅಲ್ಲಿಂದ ಪ್ರಾರಂಭವಾಗುತ್ತದೆ. ಅವರು ಸುಮಾರು 9 ವರ್ಷಗಳ ಕಾಲ ಜೈಲಿನಲ್ಲಿರುತ್ತಾರೆ. ಅದು ಜ್ಞಾಪಕ ಇರಬಹುದು. I want to remind this House. ಅವರು ತಮ್ಮ ಮಗಳಾದ ಶ್ರೀಮತಿ ಇಂದಿರಾ ಪ್ರಿಯದರ್ಶಿನಿಯವರಿಗೆ ಒಂದು ಪತ್ರ ಬರೆಯುತ್ತಾರೆ. ಅಂದು ಇಂದಿರಾ ಪ್ರಿಯದರ್ಶಿನಿಯವರ ಹುಟ್ಟಿದ ಹಬ್ಬ. ನಾನು ಸುಮಾರು ಮೂರು ವರ್ಷಗಳಿಂದ ಜೈಲಿನಲ್ಲಿ ವಾಸ ಮಾಡುತ್ತಿದ್ದೇನೆ. ಇವತ್ತು ನಿನ್ನ ಹುಟ್ಟಿದ ಹಬ್ಬ. ಆದರೆ, ನಿಮ್ಮ ತಾಯಿ ನಿನ್ನ ಜೊತೆಯಲ್ಲಿ ಇಲ್ಲ. ಶ್ರೀಮತಿ ಇಂದಿರಾ ಪ್ರಿಯದರ್ಶಿನಿಯವರ ತಾಯಿಗೆ ಟಿ.ಬಿ. ಇದ್ದುದ್ದರಿಂದ ಅವರು ಆಸ್ಪತ್ರೆಯಲ್ಲಿ ಇರುತ್ತಾರೆ. ಇವತ್ತು ನಿನ್ನ ಜೊತೆ

birthday celebrate ಮಾಡುವುದಕ್ಕೆ ಅವಕಾಶವಿಲ್ಲ. ನಾನು ಈ ನಾಲ್ಕು ಗೋಡೆಗಳ ಮಧ್ಯದಿಂದ ಈ ಪತ್ರವನ್ನು ಬರೆಯುತ್ತಿದ್ದೇನೆ, 'ನಿನಗೆ ಆ ದೇವರು ಒಳ್ಳೆಯದು ಮಾಡಲಿ' ಎಂದು ತಮ್ಮ ಮಗಳಿಗೆ ಪತ್ರ ಬರೆಯುತ್ತಾರೆ. ಇದೆಲ್ಲಾ ಒಂದು ಇತಿಹಾಸ. ಆದರೆ, ಇವತ್ತಿನ ದಿವಸ ನಾವು ಮಾತನಾಡುತ್ತಿರುವುದು ಏನು? 'ಗೋಲಿ ಮಾರೋ ದೇಶ್ ಕೀ ಗದ್ದಾರೋಂಕೊ' ಈ ದೇಶದ ಗದ್ದಾರ್‌ಯಾರು? ಯಾರಿಗೆ ಗೋಲಿ ಮಾರೋ? ಇದನ್ನು ಯಾರು ಹೇಳುತ್ತಾರೆಂದರೆ, ಒಂದು ರಾಷ್ಟ್ರದ ಸಚಿವರು ಹೇಳಿದ್ದಾರೆ. ಒಂದು stage ನಲ್ಲಿ ಗೋಲಿ ಮಾರೋ ಗದ್ದಾರೋಂಕೊ ಎಂದು ಹೇಳಿದವರು ಯಾರು? ಯಾರು ಗದ್ದಾರ್‌ಗಳು? ಇವತ್ತಿನ ದಿವಸ ಇದನ್ನು ನಿಜವಾಗಲೂ ನಾವು ಇಂತಹ ಒಂದು ಸಂದರ್ಭದಲ್ಲಿ ನೋಡಿದ್ದೇವೆ. ಶ್ರೀ ಭಗತ್ ಸಿಂಗ್ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಮಾತನಾಡಿದರು. ಆಗ ಅವರ ವಯಸ್ಸು ಸುಮಾರು 23–24 ಆಗಿತ್ತು. ಅವರು ಮರಣ ಹೊಂದಲು ಏನು ಕಾರಣ. ಶ್ರೀ ಭಗತ್ ಸಿಂಗ್‌ರವರನ್ನು ಗಲ್ಲಿಗೇರಿಸುವಾಗ ಅವರ ತಾಯಿ ಬಂದು ದುಃಖಪಟ್ಟಾಗ ಅವರು ಏನು ಹೇಳುತ್ತಾರೆಂದರೆ, 'You should be proud of me'. ಎಷ್ಟು ಮಕ್ಕಳಿಗೆ ಇಂತಹ ಅವಕಾಶ ಸಿಗುತ್ತದೆ. 'Inquilab *Zindabad*'ಎಂದು ಹೇಳುತ್ತಾರೆ. 'Inquilab *Zindabad*'ಎಂದು ಹೇಳಲು ಅವರಿಗೆ ಹೆಸರು ಕೊಟ್ಟವರು ಯಾರು? ಅವರು ಕೂಡ ನಮ್ಮ ಸಮಾಜಕ್ಕೆ ಸೇರಿರತಕ್ಕಂಥ ಒಬ್ಬ ವ್ಯಕ್ತಿ. ನಮಗೆ ಇವತ್ತಿನ ದಿವಸ ನಿಜವಾಗಿಯೂ ದುಃಖವಾಗುತ್ತದೆ. ನಾನು Aims and Objects ಬಗ್ಗೆ ಮಾತನಾಡುತ್ತಿದ್ದೆನು. ಅದು ಆಯಿತು, 'Constitute Assembly' ಯಲ್ಲಿ ಡಾ॥ಬಾಬಾ ಸಾಹೇಬ್ ಅಂಬೇಡ್ಕರ್ ರವರ ನೇತೃತ್ವದಲ್ಲಿ ಮೂರು ಸಮಿತಿಗಳು ರಚನೆಯಾದವು. ಅದರಲ್ಲಿ ಒಂದು ಸಮಿತಿಯಲ್ಲಿ ಮಾನ್ಯ ಜೆ.ಬಿ.ಕೃಪಲಾನಿಯವರು ಅಧ್ಯಕ್ಷರಾಗಿರುತ್ತಾರೆ. ಇನ್ನೊಂದು ಸಮಿತಿಗೆ ಡಾ॥ರಾಜೇಂದ್ರ ಪ್ರಸಾದ್‌ರವರು ಅಧ್ಯಕ್ಷರಾಗಿರುತ್ತಾರೆ. ಮತ್ತೊಂದು ಸಮಿತಿಯಲ್ಲಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಅಧ್ಯಕ್ಷರಾಗಿರುತ್ತಾರೆ. ನಂತರ ಸಾಕಷ್ಟು ಚರ್ಚೆಯಾದ ಮೇಲೆ, ಇದನ್ನು 'Constitute Assembly' ಯಲ್ಲಿ ಮಂಡನೆ ಮಾಡುವಂತಹ ಸಂದರ್ಭದಲ್ಲಿ ಒಂದು ವಿಷಯ ಚರ್ಚೆಗೆ ಬರುತ್ತದೆ. ಅದೇನೆಂದರೆ, ನಾವು ಇವತ್ತಿನ ದಿವಸ 'Constitute Assembly' ಯಲ್ಲಿದ್ದೇವೆ. ಆ 'Constitute Assembly' ಯಲ್ಲಿ ಸುಮಾರು 196 ಜನ ಸದಸ್ಯರು ಇರುತ್ತಾರೆ. ಅದರಲ್ಲಿ ಎಲ್ಲಾ ರಾಜ್ಯಗಳ ಸುಮಾರು 92–96 ಜನ ಸದಸ್ಯರು ಇರುತ್ತಾರೆ. ಮತ್ತೆ 92–93 ಜನ ಸದಸ್ಯರು they are from the Princely States ನಿಂದ ಇರುತ್ತಾರೆ. ಕೂರ್ಗ್‌ನಿಂದ ಒಬ್ಬ ಸದಸ್ಯರು ಇರುತ್ತಾರೆ. ಬಲೂಚಿಸ್ತಾನದಿಂದಲೂ ಕೂಡ ಒಬ್ಬ ಸದಸ್ಯರು ಇರುತ್ತಾರೆ. ಆ ಸಮಿತಿಯಲ್ಲಿ ಒಂದು ಚರ್ಚೆ ಮಾಡುವಾಗ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರು ಹೇಳುತ್ತಾರೆ, ಇವತ್ತಿನ ದಿವಸ ನಮ್ಮಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳಿಲ್ಲ. ನಾವು 'Constitute Assembly' ಯಲ್ಲಿ ಚುನಾವಣೆ ಮುಖಾಂತರ ಆರಿಸಿ ಬಂದಿರುವುದಿಲ್ಲ. ನಾವು ಇಲ್ಲಿಗೆ ನಾಮನಿರ್ದೇಶಿತರಾಗಿ ಬಂದಿದ್ದೇವೆ. ಮುಂದೆ ಬರುವಂತಹ ದಿನಗಳಲ್ಲಿ, ಈ ದೇಶದಲ್ಲಿ ಪಕ್ಷಗಳ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಧಾರದ ಮೇಲೆ ಚುನಾವಣೆಗಳು ಆಗಬಹುದು.

**(ಮುಂದು...)**

(429) 16.03.2020 01.50 LL-MD(VK)
**ಶ್ರೀ ನಸೀರ್ ಅಹ್ಮದ್:–** ಮುಂದುವರೆದಿದ್ದು

party basis ನಲ್ಲಿ ನಾವು ಗೆದ್ದು ಬರಬಹುದು. ಆ ಒಂದು ಪಾರ್ಟಿಗೆ ಅಧಿಕಾರ ಸಿಗುತ್ತದೆ. ಆ ಸಂದರ್ಭದಲ್ಲಿ ಈ ಸಂವಿಧಾನವನ್ನು ಬದಲಾಯಿಸುವುದಕ್ಕೆ ಅವಕಾಶವಿದೆಯೇ ಎಂಬ ಪ್ರಶ್ನೆ ಬಂದಾಗ, ಮೂಲಭೂತ ಪ್ರಸ್ತಾವನೆಯಲ್ಲಿರತಕ್ಕಂಥದ್ದನ್ನು ಬಿಟ್ಟು, ಉಳಿದ ಎಲ್ಲವನ್ನು ತಿದ್ದುಪಡಿ ಮಾಡಬಹುದು. ಪ್ರಸ್ತಾವನೆಯಲ್ಲಿರುವುದನ್ನು ತಿದ್ದುಪಡಿ ಮಾಡುವುದಕ್ಕೆ ಬರುವುದಿಲ್ಲ ಎಂಬ ಅಭಿಪ್ರಾಯಪಡುತ್ತಾರೆ. ಪ್ರಸ್ತಾವನೆಯಲ್ಲಿರುವುದು ಇವೊತ್ತಿನ ದಿವಸ ಎಲ್ಲರಿಗೂ ಗೊತ್ತಿರುತ್ತದೆ. ‘Sovereign Republic’ ಎಂದು 1947ನಲ್ಲಿ ಇತ್ತು. ಪುನಃ ಈ ವಿಷಯ ಚರ್ಚೆಗೆ ಬಂದಾಗ, ‘Democratic Republic’ ಎಂದು ತಿದ್ದುಪಡಿ ಮಾಡಿದರು. ‘Democratic Republic’ 1947ನಲ್ಲಿಯೇ ಆಯಿತು. ಪುನಃ 1976ನಲ್ಲಿ ‘Socialist and Secular’ ಎಂದು ಬಂತು. ಅದರ ಜೊತೆಗೆ, ನಾವು fraternity, justice, liberty, equality ಆಗಿರಬಹುದು, ಅದೆಲ್ಲವೂ ಪ್ರಸ್ತಾವನೆಯಲ್ಲಿ ಇದೆ. ಈ ಪ್ರಸ್ತಾವನೆಯನ್ನು ಬದಲಾಯಿಸುವುದಕ್ಕೆ ಅವಕಾಶವಿರುವುದಿಲ್ಲ. ಇದಕ್ಕಾಗಿ, ಇವೊತ್ತಿನ ದಿವಸ ಇಡೀ ರಾಷ್ಟ್ರದಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ.

ಶ್ರೀ ರವೀಂದ್ರನಾಥ್ ಠಾಗೂರ್‌ರವರು 1911 ನಲ್ಲಿ “ಜನಗಣ ಮನ ಅಧಿನಾಯಕ ಜಯ ಹೇ” ಎಂದು ರಾಷ್ಟ್ರಗೀತೆಯನ್ನು ಬರೆದಿರುತ್ತಾರೆ. ಅಂದರೆ, ಅವರು “ಈ ರಾಷ್ಟ್ರದಲ್ಲಿರತಕ್ಕಂತ ಜನಗಳೇ ಎಲ್ಲರಿಗಿಂತಲೂ ಮೇಲೆ” ಎಂದು ಬರೆದಿರುತ್ತಾರೆ. ಅದರಂತೆ, ಜನಾಭಿಪ್ರಾಯ ಪಡೆಯಬೇಕಲ್ಲವೇ? ಇವೊತ್ತಿನ ದಿವಸ ನಮ್ಮ ದೇಶದ ಪ್ರಧಾನ ಮಂತ್ರಿಯಾಗಿರಬಹುದು, ರಾಷ್ಟ್ರಪತಿಯಾಗಿರಬಹುದು ಅಥವಾ ಕೊನೆಯಲ್ಲಿರತಕ್ಕಂತಹ ಒಬ್ಬ ವ್ಯಕ್ತಿ ಆಗಿರಬಹುದು. ಇವರೆಲ್ಲರಿಗೂ ಒಂದೇ ಮತ ಚಲಾಯಿಸುವ ಹಕ್ಕು ಇರುತ್ತದೆ. ಅವರಿಗೆ 10 ಮತ ಇರುವುದಿಲ್ಲ ಅಥವಾ ನಮಗೆ 1 ಮತ ಎಂದು ಇರುವುದಿಲ್ಲ. ಅದರ ಅರ್ಥ ಏನೆಂದರೆ, ‘everybody has a say’, it is our system which created it. You may be representing the people. ವಿಧಾನ ಪರಿಷತ್ತಿನಲ್ಲಿ 75 ಜನ ಶಾಸಕರಿರಬಹುದು, ವಿಧಾನಸಭೆಯಲ್ಲಿ 225 ಶಾಸಕರು ಇರಬಹುದು, ಲೋಕಸಭೆಯಲ್ಲಿ 524 ಸಂಸದರು ಇರಬಹುದು ಅಥವಾ ರಾಜ್ಯಸಭೆಯಲ್ಲಿ 270 ಜನ ಸಂಸದರು ಇರಬಹುದು. But it is the creation of the Constitution and you all represent the people of this country. ‘People of

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

this country', ಎಂದು ಹೇಳಿದರೆ ಒಂದು ಸಮಾಜಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. 'Constitution' also say 'we the people'. ಅಂದರೆ, ಈ ರಾಷ್ಟ್ರದಲ್ಲಿರತಕ್ಕಂತಹ ಎಲ್ಲಾ ಜನರು ಒಂದೇ. how could you forget the biggest majority of this country. 'Minorities' ಎಂದು ಮಾತನಾಡುತ್ತೇವೆ. Dissect ಮಾಡಿದಾಗ we are the biggest majority among minorities. This is question before us today. ಈಗಾಗಲೇ ಮಾನ್ಯ ಸದಸ್ಯರಾದ ಡಾ॥ ಜಯಮಾಲರವರು ಶ್ರೀಮತಿ ಲತಾ ಮಂಗೇಶ್ವರ್‌ರವರ ಹಾಡಿನ ಬಗ್ಗೆ ಹೇಳಿದರು. ಶ್ರೀಮತಿ ಲತಾ ಮಂಗೇಶ್ವರ್‌ರವರು ಏತಕ್ಕಾಗಿ ಆ ಹಾಡನ್ನು ಹೇಳಿರುತ್ತಾರೆ... ಈ ದೇಶಕ್ಕೆ ಹೋರಾಟ ಮಾಡಿರುವಂಥದ್ದು; ಈ ದೇಶಕ್ಕಾಗಿ ತ್ಯಾಗವನ್ನು ಮಾಡಿರುವಂಥದ್ದರಲ್ಲಿ ಕೇವಲ ಒಂದು ಸಮಾಜದವರಿಲ್ಲ. ಅದರಲ್ಲಿ ಎಲ್ಲರೂ ಭಾಗವಹಿಸಿದ್ದಾರೆ. ಇವೊತ್ತಿನ ದಿವಸ ನಾವು mandate ಬರತಕ್ಕಂತಹ ದಿನಗಳಲ್ಲಿ ಸಂವಿಧಾನ ಬಂತು. ಮೊನ್ನೆಯ ದಿವಸ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಈ ಸದನದಲ್ಲಿ ಮಾತನಾಡುತ್ತಾ, "ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು" ಹೇಳಿದರು. ಹೌದು, ನಿಜ. ಆತ್ಮಾವಲೋಕನವನ್ನು ಪಕ್ಷಾತೀತವಾಗಿ ಪ್ರತಿಯೊಬ್ಬರು ಮಾಡಿಕೊಳ್ಳಬೇಕು. ನಾನು ಕೇವಲ ಒಂದು ಪಕ್ಷದ ಬಗ್ಗೆ ಮಾತನಾಡುತ್ತಿಲ್ಲ. ಆದರೆ, ಇವೊತ್ತಿನ ದಿವಸ ಏನು ಮಾಡುತ್ತಿದ್ದೇವೆ. Mandate of the people ನ್ನು ನಾವು ಯಾವ ರೀತಿ ಉಪಯೋಗ ಮಾಡುತ್ತಿದ್ದೇವೆ. How are we luring them, how are we corrupting them, ಯಾವ ಮಟ್ಟಕ್ಕೆ ಹೊರಟು ಹೋಗಿದ್ದೇವೆ. ಈ ಬಗ್ಗೆ ಮೊನ್ನೆಯ ದಿವಸ ಇದೇ ಸದನದಲ್ಲಿ ಚರ್ಚೆಯಾಯಿತು. ನನ್ನ ಸ್ನೇಹಿತರಾದ ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ, "ಶಿಕ್ಷಕರ ಕ್ಷೇತ್ರದಲ್ಲಿ ಚುನಾವಣೆ ಆಗಬೇಕಾದರೆ, ಒಬ್ಬ ವ್ಯಕ್ತಿ 3 ಪಕ್ಷಗಳಲ್ಲಿ ಹೋಗಿ, ಒಬ್ಬರ ಹತ್ತಿರ 10 ಸಾವಿರ, ಇನ್ನೊಬ್ಬರ ಹತ್ತಿರ 15 ಸಾವಿರ ಮತ್ತೊಬ್ಬರ ಹತ್ತಿರ 20 ಸಾವಿರ ರೂಪಾಯಿ ಹಣ ಪಡೆದು ಓಟು ಮಾಡಿದ" ಎಂದು ಹೇಳಿದರು. This is the stage we have reached. ಕಾರಣ ಏನು ಅಂದರೆ, ನಾವು ಮಾಡಿರುವಂತಹ compromises. ನಮ್ಮ ಒಂದೇ ಗುರಿ, we should be in power, ನಾವು ಯೋಚನೆ ಮಾಡುವುದಿಲ್ಲ, ನಮ್ಮ ವಯಸ್ಸು ಏನಾಗಿದೆ; ನಾವು ಇನ್ನೂ ಎಷ್ಟು ವರ್ಷಗಳ ಕಾಲ ಬದುಕಬಹುದು; ಮುಂದೆ ಬರುವಂತಹ ಪೀಳಿಗೆಗೆ ನಾವು ಏನನ್ನೂ ಬಿಟ್ಟು ಹೋಗುತ್ತಿದ್ದೇವೆ ಎಂಬ ಬಗ್ಗೆ ಯೋಚನೆ ಮಾಡುವುದಿಲ್ಲ. ಬದಲಾಗಿ, ನಾವು ಏನಾದರೂ ಮಾಡಿ ಯಾವಾಗಲೂ ಪವರ್‌ನಲ್ಲಿ ಇರಬೇಕೆಂದು ಯೋಚನೆ ಮಾಡುತ್ತೇವೆ. ಅದೇ ರೀತಿ ಇವೊತ್ತಿನ ದಿವಸ our former Prime Minister Sri Atal Bihari Vajpeyee is the great statemen this country has produced. ಅವರು *Deshraj Choudhary memorial lecture* ನಲ್ಲಿ ಒಂದು ಪ್ರೋಗ್ರಾಮ್ ಇರುತ್ತದೆ. ಆ ಪ್ರೋಗ್ರಾಮ್‌ನಲ್ಲಿ ಅವರು ಒಂದು ಭಾಷಣ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡುತ್ತಾ, *"The natural inclination of today, MP's, MLA's, MLC's to get involved, included into the executive function that without accountability and much capacity, the exceedingly high premium paid on capturing the power by fair or foul means is the due fact of power. Power is a passport to personal prosperity."* ಎಂದು ಹೇಳಿದರು. ಎಷ್ಟು ಜನರು ಇವೊತ್ತಿನ ದಿವಸ ಈ ರೀತಿಯಾಗಿರುವುದನ್ನು ನೋಡಿದ್ದೇವೆ. ಸುಮಾರು 1975–77 ನಿಂದ ನಾನು ಮತ್ತು ಶ್ರೀ ಹೆಚ್.ಎಂ. ರೇವಣ್ಣನವರು students' leadership ನಲ್ಲಿ ಹೋರಾಟ ಮಾಡಿ ಬಂದಿರುವಂತಹವರು. ಆಗಿನ ಕಾಲವನ್ನು ನಾವು ನೋಡಿದ್ದೇವೆ. ಶ್ರೀ ಡಿ.ದೇವರಾಜು ಅರಸು, ಶ್ರೀ ವೀರೇಂದ್ರ ಪಾಟೀಲ್ ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರ ಕಾಲವನ್ನು ಸಹ ನಾವು ನೋಡಿದ್ದೇವೆ. ಶ್ರೀ ರಾಮಕೃಷ್ಣ ಹೆಗಡೆಯವರು ಕೇವಲ 2 ವರ್ಷಕ್ಕೆ ಮೌಲ್ಯಧಾರಿತ ರಾಜಕಾರಣ ಮಾಡಬೇಕೆಂದು ವಿಧಾನಸಭೆಯನ್ನು ವಿಸರ್ಜನೆ ಮಾಡುತ್ತಾರೆ. ಪುನಃ ಚುನಾವಣೆಗೆ ಹೋಗಬೇಕು, ಈ ರಾಜ್ಯದ ಜನ ನಮಗೆ mandate ಕೊಟ್ಟಿರುವುದಿಲ್ಲ, I don't have a right to continue ಎಂದು ಪುನಃ ಚುನಾವಣೆಗೆ ಮಾಡುವುದಕ್ಕೆ ಹೋಗುತ್ತಾರೆ. ಚುನಾವಣೆಯಲ್ಲಿ ಗೆದ್ದು ಮತ್ತೆ ಅಧಿಕಾರಕ್ಕೆ ಬರುತ್ತಾರೆ. ಇದೆಲ್ಲಾ ನಡೆದು ಬಹಳ ವರ್ಷಗಳು ಆಗಿರುವುದಿಲ್ಲ. It was in 1985. 1983 ರಲ್ಲಿ ಅವರು ಮುಖ್ಯಮಂತ್ರಿಯಾದರು, ಇವೊತ್ತಿನ ದಿವಸ ನಾವು ಯಾವ ಸ್ಥಿತಿಯಲ್ಲಿದ್ದೇವೆ? 4–5 ಇತಿಹಾಸಗಳಿದ್ದರೆ ಯಾವ ರೀತಿ power capture ಮಾಡಬೇಕು. ಅದು ಸಂವಿಧಾನದಲ್ಲಿ ಇದೆಯೇ ಅಥವಾ ಇಲ್ಲವೋ, ಅದರ ಬಗ್ಗೆ ಚರ್ಚೆ ಮಾಡುವುದಿಲ್ಲ. ಎಲ್ಲಾ ರೀತಿಯಲ್ಲಿಯೂ compromise ಮಾಡಿಕೊಳ್ಳೋಣ. ಅಧಿಕಾರ ನಮ್ಮ ಕೈಯಲ್ಲಿ ಇರಬೇಕೆಂದು, I am not talking about any particular Political Party. Whoever gets an opportunity will do that. So, we have reduced... ಇವೊತ್ತಿನ ದಿವಸ ಸಂವಿಧಾನ ಯಾವಾಗ ಬರುತ್ತದೆ, ಯಾವ ರೀತಿ rule pass ಮಾಡಬೇಕು, ಆ rule ಗೆ support ಮಾಡುವುದಾದರೆ ಸಂವಿಧಾನ, ಆ rule ಗೆ support ಮಾಡುವುದಿಲ್ಲವಾದರೆ, ಆ ಸಂವಿಧಾನವನ್ನು ಗಾಳಿಯಲ್ಲಿ ತೂರಿ ಮಾಡಬೇಕಾಗಿರುವಂತಹ ಕೆಲಸವನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ಈ ಒಂದು ಸ್ಥಿತಿಗೆ ನಾವು ಇವೊತ್ತಿನ ದಿವಸ ತಲುಪಿದ್ದೇವೆ. 10th Schedule – Representation of Peoples Act. 10 ಷೆಡ್ಯೂಲ್ ನಲ್ಲಿ ಏನಿದೆ ಅದನ್ನು ನಾವು ಇವೊತ್ತಿನ ದಿವಸ ಪಾಲನೆ ಮಾಡುತ್ತಿದ್ದೇವೆಯೇ? ಬಹಳಷ್ಟು ಜನ ಮಾನ್ಯ ಸದಸ್ಯರುಗಳು ಮೊನ್ನೆಯ ದಿವಸ ಈ ಸದನದಲ್ಲಿ ಚುನಾವಣೆ ಬಗ್ಗೆ, Representation of Peoples Act ಬಗ್ಗೆ, ಬದಲಾವಣೆ ತರಬೇಕು, ತಿದ್ದುಪಡಿ ಆಗಬೇಕೆಂದು ಮಾತನಾಡಿದರು. ಅದೇ ರೀತಿ 10 ಷೆಡ್ಯೂಲ್ ಬರಬೇಕು. ಅದರಲ್ಲಿಯೂ ಸಹ ತಿದ್ದುಪಡಿಗಳು ಆಗಬೇಕು. ಈ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವಕಾಶಗಳೆಲ್ಲವೂ ನಾವು ಕೇವಲ ಮಾತನಾಡಿದರೆ ನಡೆಯುವುದಿಲ್ಲ. ದಯವಿಟ್ಟು, ಮಾನ್ಯ ಸಭಾಪತಿಯವರಾದ ತಾವು ಹಾಗೂ ವಿಧಾನಸಭೆಯ ಅಧ್ಯಕ್ಷರು ಇದರ ಬಗ್ಗೆ ಒಂದು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

(ಮುಂದುವರೆದಿದೆ...)

(430)16.03.2020/2.00/ವೈಎಲ್–ಎಕೆ
**ಶ್ರೀ ನಸೀರ್ ಅಹ್ಮದ್(ಮುಂದು):–**

ಸಂವಿಧಾನದಲ್ಲಿ ಏನೇನು ಬದಲಾವಣೆಯಾಗಬೇಕು, ಏನೇನು ತಿದ್ದುಪಡಿ ಮಾಡಬೇಕೆನ್ನುವುದರ ಬಗ್ಗೆ ಸದನದಲ್ಲಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂದರೆ, ಒಂದು ಸಮಿತಿಯನ್ನು ರಚನೆ ಮಾಡಿ. ಆ ಸಮಿತಿಯಲ್ಲಿ ಚರ್ಚೆ ಮಾಡಿ ಯಾವ ರೀತಿ ಮಾಡಬಹುದೆಂಬುದನ್ನು let us represent to the Election Commission of India and to the Government.

**ಶ್ರೀ ಅರಬೈಲು ಶಿವರಾಮ್ ಹೆಬ್ಬಾರ (ಕಾರ್ಮಿಕ ಮತ್ತು ಸಕ್ಕರೆ ಸಚಿವರು):–** ಮಾನ್ಯ ಸಭಾಪತಿಯವರೇ, 10ನೇ ಷೆಡ್ಯೂಲ್ ಬಗ್ಗೆ ಸಾಕಷ್ಟು ದೊಡ್ಡ ಚರ್ಚೆ ಹಾಗೂ ಇದರ ಬಗ್ಗೆ ನಡೆದಂತಹ ಅಪಚಾರಗಳ ಕಾರಣಕ್ಕಾಗಿ, ಈಗಾಗಲೇ ಲೋಕಸಭೆಯ ಅಧ್ಯಕ್ಷರು, ಕರ್ನಾಟಕದ ವಿಧಾನಸಭಾ ಸಭಾಧ್ಯಕ್ಷರು ಒಳಗೊಂಡಂತೆ ಇಡೀ ದೇಶದ ಏಳು ಮಂದಿ ಸೇರಿಕೊಂಡು ಸಮಗ್ರವಾದ ತಿದ್ದುಪಡಿ ತರುವುದಕ್ಕೆ ಆದೇಶ ನೀಡಿ, 2–3 ಸಭೆಗಳು ಸಹ ನಡೆದಿದೆ. ತಪ್ಪಾಗಿದ್ದು, ಇದರಲ್ಲಿ ಬದಲಾವಣೆ ಮಾಡಬೇಕೆನ್ನುವುದು ಲೋಕಸಭೆಗೂ ಗೊತ್ತಾಗಿದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಆಗಲಿ. ಆದರೆ, ನಾವು ಬದಲಾವಣೆಗೆ ಇಲ್ಲಿಂದ ಪ್ರಸ್ತಾವನೆ ಕಳುಹಿಸಬಾರದು ಎನ್ನುವಂಥದ್ದು ಏನಿಲ್ಲವಲ್ಲಾ. ಹಿಂದೆ ಸಹ ಇದೇ ರೀತಿ ನಡೆದಿದೆ ಅಲ್ಲವೇ? ಮಾನ್ಯ ಸಚಿವರು ಅದರ ಫಲಾನುಭವಿಗಳಿರುವುದರಿಂದ ಬಹಳ ಸ್ಪಷ್ಟವಾಗಿ ಹೇಳುತ್ತಿದ್ದಾರೆ.

**ಶ್ರೀ ಅರಬೈಲು ಶಿವರಾಮ್ ಹೆಬ್ಬಾರ:–** ಮಾನ್ಯ ಸಭಾಪತಿಯವರೇ, ಫಲಾನುಭವಿಗಳು ಎನ್ನುವ ಕಾರಣದಿಂದ ಹೇಳುತ್ತಿಲ್ಲ. ಫಲಾನುಭವಿಗಳಿಗೆ ಮಾಡಿರತಕ್ಕಂಥ ಅನ್ಯಾಯದ ಬಗ್ಗೆ ಚರ್ಚೆ ಆಗಿದೆ ಎಂದು ಹೇಳುತ್ತಿದ್ದೇನೆ. ಆ ಕಾರಣಕ್ಕಾಗಿಯೇ ಇದರ ಬಗ್ಗೆ ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿದೆ. ಸಂವಿಧಾನದ ಬಗ್ಗೆ ಈ ಸದನದಲ್ಲಿ 7 ಗಂಟೆಗಳ ಕಾಲ ಸವಿಸ್ತಾರವಾಗಿ ಚರ್ಚೆ ನಡೆದಿದ್ದು, ಸುಮಾರು 2½ ತಾಸುಗಳ ಕಾಲ ವಿಧಾನಸಭೆಯಲ್ಲಿ ಚರ್ಚೆಯಾಗಿದೆ. ಇನ್ನು ಹೆಚ್ಚು ಚರ್ಚೆ ಆಗಬೇಕೆಂದರೆ ಅದಕ್ಕೂ ನಾವು ಸಿದ್ಧರಿದ್ದೇವೆ, ಅದಕ್ಕೇನು ತೊಂದರೆ ಇಲ್ಲ. ಯಾವ ರೀತಿ ಫಲಾನುಭವಿಗಳಾಗಿದ್ದೇವೆ, ಯಾರು ಫಲಾನುಭವಿಗಳಾಗಿ ಮಾಡಿದ್ದು, ಅದರ ರಾಜಕಾರಣದ ಹಿನ್ನೆಲೆ ಏನಿತ್ತು, ಆ ಕಾಲಕ್ಕೆ ಸಭಾಧ್ಯಕ್ಷರು ಏನೆಲ್ಲಾ ಶಬ್ಧಗಳನ್ನು ಪ್ರಯೋಗ ಮಾಡಿದ್ದರು ಎಂಬುದನ್ನೆಲ್ಲಾ ಎಳೆ, ಎಳೆಯಾಗಿ ಬಿಡಿಸಿ ಹೇಳಿದ್ದೇವೆ. ತಾವೂ ಇನ್ನೂ ಹೆಚ್ಚಿನ ಸಮಯವನ್ನು ಈ ಸದನದಲ್ಲಿ ಚರ್ಚಿಸಲು ನಿಗದಿಪಡಿಸಿದರೆ ನಾವು ಸಹ ಚರ್ಚೆಗೆ ಸಿದ್ಧರಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅಷ್ಟೇ ಅಲ್ಲ, 10ನೇ ಷೆಡ್ಯೂಲ್‌ನಲ್ಲಿ ಏನಿತ್ತು ಎಂಬುದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಒಂದು ಮಾತು ಹೇಳುತ್ತಾರೆ, 'ಇವರು ಚಾಪೆ ಅಡಿ ನುಗ್ಗಿದರೆ, ಅವರು ರಂಗೋಲಿ ಕೆಳಗೆ ನುಗ್ಗುತ್ತಾರೆ' ಎನ್ನುವ ಹಾಗೆ ಆಯಿತು.

**ಸಭಾಪತಿಯವರು:–** ಮಾನ್ಯ ಹೆಚ್.ಡಿ.ರೇವಣ್ಣನವರೇ, ಸಾಕು ಕುಳಿತುಕೊಳ್ಳಿ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಪ್ರತಿಯೊಬ್ಬರಿಗೂ ಮನಸ್ಸಾಕ್ಷಿ ಎನ್ನುವುದು ಇರುತ್ತದೆ. Everybody has a conscious. ನಾವು ರಾತ್ರಿ ಮಲಗುವ ಮುನ್ನಾ 5 ಅಥವಾ 10 ನಿಮಿಷ ನಾವು ಇವತ್ತು ಏನು ಕೆಲಸ ಮಾಡಿದ್ದೇವೆ, ಸಂವಿಧಾನವನ್ನು ಗೌರವಿಸಿದ್ದೇವೆಯೇ? ಇವತ್ತಿನ ದಿವಸ ಸಹ ಮಾಡಿರತಕ್ಕಂಥ ಆದೇಶದಿಂದ ಸಮಾಜಕ್ಕೆ ಒಳ್ಳೆಯದಾಗುತ್ತದೆಯೇ, ಇವತ್ತು ತೆಗೆದುಕೊಂಡಿರುವ ತೀರ್ಮಾನದಿಂದ ಈ ಸಮಾಜಕ್ಕೆ ಒಳ್ಳೆಯದಾಗುತ್ತದೆಯೇ? ಎಂಬುದರ ಬಗ್ಗೆ ಆತ್ಮಾವಲೋಕನ ಮಾಡಿದರೆ, ನಾವು ಮಾಡಿರುವುದು ಸರಿಯೇ, ತಪ್ಪೇ ಎನ್ನುವುದು ಪ್ರತಿಯೊಬ್ಬರಿಗೂ ಅವರವರಿಗೆ ಗೊತ್ತಾಗುತ್ತದೆ. ಹಾಗಾಗಿ ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. Muslim league...

*(Interruptions)*

**ಸಭಾಪತಿಯವರು:–** ಮಾನ್ಯ ಸದಸ್ಯರೇ ತಾವು ಈ ವಿಷಯದ ಮೇಲೆ ನಂತರ ತಮಗೆ ಅವಕಾಶ ಸಿಕ್ಕಾಗ ಮಾತನಾಡಬಹುದಲ್ಲವೇ?

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, I am on my legs. ನಾನು yield ಆಗಿಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಆತ್ಮಾವಲೋಕನ ಮಾಡಿಕೊಳ್ಳಬೇಕು, ಆತ್ಮಸಾಕ್ಷಿ ಇದೆ...

**ಸಭಾಪತಿಯವರು:–** ಸಂವಿಧಾನದ ಬಗ್ಗೆ ಮಾತನಾಡುತ್ತೀರಿ ಅಲ್ಲವೇ? ಆಗ ಮಾತನಾಡಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದರೆ ಒಂದು ಪ್ರಶ್ನೆ ಕೇಳುತ್ತೇನೆ. ತಾವೂ ಅವಕಾಶ ನೀಡಲಿಲ್ಲವೆಂದರೆ, ಸಭೆ ನೀರಸವಾಗುತ್ತದೆ.

**ಸಭಾಪತಿಯವರು:–** ಈಗ ಆಗುವುದಿಲ್ಲ. ನಿಮಗೆ ಅವಕಾಶ ಕೊಟ್ಟಾಗ ನೀವು ಮಾತನಾಡಬೇಕೆಂದಿರುವುದನ್ನು ರೆಫರ್ ಮಾಡಿಕೊಳ್ಳಿ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಮಾಜಿ ಪ್ರಧಾನ ಮಂತ್ರಿಗಳಾದ ಅಟಲ್ ಬಿಹಾರಿ ವಾಜಪೇಯಿಯವರು,...

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಅವರ against ಇಲ್ಲ. ಮಾನ್ಯ ಸದಸ್ಯರ ಪರವಾಗಿ ಒಂದೇ ಒಂದು ಮಾತನ್ನು ಹೇಳುತ್ತೇನೆ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಇನ್ನೊಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ,

> *"...corruption in the governing structures has, therefore, corroded the very core of elective democracy." "...the electoral system has been almost totally subverted by money power, muscle power, and vote bank considerations of castes and communities."*

ಇವತ್ತು ಅದು ನಿಜವಾಗಿಯು ಆಗುತ್ತಿಲ್ಲವೇ? ಇದನ್ನು ಬದಲಾಯಿಸುವವರ್ಯಾರು? ಇದರಲ್ಲಿ ಬದಲಾವಣೆ ತರುವವರ್ಯಾರು? ನಾವೆಲ್ಲರೂ ಸೇರಿ ತಾನೇ ಮಾಡಬೇಕು. ಅದಾಗಿಯೇ ಬದಲಾವಣೆ ಆಗುವುದಿಲ್ಲವಲ್ಲವೇ? ಇದರ ಬಗ್ಗೆ ನಾವ್ಯಾರಾದರೂ ಚಿಂತನೆ ಮಾಡುತ್ತಿದ್ದೇವೆಯೇ? ಇವತ್ತಿನ ದಿವಸ ಗ್ರಾಮ ಪಂಚಾಯಿತಿ ಚುನಾವಣೆಯು ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ನಾನು ಹೇಳುವ ಅವಶ್ಯಕತೆ ಇಲ್ಲ; ತಮಗೆಲ್ಲಾ ಗೊತ್ತಿದೆ, ಮಾನ್ಯ ಸಿ.ಎಂ.ಲಿಂಗಪ್ಪನವರಿಗೂ ತಿಳಿದಿದೆ. Town Municipal Council election, Town Panchayat election ಗಳಲ್ಲಿ ಖರ್ಚು ಮಾಡಲು ಹಣ ಎಲ್ಲಿಂದ ಬಂತು? Where is the money? Demonetization ಆಯಿತು. ರೂ.14.00 ಲಕ್ಷ ಕೋಟಿ ರೂಪಾಯಿ ಚಲಾವಣೆಯಲ್ಲಿದೆ ಎಂಬುದಾಗಿ ಆರ್.ಬಿ.ಐ. ನಿಂದ ಸುತ್ತೋಲೆ ಹೊರಡಿಸಲಾಗಿತ್ತು. ಈಗ ಸುಮಾರು ರೂ.17.00 ಅಥವಾ ರೂ.18.00 ಲಕ್ಷ ಕೋಟಿ ರೂಪಾಯಿಗಳು ಚಲಾವಣೆಯಲ್ಲಿದೆ ಎಂದು ಸ್ಟೇಟ್‌ಮೆಂಟ್ ಬಂದಿದೆ. ಮತ್ತೇ ನೋಡಿದರೆ ರೂ.2,000 ಮೌಲ್ಯದ ನೋಟ್ ಎ.ಟಿ.ಎಂ. ನಲ್ಲಿ ಇಲ್ಲ. ಹಾಗಾದರೆ, ಆ ಹಣ ಎಲ್ಲಿ ಹೋಗಿದೆ ಎಂಬುದರ ಬಗ್ಗೆ ಚರ್ಚೆಯಾಗಬಾರದೆ? ನಾನು ಅದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ, ಕೇವಲ ರೆಫರ್ ಮಾಡುತ್ತಿದ್ದೇನೆ. ಹೆಚ್ಚಾಗಿ ಮಾತನಾಡಿಕೊಂಡು ಹೋದರೆ ಹೆಚ್ಚಿನ ವಿಷಯಗಳು ಹೊರಗೆ ಬರುತ್ತದೆ. ನಿಜವಾಗಿಯು ಹೇಳುವುದಾದರೆ, ಭಾರತದ ಸಂವಿಧಾನ ಶಿಲ್ಪಿಯಾದ ಡಾ|| ಬಿ.ಆರ್.ಅಂಬೇಡ್ಕರ್‌ರವರು,... ಮಾಜಿ ಪ್ರಧಾನ ಮಂತ್ರಿಗಳಾದ ಲಾಲ್ ಬಹದ್ದೂರ್ ಶಾಸ್ತ್ರಿಯವರ ಬಗ್ಗೆ ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛಿಸುವುದೇನೆಂದರೆ, 'ಅವರ ಸಂಬಂಧಿಕರಲ್ಲಿ ಒಬ್ಬರೂ ಅಸ್ವಸ್ಥರಾಗಿದ್ದ ಪ್ರಯುಕ್ತ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಬೇಕು, ನನ್ನ ಹತ್ತಿರ ಹಣವಿಲ್ಲ ದಯವಿಟ್ಟು ಅವಕಾಶ ಮಾಡಿಕೊಡಿ' ಎಂದು ಕೇಳುತ್ತಾರೆ. ಆಗ ಮಾಜಿ ಪ್ರಧಾನ ಮಂತ್ರಿಗಳಾದ ಲಾಲ್ ಬಹದ್ದೂರ್ ಶಾಸ್ತ್ರಿಯವರು 'ನನ್ನ ಹತ್ತಿರ ಹಣವಿಲ್ಲ ಎಂದು ಹೇಳುತ್ತಾರೆ.' ಅದನ್ನು ಕೇಳಿಸಿಕೊಂಡ ಅವರ ಪತ್ನಿ ತಕ್ಷಣ 500 ರೂಪಾಯಿಗಳನ್ನು ಕೊಟ್ಟು ಚಿಕಿತ್ಸೆ ಪಡೆದುಕೊಂಡು ಬನ್ನಿ ಎಂದು ಹೇಳುತ್ತಾರೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸದಸ್ಯರೇ ಒಂದು ನಿಮಿಷ. ಅದು ಚಿಕಿತ್ಸೆಗಾಗಿ ನೀಡಿದ ಹಣವಲ್ಲ. ಮಾಜಿ ಪ್ರಧಾನ ಮಂತ್ರಿಗಳಾದ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜೊತೆ ಇದ್ದಂತಹ ಪಿ.ಎ. ಮಗಳ ಮದುವೆ ನಿಶ್ಚಯವಾಗಿರುತ್ತದೆ. ಹಾಗಾಗಿ ಮಗಳ ಮದುವೆಗೆ ಹಣವನ್ನು ಕೇಳುತ್ತಾರೆ. ಆಗ ಮಾಜಿ ಪ್ರಧಾನ ಮಂತ್ರಿಗಳಾದ ಲಾಲ್ ಬಹದ್ದೂರ್ ಶಾಸ್ತ್ರಿಯವರು 'ನನ್ನ ಹತ್ತಿರ ಹಣವಿಲ್ಲ' ಎಂದು ಹೇಳಿದಾಗ, 'ಅವರ ಪತ್ನಿಯು 500 ರೂಪಾಯಿಗಳನ್ನು ನೀಡುತ್ತಾರೆ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಹೌದೇ, ಸರ್. ಆಗ ಮಾಜಿ ಪ್ರಧಾನಮಂತ್ರಿಗಳಾದ ಲಾಲ್ ಬಹದ್ದೂರ್ ಶಾಸ್ತ್ರಿಯವರು 'ಆ ಹಣ ಎಲ್ಲಿಂದ ಬಂತು' ಎಂದು ಕೇಳುತ್ತಾರೆ. ಅದಕ್ಕೆ ಅವರ ಪತ್ನಿ 'ನಾನು ಎಂಟಾಣೆ, ನಾಲ್ಕಾಣೆ ಎಲ್ಲಾ ಸೇರಿಸಿ ಉಳಿಸಿರುವ ಹಣ' ಎಂದು ಹೇಳುತ್ತಾರೆ. ಆ ಮಾತನ್ನು ಕೇಳಿದ ಲಾಲ್ ಬಹದ್ದೂರ್ ಶಾಸ್ತ್ರಿಯವರು ಲೋಕಸಭೆಯ ಸಚಿವಾಲಯಕ್ಕೆ 'ನನ್ನ ಸಂಬಳದಲ್ಲಿ 500 ರೂಪಾಯಿ ಕಡಿಮೆ ಮಾಡಿ' ಎಂದು ಪತ್ರ ಬರೆಯುತ್ತಾರೆ. ಇವತ್ತಿನ ದಿವಸ ಇದರ ಬಗ್ಗೆ ಚರ್ಚೆ ಮಾಡುವವರು ಎಷ್ಟು ಜನರಿದ್ದೇವೆ? ಅದೇ ರೀತಿ ಭಾರತದ ಸಂವಿಧಾನ ಶಿಲ್ಪಿಯಾದ ಡಾ॥ ಬಿ.ಆರ್.ಅಂಬೇಡ್ಕರ್‌ರವರ 3ನೇ ಅಥವಾ 4ನೇ ಮಗನಾದ ರಾಜರತನ್ ಅಂಬೇಡ್ಕರ್ ಎಂಬುವವರಿಗೆ ತುಂಬಾ ಹುಷಾರಿರುವುದಿಲ್ಲ. ತಕ್ಷಣ ಅವರ ಪತ್ನಿಯು ಡಾ॥ ಬಿ.ಆರ್.ಅಂಬೇಡ್ಕರ್‌ರವರನ್ನು ಹುಡುಕುತ್ತಾರೆ. ಅವರು ನ್ಯಾಯಾಲಯಕ್ಕೆ ಹೋಗಿದ್ದಾರೆ ಎಂಬುದು ಅವರಿಗೆ ನಂತರ ಗೊತ್ತಾಗುತ್ತದೆ. ಆಗ ಅವರು ಕೂಡಲೇ ಬರಬೇಕೆಂದು ಯಾರ ಮುಖಾಂತರವೋ ಹೇಳಿ ಕಳುಹಿಸುತ್ತಾರೆ. ಆದರೆ, ಅವರು ಬಂದು ನೋಡುವಷ್ಟರಲ್ಲಿ ಅವರ ಮಗ ಸಾವನ್ನಪ್ಪಿರುತ್ತಾರೆ. ಆತನ ಅಂತ್ಯ ಸಂಸ್ಕಾರ ಮಾಡುವುದಕ್ಕೆ ಅವರು ತಮ್ಮ pocket ಹುಡುಕಿದರೂ ಅವರ ಹತ್ತಿರ ಹಣ ಸಿಗುವುದಿಲ್ಲ. ಆ ಕಾರ್ಯ ಮಾಡುವುದಕ್ಕೆ 2 ಮೀಟರ್ ಅಥವಾ 3 ಮೀಟರ್ ಬಿಳಿ ಬಟ್ಟೆಯ ಅವಶ್ಯಕತೆ ಅಷ್ಟೇ ಇದ್ದು, ಅದನ್ನು ಖರೀದಿಸುವುದಕ್ಕೂ ಅವರ ಹತ್ತಿರ ಹಣ ಇರುವುದಿಲ್ಲ. ಈ ರಾಷ್ಟ್ರಕ್ಕೆ ಸಂವಿಧಾನ ನೀಡಿರತಕ್ಕಂಥ ಸಂವಿಧಾನ ಶಿಲ್ಪಿಯ ಆರ್ಥಿಕ ಪರಿಸ್ಥಿತಿ ಇದು. ಕಡೆಗೆ ಅವರ ಪತ್ನಿಯ ಸೀರೆಯನ್ನು ತೆಗೆದುಕೊಂಡು, ಆ ಸೀರೆಯನ್ನು ಹರಿದು ಮಗನ ಕಾರ್ಯವನ್ನು ಮಾಡುತ್ತಾರೆ. ಇಂತಹ ವಿಚಾರವನ್ನು ಇತಿಹಾಸದಲ್ಲಿ ನೋಡಿದ್ದೇವೆ. ಇವತ್ತಿನ ದಿವಸ ಮೇಲ್ಮನೆ, ಕೆಳಮನೆಯಲ್ಲಿ ಸಂವಿಧಾನದ ಬಗ್ಗೆ ಚರ್ಚೆ ಮಾಡಿದ್ದೇವೆ. ಖಾಸಗಿ ಸದಸ್ಯರ ವಿಧೇಯಕವನ್ನು ಮೂವ್ ಮಾಡಬೇಕೆಂದು ತೀರ್ಮಾನ ಮಾಡುತ್ತೇವೆ. ಎಲ್ಲಿಯಾದರೂ ನಿಂತಿದೆಯೇ? So it is our own people who make the laws. ಎಂ.ಎಲ್.ಎ., ಎಂ.ಎಲ್.ಸಿ., ಎಂ.ಪಿ., ರಾಜ್ಯಸಭಾ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರಿಗೆಲ್ಲಾ 'Law Makers' ಎಂದು ಕರೆಯುತ್ತೇವೆ. 'Law Makers' ಇವತ್ತಿನ ದಿವಸ ಮದುವೆ ಮಾಡಬೇಕೆಂದರೆ, ಸುಮಾರು 60 ಎಕರೆ, 100 ಎಕರೆ, 50 ಎಕರೆ ಜಾಗ ಬೇಕಾಗಬಹುದು ಎಂದು ಯೋಚನೆ ಮಾಡುತ್ತೇವೆ. ಆಹ್ವಾನ ಪತ್ರಿಕೆಯನ್ನು ಎಷ್ಟು ಲಕ್ಷಾಂತರ ಜನರಿಗೆ ನೀಡಬೇಕು ಎಂದು ಯೋಚನೆ ಮಾಡುತ್ತೇವೆ. ಮೊನ್ನೆ ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಅವರ ಮಗಳ ಮದುವೆಯ ಜೊತೆಗೆ ಸುಮಾರು 31 ಜೋಡಿಗಳಿಗೆ ಮದುವೆ ಮಾಡಿಸಿದೆವು ಎಂದು ಹೇಳಿದರು. ಅವರ ಮಾತು ಕೇಳಿ ಬಹಳ ಸಂತೋಷವಾಯಿತು. ಅವರಿಗೆ ವಂದಿಸುತ್ತೇನೆ.

(ಮುಂದು)

(431)/16.03.2020/2.10/ಎಸ್‌ಕೆ–ಎಕೆ

**ಶ್ರೀ ನಸೀರ್ ಅಹ್ಮದ್ (ಮುಂದು):**

ನಿಜವಾಗಿಯೂ ನಾನು ಅವರಿಗೆ ವಂದಿಸುತ್ತೇನೆ. I salute him. We should think on those lines. We should really learn from him. ಇವತ್ತು ನಾವು ಕೂತಿರುವವರೆಲ್ಲರೂ ಒಂದು ತೀರ್ಮಾನಕ್ಕೆ ಬರಬೇಕು. ಇನ್ನು ಮುಂದೆ ಈ ರೀತಿ ಮಾಡುತ್ತೇವೆಂದು ನಾವೆಲ್ಲರೂ ಪ್ರತಿಜ್ಞೆಯನ್ನು ಮಾಡಬೇಕು. ಆಗ ಬದಲಾವಣೆಯಾಗುತ್ತದೆ. If you have a will, there is a way. ಅದೆಲ್ಲಾ ಸೇರಿ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಸಾಕಷ್ಟು ಚರ್ಚೆಯಾಗಿದೆ. ಈ ಚರ್ಚೆಯಾದ ನಂತರ ನಿಜವಾಗಲೂ ಒಂದೊಂದು ಕಡೆ ನೋಡಿದಾಗ ದುಃಖವಾಗುತ್ತದೆ. ನಮ್ಮಲ್ಲಿರುವ ಕಾನೂನು, ಸಂವಿಧಾನದಲ್ಲಿರುವಂತಹ provisions ನ್ನು ಯಾವ ರೀತಿಯಾಗಿ ಇವತ್ತಿನ ದಿವಸ ಉಪಯೋಗ ಮಾಡುತ್ತಿರುವಂಥದ್ದು. ಒಂದು protest ಮಾಡಬೇಕೆಂದರೆ, it's a fundamental right of the people. ಈಗ ನಾವು protest ಮಾಡಬೇಕಾದರೆ, is it not my fundamental right? ಅದಕ್ಕೆ ಪೊಲೀಸ್‌ನವರು ಹತ್ತು ಲಕ್ಷ ರೂಪಾಯಿಗಳ ಬಾಂಡ್ ಕೊಡಿ ಎಂದು ಕೇಳುತ್ತಾರೆ. ನಾವು ಎಲ್ಲಿಗೆ ಹೋಗಬೇಕು? ಪೊಲೀಸ್‌ನವರು ಯಾವ ನಿಯಮದಡಿಯಲ್ಲಿ ಕೇಳತ್ತಿರತಕ್ಕಂಥದ್ದು? Which is the rule that has empowered them to ask for ten lakh rupees bond? ಇದನ್ನು ಬದಲಾವಣೆ ಮಾಡುವುದು ಬೇಡವೇ? ಇದನ್ನು ಕೇಳುವವರು ಯಾರು ಇಲ್ಲವೇ? ನಿಮಗೆ ಬೇಕಾದಾಗ, protest ಆದಾಗ, damages ಆದರೆ, ಅದಕ್ಕೆ ಬಿಲ್ ತರುತ್ತೀರಾ. ಆಗ ತಿದ್ದುಪಡಿ ಮಾಡುತ್ತೀರಾ. Ordinance ತೆಗೆದುಕೊಂಡು ಬರುತ್ತೀರಾ. ಆ damages ಅವರಿಂದ ವಸೂಲಿ ಮಾಡುತ್ತೇವೆಂದು ಹೇಳುತ್ತೀರಿ. ಅದೇ ರೀತಿ ಇದಕ್ಕೆ ನಿರ್ದೇಶನ ಕೊಡುವುದು ಬೇಡವೇ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತುಂಬಾ ಚೆನ್ನಾಗಿ ಮಾತನಾಡುತ್ತಾರೆ. ಯಾವುದೇ ಒಂದು ವರ್ಗಕ್ಕೆ ಸೀಮಿತಗೊಳಿಸಿ, ಮಾನ್ಯ ಸದಸ್ಯರು ಚರ್ಚೆ ಮಾಡಿದರೆ ಅಥವಾ ನಿಯಮಗಳು ಮತ್ತು ನಿಬಂಧನೆಗಳನ್ನು ಹಾಕಿದರೆ, ಅದನ್ನು ಪ್ರಶ್ನೆಸುವುದು ಸರಿ. ಈ ರಾಜ್ಯದಲ್ಲಿ ಯಾರಾದರೂ ಕೂಡ ಅನುಮತಿ ತೆಗೆದುಕೊಂಡು ಸಭೆ, ಪ್ರತಿಭಟನೆ ಯಾರೇ ಮಾಡಲಿ. ಅದರ ಬಗ್ಗೆ ಪರ ಅಥವಾ ವಿರೋಧ ಮಾಡಿ. ಆಗ ನೋಡುವಾಗ ಸಂಘಟನೆಯವರು ಏನು ಮಾಡಿರುತ್ತಾರೆ?ಸಭೆ ನಡೆಸುವ ಸಂಘಟಕರು ಸ್ವೇಚ್ಛಚಾರವಾಗಿ ಕಲ್ಲು ಹೊಡೆಯುವುದು, ಗುಂಡಾಗಿರಿಯಂತೆ ಮಾಡುವುದು, ಸಾರ್ವಜನಿಕ ಆಸ್ತಿ–ಪಾಸ್ತಿಗಳಿಗೆ ನಷ್ಟವನ್ನುಂಟು ಮಾಡುವುದು. ಈ ತರಹ ಮಾಡಿದರೆ, ನಿಮ್ಮ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಇದಕ್ಕೆ ಹತ್ತು ಲಕ್ಷ ರೂಪಾಯಿಗಳ ಬಾಂಡ್ ಕೊಡಿ ಎನ್ನುವಂತಹ ಷರತ್ತುಗಳನ್ನು ಎಲ್ಲರಿಗೂ ಹಾಕಿದಾಗ, ಅದು ಸಂವಿಧಾನ ವಿರುದ್ಧ ಹೇಗಾಗುತ್ತದೆ?

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ನಾನು ಹೇಳುವಂತಹದ್ದು, ಯಾವುದೋ ಒಂದು organization ಇರುತ್ತದೆ.

**ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಒಂದು ನಿಮಿಷ. ಅದಕ್ಕೆ ಪೂರಕವಾಗಿ ಒಂದು ಮಾತು.

**ಸಭಾಪತಿಯವರು:–** ಮಾನ್ಯ ಸದಸ್ಯರ ಮಾತು ಮುಗಿಸಲಿ ಬಿಡಿ. ತಾವು ಮಾತನಾಡುವುದಕ್ಕೆ ಮಧ್ಯಾಹ್ನ ಸಮಯವಿದೆ. ಮಾನ್ಯ ನಸೀರ್ ಅಹ್ಮದ್‌ರವರೇ ತಮ್ಮ ಮಾತು ಮುಗಿಸುತ್ತೀರಾ.

**ಶ್ರೀ ನಸೀರ್ ಅಹ್ಮದ್:–** ನನ್ನ ಮಾತು ಸ್ವಲ್ಪ ಇದೆ. ಆ ಕಾಲದಲ್ಲಿ ಡಾ॥ ಬಿ.ಆರ್ ಅಂಬೇಡ್ಕರ್‌ರವರು ಒಂದು ಮಾತನ್ನು ಹೇಳಿದ್ದರು. ಈ ಒಂದು ಸಂವಿಧಾನದ ಬಗ್ಗೆ ಚರ್ಚೆ ಮಾಡಿದಾಗ, ಮುಂದೆ ಬರುವಂತಹ ದಿನಗಳಲ್ಲಿ the interest of industrialists, corporate houses, stock exchanges, ಅವರೆಲ್ಲಾ ಬಾರಿ ಶಕ್ತಿ ಪಡೆದಿರುತ್ತಾರೆ. ಅದನ್ನು ಬದಲಾವಣೆ ಮಾಡುವುದಕ್ಕೆ ಯಾವ ರೀತಿಯ ಪ್ರಯತ್ನಗಳು ಮಾಡುವುದಕ್ಕೆ ಹೊರಟ್ಟಿರುತ್ತಾರೆಂದು ಹೇಳಿ ಅವಾಗಲೇ ಒಂದು ಆತಂಕವಿತ್ತು. ಆ ಆತಂಕ ಇವತ್ತಿನ ದಿವಸ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಎಲ್ಲಾ ಕಡೆಗಳಲ್ಲಿ ಹೋರಾಟ ನಡೆಯುತ್ತಿರುವಂತಹದ್ದು. ಈ ಹೋರಾಟ ನಿಜವಾಗಲೂ ಶಾಂತಿಯುತವಾಗಿ ನಡೆಯುತ್ತಿರುವಂತಹ ಹೋರಾಟ. ನಮಗೆ ಬಹಳ ಸಂತೋಷವಾಗಿದೆ. ಈ ರಾಷ್ಟ್ರದ ಗೃಹ ಮಂತ್ರಿಗಳು ನಾವು ಬದಲಾವಣೆ ಮಾಡುತ್ತೇವೆ. ಇದರಲ್ಲಿ ಯಾವುದೇ ರೀತಿಯ ಮಾಹಿತಿ ಕೇಳವುದಿಲ್ಲವೆಂದು ರಾಜ್ಯಸಭಾದಲ್ಲಿ ಹೇಳಿದ್ದಾರೆ. ಇವತ್ತು ನಾಳೆ ಎಲ್ಲಾ ವಿರೋಧ ಪಕ್ಷದವರನ್ನು ಕರೆಸಿ ಮಾತನಾಡುತ್ತೇವೆಂದು ಸಹ ಮಾತಾಡಿಕೊಂಡಿದ್ದಾರೆ. ಆ ರೀತಿಯಾದರೆ, ನಾವು ಈ ಸಮಾಜದಲ್ಲಿ ಒಂದೇ ರೀತಿ ಸಾಮಾನ್ಯವಾಗಿ ಪ್ರತಿಯೊಬ್ಬರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮಾನತೆಯಿಂದ ಬಾಳಬೇಕೆಂಬುದು ನಮಗೂ ಆಸೆ ಇದೆ. ಇದಕ್ಕೆ ಸದನದಲ್ಲಿರುವ ಸದಸ್ಯರೆಲ್ಲರೂ ಅವಕಾಶ ಮಾಡಿಕೊಡುತ್ತಾರೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ, ಸಾಕಷ್ಟು ವಿಷಯಗಳಿದ್ದಾಗಲೂ; ಸಹ, ತಾವು ಸಮಯವನ್ನು ನಿಗದಿ ಮಾಡಿದ್ದೀರಾ.

ನಾವು ಗಂಗಾ–ಜಮುನಾ ತಾಸಿಬ್ ಬಗ್ಗೆ ಮಾತನಾಡುತ್ತೇವೆ. ಗಂಗಾ–ಜಮುನಾ ತಾಸಿಬ್ ಎಂದರೆ ಏನು? ಇವತ್ತು ನಿಜವಾಗಲೂ ಸಂವಿಧಾನದ ಬಗ್ಗೆ ಹೇಳಬೇಕಾದರೆ, ಖುರಾನ್ ಸಂವಿಧಾನವೆಂದು ಹೇಳಿ ಚರ್ಚೆಯಾಗಿದೆ. ಬೈಬಲ್ ಸಂವಿಧಾನವೆಂದು ಚರ್ಚೆಯಾಗಿದೆ. ಭಗವದ್ಗೀತೆ ಸಂವಿಧಾನವೆಂದು ಚರ್ಚೆಯಾಗಿದೆ. ನಾನು ಇದರ ಬಗ್ಗೆ ಗೌರವಿಸುತ್ತೇನೆ. ಆರ್.ಸಿ. ಕಾಲೇಜ್‌ನ ಪಕ್ಕದಲ್ಲಿ Dargah Hazrath Sayyed Yaqeen Shah wali Mosque ಎಂಬ ಒಂದು ದರ್ಗಾವಿದೆ. ಅಲ್ಲಿ Masjid ಇದೆ. ಮಾನ್ಯ ಖುರ್ಷಿದ್ ಆಲಂಖಾನ್‌ರವರು ಗೌರ್ನರ್ ಆಗಿದ್ದಾಗ, ಅವರು ಅಲ್ಲಿ ನಮಾಜ್ ಮಾಡುವುದಕ್ಕೆ ಬರುತ್ತಿದ್ದರು. ಅವರು ಬರಬೇಕಾದರೆ, ಇಡೀ ಮಸೀದಿಯಲ್ಲಿ ಜನರು ತುಂಬಿ ಹೋಗಿರುತ್ತಿದ್ದರು. ಅವರು ನಮಾಜ್ ಮಾಡಲು ಎಲ್ಲಿ ಹೋಗಿ ನಿಲ್ಲಬೇಕಾಗಿತ್ತು ಗೊತ್ತಾ? ಚಾಪೆ ಇಲ್ಲದೇ ಒಂದು ಕಲ್ಲಿನ ಮೇಲೆ ನಿಂತುಕೊಂಡು ಹೋಗಿ ನಮಾಜ್ ಮಾಡಿರುವಂತಹದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಇದಕ್ಕೆ ಕಾರಣವೇನು? ಅದೇ ಸಮಾನತೆ. ಇದಕ್ಕೆ ದೊಡ್ಡವರು, ಚಿಕ್ಕವರು, ಮುಖ್ಯಮಂತ್ರಿ, ಸಚಿವರು, ಗೌರ್ನರ್ ಇಲ್ಲ. ನಾವೆಲ್ಲರೂ ಒಂದೇ ಎನ್ನುವುದು ಖುರಾನ್‌ನಲ್ಲಿ ಇರುವಂತಹದ್ದು. ನಾವು ಪ್ರತಿ ದಿನ practical ಆಗಿ, ಇವತ್ತು ನಾನಾಗಲೀ, ಯಾವ ಮಂತ್ರಿಯಾಗಲೀ, ಅಲ್ಲಿಗೆ ಹೋಗಬೇಕಾದರೆ, ನಮಗೆ ಪ್ರತ್ಯೇಕವಾಗಿ; ಮಾನ್ಯ ಗುಲಾಂ ನಬಿ ಅಜಾದ್‌ರವರು ಒಂದು ಸಾರಿ ಚುನಾವಣೆ ಪ್ರಚಾರಕ್ಕೆ ಬಂದರು. ಬಿ.ಇ.ಎಲ್ ರೋಡ್‌ನಲ್ಲಿ Masjid-e-Yaqub ಎಂದು ಒಂದು mosque ಇದೆ. ಅಲ್ಲಿ ನಾವು ನಮಾಜ್ ಮಾಡುವುದಕ್ಕೆ ಹೋದಾಗ, ಅಲ್ಲಿ ಜಾಗವಿರುವುದಿಲ್ಲ. ಫುಟ್‌ಪಾತ್‌ನಲ್ಲಿ ನಮಾಜ್ ಮಾಡಿದ್ದೇವೆ. ಸಮಾನತೆ ಎಂದರೆ ಇದೆ. ಇಲ್ಲಿ ಚಿಕ್ಕವರು, ದೊಡ್ಡವರು, ಸಚಿವರು, ಎಂ.ಎಲ್.ಎ., ಈ ದೇಶದಲ್ಲಿರುವ ಕಾನೂನು, ಸಂವಿಧಾನ ಪ್ರತಿಯೊಬ್ಬರಿಗೂ ಇದೆ. We have been protected with the rights. Article 14 ಇರಬಹುದು, Article 16 ಇರಬಹುದು, we have been protected with the rights. It is there in the constitution. We only request that the people who are in the helm of affairs should look at that and try to bring peace and tranquility in the country and we have to live together. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. Thank you Sir.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಈಗ ಸದನವನ್ನು ಭೋಜನಕ್ಕಾಗಿ ಮಧ್ಯಾಹ್ನ ಮೂರು ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(432)16.3.2020/3.10/ಎಂ.ಎಂ–ಆರ್.ಎನ್**

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 16 ನಿಮಿಷಕ್ಕೆ ಮುಂದೂಡಲ್ಪಟ್ಟಿದ್ದ ಸದನವು ಪುನಃ ಮಧ್ಯಾಹ್ನ 3 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದ್ದರು)**

**3. ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳು ಹಾಗೂ ಅಧಿಕಾರಿಗಳು ಹಾಜರಿಲ್ಲದಿರುವ ಬಗ್ಗೆ.**

– – – –

**ಸಭಾಪತಿಯವರು:–** ಈಗ ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಚರ್ಚೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರು ಸದನದಲ್ಲಿ ಇಲ್ಲ. ಈಗ ಆರೋಗ್ಯ ಸಚಿವರಾದರೂ ಇಲ್ಲಿ ಇರಬೇಕು ಅಥವಾ ವೈದ್ಯಕೀಯ ಶಿಕ್ಷಣ ಸಚಿವರಾದರೂ ಇರಬೇಕು.

**ಶ್ರೀ ಎಸ್. ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ತಾವು ಪ್ರಾರಂಭ ಮಾಡಿ ಮಾನ್ಯ ಶ್ರೀರಾಮುಲು ಅವರು ಬರುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಈಗ ಪ್ರಾರಂಭ ಮಾಡಿ ಯಾರಿಗೆ ಹೇಳೋಣ? ಕನಿಷ್ಟ ಮೂರು ಜನರಾದರೂ ಸಚಿವರಿರಬೇಕು. ತಾವು ಹಿರಿಯ ಸಚಿವರು, ಅನುಭವಿಗಳು, ತತ್ವ, ನಿಷ್ಠಾವಂತರಿದ್ದೀರಿ ಎಂಬುದು ನನ್ನ ಭಾವನೆ. ನೀವು ಅವರಿಗೆ ಡಿಫೆಂಡ್ ಮಾಡಿಕೊಳ್ಳಬೇಡಿ. ನಿಮ್ಮ ಬಗ್ಗೆ ನಮಗೆ ಗೌರವವಿದೆ. ಈಗ ಸಂಬಂಧಿಸಿದ ಸಚಿವರೇ ಇಲ್ಲವೆಂದರೆ ನಾನೇನು ಮಾತನಾಡಲಿ? ಪ್ರತಿಪಕ್ಷದ ನಾಯಕರು ಮಾತನಾಡುವಾಗ ಅದಕ್ಕೆ ಸಂಬಂಧಿಸಿದ ಮಂತ್ರಿ ಇಲ್ಲ, ಮಾತನಾಡಬೇಕು ಎಂದರೆ ಹೇಗೆ? ಇದರ ಬಗ್ಗೆ ನೀವು ಯೋಚನೆ ಮಾಡಿ.

**ಸಭಾಪತಿಯವರು:–** ಈ ವಿಷಯವನ್ನು ಆಮೇಲೆ ತೆಗೆದುಕೊಳ್ಳುವುದಾದರೆ ಈಗ ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭ ಮಾಡೋಣ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್:–** ಇದು ಎಷ್ಟು ಮಹತ್ವವಾದ ವಿಚಾರವಾಗಿದೆ, ಇಡೀ ದೇಶದ ಉದ್ದಗಲ, global phenomena ಆಗಿದೆ. Endemic ಎಂದು World Health Organization ಅವರೇ ಘೋಷಣೆ ಮಾಡಿದ್ದಾರೆ.

**ಶ್ರೀ ಎಸ್. ಸುರೇಶ್ ಕುಮಾರ್:–** ಮಾನ್ಯ ಪಾಟೀಲ್‌ರವರೇ, ತಾವು ಪ್ರಾರಂಭ ಮಾಡಿ ಮಾನ್ಯ ಶ್ರೀರಾಮುಲುರವರೇ ಬಂದು ಉತ್ತರ ಕೊಡುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಉತ್ತರವನ್ನು ಕೊಡುತ್ತಾರೆ;

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರಕ್ಕೆ ಉತ್ತರ ಕೊಡುವುದಕ್ಕೆ ತುಂಬಾ ಸಚಿವರು ಬೇಕಾಗುತ್ತದೆ. ಇದಕ್ಕೆ ಒಬ್ಬರಾದರೂ ಆರೋಗ್ಯ ಸಚಿವರು ಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರಕ್ಕಂತೂ ಒಬ್ಬರೂ ಸಚಿವರು ಇಲ್ಲ. ನಮ್ಮ ರವಿಯವರು ಕರೆದುಕೊಂಡಾದರೂ ಬರಲಿಲ್ಲ, ಹಾಗೇ ಹೋದರು. The concerned Minister must be here. ತಾವು ಮಾತನಾಡಲು ಹೇಳಿದರೆ ಮಾತನಾಡುತ್ತೇನೆ.

**ಸಭಾಪತಿಯವರು:–** ಸಭಾನಾಯಕರು ಒಂದು ಪತ್ರ ಕೊಟ್ಟು ಹೋಗಿದ್ದಾರೆ. ಮಂತ್ರಿ ಶ್ರೀ ಸುಧಾಕರ್‌ರವರಿಗೆ ತುರ್ತು ಮೀಟಿಂಗ್ ಇರುವುದರಿಂದ ಊಟದ ನಂತರ ನಿಯಮ 68ರ ಮೇರೆಗೆ ಚರ್ಚೆಯನ್ನು ತೆಗೆದುಕೊಳ್ಳುವಂತೆ ಹೇಳಿದ್ದಾರೆ

**ಶ್ರೀ ಎಸ್.ಆರ್. ಪಾಟೀಲ್:–** ಆರೋಗ್ಯ ಸಚಿವರು ಬರಲಿ.

(ಮುಂದು)

(433) 16–03–2020/ 03–20/ ಕೆಹೆಚ್–ವಿಕೆ

**ಸಭಾಪತಿಯವರು:–** ಮಾನ್ಯ ಆರೋಗ್ಯ ಸಚಿವರು ಸದನಕ್ಕೆ ಬರಬಹುದು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಡಾ॥ ಕೆ.ಸುಧಾಕರ್‌ರವರು ಮತ್ತು ಶ್ರೀ ಬಿ.ಶ್ರೀರಾಮುಲುರವರು ಈ ಇಬ್ಬರೂ ಸಚಿವರೂ ಪೈಪೋಟಿ ಮೇಲೆ ಬರುತ್ತಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಸದನದಲ್ಲಿ ಇಬ್ಬರೂ ಮಾನ್ಯ ಸಚಿವರು ಸಹ ಇರಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇಬ್ಬರೂ ಮಾನ್ಯ ಸಚಿವರು ಸದನಕ್ಕೆ ಬರಬೇಕಲ್ಲವೇ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೊವಿಡ್–19 ಬಗ್ಗೆ ಸರ್ಕಾರ ಎಷ್ಟು ಗಂಭೀರವಾಗಿದೆ ಎಂಬುದು ಇಲ್ಲಿ ಅರ್ಥವಾಗುತ್ತಿದೆ.

**ಶ್ರೀ ಎಸ್.ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಇದರಿಂದ ಯಾವ ರೀತಿ ಕಾರ್ಯ ನಡೆಯುತ್ತಿದೆ ಎನ್ನುವುದು ಗೊತ್ತಾಗುತ್ತದೆ.

**ಸಭಾಪತಿಯವರು:–** ಇದು ಸಾರ್ವಜನಿಕ ಮಹತ್ವವಾದ ವಿಚಾರವಾಗಿರುವುದರಿಂದ, ಬೇರೆ ರಾಜಕಾರಣದ ವಿಚಾರಗಳು ಇದರಲ್ಲಿ ಬೇಡ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ ರಾಜಕಾರಣ ಏನೂ ಮಾಡುವುದಿಲ್ಲ. ಸದನದಲ್ಲಿ ಸಭಾನಾಯಕರು ಇಲ್ಲ. ಸರಿ. ಈ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಯಾದರೂ ಸದನದಲ್ಲಿ ಇರಬೇಕಲ್ಲವೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇಬ್ಬರೂ ಮಂತ್ರಿಗಳಲ್ಲಿ ಒಬ್ಬರಾದರೂ ಸಚಿವರು ಸದನದಲ್ಲಿ ಇರಬೇಕಲ್ಲವೇ?

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ನಿಯಮ 68ರ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡಲಿ. ಅದನ್ನು ನಾನು note down ಮಾಡಿಕೊಳ್ಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರೇ ಬಂದು ಉತ್ತರವನ್ನು ಕೊಡುತ್ತಾರೆ. He is on his way. ಸದನಕ್ಕೆ ಮಾನ್ಯ ಸಚಿವರು ಬರುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಯಮಗಳ ಪ್ರಕಾರ ಮೂವರು ಮಂತ್ರಿಗಳು ಸದನದಲ್ಲಿ ಇರಬೇಕೆಂದು ಇದೆ. ನಮ್ಮ ವಿಷಯಕ್ಕೆ ಸಂಬಂಧಿಸಿದ ಮಂತ್ರಿಗಳು ಸದನದಲ್ಲಿ ಇಲ್ಲ. ಅವರ ಪರವಾಗಿ ಮಾನ್ಯ ಸಚಿವರು . . .

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಮಾನ್ಯ ಸಚಿವರಾದ ಶ್ರೀರಾಮುಲು ರವರು ಸದನಕ್ಕೆ ಬರುತ್ತಾರೆಯೇ?

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಡಾ|| ಕೆ.ಸುಧಾಕರ್‌ರವರು ಸದನಕ್ಕೆ ಬರುತ್ತಾರೆ.

**ಸಭಾಪತಿಯವರು:-** ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ|| ಕೆ.ಸುಧಾಕರ್‌ರವರು ಸದನಕ್ಕೆ ಬರುತ್ತಾರೆ. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ಬಿ.ಶ್ರೀರಾಮುಲು ರವರು ಕೆಳಮನೆಯಲ್ಲಿ ಇದ್ದಾರೆಯೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪ ರವರು ಮಾನ್ಯ ಡಾ|| ಕೆ.ಸುಧಾಕರ್‌ರವರು ಸದನಕ್ಕೆ ಹಾಜರಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ನಿಮಗೆ ಆ ರೀತಿ ಯಾವಾಗ ಹೇಳಿದರು?

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಮಾನ್ಯ ಡಾ|| ಕೆ.ಸುಧಾಕರ್‌ರವರೇ ಬಂದು ಉತ್ತರವನ್ನು ಕೊಡುತ್ತಾರೆಂದು ನಾನು ಹೇಳಿದ್ದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಡಾ|| ಕೆ.ಸುಧಾಕರ್‌ರವರೇ ಬಂದು ಉತ್ತರವನ್ನು ಕೊಡುತ್ತಾರೆ ಎಂದರೆ, ಮಾನ್ಯ ಸಚಿವರು ಮಧ್ಯಾಹ್ನದ ಮೇಲೆ ತುರ್ತು ಸಭೆ ಇದೆ ಎಂದು ಹೇಳಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾವು ಏನು ಹೇಳುತ್ತೇವೆ ಎಂದು ಮಾನ್ಯ ಸಚಿವರಿಗೆ ಗೊತ್ತಾಗದೆ ಇದ್ದರೆ, ಮಾನ್ಯ ಸಚಿವರು ಉತ್ತರವನ್ನು ಹೇಗೆ ಕೊಡುತ್ತಾರೆ? ಮಾನ್ಯ ಸದಸ್ಯರು ಹೇಳುವುದು ಕೇಳಿಸದೆ ಇದ್ದರೆ, ಅವರು ಹೇಗೆ ಉತ್ತರವನ್ನು ಕೊಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಡೀ ಭಾರತ ದೇಶದಲ್ಲಿ corona virus ನಿಂದ ಕರ್ನಾಟಕದಲ್ಲಿಯೇ ಮೊದಲ death ಆಗಿರುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಸಚಿವರಾದ ಎಸ್.ಸುರೇಶ್ ಕುಮಾರ್‌ರವರೇ, ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ. ಸದನದಲ್ಲಿ ಒಬ್ಬ ಸಚಿವರು ಮಾತ್ರ ಇದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಎಸ್.ಸುರೇಶ್ ಕುಮಾರ್‌ರವರೇ, ನಿಮ್ಮ ಪ್ರಶ್ನೆಗಳಿದ್ದಾಗ ತಾವು ಒಬ್ಬರು ಸದನದಲ್ಲಿ ಇರಬಹುದು. ಆ ರೀತಿಯೂ ಇಲ್ಲ. ಆದುದರಿಂದ ಈಗ I request you, I humbly submit, kindly adjourn this House for fifteen minutes.

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಇಲ್ಲ, not necessary.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಅವರಿಗೆ ಅರ್ಥವಾಗಬೇಕು. ಇದಕ್ಕೆ ನಾವು ಏನೂ ಮಾಡುವುದಕ್ಕೆ ಆಗುತ್ತದೆ, ಪ್ರಶ್ನೋತ್ತರವನ್ನು ತೆಗೆದುಕೊಳ್ಳುವುದಕ್ಕೆ ಮಾನ್ಯ ಸಚಿವರು ಸದನದಲ್ಲಿ ಇಲ್ಲ.

**ಸಭಾಪತಿಯವರು:–** ನಿಯಮ 68ರ ಅಡಿಯಲ್ಲಿ ಚರ್ಚೆ ಪ್ರಾರಂಭ ಮಾಡಿದರೆ ಮಾನ್ಯ ಸಚಿವರಾದ ಎಸ್.ಸುರೇಶ್ ಕುಮಾರ್‌ರವರು ಅದರ ಬಗ್ಗೆ note down ಮಾಡಿಕೊಳ್ಳುತ್ತಾರಂತೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರ ಬಗ್ಗೆ note down ಮಾಡಿಕೊಳ್ಳುವುದು ಅಲ್ಲ. ಸದನದಲ್ಲಿ 3 ಜನ ಮಾನ್ಯ ಸಚಿವರು ಇಲ್ಲ. ಸದನವನ್ನು ಹೇಗೆ ನಡೆಸುವುದು. ಅಧಿಕಾರಿಗಳು ಕೂಡ ಇಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಸಚೇತಕರು):–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಉತ್ತರವನ್ನು ಕೊಡುವುದಕ್ಕೆ 6 ಮಂತ್ರಿಗಳು ಇರಬೇಕು. ಇನ್ನು 3 ಜನ ಸಚಿವರುಗಳು ಕೂಡ ಇಲ್ಲ. ಇವತ್ತು ಒಟ್ಟು 9 ಜನ ಸಚಿವರುಗಳು ಸದನದಲ್ಲಿರಬೇಕು. ಕೊನೆಯ ಪಕ್ಷ 3 ಜನ ಮಾನ್ಯ ಸಚಿವರು ಸದನದಲ್ಲಿ ಇದ್ದರೆ ಈ ವಿಷಯವನ್ನು ಪ್ರಾರಂಭ ಮಾಡಬಹುದು. ಒಬ್ಬ ಮಾನ್ಯ ಸಚಿವರು ಸದನದಲ್ಲಿ ಇದ್ದರೆ, ಇದರ ಬಗ್ಗೆ ಯಾರಿಗೆ ಹೇಳುವುದು. ಸದನದಲ್ಲಿ ಆರೋಗ್ಯ ಸಚಿವರು ಇಲ್ಲ. ವೈದ್ಯಕೀಯ ಶಿಕ್ಷಣ ಸಚಿವರು ಇಲ್ಲ. ಇದರ ಬಗ್ಗೆ ಸರ್ಕಾರಕ್ಕೆ ಗೊತ್ತಾಗಲಿ. ಸದನವನ್ನು 15 ನಿಮಿಷಗಳ ಕಾಲ ಮುಂದೂಡಿ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆರೋಗ್ಯ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು ಸದನದಲ್ಲಿ ಇಲ್ಲ. ದಯಮಾಡಿ, ಸದನವನ್ನು 15 ನಿಮಿಷಗಳ ಕಾಲ ಮುಂದೂಡಿ. I request the Chair to kindly adjourn the House for fifteen minutes.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಸುರೇಶ್ ಕುಮಾರ್‌ರವರು ಈ ಸದನಕ್ಕೆ ಬರಬೇಕಾದ ಮಾನ್ಯ ಸಚಿವರು ಎಲ್ಲಿಗೆ ಹೋಗಿದ್ದಾರೆ ಎಂಬುದನ್ನು ತಿಳಿಸಿ. ಇದಕ್ಕಿಂತ ದೊಡ್ಡ ಕಾರ್ಯ ಯಾವುದಿದೆ ಎಂಬುದನ್ನು ತಿಳಿಸಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಚಿವರು ಬಂದ ನಂತರ ತಾವು ಮಾತನಾಡಿ. ಇದರ ಬಗ್ಗೆ ಬೇರೆ ಮಾನ್ಯ ಸದಸ್ಯರು ಮಾತನಾಡುವವರಿದ್ದರೆ, ಅವರಿಗೆ ಅವಕಾಶವನ್ನು ಕೊಡೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬೇರೆ ಯಾವುದೇ ಮಾನ್ಯ ಸದಸ್ಯರು ಮಾತನಾಡಿದರೂ...

**ಸಭಾಪತಿಯವರು:-** ಇದಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರು ಬಂದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಎಲ್ಲಾ ಮಾನ್ಯ ಸದಸ್ಯರು ಇದೇ ವಿಷಯದ ಬಗ್ಗೆ ಮಾತನಾಡಬೇಕು. ಪ್ರತಿ ಪಕ್ಷದ ನಾಯಕರು ಮಾತನಾಡಿದರೂ ಇದೇ ವಿಷಯದ ಬಗ್ಗೆ ಮಾತನಾಡಬೇಕು. ನಾನು ಮಾತನಾಡಿದರೂ ಇದೇ ವಿಷಯದ ಮೇಲೆ ಮಾತನಾಡಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವತ್ತು ಸದನದಲ್ಲಿರಬೇಕಾದ ಮಂತ್ರಿಗಳು ಎಲ್ಲಿ ಇದ್ದಾರೆ? ಇದರ ಬಗ್ಗೆ ತಮಗೆ ಏಕೆ ಸರ್ಕಾರಕ್ಕೆ seriousness ಇಲ್ಲ. ಆರೋಗ್ಯ ಇಲಾಖೆಗೆ ಸಂಬಂಧಪಟ್ಟ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರಿಗಳು ಇಲ್ಲ. ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಸದನದಲ್ಲಿ ಇದ್ದಾರೆಯೇ! ಸದನದಲ್ಲಿರಲು ಅವರುಗಳಿಗೆಲ್ಲಾ ಏನಾಗಿದೆ? Are you suffering from some disease? ಪರಿಸ್ಥಿತಿ ಏನಾಗಿದೆ. ಈ ರೀತಿ ಏಕೆ ಆಗಿದೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಎಲ್ಲವೂ ಸರಿ ಇದೆ. 2 ನಿಮಿಷಗಳು ಹೆಚ್ಚು–ಕಡಿಮೆಯಾಗುತ್ತದೆ. ಬೇರೇನೂ ಇಲ್ಲ. ಇನ್ನು 5 ನಿಮಿಷಗಳಲ್ಲಿ ಮಾನ್ಯ ಸಚಿವರು ಸದನಕ್ಕೆ ಬರುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿದೆ. ಮಾನ್ಯ ಸಭಾನಾಯಕರು ಸದನದಲ್ಲಿ ಇಲ್ಲದೆ ಇದ್ದರೂ ಸರಿ. It will do. ಇದಕ್ಕೆ ಸಂಬಂಧಿಸಿದ ಮಾನ್ಯ ಸಚಿವರಾದರೂ ಸದನದಲ್ಲಿ ಇರಬೇಕಲ್ಲವೇ? ಇದರ ಜೊತೆಗೆ ಆ ಇಲಾಖೆಯ ಅಧಿಕಾರಿಗಳು ಇರಬೇಕಲ್ಲವೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, 5 ನಿಮಿಷ ಸದನಕ್ಕೆ ತಡವಾಗಿ ಬಂದಿದ್ದಾರೆ ಅಷ್ಟೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನ್ನ ಸಾರ್ವಜನಿಕ ಜೀವನದಲ್ಲಿ ಮೇಲ್ಮನೆಗೆ ಬಂದು 22ನೇ ವರ್ಷಗಳನ್ನು ಪೂರ್ಣಗೊಳಿಸಿದ್ದೇನೆ. 22 ವರ್ಷಗಳಲ್ಲಿ ಈ ರೀತಿಯಲ್ಲಿ ಎಂದೂ ಆಗಿರಲಿಲ್ಲ. ಈ ಸರ್ಕಾರಕ್ಕೆ ಗರ ಬಡೆದಿದೆಯೇ, ದೆವ್ವ ಬಡೆದಿದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ಸರ್ಕಾರಕ್ಕೆ ಏನೂ ಆಗಿಲ್ಲ. ನಾನು ಆ ಕಡೆ ಕುಳಿತುಕೊಂಡಾಗ ಇವರ ಬಗ್ಗೆ ಪ್ರಶ್ನೆಯನ್ನೇ ಕೇಳಿಲ್ಲ. ಅವರ ಹಿರಿತನದ ಬಗ್ಗೆ ಗೌರವ ಕೊಟ್ಟಿದ್ದೇನೆ. ಇದರ ಬಗ್ಗೆ ಮಾನ್ಯ ಸಭಾಪತಿಯವರೇ ತಾವು ಹೇಳಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾನಾಯಕರೇ, 6 ತಿಂಗಳ ಮೊದಲು ತಾವು ಇಲ್ಲಿ ಕುಳಿತಿರಬೇಕಾದರೆ ನಮ್ಮ ಕಡೆ ಮಂತ್ರಿಗಳು ಇಲ್ಲವೆಂದರೆ ತಾವು ಎಷ್ಟರಮಟ್ಟಿಗೆ ಆರ್ಭಟ ಮಾಡಿದ್ದೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ತುಂಬಾ ಸಾರಿ ಹೇಳಿದ್ದೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾನಾಯಕರೇ, ತಾವು ಹೆಸರನ್ನು ಓದಿದ ಮೇಲೆ ಯಾವ ಯಾವ ಮಂತ್ರಿಗಳು ಸದನದಲ್ಲಿ ಇರಬೇಕೆಂದು ಹೇಳುತ್ತಿದ್ದಿರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮೂರು ಜನರಾದರೂ ಮಂತ್ರಿಗಳು ಇರಬೇಕೆಂದು ಹೇಳಿದ್ದೆ. ಆದರೆ ಎಲ್ಲಿಯೂ ಕೂಡ ನಾನು ನಿಲುಗಡೆ ಮಾಡಿಲ್ಲ. ಈಗ ತಾವು ಪ್ರಾರಂಭ ಮಾಡಿ, ಮಾನ್ಯ ಸಚಿವರು ಸದನಕ್ಕೆ ಬರುತ್ತಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾನಾಯಕರೇ, ಈ ವಿಷಯದ ಬಗ್ಗೆ ಯಾರು note ಮಾಡಿಕೊಳ್ಳುತ್ತಾರೆ. ಸದನದಲ್ಲಿ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಮಾನ್ಯ ಸಚಿವರು ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ record ಆಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, Note down ಮಾಡಿಕೊಳ್ಳುವ ವಿಚಾರ ಅಲ್ಲ. More than that, presence of concerned Minister is very much needed here.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಇಲ್ಲಿಯೂ record ಆಗುತ್ತದೆ. ಅಲ್ಲಿಯೂ ದಾಖಲೆಗೆ ಹೋಗುತ್ತದೆ. ನಾವು ಕೂಡ ಇಲ್ಲಿ record ಮಾಡಿಕೊಳ್ಳುತ್ತೇವೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಪ್ರಧಾನ ಕಾರ್ಯದರ್ಶಿಯವರು ಮತ್ತು ಆಯುಕ್ತರವರೇ ಬಹಳ ಮುಖ್ಯ. ಸದನದಲ್ಲಿ ಅವರು ಎಲ್ಲಿದ್ದಾರೆ? ಇದರ ಬಗ್ಗೆ ಸಭಾನಾಯಕರು ಹೇಳಲಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರನ್ನು ತಕ್ಷಣ ಕರೆಸುತ್ತೇನೆ. ತಾವು ಈಗ ಪ್ರಾರಂಭ ಮಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಡೀ ಪ್ರಪಂಚದಲ್ಲಿ . . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆ unnecessarily insist ಮಾಡುವುದಿಲ್ಲ. ಅವಶ್ಯಕತೆ ಇದೆ ಎಂದು ನಾನು insist ಮಾಡುತ್ತೇನೆ. Sometimes it will happen. ನಾನು ಇದರ ಬಗ್ಗೆ strict ಆಗಿ ಪಟ್ಟಿಯನ್ನು ಓದಿ, ಇಷ್ಟು ಜನ ಮಂತ್ರಿಗಳು ಸದನದಲ್ಲಿ ಕಡ್ಡಾಯವಾಗಿ ಇರಬೇಕು. ಇಷ್ಟು ಅಧಿಕಾರಿಗಳು ಕಡ್ಡಾಯವಾಗಿ ಸದನದಲ್ಲಿ ಇರಬೇಕೆಂದು ಹೇಳುವುದಿಲ್ಲ. ಇಡೀ ದೇಶ ಅಲ್ಲ, ವಿಶ್ವವ್ಯಾಪಿಯಾಗಿ ಹಬ್ಬಿರುವಂತಹ dangerous corona virus. ಇದ್ದರಿಂದ ಇಡೀ ಪ್ರಪಂಚವೇ ತತ್ತರಿಸಿದೆ. ನಮ್ಮ ಭಾರತ ದೇಶ ಅಷ್ಟೇ ಅಲ್ಲ. ಇಡೀ ಪ್ರಪಂಚವೇ ಇದ್ದರಿಂದ ತತ್ತರಿಸಿದೆ.

**ಸಭಾಪತಿಯವರು:–** ಸದನದಲ್ಲಿ ಒಬ್ಬ ಅಧಿಕಾರಿಯಾದರೂ ಇರಬೇಕು. ಇಲ್ಲದಿದ್ದರೆ ಮಾನ್ಯ ಮಂತ್ರಿಗಳಾದರೂ ಇರಬೇಕು. ಇಬ್ಬರು ಇಲ್ಲವೆಂದರೆ ಹೇಗೆ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಆ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಇಲ್ಲ. ತಾವು ನಮ್ಮ rescue ಗೆ ಬರಬೇಕಾಗುತ್ತದೆ. ಈ ರೀತಿಯಾದರೆ ಹೇಗೆ? If not, I cannot function as Leader of the Opposition. I will take my own decision. ದಯಮಾಡಿ, ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಿ. ಇದರ ಬಗ್ಗೆ ಅವರಿಗೆ ಅರ್ಥವಾಗಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಬೆಳಗ್ಗೆ ಇಬ್ಬರೂ ಮಾನ್ಯ ಸಚಿವರು ಸದನದಲ್ಲಿ ಇದ್ದರು. ಆ ಇಬ್ಬರು ಮಾನ್ಯ ಸಚಿವರು ಬೇರೆ ಬೇರೆ ಕಾರಣಕ್ಕೆ ಹೊರಗೆ ಹೋಗಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬೆಳಿಗ್ಗೆ ಇದ್ದರು, ನೆನ್ನೆಯ ದಿವಸ ಇದ್ದರು, ಮೊನ್ನೆಯ ದಿವಸ ಸದನದಲ್ಲಿ ಇದ್ದರು ಎಂದು ಹೇಳುವುದು ಇದು ಕಾರಣವೇ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇವರು ಸದನಕ್ಕೆ ಮತ್ತು ತಮಗೆ ಅಗೌರವವನ್ನು ತೋರಿಸಿದ ಹಾಗಾಗುತ್ತದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನಕ್ಕೆ ಬಂದು ಎಲ್ಲಾ ಮಾಹಿತಿಗಳನ್ನು ಒದಗಿಸುತ್ತಾರೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ ಸದನದಲ್ಲಿ ಒಂದು ವೇಳೆ ಮಾನ್ಯ ಮಂತ್ರಿಗಳು ಇಲ್ಲ. ಅಧಿಕಾರಿಗಳು ಇಲ್ಲ. ಇಬ್ಬರೂ ಸದನದಲ್ಲಿ ಇಲ್ಲವೆಂದರೆ ಸದನವನ್ನು ಹೇಗೆ ನಡೆಸುವುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಇದರ ಬಗ್ಗೆ ಒಪ್ಪಿಕೊಳ್ಳಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯ ಭಾಷೆಯಲ್ಲಿ ಹೇಳುವುದಾದರೆ ಈ ಸರ್ಕಾರ ಅತ್ಯಂತ 'ಬಂಡ' ಸರ್ಕಾರ ಎಂದು ಹೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ 'ಬಂಡ' ಸರ್ಕಾರ ಎಂಬ ಶಬ್ದವನ್ನು ಬಳಸಬೇಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅದು Parliamentary ಪದ. ಅದು ಏನಾದರೂ Unparliamentary ಪದವಾಗಿದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ಇಲ್ಲದೇ ಇರುವಾಗ . . . ಇದರ ಬಗ್ಗೆ ಅವರಿಗೆ ನೆನೆಪು ಮಾಡುವ ಅವಶ್ಯಕತೆ ಇಲ್ಲ.

**Sri S.R. PATIL:-** You don't take shelter with this.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಎಷ್ಟು ಜವಾಬ್ದಾರಿ ಇದೆ ಎಂಬುದು ಅರ್ಥವಾಗುತ್ತಿದೆ. ಇಬ್ಬರೂ ಮಾನ್ಯ ಸಚಿವರನ್ನು ಸಹ ಕರೆಯಿರಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇಬ್ಬರು ಮಾನ್ಯ ಸಚಿವರನ್ನು ಕರೆಯಿರಿ, ಇಬ್ಬರೂ ಕೂಡ ಬರಲಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಸದನವನ್ನು ಮುಂದೂಡಲಿಲ್ಲವೆಂದರೆ ನಾವು ಬೇರೆ ದಾರಿಗೆ ಹೋಗಬೇಕಾಗುತ್ತದೆ. ಇಲ್ಲದಿದ್ದರೆ ನಾವೆಲ್ಲಾ ಮಾನ್ಯ ಸದಸ್ಯರುಗಳು Well ಒಳಗೆ ಬರುತ್ತೇವೆ. ದಯಮಾಡಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿ.

**Sri IVAN D' SOUZA:-** Let them understand.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದು ಹಕ್ಕುಚ್ಯುತಿಯಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, 10 ನಿಮಿಷಗಳ ಕಾಲ ಸದನವನ್ನು ಮುಂದೂಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ವಿಷಯದ ಬಗ್ಗೆ ಮಾತನಾಡಲು ಪ್ರಾರಂಭ ಮಾಡಿ. ತಮಗೆ ಸಮರ್ಪಕವಾದ ಉತ್ತರವನ್ನು ಕೊಡಿಸುತ್ತೇವೆ. ಈ ರೀತಿ ಹಿಂದೆ ಎಷ್ಟು ಬಾರಿ ಆಗಿರುವುದಿಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀರಾಮುಲು ರವರು ಈಗ ಸದನಕ್ಕೆ ಬಂದಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಆಗಲೇ ಬರಬೇಕಾಗಿತ್ತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆ ಇಲಾಖೆಯ ನಿರ್ದೇಶಕರು ಸದನದಲ್ಲಿ ಇದ್ದಾರೆ. ಸುಮ್ಮನೆ ತಾವು ವಾದ ಮಾಡುತ್ತಿದ್ದೀರಿ. ತಾವು ಈ ವಿಷಯದ ಬಗ್ಗೆ ಚರ್ಚೆ ಮಾಡಲು ಪ್ರಾರಂಭ ಮಾಡಿದ್ದರೆ ಈಗಾಗಲೇ ಚರ್ಚೆ ಮಾಡಿ 10 ನಿಮಿಷಗಳಾಗುತ್ತಿತ್ತು. ಈಗ ಸದನಕ್ಕೆ ಮಾನ್ಯ ಸಚಿವರು ಕೂಡ ಬಂದಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವವಾದ ವಿಚಾರವಾಗಿರುವುದರಿಂದ, ಈ ಇಲಾಖೆಗೆ ಸಂಬಂಧಪಟ್ಟ ಪ್ರಧಾನ ಕಾರ್ಯದರ್ಶಿಯವರು ಸದನದಲ್ಲಿ ಇರಬೇಕಲ್ಲವೇ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ಇಲಾಖೆಯ ನಿರ್ದೇಶಕರು ಸದನದಲ್ಲಿ ಇದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, It has come in the agenda. ತಾವು ಈ ವಿಷಯವನ್ನು ಅಜೆಂಡಾದಲ್ಲಿಯೇ ಹಾಕಲಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ಇಲಾಖೆಯ ನಿರ್ದೇಶಕರು, ಪ್ರಧಾನ ಕಾರ್ಯದರ್ಶಿಯವರು ಇದ್ದಾರೆ. ತಾವು ಈ ವಿಷಯದ ಬಗ್ಗೆ ಚರ್ಚೆ ಮಾಡಲು ಪ್ರಾರಂಭ ಮಾಡಿದ್ದರೆ ಈಗಾಗಲೇ 10 ನಿಮಿಷಗಳಾಗುತ್ತಿತ್ತು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಪ್ರಾರಂಭ ಏಕೆ ಮಾಡಬೇಕು. ನಮ್ಮಗೆಲ್ಲಾ ಗೌರವ ಇಲ್ಲವೇ, ನಮ್ಮ ರಾಜ್ಯದ ಜನರ ಬಗ್ಗೆ ನಮಗೆ ಚಿಂತೆಯೇ ಇಲ್ಲವೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮ ಬಗ್ಗೆ ಪೂರ್ಣ ಗೌರವ ಇದೆ. ಈಗ ಚರ್ಚೆ ಪ್ರಾರಂಭ ಮಾಡಿ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾನಾಯಕರೇ, ಆರೋಗ್ಯ ಇಲಾಖೆಯ ಆಯುಕ್ತರು ಎಲ್ಲಿದ್ದಾರೆ ಎಂದು ಹೇಳಬೇಕು.

**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಆರೋಗ್ಯ ಇಲಾಖೆಯ ಆಯುಕ್ತರು ಇಲ್ಲಿಗೆ ಬರುವ ಅವಶ್ಯಕತೆ ಇಲ್ಲ.

**(ಗೊಂದಲ)**

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಅವರು ಏಕೆ ಬೇಕಿಲ್ಲ. ತಾವು ಏನು ಮಾತನಾಡುತ್ತಿದ್ದೀರಾ?

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆರೋಗ್ಯ ಇಲಾಖೆಯ ಆಯುಕ್ತರು ಕೊರೊನ ವೈರಸ್‌ಗೆ ಸಂಬಂಧಪಟ್ಟ ಮೀಟಿಂಗ್‌ನಲ್ಲಿ ಇದ್ದಾರೆ ಎಂಬ ಬಗ್ಗೆ ಸುದ್ದಿ ಬಂದಿದೆ. ಅವರು ಸದನಕ್ಕೆ ಬರುತ್ತಾರೆ. ತಾವು ಚರ್ಚೆಯನ್ನು ಪ್ರಾರಂಭ ಮಾಡಿ.

**ಶ್ರೀ ಬಿ. ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಏನೂ ಬೇಕೋ, ಅದಕ್ಕೆ ಉತ್ತರವನ್ನು ಕೊಡುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ...

**ಶ್ರೀ ಬಿ. ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಅವರು ಸದನಕ್ಕೆ ಬರುತ್ತಾನೆ. ಈಗ ನಾನು ಸದನದಲ್ಲಿ ಇದ್ದೇನೆ. ನಾನು ಉತ್ತರವನ್ನು ಕೊಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಚಿವರೇ ತಾವು ಸದನಕ್ಕೆ ಹಾಜರಾಗಿದ್ದೀರಿ. ಆದರೆ ತಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು, Commissioner ಸದನಕ್ಕೆ ಹಾಜರಾಗಿರುವುದಿಲ್ಲ.

(ಮುಂದು)

**(434) 16/03/2020/3:30/ಎಸ್‌ಪಿಆರ್/ವಿಕೆ**
**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ಏಕೆ ಅಧಿಕಾರಿಗಳ ಮೇಲೆ ಇಲಾಖೆಯ ಮಂತ್ರಿಗಳ ಹಿಡಿತವಿಲ್ಲವೇ? ಅಧಿಕಾರಿಗಳು ಮಂತ್ರಿಗಳ ಕಂಟ್ರೋಲ್‌ನಲ್ಲಿಲ್ಲವೇ? ಅಧಿಕಾರಿಗಳು ಮಂತ್ರಿಗಳ ಅಧೀನಕ್ಕೆ ಒಳಪಡುವುದಿಲ್ಲವೇ? ಕಡೆಯದಾಗಿ ಮಂತ್ರಿಗಳ ಬಗ್ಗೆ ಇಲಾಖೆಯ ಅಧಿಕಾರಿಗಳಿಗೆ ಗೌರವವಿಲ್ಲವೇ?

**ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ):-** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯ ಅಧಿಕಾರಿಗಳು ಸದನಕ್ಕೆ ಬಂದಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸದನಕ್ಕೆ ಬಂದಿರುವ ಅಧಿಕಾರಿಗಳು ಯಾರು? ಇಲಾಖೆಯ ನಿರ್ದೇಶಕರು ಮಾತ್ರವೇ ಬಂದಿದ್ದಾರೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಮತ್ತು ಸಕಾಲ):–** ಮಾನ್ಯ ಸಭಾಪತಿಯವರೇ, ಪ್ರತಿಪಕ್ಷದ ನಾಯಕರು ಮೊದಲು ಸದನದಲ್ಲಿ ಕನಿಷ್ಠ ಮೂರು ಮಂತ್ರಿಗಳಿರಬೇಕು ಎಂಬುದಾಗಿ ಹೇಳಿದರು. ವಿರೋಧ ಪಕ್ಷದ ಸದಸ್ಯರು ನಾನು ಹೇಳುವುದನ್ನು ಮೊದಲು ಕೇಳಬೇಕು. ಈಗ ಸದನದಲ್ಲಿ ಐದು ಜನ ಮಂತ್ರಿಗಳಿದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು ಸದನದಲ್ಲಿದ್ದಾರೆ. ದಯಮಾಡಿ ವಿರೋಧ ಪಕ್ಷದ ನಾಯಕರು ತಮ್ಮ ವಿಚಾರವನ್ನು ಪ್ರಾರಂಭಿಸಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ ಚರ್ಚೆಯನ್ನು ಪ್ರಾರಂಭಿಸಿ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಈಗಿನ ಚರ್ಚೆಗೆ ಇಲಾಖೆಯ ಆಯುಕ್ತರು ಸಂಬಂಧಪಡುವುದಿಲ್ಲವೇ?

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಾವು ಮಾತನಾಡಬೇಕಾದರೆ, ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ತಮಗೆ ಗೊತ್ತಿಲ್ಲದ ವಿಚಾರಗಳನ್ನು ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಕೇಳಿ ಹೇಳುತ್ತಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ನಮಗೆ ಪ್ರಾರಂಭ ಮಾಡಿ ಎಂದು ಹೇಳಿದರೆ, ನಾವು ಪ್ರಾರಂಭ ಮಾಡುತ್ತೇವೆ. ನಾವು unnecessary insist ಮಾಡುವುದಿಲ್ಲ. ಸರ್ವೇ ಸಾಮಾನ್ಯವಾಗಿ ಈ ರೀತಿಯ ಘಟನೆಗಳು ನಡೆಯುತ್ತಿರುತ್ತವೆ. ಆದರೆ ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ವಿಷಯವನ್ನು ಹಾಕಲಾಗಿತ್ತು. ಇದರ ಮಾಹಿತಿಯು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಹೋಗಿರುತ್ತದೆ. ಅಪರಾಹ್ನ 3 ಗಂಟೆಗೆ ವಿಷಯವನ್ನು ತೆಗೆದುಕೊಳ್ಳುವುದು ಎಲ್ಲರಿಗೂ ತಿಳಿದಿರುತ್ತದೆ. ಆದಾಗ್ಯೂ ಸಹ ಮಂತ್ರಿಗಳು ಸದನಕ್ಕೆ ವಿಳಂಬವಾಗಿ ಬಂದಿದ್ದಾರೆ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ವಿಷಯವು ಬಹಳ ಜರೂರು ಹಾಗೂ ಗಂಭೀರವಾಗಿರುವ ಕಾರಣ ಇಲಾಖೆಯ ಎಲ್ಲಾ ಅಧಿಕಾರಿಗಳು ಕೊರೋನಾ ವೈರಸ್‌ಗೆ ಸಂಬಂಧಪಟ್ಟಂತೆ ಸಭೆಯನ್ನು ಮಾಡುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಾಡುವ ಚರ್ಚೆಗಿಂತ ಅಧಿಕಾರಿಗಳು ಮಾಡುವ ಸಭೆಯು ದೊಡ್ಡದೇ? ಇದು ಸದನಕ್ಕೆ ಬಹಳ ಆಶ್ಚರ್ಯವಾಗಿರುವ ವಿಚಾರವಾಗಿದೆ. ಸದನದಲ್ಲಿ ವಿಷಯವು ಚರ್ಚೆಯಾಗುವ ಸಂದರ್ಭದಲ್ಲಿ ಇಲಾಖೆಯ ಅಧಿಕಾರಿಗಳು ಬೇರೊಂದು ಸಭೆಯನ್ನು ನಡೆಸುತ್ತಾರೆ ಎಂದರೆ,

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಸದನವನ್ನು ಅವರು ಅಷ್ಟು ಗೌಣವಾಗಿ ಕಾಣುತ್ತಾರೆ ಎಂದರ್ಥವಾಯಿತು. ಮಾನ್ಯ ಮಂತ್ರಿಗಳು ಆ ರೀತಿಯಾಗಿ ಹೇಳಬಾರದು. ಸದನದಲ್ಲಿ ಆಗುವ ಚರ್ಚೆಯನ್ನು ಬದಿಗೊತ್ತಿ ಅಧಿಕಾರಿಗಳು ಬೇರೆ ಕಡೆಗೆ ಹೋಗಿ ಸಭೆಯನ್ನು ಮಾಡುತ್ತಾರೆಂದರೆ ಇದು ಎಷ್ಟರ ಮಟ್ಟಿಗೆ ಸರಿ? **(ಗೊಂದಲ)** ಸದನದ ಸಮಯವನ್ನು ಎಳ್ಳಷ್ಟೂ ಹಾಳು ಮಾಡುವ ಇಚ್ಛೆಯು ನನಗಿಲ್ಲ. ಸದನದ ಪ್ರತಿಯೊಂದು ನಿಮಿಷದ ಸದ್ವಿನಿಯೋಗವಾಗಲಿ. ಚರ್ಚೆಯ ಮೇಲೆ ತೆರಿಗೆದಾರರ ಕೋಟ್ಯಂತರ ರೂಪಾಯಿಗಳ ಹಣ ವ್ಯಯವಾಗುತ್ತದೆ. ನನಗೆ ಇದರ ಬಗ್ಗೆ ಬಹಳ ಸ್ಪಷ್ಟವಾದ ಕಲ್ಪನೆಇದೆ. I am a man of responsibility.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಕರೆದು ಔತಣವನ್ನು ಮಾಡಿಸಿಕೊಳ್ಳುವಂತಹ ಕೆಲಸವಾಗಿದೆ. ಎಷ್ಟು ಬಾರಿ ಈ ವಿಷಯದ ಬಗ್ಗೆ ಚರ್ಚೆಯಾಗಿದೆ. ತಾವೂ ಸಹ ಇದರ ಬಗ್ಗೆ ಹಲವಾರು ಬಾರಿ warn ಮಾಡಿದ್ದೀರಿ. ಈ ವಿಷಯವನ್ನು ಅಜೆಂಡಾದಲ್ಲಿ ಹಾಕಲಾಗಿದ್ದು, ಅಪರಾಹ್ನ 3 ಗಂಟೆಗೆ ವಿಷಯವನ್ನು ಪ್ರಾರಂಭ ಮಾಡುವುದು ಗೊತ್ತಿದೆ. ಅಧಿಕಾರಿಗಳಿಗೆ ಇಷ್ಟೊಂದು ಉದ್ಧಟತನ ಹಾಗೂ ಉಡಾಫೆತನವನ್ನು ತೋರಿಸಿದರೆ, ನಾವುಗಳು ಇದನ್ನು ಪ್ರಶ್ನಿಸಬಾರದೇ? ಅಧಿಕಾರಿಗಳು ಇಲ್ಲದಿದ್ದರೂ ಪರವಾಗಿಲ್ಲ ಎಂದು ಮಂತ್ರಿಗಳು ಹೇಳುತ್ತಾರೆ. Who is going to implement it?

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಇದು ಬಹಳ ನಾಚಿಕೆಗೇಡಿತನದ ವಿಚಾರವಾಗಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇಲ್ಲಿ ಯಾವ ವಿಚಾರಗಳನ್ನು ಮಾತನಾಡುತ್ತಾರೋ ಅದನ್ನು ಅಧಿಕಾರಿಗಳು ಜಾರಿಗೆ ತರಬೇಕು.

**(ಗೊಂದಲ)**

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಂತ್ರಿಗಳಿಂದ ಈ ರೀತಿಯ ನಡವಳಿಕೆಯನ್ನು ನಾವು ನೀರಿಕ್ಷೆ ಮಾಡಿರಲಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯ ಹಾಗೂ ರಾಷ್ಟ್ರ ಈ ಸಂಗತಿಯನ್ನು ನೋಡುತ್ತಿದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಸರ್ಕಾರಕ್ಕೆ ಸಹಕಾರ ನೀಡುವಂತೆ ಮನವಿ ಮಾಡುತ್ತೇವೆ. ಅಧಿಕಾರಿಗಳು ಇದೇ ವಿಷಯಕ್ಕೆ ಸಂಬಂಧಪಟ್ಟ ಸಭೆಯಲ್ಲಿದ್ದಾರೆ. ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಏನೇನೋ ಮಾತನಾಡುವುದು ಬೇಡ. ಸದನದಲ್ಲಿ ಇಲಾಖೆಯ ಮಂತ್ರಿಗಳಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಹಾಗೂ ಮಂತ್ರಿಗಳು ಮನವಿ ಮಾಡಿಕೊಳ್ಳುತ್ತಿದ್ದಾರೆ. ಮಾನ್ಯ ಸಭಾಪತಿಯವರು ಮಾತನಾಡಲು ಹೇಳಿದ್ದಾರೆ. ಹೀಗಾಗಿ ನಾನು ನನ್ನ ಮಾತುಗಳನ್ನು ಪ್ರಾರಂಭ ಮಾಡುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಯಾವಾಗ ನೋಡಿದರೂ ಅಧಿಕಾರಿಗಳು ಹೀಗೇ ಮಾಡುತ್ತಾರೆ. ಯಾವುದೇ ಸಮಿತಿ ಸಭೆಗಳಿರಬಹುದು. ಅಲ್ಲಿಗೆ ಕೆಳಹಂತದ ಅಧಿಕಾರಿಗಳನ್ನು ಕಳುಹಿಸುತ್ತಾರೆ. ಇಲಾಖೆಯ ಉನ್ನತ ಅಧಿಕಾರಿಗಳು ಸಭೆಗೆ ಹಾಜರಾಗುವುದಿಲ್ಲ. ಆದರೂ ಈ ಸದನಕ್ಕೆ ಬಂದಿಲ್ಲವೆಂದರೆ ಇದರ ಅರ್ಥವೇನು?

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, ಈಗ ಸದನದಲ್ಲಿ ಆರೋಗ್ಯ ಇಲಾಖೆಯ ಮಂತ್ರಿಗಳಿದ್ದಾರೆ. ಮಾನ್ಯ ಸಭಾನಾಯಕರೂ ಸಹ ಸದನದಲ್ಲಿದ್ದಾರೆ.

**ಸಭಾಪತಿಯವರು:–** ಮಾನ್ಯ ರಮೇಶ್ ಗೌಡರವರೇ ತಮಗೆ ಮಾತನಾಡಲು ಅವಕಾಶ ನೀಡುತ್ತೇನೆ.

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, ಅವತ್ತಿನ ದಿವಸ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಪ್ರಶ್ನೆಗಳನ್ನು ಕೇಳಿದಂತಹ ಸಂದರ್ಭದಲ್ಲಿ ಆರೋಗ್ಯ ಮಂತ್ರಿಗಳ ಪರವಾಗಿ ಸಭಾನಾಯಕರು ಉತ್ತರ ಕೊಟ್ಟಿದ್ದರು. ಕೊಟ್ಟಿರುವ ಉತ್ತರವು ತಪ್ಪಾಗಿರುವುದಕ್ಕೆ ತಾವು ಆ ಪ್ರಶ್ನೆಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶವನ್ನು ನೀಡುವುದಾಗಿ ಹೇಳಿದ್ದು, ಮಾರನೆಯ ದಿವಸ ಆ ಅವಕಾಶವನ್ನು ನೀಡಿದ್ದಿರಿ. ಆರೋಗ್ಯ ಮಂತ್ರಿಗಳು ಸದನದಲ್ಲಿರುವಾಗ, take it for granted ಎಂದು ಅವರೇ ಅಧಿಕಾರಿಗಳಿಗೆ ಹೇಳಿದರೆ, ಅಧಿಕಾರಿಗಳು ಮತ್ತಷ್ಟೂ ಫ್ರೀ ಆಗಿಬಿಡುತ್ತಾರೆ ಹಾಗೂ ಸದನಕ್ಕೆ ಬರುವುದೇ ಇಲ್ಲ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ, ತಾವು ತಮ್ಮ ಮಾತುಗಳನ್ನು ಪ್ರಾರಂಭಿಸಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

4. **ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

**ರಾಜ್ಯಾದ್ಯಂತ ಕೋವಿಡ್–19 ಕೊರೊನಾ ಖಾಯಿಲೆಯು ಹರಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಸದರಿ ವೈರಸ್ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಕುರಿತು.**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಕರೋನಾ ವೈರಸ್ ಕಾಯಿಲೆಯು ವ್ಯಾಪಕವಾಗಿ ಹರಡುತ್ತಿರುವ ಬಗ್ಗೆ ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆ ಮಾಡುವುದಕ್ಕೆ ನಾವುಗಳು ಮನವಿ ಮಾಡಿಕೊಂಡಿರುವ ಪ್ರಕಾರ ತಾವು ನನಗೆ ಮತ್ತು ನಮ್ಮ ಅನೇಕ ಸದಸ್ಯರುಗಳಿಗೆ ಅವಕಾಶವನ್ನು ಕಲ್ಪಿಸಿದ್ದೀರಿ. ಅದಕ್ಕಾಗಿ ನಾನು ತಮಗೆ ಹೃದಯಪೂರ್ವಕವಾದ ವಂದನೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಪ್ರಾರಂಭಿಸುತ್ತೇನೆ.

ಕೊರೋನಾ ವೈರಸ್ (ಕೋವಿಡ್–19) ಇದು ಒಂದು ಬಗೆಯ ಅತ್ಯಂತ ಪ್ರಾಣಹಾನಿ ಮಾಡುವ ಭಯಾನಕವಾದ ವೈರಸ್ ಆಗಿದ್ದು, ಇದು ಮನುಷ್ಯನ ಉಸಿರಾಟದ ವ್ಯವಸ್ಥೆಯ ಮೇಲೆ ಭೀಕರವಾದ ಪರಿಣಾಮವನ್ನುಂಟು ಮಾಡುತ್ತದೆ ಎಂದು ಹೇಳಲಾಗುತ್ತದೆ. ಕೋವಿಡ್–19 ಎಂದರೆ, Coronavirus Disease. ಚೈನಾ ದೇಶದ 'ವುಹಾನ್' ನಗರದಲ್ಲಿ ಹುಟ್ಟಿದ್ದು. ಕೊರೋನಾ ವೈರಸ್ 2019 ನ್ನು COVID-19 ಎಂದು ಕರೆಯುತ್ತಾರೆ. ಇದು ಕಣ್ಣಿಗೆ ಕಾಣದಿರುವ ವೈರಸ್ ಆಗಿದ್ದು, ಎಷ್ಟು ಪ್ರಭಾವಶಾಲಿಯಾಗಿದೆ ಎಂದರೆ, ಇಡೀ ಪ್ರಪಂಚದಲ್ಲಿ ಶಕ್ತಿಶಾಲಿ ರಾಷ್ಟ್ರ, ಜಗತ್ತಿನ ಹಿರಿಯಣ್ಣ ಹಾಗೂ ದೊಡ್ಡಪ್ಪ ಎಂದು ಕರೆಸಿಕೊಳ್ಳುವ ಅಮೇರಿಕಾ ದೇಶವೂ ಸಹ ಕಣ್ಣಿಗೆ ಕಾಣದಿರುವ ಈ ವೈರಸ್‌ಗೆ ಅಂಜುವ ಕಾಲ ಬಂದಿದೆ. ನಾನು ಪ್ರತಿನಿತ್ಯವೂ ಮಾಧ್ಯಮದ ಮುಖಾಂತರ ಸುದ್ದಿಗಳನ್ನು ನೋಡುತ್ತೇನೆ. ಈ ಕಾಯಿಲೆ ಎಷ್ಟರ ಮಟ್ಟಿಗೆ ಎಂದರೆ, ಅಮೇರಿಕಾ ದೇಶದ ಅಧ್ಯಕ್ಷ ಶ್ರೀ ಡೋನಾಲ್ಡ್ ಟ್ರಂಪ್‌ರವರಿಗೂ ಇದು ಅಫೆಕ್ಟ್ ಆಗಿದೆ ಎನ್ನುವುದನ್ನು ನಾನು ಇವತ್ತಿನ ಬೆಳಗ್ಗೆಯ ನ್ಯೂಸ್‌ನಲ್ಲಿ ನೋಡಿದ್ದೇನೆ. ಅದರ ಪರೀಕ್ಷೆಯು Negative ಆಗಿ ಬಂದಿದೆ. ಇದು ಬಹಳ ಸಂತೋಷದ ವಿಚಾರವಾಗಿದೆ. ನನಗೆ ಬಹಳ ಅಂಜಿಕೆಯುಂಟಾಗಿತ್ತು. ಏಕೆಂದರೆ, ಅವರು ನಮ್ಮ ದೇಶಕ್ಕೆ ಬಂದು ಹೋಗಿದ್ದರು. ಅವರು ಯಾರು ಯಾರಿಗೆ ಹಸ್ತ ಲಾಘವ ಮಾಡಿದ್ದರೋ ಗೊತ್ತಿಲ್ಲ. ನಾನು ನನ್ನೊಳಗೆ ಭಯಗೊಂಡಿದ್ದೆನು. ಇವತ್ತಿನ ಬೆಳಗ್ಗೆಯ ಸುದ್ದಿ ನೋಡಿ, ಅಮೇರಿಕಾ ಅಧ್ಯಕ್ಷರಿಗೆ coronavirus test negative ಬಂದಿದೆ ಎಂದ ಕೂಡಲೇ ನನಗೆ ಬಹಳ ಸಂತೋಷವಾಯಿತು. ಅಮೇರಿಕಾ ದೇಶದವರು ಕೋವಿಡ್–19 ಕಾಯಿಲೆಯ ನಿಯಂತ್ರಣಕ್ಕಾಗಿ ಐದು ಸಾವಿರ ಕೋಟಿ ಡಾಲರ್‌ಗಳನ್ನು ಅಂದರೆ, ಮೂರುವರೆ ಲಕ್ಷ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಸುಮಾರು ಎರಡು ಲಕ್ಷ ಮೂವತ್ತೇಳು ಸಾವಿರ ಕೋಟಿ ರೂಪಾಯಿಗಳಷ್ಟು ನಮ್ಮ ರಾಜ್ಯದ ಆಯವ್ಯಯವಿದೆ. ಅಂದರೆ ನಮ್ಮ ರಾಜ್ಯದ ಆಯವ್ಯಯಕ್ಕೂ ಮೀರಿ, ಅಮೇರಿಕಾ ದೇಶದವರು ಹಣವನ್ನು ಮೀಸಲಿಟ್ಟಿದ್ದಾರೆ. ಅವರು ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದಾರೆ. ಕಾಯಿಲೆಗೆ ಸಂಬಂಧಪಟ್ಟಂತೆ ಬಹಳ ಗಂಭೀರವಾದ ಕ್ರಮಗಳನ್ನು ಆ ದೇಶದವರು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತೆಗೆದುಕೊಂಡಿದ್ದಾರೆ. ಅಂತಹ ಗಂಭೀರ ಕ್ರಮಗಳನ್ನು ನಮ್ಮಲ್ಲಿ ಏಕೆ ತೆಗೆದುಕೊಳ್ಳುತ್ತಿಲ್ಲ? ಇವತ್ತಿನ ದಿವಸ ಸದನದಲ್ಲಿ ಈ ಕಾಯಿಲೆಯ ಬಗ್ಗೆ ಚರ್ಚೆಯನ್ನು ಮಾಡಬೇಕೆಂದು ತಮಗೆ ಮನವಿ ಮಾಡಿಕೊಂಡಾಗ ತಾವು ಅದನ್ನು ಅಜೆಂಡಾದಲ್ಲಿ ನಮೂದಿಸಿದ್ದೀರಿ. ಈ ವಿಷಯವನ್ನು ಅಪರಾಹ್ನದಲ್ಲಿ ಚರ್ಚೆಗೆ ತೆಗೆದುಕೊಳ್ಳುವ ವಿಚಾರವು ಮಾನ್ಯ ಸಚಿವರಿಗೆ ಹಾಗೂ ಅಧಿಕಾರಿಗಳಿಗೆ ಗೊತ್ತಿದೆ. ನಾವು ವಿಷಯವನ್ನು ಪ್ರಾರಂಭ ಮಾಡುವ ಸಮಯದಲ್ಲಿ ಸದನದಲ್ಲಿ ಸಚಿವರು ಹಾಗೂ ಅಧಿಕಾರಿಗಳೂ ಸಹ ಇರಲಿಲ್ಲ. ಇವರಿಬ್ಬರೂ ಬರಲಿ ಆಗ ಪ್ರಾರಂಭಿಸುತ್ತೇನೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಂಡಿದ್ದೆನು. ಆದರೆ ಮಾನ್ಯ ಮಂತ್ರಿಗಳು ಸದನಕ್ಕೆ ಬರುತ್ತಾರೆಂದು ಹೇಳಿದ್ದೀರಿ. ಮಾನ್ಯ ಸಚಿವರು ಚರ್ಚೆಯ ಸಮಯದಲ್ಲಿ ಸದನದಲ್ಲಿದ್ದರೆ, ಅವರು ಸಂಗತಿಗಳನ್ನು ನೋಟ್ ಮಾಡಿಕೊಳ್ಳುತ್ತಾರೆ. ಆದರೆ ಚರ್ಚೆಯ ಸಮಯದಲ್ಲಿ ಇಲಾಖೆಯ ಮಂತ್ರಿಗಳಿದ್ದರೆ ಅದು ಹೆಚ್ಚು ಪರಿಣಾಮವನ್ನು ಬೀರುತ್ತದೆ. As you are not handling the Health Portfolio. ಯಾರು Health Portfolio handle ಮಾಡುತ್ತಾರೋ, ಅವರೇ ಸದನದಲ್ಲಿದ್ದರೆ, ಆ ವಿಚಾರದಲ್ಲಿ ಬೆಳಕನ್ನು ಚೆಲ್ಲುವ ಕೆಲಸಗಳಾಗುತ್ತವೆ.

ನಾನು ಮಾತನಾಡಲು ಪ್ರಾರಂಭ ಮಾಡುವ ಸಮಯದಲ್ಲಿ ಆರೋಗ್ಯ ಇಲಾಖೆಯ ಮಾನ್ಯ ಮಂತ್ರಿಗಳು ಹಾಗೂ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ರವರುಗಳು ಸದನದಲ್ಲಿ ಇರಲಿಲ್ಲ. ಮಾನ್ಯ ಹೊರಟ್ಟಿಯವರು ಈಗ ಬಂದಿದ್ದಾರೆ. ಇವತ್ತಿನ 'ಕನ್ನಡ ಪ್ರಭ' ದಿನಪತ್ರಿಕೆಯ ಮುಖಪುಟದಲ್ಲಿ "ಭಾರತ ದೇಶ ಒಂದನೇ ಹಂತದಿಂದ ಎರಡನೇ ಹಂತಕ್ಕೆ ಪ್ರವೇಶ ಮಾಡಿದೆ" ಎಂದು ವರದಿಯಾಗಿದೆ. ಭಾರತ ದೇಶದಲ್ಲಿ ಕಾಯಿಲೆಯು 3 ಮತ್ತು 4 ನೇ ಹಂತಗಳಿಗೆ ತಲುಪುವ ಪರಿಸ್ಥಿತಿ ಉದ್ಭವಿಸಿದೆ. ಕಾಯಿಲೆಯು 3 ಮತ್ತು 4ನೇ ಹಂತಕ್ಕೆ ಹೋದರೆ, ಚೈನಾ ಮತ್ತು ಇಟಲಿ ದೇಶಗಳಲ್ಲಿ ಆದಂತಹ ಪರಿಸ್ಥಿತಿ ನಮ್ಮ ದೇಶದಲ್ಲಿಯೂ ಸಹ ಆಗುತ್ತದೆ. ಬಹಳ ಆತಂಕಕಾರಿಯಾದ ವಿಚಾರವನ್ನು ನಾನು ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ನೋಡಿದ್ದೇನೆ. ಕಾಯಿಲೆಯ ಮೊದಲನೇ ಹಂತವೆಂದರೆ, ವಿದೇಶದ ಕರೋನಾ ವೈರಸ್‌ನ ಸೋಂಕಿತ ವ್ಯಕ್ತಿಗಳು ನಮ್ಮ ದೇಶಕ್ಕೆ ಬಂದಂತಹ ಸಂದರ್ಭದಲ್ಲಿ, ಅವರನ್ನು ಪರೀಕ್ಷೆ ಮಾಡಿದಾಗ ಅವರು ಕರೋನಾ ವೈರಸ್‌ನ positive ಅಥವಾ ಕರೋನಾ ವೈರಸ್‌ನ ಶಂಕಿತ ವ್ಯಕ್ತಿ ಎಂದು ದೃಢಪಟ್ಟಿರುತ್ತಾರೆ. ಇದು ಕಾಯಿಲೆಯ ಮೊದಲನೆ ಹಂತವಾಗಿರುತ್ತದೆ. ಹೊರ ದೇಶದ ಸೋಂಕಿತ ವ್ಯಕ್ತಿಗಳು ನಮ್ಮ ದೇಶಕ್ಕೆ ಬಂದು ನಮ್ಮ ದೇಶವಾಸಿಗಳಿಗೆ ಕಾಯಿಲೆ ಹಬ್ಬಿಸಿದರೆ ಅದು ಎರಡನೆ ಹಂತವಾಗಿರುತ್ತದೆ. ಮೂರನೆ ಹಂತದಲ್ಲಿ ಇಡೀ ಸಮುದಾಯಕ್ಕೆ ಆ ಕಾಯಿಲೆ ವ್ಯಾಪಿಸುವುದು. ಈ ಹಂತದಲ್ಲಿ ಸರಿಯಾದ ಚಿಕಿತ್ಸಾ ಕ್ರಮಗಳನ್ನು ಜರುಗಿಸದಿದ್ದರೆ ಅಂದರೆ, ಸೋಂಕಿತರನ್ನು ಆಸ್ಪತ್ರೆಯ ಪ್ರತ್ಯೇಕ ವಾರ್ಡ್‌ಗಳಲ್ಲಿ 14–15 ದಿನಗಳವರೆಗೆ ದಾಖಲು ಮಾಡದಿದ್ದರೆ, ಸೋಂಕಿತರು ಹಾಗೆಯೇ ಸಮಾಜದಲ್ಲಿ ತಮ್ಮ ನಿತ್ಯ ಕಾರ್ಯಕ್ರಮಗಳ ನಿಮಿತ್ತ ಎಲ್ಲಿ ಬೇಕಾದಲ್ಲಿ ಓಡಾಡಿದರೆ, ಅವರಿಂದ ಕಾಯಿಲೆಯು ಮತ್ತಷ್ಟೂ ಹಬ್ಬುತ್ತದೆ. ಇದು ಕಾಯಿಲೆಯ ಮೂರನೇ ಹಂತವಾಗಿದೆ. ಈ ಹಂತದಲ್ಲಿ ಇಡೀ ಸಮುದಾಯಕ್ಕೆ ಕಾಯಿಲೆಯು ವ್ಯಾಪಿಸುತ್ತದೆ.

**(ಮುಂದು)**

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(435)/16–3–2020/3–40/ಎಲ್‌ಎಂ/ಬಿಎನ್‌ಎಸ್
**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ನಾಲ್ಕನೇ ಹಂತಕ್ಕೆ ಬಂದರೆ ಅದರ ಬಗ್ಗೆ ಹೇಳುವ ಅವಶ್ಯಕತೆಯೇ ಇಲ್ಲ. ನಿನ್ನೆ ಒಂದೇ ದಿನದಲ್ಲಿ ಇಟಲಿಯಲ್ಲಿ 368 ಜನರು ಸತ್ತಿದ್ದಾರೆ. 368 people have died in Italy in one day. ಇದು ತುಂಬಾ ಸೀರಿಯಸ್ ವಿಷಯವಾಗಿದೆ. ಈ ವೈರಸ್ ಹೇಗೆ ಬರುತ್ತದೆ ಎಂದರೆ, ಸಾಮಾನ್ಯ ಶೀತ, ನಿಮೋನಿಯಾ, ತೀವ್ರತರವಾದ ಶ್ವಾಸಕೋಸ ತೊಂದರೆ ಇಷ್ಟೆ ಅಲ್ಲ ಹೊಟ್ಟೆಯ ಮೇಲೆಯು ಪರಿಣಾಮ ಬೀರುತ್ತದೆ ಎನ್ನುವ ವಿಚಾರ ಇಲ್ಲಿ ವ್ಯಕ್ತವಾಗಿದೆ. ಈ ತೊಂದರೆಗೆ ಒಳಗಾದ ವ್ಯಕ್ತಿ ಸೀನಿದರೆ 10 ಫೀಟ್ ವ್ಯಾಪ್ತಿಯಲ್ಲಿ ಇರುವ ಜನರಿಗೆ ಸರಳವಾಗಿ ಅಫೆಕ್ಟ್ ಆಗುವಂತಹ ಸಾಧ್ಯತೆಗಳು ಇವೆ. ಕೆಮ್ಮಿದಾಗ ಗಾಳಿಯಲ್ಲಿ ಆ ಸೂಕ್ಷ್ಮ ವೈರಾಣುಗಳು ಎದುರಿಗೆ ಇದ್ದ ವ್ಯಕ್ತಿಯ ದೇಹದೊಳಗೆ ಪ್ರವೇಶ ಮಾಡುವ ಸಾಧ್ಯತೆ ಇದೆ. ಎದುರಿಗೆ ಇರುವವರು corona affected person ಎಂದು ನಮಗೆ ಗೊತ್ತಿರುವುದಿಲ್ಲ. ಸ್ನೇಹಿತರು ಎಂದು ಅವರ ಜೊತೆ ಕೂಡುತ್ತೇವೆ, ಹಸ್ತಲಾಂಘವ ಮಾಡುತ್ತೇವೆ, ಅವರ ಜೊತೆಯಲ್ಲಿ ತಿಂಡಿ ತಿನ್ನುತ್ತೇವೆ. ಆದರೆ ಅವರು ಸೀನಿದಾಗ ಆ ವೈರಾಣುಗಳು ಹೊರಗಡೆ ಬಂದು 10 ಮೀಟರ್ ವ್ಯಾಪ್ತಿಯಲ್ಲಿ ವ್ಯಾಪಿಸಿರುತ್ತದೆ. ಸ್ಪರ್ಶ ಮಾಡಿದರೆ, ಮೈಯಿಗೆ ಮೈ ಹತ್ತಿದರೆ ಕೊರೊನಾ ಬರುತ್ತದೆ. ಹಸ್ತಲಾಂಘವ ಮಾಡಿದರೂ ಬರುತ್ತದೆ, ಮೊದಲು ನಮ್ಮ ದೇಶದ ಸಂಸ್ಕೃತಿ, ನಮ್ಮ ದೇಶದ ಪರಂಪರೆಯಲ್ಲಿ ನಮಸ್ಕಾರ ಎಂದು ಹೇಳಲಾಗುತ್ತಿತ್ತು. ಈ ಶೇಕ್‌ಹ್ಯಾಂಡ್ ಈಗ ಪ್ರಾರಂಭವಾಗಿದೆ. ನಮ್ಮ ದೇಶದ ಸಂಸ್ಕೃತಿ, ಪರಂಪರೆ ಅತ್ಯಂತ ಉನ್ನತ ಮಟ್ಟದ್ದು ಎನ್ನುವುದು ಈಗ ಸಿದ್ದವಾಯಿತು. ಕೊರೊನಾ ಪೀಡಿತ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ಹಸ್ತಲಾಂಘವ ಮಾಡಿದ ತಕ್ಷಣ ಆ ಇನ್ನೊಬ್ಬ ವ್ಯಕ್ತಿಗೆ ಆ ವೈರಾಣು ತಗಲುತ್ತದೆ. ಆತನು unknowingly, without washing the hands with sanitizer, ನೀರಿನಿಂದ, ಸೋಪ್‌ನಿಂದ ಕೈ ತೊಳೆಯದೆ ಮೂಗಿಗೆ, ಕಣ್ಣಿಗೆ, ಬಾಯಿಗೆ ಕೈ ಹಿಡಿದರೆ 100% ಕರೊನಾ ತಗಲುವ ಸಾಧ್ಯತೆ ಇದೆ. Sanitizer ನಿಂದ, ನೀರಿನಿಂದ, ಸೋಪ್‌ನಿಂದ ಕೈ ತೊಳೆದ ನಂತರ ಕಣ್ಣಿಗೆ, ಬಾಯಿಗೆ, ಮೂಗಿಗೆ ಕೈ ಹಿಡಿದರೆ ಏನೂ ಆಗುವುದಿಲ್ಲ. ಕೊರೊನಾ ಪೀಡಿತ ವ್ಯಕ್ತಿ ಒಂದು ವಸ್ತುವನ್ನು ಮುಟ್ಟಿ ಹೋಗಿರುತ್ತಾನೆ, ನಂತರ ಇನ್ನೊಬ್ಬ ವ್ಯಕ್ತಿ ಆ ವಸ್ತುವನ್ನು ಮುಟ್ಟಿ ಕೈ ತೊಳೆಯದೆ ಹಾಗೆ ಬಾಯಿಗೆ, ಕಣ್ಣಿಗೆ, ಮೂಗಿಗೆ ಕೈ ಹಿಡಿದರೆ 100% ಆ ವ್ಯಕ್ತಿಗೂ ಕೊರೊನಾ ಬರುತ್ತದೆ. ಎಚ್.ಐ.ವಿ. ರೋಗವನ್ನು pandemic ಎಂದು declare ಮಾಡಿದರು. ಈಗ World Health Organization (WHO) ನವರು ಕೊರೊನಾವನ್ನು pandemic ಎಂದು declare ಮಾಡಿದ್ದಾರೆ. Epidemic ಅಲ್ಲ pandemic ಎಂದರೆ global phenomenon. ಇವತ್ತು ಆರೋಗ್ಯ ಸಚಿವರಾದ ಶ್ರೀ ರಾಮುಲುರವರು ಸದನದಲ್ಲಿ ಇದ್ದಾರೆ, Medical Education Minister ಇದ್ದಾಗ ಹಿಂದೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದರ ಬಗ್ಗೆ ಚರ್ಚೆಯಾಗಿತ್ತು. ಆಗ, WHO has declared that corona is pandemic ಎಂದು ನಾನು ಹೇಳಿದೆ. ಅದಕ್ಕೆ ಮಂತ್ರಿಗಳು ಇದು pandemic ಅಲ್ಲ ಎಂದು ಹೇಳಿದರು.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಗಳೆ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ಅಂದು ಚರ್ಚೆ ನಡೆಯುತ್ತಿರುವಾಗ Global Pandemic ಎಂದು declare ಆಗಿರಲಿಲ್ಲ. ಈಗ Global Pandemic ಎಂದು WHO ನವರು declare ಮಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ನೋಡಿ ನಾವು ಪ್ರತಿಪಕ್ಷದವರು ಎಷ್ಟು ಫಾಸ್ಟ್ ಇದ್ದೇವೆ. ಈಗ pandemic ಎಂದು ಆಗಿದೆಯೇ ಇಲ್ಲವೆ? It was declared on that day also. Let us verify. ಶ್ರೀ ಲಹರ್ ಸಿಂಗ್‌ರವರ ಬಗ್ಗೆ ನನಗೆ ಗೌರವವಿದೆ. Subject to verification. ಈಗ pandemic ಇದೆಯೇ ಇಲ್ಲವೆ?

**ಶ್ರೀ ಲಹರ್ ಸಿಂಗ್ ಸಿರೋಯಾ:–** ಈಗ ಆಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಶ್ರೀ ಲಹರ್ ಸಿಂಗ್‌ರವರಿಗೆ ಧನ್ಯವಾದಗಳು. Epidemic ಎಂದರೆ ಒಂದು region ಗೆ ಸೀಮಿತವಾಗಿರುತ್ತದೆ. Pandemic ಎಂದರೆ global phenomenon. ಇಡೀ ಪ್ರಪಂಚದ 150 ರಾಷ್ಟ್ರಗಳಿಗೆ ಇದು ವ್ಯಾಪಿಸಿದೆ. ಒಂದೂವರೆ ಲಕ್ಷಕ್ಕಿಂತ ಹೆಚ್ಚು ಜನರಿಗೆ affect ಆಗಿದೆ. ಅಂದಾಜು 6000 ರಷ್ಟು ಜನರು ಜೀವ ಕಳೆದುಕೊಂಡಿದ್ದಾರೆ. ಇದನ್ನು pandemic ಎಂದು WHO ನವರು declare ಮಾಡಿದ್ದಾರೆ. ಇದು ಮೊದಲ disease ಅಲ್ಲ. ಇದಕ್ಕಿಂತ ಮೊದಲು ಅನೇಕ ರೋಗಗಳನ್ನು pandemic ಎಂದು ಜಾಗತಿಕ ಆರೋಗ್ಯ ಸಂಸ್ಥೆಯವರು declare ಮಾಡಿದ್ದಾರೆ. ಅದರಲ್ಲಿ ಪ್ಲೇಗ್ ಬಂದರೆ ಊರಿಗೆ ಊರೇ ಖಾಲಿಯಾಗುತ್ತಿತ್ತು. ಇದರ ಬಗ್ಗೆ ನಮಗೂ ಗೊತ್ತಿಲ್ಲ. ನಾವು ಹುಟ್ಟುವುದಕ್ಕಿಂತ ಮೊದಲೇ ಈ ರೋಗ ಬಂದಿತ್ತು. ಎಚ್‌ಐವಿ, ಎಚ್1ಎನ್1 ಮತ್ತು Tuberculosis ನ್ನು pandemic ಎಂದು declare ಮಾಡಿದ್ದಾರೆ. ಅದಕ್ಕೆ ಲಸಿಕೆಯನ್ನು ಕಂಡುಹಿಡಿಯುವಷ್ಟರಲ್ಲಿಯೇ ಲಕ್ಷಾಂತರ, ಕೋಟ್ಯಾಂತರ ಜನರು ಜೀವ ಕಳೆದುಕೊಂಡರು. Spread ಆಯಿತು. ಇದರ ಲಕ್ಷಣ ಎಂದರೆ, ಮೂಗು ಸೋರುವುದು, ತಲೆ ನೋವು, ಕೆಮ್ಮು, ಗಂಟಲು ನೋವು ಮತ್ತು ಜ್ವರ ಬರುತ್ತದೆ. ನಮಗೆ ಹುಟ್ಟಿನಿಂದ ನೆಗಡಿ, ಕೆಮ್ಮು ಸರ್ವಸಾಮಾನ್ಯ. ಈಗ ನೆಗಡಿ, ಕೆಮ್ಮು ಬಂದರೆ ಏನು ಇದು ಎನ್ನುವ ಪರಿಸ್ಥಿತಿ ಬಂದಿದೆ. ಕೆಮ್ಮು ಬಂದವರ ಪಕ್ಕದಲ್ಲಿ ಕೂಡಲು ನಮಗೆ ಭಯವಾಗುತ್ತಿದೆ. ಜ್ವರ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಂದಿದೆ ಸ್ವಲ್ಪ ಮೈ ಬಿಸಿಯಾಗಿದೆ ಎಂದರೆ, ಅಂತವರ ಉಸಾಬರಿಗೆ ಹೋಗಬೇಡಿ ಎಂದು ಹೇಳುತ್ತಾರೆ. ಗಂಟಲು ಕೆರೆಯುತ್ತಿದೆ ಎಂದರೆ ಏನೊ ಅದೇ ಇರಬಹುದು ಎನ್ನುತ್ತಾರೆ. These are the common symptoms. ಇದು ಹೋದ ವರ್ಷ ಚೈನಾ ದೇಶದ Wuhan ಪ್ರಾಂತ್ಯದಲ್ಲಿ ಮೊದಲು ಕಾಣಿಸಿಕೊಂಡಿತ್ತು. ಇವತ್ತು ವಿಶ್ವದ 150 ರಾಷ್ಟ್ರಗಳಿಗೆ ಆವರಿಸಿದೆ. ಭಾರತದಲ್ಲಿ ಸುಮಾರು 102 ಜನರಿಗೆ ಈ ಸೋಂಕು ತಟ್ಟಿದೆ. ಇಡೀ ಪ್ರಪಂಚದಲ್ಲಿ ಹೆಚ್ಚು ಜನಸಂಖ್ಯೆ ಹೊಂದಿದ ಎರಡನೆಯ ರಾಷ್ಟ್ರ ಎಂದರೆ ಭಾರತ. ಚೈನಾದಲ್ಲಿ 150ಕೋಟಿಗಿಂತ ಸ್ವಲ್ಪ ಹೆಚ್ಚು ಜನಸಂಖ್ಯೆ ಇರಬಹುದು. ನಮ್ಮ ದೇಶದ ಜನಸಂಖ್ಯೆ 130 ಕೋಟಿ ಇದೆ. Next to China ನಮ್ಮದೇ ದೊಡ್ಡ ರಾಷ್ಟ್ರ. ನಮ್ಮಲ್ಲಿ Stage-3, Stage-4 ಗೆ ಹೋದರೆ ನಮ್ಮ ಗತಿ ಏನಾಗಬಾರದು? ಇನ್ನು 30 ದಿನಗಳ ಸಮಯವಿದೆ. ಈ 30 ದಿನಗಳಲ್ಲಿ ಸೀರಿಯಸ್ ಆಗಿ, ಇವತ್ತು ನಡೆದ ಘಟನೆಯ ರೀತಿಯಲ್ಲಿ ಮತ್ತೆ ಆಗದಂತೆ, ಗಂಭೀರವಾಗಿ ತೆಗೆದುಕೊಂಡು ಇದರ ಬಗ್ಗೆ preventive measures ಕಂಡುಹಿಡಿಯಬೇಕು. ಭಾರತದಲ್ಲಿ 100ಕ್ಕಿಂತ ಹೆಚ್ಚು ಜನರಿಗೆ ಸೋಂಕು ತಟ್ಟಿದೆ ಅಷ್ಟೆ ಅಲ್ಲ, 4000 ಜನರ ಮೇಲೆ ಈಗಾಗಲೇ ನಿಗಾವಹಿಸಲಾಗಿದೆ. ನಮ್ಮ ದೇಶದಲ್ಲಿ 28 ರಾಜ್ಯಗಳು ಇವೆ, 8 ರಾಜ್ಯಗಳು ಕೇಂದ್ರಾಡಳಿತ ಪ್ರದೇಶಗಳು, ಅದರಲ್ಲಿ 20 ರಾಜ್ಯಗಳಿಗೆ ಈ ವೈರಾಣು ಕದಂಬ ಬಾಹುವನ್ನು ಚಾಚಿದೆ. ಸ್ವಲ್ಪ ಹೆಚ್ಚು–ಕಡಿಮೆಯಾಗಿ ಇಡೀ ಭಾರತ ದೇಶವನ್ನೆ ವ್ಯಾಪಿಸಿದೆ. ನಮ್ಮ ಕರ್ನಾಟಕಕ್ಕೂ ಎಂಟ್ರಿಯಾಗಿದೆ. ಇಲ್ಲಿ ಶಂಕಿತರು ಬೆಂಗಳೂರಿನಲ್ಲಿ 9 ಜನರು, ಹಾಸನದಲ್ಲಿ 4ಜನ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 7ಜನ, ಕಲ್ಬುರ್ಗಿಯಲ್ಲಿ 4 ಜನರು. ಇದರಲ್ಲಿ ಒಬ್ಬರು ಸಿದ್ದಿಕಿ ಎನ್ನುವವರು ನಿಧನರಾದರು. ಇವರು ಸೌದಿ ಅರೇಬಿಯಾದಿಂದ ಬಂದಿದ್ದರು. ಅವರ ಕುಟುಂಬದಲ್ಲಿ ಇನ್ನೊಬ್ಬರಿಗೆ positive ಎಂದು ಬಂದಿದೆ. ಮಾನ್ಯ ಮಂತ್ರಿಗಳಿಗೆ ಹೆಸರು ಗೊತ್ತಿರಬಹುದು, not to be disclosed ಎಂಬಂತೆ ನಿಯಮವಿರಬಹುದು. ನಮ್ಮ ಜಿಲ್ಲೆಯ ಆರೋಗ್ಯಾಧಿಕಾರಿ (DHO) ರವರ ಜೊತೆಯಲ್ಲಿ ಚರ್ಚೆ ಮಾಡಿದಾಗ, we will not disclose the name ಎಂದರು. ನೀವು ಬೇಕಾದರೆ ಕೇಳಿ ಎಂದರು, ಆದರೆ, ನಾನು, I will never ask ಎಂದೆ. ನನ್ನ ಜಿಲ್ಲೆಯಲ್ಲಿಯೇ ಒಬ್ಬರಿಗೆ admit ಮಾಡಿದರು, ಅವರದು negative ಬಂತು ಆ ಮಾತು ಬೇರೆ. ಆದರೆ ಯಾರು ಅವರು ಎಂದು ನಮ್ಮ ಜಿಲ್ಲೆ ಆರೋಗ್ಯಾಧಿಕಾರಿಯವರನ್ನು ಕೇಳಿದೆ, ಅದಕ್ಕೆ ಅವರು ನೀವು ಪ್ರತಿಪಕ್ಷದ ನಾಯಕರು ನಮ್ಮ ಜಿಲ್ಲೆಯವರೆ ಆದರೆ ನಮಗೆ ಹೇಳಬಾರದು ಎಂದು ಹೇಳಿದ್ದಾರೆ. ಕಾನೂನು ಅದೇ ರೀತಿ ಇದೆ ಎಂದು ಹೇಳಿದರು. ನಾನು ಹೇಳಬೇಡಿ ಬಿಡಿಯೆಂದೆ. I did not ask. ಕಾನೂನು ಮಾಡುವ ನಾವು ಆ ಕಾನೂನನ್ನು ಗೌರವಿಸಬೇಕು. More than that, we are holding the Constitutional post. 14ನೇ ತಾರೀಖಿನಿಂದ ಒಂದು ವಾರ ಬ್ಯಾನ್ ಮಾಡಿದ್ದಾರೆ. ಆಡಳಿತ ಪಕ್ಷದ ಮುಖ್ಯ ಸಚೇತಕರು ಅವರ ಮಗಳ ಮದುವೆ ನಿಮಿತ್ತ ಸದನಕ್ಕೆ ಹಾಜರಾಗಲು ಸಾಧ್ಯವಾಗುವುದಿಲ್ಲ ಎನ್ನುವುದನ್ನು ಮೊನ್ನೆ ಸಭಾಪತಿಯವರು ಒಂದು ಪ್ರಕಟಣೆಯನ್ನು ಮಾಡಿ ತಿಳಿಸಿದರು. ಆಡಳಿತ ಪಕ್ಷದ ಮುಖ್ಯ ಸಚೇತಕರು ನನಗೆ ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆತ್ಮೀಯರು. ಏಕೆಂದರೆ ನನ್ನ ಪಕ್ಕದ ಜಿಲ್ಲೆಯವರು. ನಾನು ಬಹಳ ಧರ್ಮಸಂಕಟಕ್ಕೆ ಸಿಲುಕಿಕೊಂಡಿದ್ದೆ. ಏಕೆಂದರೆ, I promised him that I will attend the marriage of his daughter.

(ಮುಂದು)

436/16-03-2020/03-50/ಬಿಎಸ್‌ಡಿ–ಬಿಎನ್‌ಎಸ್

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ರಾಜ್ಯ ಸರ್ಕಾರದವರು ಕಟ್ಟುನಿಟ್ಟಿನ ಕ್ರಮ ಕೈಗೊಂಡು ಮಾಲ್‌ಗಳನ್ನು ಬಂದ್ ಮಾಡಿದ್ದಾರೆ. Cinema theatre ಗಳನ್ನು ಬಂದ್ ಮಾಡಿದ್ದಾರೆ. ಬೆಂಗಳೂರು ನಗರದಲ್ಲಿ 16 ಸಾವಿರ ಹೋಟೆಲ್‌ಗಳು ಮತ್ತು 450 Five Star hotel ಗಳಿವೆ ಎಂದು ತಿಳಿದುಬಂದಿದೆ. ಬೀದಿ ಬದಿಗಳಲ್ಲಿ ತಳ್ಳುವ ಗಾಡಿ, ಸಣ್ಣಪುಟ್ಟ ಹೋಟೆಲ್‌ಗಳೆಲ್ಲವೂ ಬಂದ್ ಆಗಿವೆ. Standstill, ಅಂದರೆ ಕರ್ನಾಟಕವು ಸ್ಥಬ್ಧವಾಗಿದೆ. ಅಪ್ಪಿ–ತಪ್ಪಿ ಎಲ್ಲೋ ಒಂದೆರಡು open ಆಗಿರಬಹುದು. ಆ ವಿಚಾರ ಹೇಳುವುದಿಲ್ಲ. ನಾನೊಬ್ಬ ಪ್ರತಿಪಕ್ಷದ ನಾಯಕನಾಗಿ ನನ್ನ ಜವಾಬ್ದಾರಿ ಇದೆ. More or less, I treat him as my family member. ನನ್ನ ಕುಟುಂಬದ ಸದಸ್ಯರಂತಿರುವ ವೈದ್ಯರ ಮಗಳ ಮದುವೆಗೆ ಹೋಗಲಾರದ ಪರಿಸ್ಥಿತಿ ನಿರ್ಮಾಣವಾಯಿತು, ನನ್ನ ಮಗಳಂತಿರುವವರ ಮದುವೆಗೆ ಹೋಗಲು ಆಗಲಿಲ್ಲ. ಅದರ ಬಗ್ಗೆ ಚರ್ಚೆಗೆ ಹೋಗುವುದಿಲ್ಲ. We have to respect the law. We are the Legislators. ನಾವು ಕಾನೂನು ಮಾಡಿ ಗೌರವಿಸಬೇಕಲ್ಲವೇ? ನಾವು ಗೌರವಿಸಿದರೆ ರಾಜ್ಯದ ಮತ್ತು ದೇಶದ ಜನರು ಗೌರವಿಸುತ್ತಾರೆ. ಕಾನೂನು ಮಾಡುವವರೇ ಗೌರವಿಸದಿದ್ದರೆ ಒಳ್ಳೆಯದಲ್ಲ ಎಂದು ನನಗೆ ಅನಿಸಿದ್ದನ್ನು ಹೇಳುತ್ತೇನೆ. ಕರ್ನಾಟಕದಲ್ಲಿ ಬೆಂಗಳೂರಿನಲ್ಲಿ 9 ಮಂದಿ, ಹಾಸನದಲ್ಲಿ 4 ಮಂದಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 7 ಮಂದಿ, ಕಲ್ಬುರ್ಗಿಯಲ್ಲಿ 4 ಜನ, ಉಡುಪಿಯಲ್ಲಿ 2 ಮಂದಿ, ಬಳ್ಳಾರಿಯಲ್ಲಿ ಒಬ್ಬರು, ಚಿಕ್ಕಮಗಳೂರಿನಲ್ಲಿ 2 ಮಂದಿ, ಕೊಡಗಿನಲ್ಲಿ ಒಬ್ಬರು ಮತ್ತು ಬೀದರ್‌ನಲ್ಲಿ 2 ಮಂದಿ ಸೋಂಕು ತಗಲಿರುವ ಶಂಕಿತ ಜನರಿದ್ದಾರೆ. ನಾಳೆ laboratory ಯಲ್ಲಿ negative report ಬರಬಹುದು. ಅಂದರೆ, more than 100 people have already been affected. ನೂರಕ್ಕಿಂತ ಹೆಚ್ಚು ಜನರಿಗೆ ಸೋಂಕು ತಟ್ಟಿದೆ. It is a very serious stage. ಈಗಾಗಲೇ ಮಾಧ್ಯಮದವರು ಸರ್ಕಾರದ ಗಮನಕ್ಕೆ ತಂದಿದ್ದಾರೆ. We are already in the second stage and we are heading towards third and fourth stage. ಮೂರು ಅಥವಾ ನಾಲ್ಕನೆಯ ಹಂತಕ್ಕೆ ಹೋಗುವ ಹಂತದಲ್ಲಿದ್ದು, ನಾಲ್ಕನೆಯ ಹಂತಕ್ಕೆ ಹೋದರೆ ಭಾರತವು ಚೈನಾ ಆಗುತ್ತದೆ ಎಂದು ಹೇಳಿದ್ದಾರೆ. ಸರ್ಕಾರವು ಬಹಳ serious ಆಗಿರಬೇಕು. ಒಂದು ನೋವಿನ ಮಾತನ್ನು ನನಗೆ digest ಮಾಡಿಕೊಳ್ಳಲು ಆಗುತ್ತಿಲ್ಲ. ಅದೇನೆಂದರೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನೂರಕ್ಕಿಂತ ಹೆಚ್ಚು ಶಂಕಿತರು ನಮ್ಮ ದೇಶದಲ್ಲಿದ್ದು, ಚೈನಾ ನಂತರ ನಮ್ಮ ದೇಶ ಜನಸಂಖ್ಯೆಯಲ್ಲಿ ಎರಡನೆಯ ದೊಡ್ಡ ರಾಷ್ಟ್ರವಾಗಿದೆ. ಮೊದಲನೆ victim, ಮೊದನೆಯ death ನಮ್ಮ ರಾಜ್ಯದಲ್ಲಿ ಆಯಿತಲ್ಲ ಎಂಬುದನ್ನು ನನ್ನ ಮನಸ್ಸು ಒಪ್ಪುತ್ತಿಲ್ಲ. ಏಕೆಂದರೆ ನಮ್ಮ ರಾಜ್ಯದಲ್ಲಿ ಏಕೆ ಆಯಿತು? ನಮ್ಮ ಕರ್ನಾಟಕ ರಾಜ್ಯವು ಇಡೀ ಭಾರತ ದೇಶದಲ್ಲಿ ಒಳ್ಳೆಯದಕ್ಕೆ ಮತ್ತು ಸಾಧನೆಗೆ, we stand at No.1. ಎಲ್ಲದ್ದರಲ್ಲೂ ಒಂದನೆಯ ನಂಬರ್‌ನಲ್ಲಿ ಇರುತ್ತೇವೆ. ಇವತ್ತು corona disease ನಿಂದ ನೂರಕ್ಕಿಂತ ಹೆಚ್ಚು ಜನರಿಗೆ ಸೋಂಕಾಗಿದ್ದು, ಮೊದಲನೆಯ death ನಮ್ಮ ರಾಜ್ಯದಲ್ಲಿ ಆಗಿರುವುದರಿಂದ ಕರ್ನಾಟಕ ರಾಜ್ಯದ ಆರೋಗ್ಯ ಇಲಾಖೆಯಲ್ಲಿ ಇದೊಂದು ಕಪ್ಪು ಚುಕ್ಕೆ, black spot ಎಂದು ನನಗೆ ಅನಿಸಿರುವ ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. The Government could have taken preventive measures. ನಾನು ಹಿಂದೆ ಮಾತನಾಡುವಾಗ prevention is better than cure ಎಂಬ ಮಾತನ್ನು ಹೇಳಿದ್ದೇನೆ. ಇಲ್ಲಿಯವರೆಗೆ ಇದಕ್ಕೆ ಲಸಿಕೆ ಮತ್ತು ಚಿಕಿತ್ಸೆ ಮಾಡಲು ಮಾರ್ಗೋಪಾಯಗಳೂ ಇಲ್ಲ. ಇದನ್ನು prevent ಮಾಡಲು ಔಷಧ ಇನ್ನೂinvention ಆಗಿಲ್ಲ. ನನಗೆ ಅನಿಸಿದ್ದನ್ನು ನಾನು ಹೇಳುತ್ತೇನೆ. ವಿಶ್ವವ್ಯಾಪಿಯಾಗಿರುವ ಈ ರೋಗಕ್ಕೆ ಎಲ್ಲಾ ದೇಶಗಳು ಅಹೋರಾತ್ರಿ ಔಷಧ ಕಂಡು ಹಿಡಿಯಲು ಹೋರಾಟ ಮಾಡುತ್ತಿದ್ದು, ಇನ್ನೂ ಸಫಲವಾಗಿಲ್ಲ. ನಾನು ತಿಳಿದುಕೊಂಡಂತೆ ಇದಕ್ಕೆ ಒಂದು ತಿಂಗಳು ಹಿಡಿಯಬಹುದು, ಒಂದು ವರ್ಷ ಹಿಡಿಯಬಹುದು, ಅಥವಾ ನಾಲ್ಕೈದು ವರ್ಷ ಹಿಡಿಯಬಹುದು. ಹಿಂದೆ ಪ್ಲೇಗ್‌ನಂತಹ ರೋಗಗಳು ಬಂದಿದ್ದು, ಲಸಿಕೆ ಕಂಡು ಹಿಡಿದಿದ್ದರಿಂದ ಜನರು ಉಳಿದಿದ್ದಾರೆ. ಮಾನ್ಯ ಸವದಿಯವರಿಗೆ ಗೊತ್ತಿರಬಹುದು. ಈ ರೋಗದಿಂದ ಇಡೀ ಊರಿಗೆ ಊರೇ ಖಾಲಿಯಾಗುತ್ತಿತ್ತು. ಪ್ಲೇಗ್ ಬಂದು ಊರಿಗೆ ಬಂದರೆ ಆ ಊರೇ ಖಲಾಸ್ ಆಗುತ್ತಿತ್ತು. ಊರು ಉಳಿಯುತ್ತಿರಲಿಲ್ಲ. ನಂತರ ಅದಕ್ಕೆ ಲಸಿಕೆ ಕಂಡು ಹಿಡಿದರು. ಯಾವುದಾದರೊಂದು ರೋಗಕ್ಕೆ ಲಸಿಕೆ ಕಂಡು ಹಿಡಿದ ತಕ್ಷಣ ಮನುಷ್ಯನ ಮೇಲೆ ಪ್ರಯೋಗಿಸಲು ನೂರೆಂಟು restriction ಗಳಿವೆ ಮತ್ತು ಕಾನೂನುಗಳಿವೆ. ಲಸಿಕೆ ಕಂಡು ಹಿಡಿದಿರುವುದರಿಂದ ಆರಾಮವಾಗಿರಬಹುದೆಂದು, we can't administer that medicine on an affected person. ಅದಕ್ಕಾಗಿಯೇ ಕಾನೂನುಗಳಿದ್ದು, ಮನಸೋ ಇಚ್ಛೆ ಕಂಡುಹಿಡಿದ ಔಷಧವನ್ನು ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ಉಪಯೋಗಿಸಲು parameter ಇವೆ. It is safe. ಇಲ್ಲದಿದ್ದರೆ, side effect ಆಗಬಹುದು. ಹೊಸದಾಗಿ ಕಂಡು ಹಿಡಿದ ಔಷಧದಿಂದ ರೋಗ ತರುವ ವೈರಾಣುವನ್ನು ಕೊಂದು, ಮತ್ತೊಂದಕ್ಕೆ ದಾರಿ ಮಾಡಿಕೊಡಬಹುದು. ಆದ್ದರಿಂದ ಬಹಳ ಭಯಾನಕ ಸ್ಥಿತಿ ನಿರ್ಮಾಣವಾಗಿದೆ. ಆದರೆ ಒಂದು ವೇಳೆ bacteria ಇದ್ದರೆ, it can be treated very well. ಆದರೆ ಇದು ಕಣ್ಣಿಗೆ ಕಾಣದಂತಹ ಹೊಸ ವೈರಾಣುವಾಗಿದೆ. ಪ್ರಪಂಚದಲ್ಲಿಯೇ ಇದೊಂದು ಹೊಸ ವೈರಾಣುವಾಗಿದೆ. ಇದಕ್ಕೆ ಲಸಿಕೆ ಅಥವಾ ಔಷಧವನ್ನು ಕಂಡು ಹಿಡಿಯುವುದು ಬಹಳ ಕಷ್ಟವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಚೈನಾದಲ್ಲಿ corona virus ಸಹಸ್ರಾರು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಜನರನ್ನು ಬಲಿ ತೆಗೆದುಕೊಂಡಿದೆ ಈ ಸೋಂಕು ವಿದೇಶ ಪ್ರಯಾಣ ಮಾಡಿದಂತಹ ಪ್ರಯಾಣಿಕರಿಂದ ಇತರ ದೇಶಗಳಿಗೆ ಹರಡಿದೆ. ಸೋಂಕಿತ ವ್ಯಕ್ತಿಗಳು ಬೇರೆ ಬೇರೆ ದೇಶಗಳಿಗೆ ಪ್ರಯಾಣ ಮಾಡಿದ ಸಂದರ್ಭದಲ್ಲಿ ಹರಡಿದೆ ಎನ್ನುವ ಮಾತುಗಳನ್ನು ಹೇಳುತ್ತಿದ್ದಾರೆ. ಇದನ್ನು ನಿಯಂತ್ರಣ ಮಾಡಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಪಾತ್ರ ಬಹಳ ಮಹತ್ವವಿದೆ. ಈಗ ದೇಶವ್ಯಾಪಿಯಾಗಿದ್ದು, ಸಂತೋಷದ ವಿಚಾರವೆಂದರೆ ನಮ್ಮ ಕೇಂದ್ರ ಸರ್ಕಾರದವರು ಭಾರತ–ಬಾಂಗ್ಲಾ ದೇಶದ ಗಡಿಯನ್ನು ಬಂದ್ ಮಾಡಿದ್ದಾರೆ, ಅದೇ ರೀತಿ ಭಾರತ–ಬೂತಾನ್, ಭಾರತ–ನೇಪಾಳ್ ಹಾಗೂ ಭಾರತ–ಮಯನ್ಮಾರ್ ಗಡಿಗಳನ್ನು ಏಪ್ರಿಲ್ 16ನೇ ತಾರೀಖಿನವರೆಗೂ ಬಂದ್ ಮಾಡಿದ್ದಾರೆ. ನಮ್ಮ ದೇಶದ ಪಶ್ಚಿಮ ಬಂಗಾಳ, ತೆಲಂಗಾಣ, ಛತ್ತೀಸ್‌ಘಡಗಳಲ್ಲಿ ನಮ್ಮ ರಾಜ್ಯದಲ್ಲಿ ಆಗಿರುವಂತೆ ಮಾರ್ಚ್ 31ನೇ ತಾರೀಖಿನವರೆ ಎಲ್ಲವನ್ನೂ ಬಂದ್ ಮಾಡಿದ್ದಾರೆ. ಅಂದರೆ ಅವರುಗಳು ಸಹ preventive measures ತೆಗೆದುಕೊಂಡಿದ್ದಾರೆ. ಈ corona disease ವಿಶ್ವವ್ಯಾಪಿಯಾಗಿ ಹರಡುತ್ತದೆ ಎಂಬ ಕಲ್ಪನೆಯ ಬಗ್ಗೆ ಮಾಧ್ಯಮದವರು ಬಹಳವಾಗಿ ಬಿಂಬಿಸಿ ಹೇಳಿದ್ದಾರೆ, ಇದು ಮನುಕುಲಕ್ಕೆ ಮಾರಕವಾಗುವ ವೈರಾಣು ಮತ್ತು ಭಯಾನಕ ವೈರಾಣುವಾಗಿದೆ. ಇದೊಂದು most dangerous virus ಎಂದು ಬಹುತೇಕ ಎಲ್ಲಾ ಚಾನಲ್‌ನವರು ಪ್ರಸಾರ ಮಾಡಿದ್ದಾರೆ. Print media ದವರು ಬಹಳ publicity ಮಾಡಿದ್ದಾರೆ. ದೃಶ್ಯ ಮಾಧ್ಯಮದವರು ಬಹಳವಾಗಿ ಪ್ರಸಾರ ಮಾಡುತ್ತಿದ್ದು, ನಾವು ಟಿ.ವಿ. ಹಾಕಿದರೆ corona, COVID-19 ಎಂದು ಪ್ರಸಾರವಾಗುತ್ತಿರುತ್ತದೆ. ಇಷ್ಟೊಂದು ಆದಾಗ್ಯೂ ಸರ್ಕಾರದವರು ಎಚ್ಚೆತ್ತುಕೊಳ್ಳಬೇಕಾಗಿತ್ತಲ್ಲವೇ? ಮಾನ್ಯ ಸಭಾಪತಿಯವರೇ, ಯುರೋಪ್ ದೇಶಗಳಲ್ಲಿ ಈ ರೋಗ ಬಹಳ ಹೆಚ್ಚಾಗುತ್ತಿದೆ. ಚೈನಾ ದೇಶದಲ್ಲಿ ಕಡಿಮೆಯಾಗುತ್ತಿದೆ ಎಂಬ ಸುದ್ದಿ ತಿಳಿದಿದ್ದು, ಎಷ್ಟರಮಟ್ಟಿಗೆ ಸತ್ಯ ಇದೆಯೋ ಗೊತ್ತಿಲ್ಲ. ಇವತ್ತು ಯುರೋಪ್ ಮತ್ತು ಚೈನಾ ದೇಶಗಳಿಂದ ಬರುವ ಪ್ರಯಾಣಿಕರಿಗೆ ಅತ್ಯಂತ ನಿಖರ ಮತ್ತು ಕಠಿಣ ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕಾಗಿತ್ತು. Airport ಸರ್ಕಾರದ ಅಧೀನದಲ್ಲಿದೆ. ಚೈನಾ ಮತ್ತು ಯುರೋಪ್‌ಗಳಿಂದ ಬರುವ ಪ್ರಯಾಣಿಕರಿಗೆ ಜ್ವರ, ನೆಗಡಿ, ಕೆಮ್ಮು ಇದೆಯೋ ಎಂದು ತಪಾಸಣೆ ಮಾಡಬೇಕಾಗಿತ್ತು. ಈ ವೈರಾಣು ವಿಶೇಷವೆಂದರೆ 14 ದಿವಸಗಳ ಕಾಲ hidden ಆಗಿರುತ್ತದೆ. ಉದಾಹರಣೆಗೆ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಈ ರೋಗ ಬಂದ ತಕ್ಷಣ ತಪಾಸಣೆ ಮಾಡಿದರೆ ಕಂಡು ಹಿಡಿಯುವುದಕ್ಕೆ ಆಗುವುದಿಲ್ಲ. ಆದರೆ 14 ದಿವಸಗಳ ನಂತರ erupt ಆಗುತ್ತದೆ. ನಾನು ಕೇವಲ ಮಾತಿಗೆ ಉಪ ಮುಖ್ಯಮಂತ್ರಿಗಳ ಹೆಸರನ್ನು ಹೇಳಿದೆ. ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ದೇವರು ಆಯುರಾರೋಗ್ಯ, ಸುಖ ಸಂಪತ್ತು, ಸಮೃದ್ಧಿ ಕೊಡಲಿ. ಈಗ ಅವರು lucky man ಆಗಿದ್ದಾರೆ. ಅವರಿಗೆ ಯಾರು ಏನು ಹೇಳಿದರೂ ಏನೂ ಆಗುವುದಿಲ್ಲ. ಉದಾಹರಣೆಗಾಗಿ ಮಾನ್ಯ ಸಭಾನಾಯಕರನ್ನೇ ತೆಗೆದುಕೊಳ್ಳಬಹುದಿತ್ತು. ಅವರು ನನ್ನ ಸ್ನೇಹಿತರು. I pray almighty. Let him be blessed with long life and healthy life. ಅವರು ಇನ್ನೂ ಎತ್ತರಕ್ಕೆ ಹೋಗಲಿ. ಇನ್ನೊಬ್ಬರಿಗೆ ಒಳ್ಳೆಯದನ್ನು ಅಪೇಕ್ಷೆ ಮಾಡುವುದೇ ನನ್ನ ಧರ್ಮ ಮತ್ತು ನೀತಿಯಾಗಿದೆ. ನನಗೆ ಸ್ವಂತ ಚಲೋ ಆಗುವುದಕ್ಕಿಂತ ಇನ್ನೊಬ್ಬರಿಗೆ ಆಗಿದೆ ಎಂದರೆ ನಾನು ಖುಷಿ ಪಡುತ್ತೇನೆ. ನಮ್ಮ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಕ್ಷಕ್ಕೆ ಕೈಕೊಟ್ಟು ಹೋದವರಿಗೆ ನಾನೇನೂ ಹೇಳಿಲ್ಲ. ಆಯಿತು, ಹೋಗಲಿ ಬಿಡು ಎಂದು ಹೇಳಿದೆವು. ಈ corona ರೋಗದ ಸೋಂಕಿಗೆ ಕೈ ಕೊಡುವುದೇ ವಿರೋಧವಾಗಿದೆ. ಅವರು ಯೋಚನೆ ಮಾಡಬೇಕು, ಕೈ ಕೊಡುವುದನ್ನು ಇನ್ನು ಮೇಲೆ ಮಾಡುವುದಕ್ಕೆ ಹೋಗಬಾರದು.

(ಮುಂದು)

(437)/16.03.2020/4.00/ಹೆಚ್‌ವಿ–ಜಿಆರ್

**ಶ್ರೀ ಎಸ್.ಆರ್.ಪಾಟೀಲ್(ಮುಂದುವರೆದದ್ದು)**

ಸನ್ಮಾನ್ಯ ಸಭಾಪತಿಯವರೇ, ನಮಗೆ ಮತ್ತು ಹೊರಟ್ಟಿಯವರಿಗೆ ಅಲ್ಲಿರುವ ಕೆಲವು ನಮ್ಮ ಮಿತ್ರರು ಕೈಕೊಟ್ಟು ಹೋಗಿರುವುದಕ್ಕೆ ಚೈನಾದಲ್ಲಿ ಈ ವೈರಾಣು ಹುಟ್ಟಿದೆಯೆಂದು ನನಗನಿಸುತ್ತಿದೆ. ಇನ್ನು ಮುಂದಾದರೂ ಅವರುಗಳು ಕೈಕೊಡದೇ ಎಲ್ಲಿದ್ದಾರೆಯೋ ಅಲ್ಲಿಯೇ ಶಾಂತಿ, ನೆಮ್ಮದಿಯಿಂದ ಇರಲಿ.

ಸನ್ಮಾನ್ಯ ಸಭಾಪತಿಯವರೇ, ಸರ್ವವ್ಯಾಪಿಯಾಗಿರುವ ಕೊರೊನಾ ಬಗ್ಗೆ ಎಲ್ಲ ಮಾಧ್ಯಮದವರು ಇಂಚಿಂಚು ಎಳೆಎಳೆಯಾಗಿ ಬಿಡಿಸಿ ಮಾಹಿತಿ ಕೊಟ್ಟ ಮೇಲೆ ಆರೋಗ್ಯ ಇಲಾಖೆಯವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಎಚ್ಚೆತ್ತುಕೊಂಡು they would have swung into action. ಈ ವೈರಾಣು ನಮ್ಮ ದೇಶಕ್ಕೆ, ನಮ್ಮ ರಾಜ್ಯಕ್ಕೆ ಬರಬಹುದು ಎನ್ನುವ ಎಚ್ಚರಿಕೆ ವಹಿಸಿ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಯಾರು ಚೈನಾದಿಂದ, ಯೂರೋಪಿನಿಂದ ಬಂದಿದ್ದರು ಅವರನ್ನು ಕರೆದುಕೊಂಡು ಹೋಗಿ ಐಸೋಲೇಷನ್ ವಾರ್ಡ್‌ನಲ್ಲಿ ಇಟು 14 ದಿನಗಳ ಕಾಲ ಚಿಕಿತ್ಸೆ ನೀಡಿ, ಅವರುಗಳ ಕಫಾವನ್ನು ಪರೀಕ್ಷೆಗಾಗಿ ಲ್ಯಾಬ್‌ಗೆ ಕಳುಹಿಸಿ, ನೆಗೆಟಿವ್ ಎಂದು ಕಂಡು ಬಂದಿದ್ದರೆ, you can go out ಎಂದು ಹೇಳಬಹುದಾಗಿತ್ತು. ಆದರೆ, ಆ ರೀತಿಯ ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಅವರುಗಳನ್ನು ಬಿಟ್ಟುಬಿಟ್ಟಿದ್ದಾರೆ. ಅವರ ತಂಟೆಗೇ ಹೋಗಿಲ್ಲ. ಇಂತಹ ಮುಂಜಾಗ್ರತಾ ಕ್ರಮಗಳನ್ನು ಅವರು ತೆಗೆದುಕೊಂಡಿದ್ದರೇ, ಈ ರೀತಿ ಉಲ್ಬಣವಾಗುತ್ತಿರಲಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವಾಗಿರುವ ಮಾಧ್ಯಮದವರು ಎಷ್ಟೊಂದು ವಿಸ್ತಾರವಾಗಿ ಈ ವೈರಾಣುವಿನ ಭಯಾನಕ ಸತ್ಯವನ್ನು ಹೊರಗೆಡವಿದ್ದರೂ ಸಹ ಬಾಧಿತ ರಾಷ್ಟ್ರಗಳಿಂದ ಬಂದಿರುವವರನ್ನು ಕರೆದುಕೊಂಡು ಹೋಗಿ ವಿಶೇಷ ವಾರ್ಡ್‌ನಲ್ಲಿರಿಸಿ ಸೂಕ್ತ ಕ್ರಮಕೈಗೊಂಡಿದ್ದರೆ ನಮ್ಮ ರಾಜ್ಯದಲ್ಲಿ ಯಾರೊಬ್ಬರಿಗೂ ಈ ಸೋಂಕು ತಗಲುತ್ತಿರಲಿಲ್ಲ. ದುರ್ದೈವದ ಸಂಗತಿಯೆಂದರೆ, ಇಡೀ ದೇಶದಲ್ಲಿಯೇ 'ಕೊರೊನಾ'ಗೆ ಮೊದಲನೆಯ ವಿಕೆಟ್ ನಮ್ಮ ರಾಜ್ಯದಲ್ಲಿ ಬಿದ್ದಿದೆ. The first victim is from our State. ಪ್ರಪಂಚದಲ್ಲಿಯೇ ದೊಡ್ಡದಾದ ಪ್ರಜಾಸತ್ತಾತ್ಮಕ ದೇಶದಲ್ಲಿ 'ಕೊರೊನಾ' ಗೆ ಮೊದಲನೆಯ ಆಹುತಿ ನಮ್ಮ ರಾಜ್ಯದಿಂದಲೇ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆಗಿದೆ. Really, I am unable to digest this matter. ಏಕೆಂದರೆ, ಇಲ್ಲಿಯವರೆಗೆ 'Karnataka is number one' ಎಂಬ ಮಾತನ್ನು ಕೇಳಿಕೊಳ್ಳುತ್ತಲೇ ಬಂದಿದ್ದೇವೆ. ಪ್ರತಿ ಕ್ಷೇತ್ರದಲ್ಲಿಯೂ ನಾವು ಮುಂಚೂಣಿಯಲ್ಲಿದ್ದೆವು. ಇವತ್ತು ಆರೋಗ್ಯ ಕ್ಷೇತ್ರದಲ್ಲಿ ವಿಫಲರಾಗಿ, 'ಕೊರೊನಾ' ಗೆ ಮೊದಲನೆ ಬಲಿ ಕೊಡುವುದರ ಜೊತೆಗೆ ಅವರ ಕುಟುಂಬದ ಮತ್ತೊಬ್ಬ ಸದಸ್ಯರಿಗೆ ಆ ಸೋಂಕು ತಗುಲಿದೆ, ಎರಡು ಸಾವು ಸಂಭವಿಸಿದೆ. ಈಗ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಥರ್ಮಲ್ ಸ್ಕ್ರೀನಿಂಗ್ ಎಂದು ಮಾಡುತ್ತಿದ್ದಾರೆ. ಫೆಬ್ರವರಿ ತಿಂಗಳಿನಲ್ಲಿ ವಿದೇಶದಿಂದ ಬಂದಂತಹ ಪ್ರವಾಸಿಗರನ್ನು ವೈದ್ಯಕೀಯ ತಪಾಸಣೆಗೆ ಸರಿಯಾಗಿ ಒಳಪಡಿಸಿದ್ದರೆ, ಈ ಸ್ಥಿತಿ ಬರುತ್ತಿರಲಿಲ್ಲ.

**ಶ್ರೀ ಅರಬೈಲು ಶಿವರಾಮ್ ಹೆಬ್ಬಾರ (ಕಾರ್ಮಿಕ ಮತ್ತು ಸಕ್ಕರೆ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಕೈ ಕೊಟ್ಟವರ ಬಗ್ಗೆ ಕೈ ಬಿಟ್ಟವರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಎಸ್.ಆರ್.ಪಾಟೀಲ್‌ರವರ ಮನೆಯಲ್ಲಿರುವ ಮೊಮ್ಮಗ, ಮೊಮ್ಮಗಳು ದೂರದರ್ಶನದಲ್ಲಿ ಇವರು ಮಾತನಾಡಿರುವುದನ್ನು ನೋಡಿದರೆ 'ನಮ್ಮ ಅಜ್ಜ ಹೇಳಿರುವುದು ಸರಿಯಾಗಿದೆ' ಎಂದು ನಂಬಿ ಬಿಡುತ್ತಾರೆ. ಆದ್ದರಿಂದ ಮಾನ್ಯ ಎಸ್.ಆರ್.ಪಾಟೀಲ್‌ರವರು, 'ನಮ್ಮ ರಾಜ್ಯದಲ್ಲಿ ಮೊದಲನೆಯ ವಿಕೆಟ್ ಹೋಯಿತು, ಎರಡನೆಯದು ಹೋಯಿತು' ಎಂದು ಹೇಳಿದರೆ ಅವರುಗಳು ಭಯಪಡುತ್ತಾರೆ. ಆದ್ದರಿಂದ ಅವರು ದಯವಿಟ್ಟು ಹೆದರಿಸುವುದು ಬೇಡ, ಎಚ್ಚರಿಕೆ ನೀಡಿದರೆ ಸಾಕು. ಅವರು ಹೇಳುವುದನ್ನು ಕೇಳಿ ನನಗೆ ಭಯ ಪ್ರಾರಂಭವಾಗುತ್ತಿದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಮಾತುಗಳನ್ನು ಕೇಳಿಕೇಳಿ ಅವರ ಮನೆಯವರಿಗೆ ರೂಢಿ ಆಗಿಬಿಟ್ಟಿದೆ. ಈಗ ಅವರುಗಳು ಹೆದರುವುದನ್ನೇ ಬಿಟ್ಟಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ನಾನು ಹೆದರಿಸುವುದಿಲ್ಲ. ಅವರುಗಳು ಇಷ್ಟು ದೊಡ್ಡ ಪ್ರಮಾಣದಲ್ಲಿ ಕೈಕೊಟ್ಟಾಗಲೇ ಹೆದರಲಿಲ್ಲ. ಅದಕ್ಕಿಂತ ದೊಡ್ಡ ಅನಾಹುತ ಆಗುವುದಿಲ್ಲವೆಂದು ನಾವು ಹೆದರುವುದಿಲ್ಲ. ದೇಶದಲ್ಲಿಯೇ 'ಕೊರೊನಾ' ಗೆ ಮೊದಲನೆಯ ಬಲಿಯಾಗಿದ್ದ ವ್ಯಕ್ತಿ ಸೌದಿ ಅರೇಬಿಯಾದಿಂದ ಬಂದಿದ್ದರು. ನಮ್ಮ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಆ ವ್ಯಕ್ತಿ ಮರಣ ಹೊಂದಿದ ದಿನ ಪತ್ರಿಕಾಗೋಷ್ಠಿ ಕರೆದು, 'ಮೃತ ವ್ಯಕ್ತಿ ಕೊರೊನಾದಿಂದ ಸತ್ತಿಲ್ಲ. ಬಹು ಅಂಗಾಂಗ ವೈಫಲ್ಯದಿಂದ ಮರಣ ಹೊಂದಿದ್ದಾರೆ' ಎಂದು ಹೇಳಿದ್ದಾರೆ. ಬಹು ಅಂಗಾಂಗ ವೈಫಲ್ಯದಿಂದ ಆ ವ್ಯಕ್ತಿ ಮರಣ ಹೊಂದಿದ್ದಾನೆ, ಕೊರೊನಾದಿಂದ ಮರಣ ಹೊಂದಿಲ್ಲವೆಂದು ನಮಗೆ ಖುಷಿ ಆಯಿತು. We are happy. ಏನೋ ಒಂದು ಕಾರಣದಿಂದ ಸತ್ತಿದ್ದರೆ ಸರಿ ಎಂದು ನಾವು ಸಮಾಧಾನ ಪಟ್ಟುಕೊಂಡೆವು. ಆದರೆ, ಆ ವ್ಯಕ್ತಿಗೆ ಸೋಂಕು ತಗುಲಿದೆಯೆನ್ನುವ ಶಂಕೆಯಿಂದ ಆತನನ್ನು ಹೈದ್ರಾಬಾದ್‌ಗೆ ಕರೆದುಕೊಂಡು ಹೋಗಲಾಗಿತ್ತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ತಪ್ಪು ಮಾಹಿತಿ ಕಡತಕ್ಕೆ ಹೋಗಬಾರದು. ಪತ್ರಿಕಾ ಗೋಷ್ಠಿಯಲ್ಲಿ ನಾನು ಹೇಳಿದಂತಹ ವಿಚಾರವೇನೆಂದರೆ, ‘ಸೌದಿ ಅರೇಬಿಯಾದಿಂದ ಬಂದಂತಹ ಆ ವ್ಯಕ್ತಿಗೆ Pneumonia, ಬಿ.ಪಿ., ಶುಗರ್ ಇತ್ತಿತರ ಕಾಯಿಲೆಗಳು ಇರುವ ಕಾರಣ ಅವನಿಗೆ ಆ ಕಾಯಿಲೆಗಳಿಂದ ತೊಂದರೆಯಾಗಿರಬಹುದು. ಅದನ್ನು ನಾವು ಸ್ಪಷ್ಟಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆತನ ‘ಕಫಾ’ ಮಾದರಿಯನ್ನು ಸಂಗ್ರಹ ಮಾಡಿ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದೇವೆ. ರಿಪೋರ್ಟ್ ಬಂದ ನಂತರ ಆ ಬಗ್ಗೆ ಮಾಹಿತಿ ಕೊಡುತ್ತೇನೆ’ ಎಂದು ಹೇಳಿದ್ದೇನೆಯೇ ಹೊರತು ‘ಕೊರೊನಾ’ ದಿಂದ ಮೃತಪಟ್ಟಿದ್ದಾನೆಂದು ನಾನು ಎಲ್ಲಿಯೂ ಹೇಳಿಲ್ಲ. ಮೃತರ ಲ್ಯಾಬ್ ವರದಿ ಬಂದ ಮೇಲೆಯೇ ಅವರು ಕೊರೊನಾದಿಂದ ಮೃತಪಟ್ಟಿದ್ದು ಎಂದು ನನಗೆ ಗೊತ್ತಾಗಿದ್ದು. I make it very clear. ಪತ್ರಿಕೆಗಳಲ್ಲಿ ಬಂದಿರುವುದಕ್ಕೆ ನಾನು ಜವಾಬ್ದಾರನಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು ಜನರಿಗೆ ಭಯಪಡಿಸಬೇಡಿ ಎನ್ನುವ ಮಾತನ್ನು ಹೇಳಿದ್ದಾರೆ. ನಿಜ, ಜನ ಭಯಭೀತರಾಗಬಾರದು. ಆದರೆ, ಈಗ ಜನರು ಭಯಭೀತರಾಗಿದ್ದಾರೆ. ನೆಗಡಿ, ಕೆಮ್ಮು, ತಲೆನೋವು, ಜ್ವರ ಮುಂತಾದ ಮುನ್ಸೂಚನೆಗಳೊಂದಿಗೆ ಜನರು ಸಾಯಬಹುದು. ಕೆಲವೊಮ್ಮೆ windpipe ಅಥವಾ trachea ನಲ್ಲಿ ಉಸಿರು ಕಟ್ಟಿದಂತಾಗಿ slow breathing ಪ್ರಾರಂಭವಾಗುತ್ತದೆ. ಆಗ ವ್ಯಕ್ತಿ ಸಾವನ್ನಪ್ಪಬಹುದು. ವ್ಯಕ್ತಿ ಸತ್ತ ಮೇಲೆ ಲ್ಯಾಬ್‌ನಲ್ಲಿ ಪರೀಕ್ಷೆ ಮಾಡಿದ ನಂತರವೇ ಇದು ಕೊರೊನಾ ರೋಗ ಲಕ್ಷಣವೆಂದು ಗೊತ್ತಾಗುತ್ತದೆ. ಮಾನ್ಯ ಸಚಿವರು ‘ಆ ವ್ಯಕ್ತಿ ಸತ್ತಿದ್ದಾನೆ, ಪರೀಕ್ಷೆಗಳ ಫಲಿತಾಂಶ ಬಂದ ಮೇಲೆ ಹೇಳುತ್ತೇನೆ’ ಎಂದು ಹೇಳಬೇಕಾಗಿತ್ತು. ಅವರು ಸೇಫ್ ಆಗಿ ಉತ್ತರವನ್ನು ಕೊಡಬೇಕಾಗುತ್ತದೆ. He will be the role model. ಅವರನ್ನು ಜನರು ಅನುಕರಣೆ ಮಾಡುತ್ತಾರೆ. ಸರ್ಕಾರ ನಡೆಸುವವರು ಅವರು, ಅವರು ನೀಡುವ ಪ್ರತಿ ಹೇಳಿಕೆಯನ್ನು ರಾಜ್ಯದ ಆರೂವರೆ ಕೋಟಿ ಜನರು ಗಮನಿಸುತ್ತಿರುತ್ತಾರೆ. ಸಚಿವರು ಹೇಳಿಕೆ ಕೊಡುವುದೇ ಬೇರೆ, ಉಳಿದವರು ಹೇಳಿಕೆ ಕೊಡುವುದೇ ಬೇರೆ. ಮಂತ್ರಿಗಳು ಹೇಳಿದ ಕೂಡಲೇ ಮುಗಿತು, more or less, it will be final. ಅದಕ್ಕಾಗಿಯೇ ನಾನು ಹೇಳುತ್ತಿರುವುದು, Hon’ble Minister should be very cautious. ಅವತ್ತಿನ ದಿನ ಮಾನ್ಯ ಸಚಿವರು, ‘ಆ ವ್ಯಕ್ತಿ ಕೊರೊನಾದಿಂದ ಸತ್ತಿರಬಾರದು, Pneumonia ದಿಂದ, ಬಹು ಅಂಗಾಂಗಗಳ ವೈಫಲ್ಯದಿಂದ ಅಥವಾ ಮತ್ಯಾವುದೋ ಕಾರಣದಿಂದ ಸತ್ತಿರಲಿ’ ಎಂದು ಅವರು ದೇವರಲ್ಲಿ ಪ್ರಾರ್ಥನೆ ಮಾಡಿರಬಹುದು. Hon’ble Minister could have said, we will find out the cause of death from the lab report and we will let you know. ಅವರ ಸೇಫ್ಟಿಗಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಅವರ ಮೇಲಿನ ಕಾಳಜಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೆಂಗಳೂರಿನಲ್ಲಿ ನನ್ನ ಅವರ ಮನೆ ಎದುರುಬದುರು ಇದೆ. ಅವರ ಜಿಲ್ಲೆಯೇ ಬೇರೆ ನಮ್ಮ ಜಿಲ್ಲೆಯೇ ಬೇರೆ, ನಾನು ಬಳ್ಳಾರಿಗೆ ಹೋಗುವುದಕ್ಕೆ ಆಗುವುದಿಲ್ಲ. ಬಳ್ಳಾರಿಯನ್ನು 'Republic of Bellary' ಎನ್ನುತ್ತಾರಲ್ಲಾ? ಈ ಮಾತುಗಳೇ ಮುಂದುವರೆದರೆ ವಿಷಯಾಂತರವಾಗುತ್ತದೆ. ಆದ್ದರಿಂದ ಇದನ್ನು ಇಲ್ಲಿಗೇ ಮುಕ್ತಾಯಗೊಳಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ವಿದೇಶದಿಂದ ಬಂದ ನಾಗರಿಕರನ್ನು ಸರಿಯಾದ ವೈದ್ಯಕೀಯ ತಪಾಸಣೆಗೆ ಒಳಪಡಿಸಿದ್ದರೆ ಇಂತಹ ಒಂದು ಆಪತ್ತು ನಮ್ಮ ರಾಜ್ಯಕ್ಕೆ ಬರುತ್ತಿರಲಿಲ್ಲ. ಈಗ ಮಾಲ್‌ಗಳನ್ನು, ಸಿನಿಮಾ ಥಿಯೇಟರ್‌ಗಳನ್ನು ಬಂದ್ ಮಾಡಲಾಗಿದೆ. The State of Karnataka has become standstill now. ಇಲ್ಲಿನ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಬೀದಿ ಬದಿಯ ತಳ್ಳುವಗಾಡಿಯವರು ಸಹ ತಮ್ಮ ಅಂಗಡಿಗಳನ್ನು ಮುಚ್ಚಿದ್ದಾರೆ. ದೊಡ್ಡದೊಡ್ಡ ಹೋಟೆಲ್‌ಗಳಲ್ಲಿ ಸುಮಾರು 500 ಜನ ಕಾರ್ಮಿಕರು ಕೆಲಸ ಮಾಡುತ್ತಿರುತ್ತಾರೆ. ಸರ್ಕಾರ ಹೋಟೆಲ್‌ಗಳನ್ನು ಬಂದ್ ಮಾಡಿಸಿದ ಕಾರಣದಿಂದ ಆ 500 ಜನರು ಮನೆಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಬೆಂಗಳೂರಿಗೆ ಕುಟುಂಬಸ್ಥರು ಬರುವುದು ಬಹಳ ಕಷ್ಟ. ಏಕೆಂದರೆ, ಇಲ್ಲಿ ಬಾಡಿಗೆ ಮನೆ ಮಾಡುವುದು ಅಸಾಧ್ಯದ ಕೆಲಸವಾಗಿದೆ. ದುಡಿಯುವುದಕ್ಕಾಗಿ ಬಂದಿರುತ್ತಾರೆ. ಎಲ್ಲೋ ಒಂದು ಬಾಡಿಗೆ ಮನೆ ಮಾಡಿರುತ್ತಾರೆ. ಅವರು ಬೀದಿ ಬದಿಯಲ್ಲಿರುವ ತಳ್ಳುವಗಾಡಿಯಲ್ಲಿಯೇ ಊಟ ಮಾಡಬೇಕು. ಈಗ ಇದನ್ನು ಬಂದ್ ಮಾಡಿರುವುದರಿಂದ ಅವರಿಗೆ ಊಟವೇ ಸಿಗುತ್ತಿಲ್ಲ.

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ 500 ಜನರನ್ನು ಮನೆಗೆ ಕಳುಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನನ್ನ ಬಳಿಯೇ 450 ಜನ ಕೆಲಸ ಮಾಡುತ್ತಿದ್ದಾರೆ. ಅವರನ್ನು ಮನೆಗೆ ಕಳುಹಿಸುವುದಕ್ಕೆ ಹೇಗೆ ಸಾಧ್ಯ? ಮನೆಗೆ ಕಳುಹಿಸುವುದಕ್ಕೆ ಅವರು ಬಿಡುತ್ತಾರೆಯೇ? ಬಾವುಟ ಹಿಡಿದುಕೊಂಡು ಧರಣಿ ಕುಳಿತುಕೊಳ್ಳುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಅವರಿಗೂ ಹೊರೆಯಾಗುತ್ತದೆ.

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):–** ಸನ್ಮಾನ್ಯ ಸಭಾಪತಿಯವರೇ, ನಮಗೂ ಹೊರೆಯೇ. ಗಲಿ, ಅನುಭವಿಸಬೇಕಾಗಿರುವವರು ನಾವು ಕಾರ್ಮಿಕರು ಅನುಭವಿಸುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಸಂದೇಶ್ ನಾಗರಾಜ್‌ರವರು ಹೃದಯ ಶ್ರೀಮಂತಿಕೆ ಇರುವವರು. He is large at heart.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):–** ಸನ್ಮಾನ್ಯ ಸಭಾಪತಿಯವರೇ, 200 ರೂಂಗಳಿರುವ ಹೋಟೆಲ್‌ನಲ್ಲಿ 5–10 ರೂಂಗಳು ಮಾತ್ರ ಭರ್ತಿಯಾಗಿವೆ ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ.

(ಮುಂದುವರಿದಿದೆ)

(438) 16.3.2020 4.10 ಪಿಕೆ:ಜಿಆರ್

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ‘ಒಂದು ವಾರ ಆದಮೇಲೆ ನನ್ನ ಪಾತ್ರ ಏನೂ ಇರುವುದಿಲ್ಲ’ ಎಂದು ಕೊರೊನಾ ವೈರಸ್ ಈ ಸರ್ಕಾರಕ್ಕೆ ಹೇಳಿದೆಯೇ? 14 ನೇ ದಿನಾಂಕದಿಂದ 22ರ ತನಕ ಎಲ್ಲವನ್ನೂ ಬಂದ್ ಮಾಡಿದ್ದೀರಿ. ಖಾಸಗಿ, ಸರ್ಕಾರಿ ಸಭೆ–ಸಮಾರಂಭಗಳನ್ನು ನಡೆಸುವ ಹಾಗಿಲ್ಲ. ಮಾಲ್‌ಗಳು, ಹೋಟೆಲ್‌ಗಳು ಬಂದಾಗಿವೆ. All activities have become standstill. ಎಲ್ಲವೂ ಸ್ತಬ್ಧವಾಗಿವೆ. ಕೊರೊನಾ ವೈರಸ್ ಜೊತೆ ನೀವು ಚರ್ಚೆ ಮಾಡಿ, ನಿಮಗೆ ಅದು, ‘22ನೇ ದಿನಾಂಕದ ನಂತರ ನಾನು ಇರುವುದಿಲ್ಲ’ ಎಂದು ಹೇಳಿದೆಯೇ? ಮಾನ್ಯ ಸಚಿವರೇ, 22ನೇ ದಿನಾಂಕದ ನಂತರ ಈ ವೈರೆಸ್‌ನ ಶಕ್ತಿ ಕುಂದುತ್ತದೆ, ಇದರ ಪರಿಣಾಮ ನಮ್ಮ ರಾಜ್ಯದ ಮೇಲೆ ಬೀಳುವುದಿಲ್ಲ ಎನ್ನುವುದಿದ್ದರೆ ಹೇಳಿ, ನಾನು ಬಹಳ ಖುಷಿ ಪಡುತ್ತೇನೆ. ಕೆಲವು ಕಡೆ ಬಹಳಷ್ಟು ದಿವಸದಿಂದ ಬಂದ್ ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಸ್ಪೆಷಲ್‌ವಾರ್ಡ್‌ಗಳನ್ನು ಏನು ಮಾಡಿದ್ದಾರೋ ಅದು ಸಾಕಷ್ಟು ಇವೆಯೇ? ಜಿಲ್ಲಾ ಮಟ್ಟದಲ್ಲಿ ಲ್ಯಾಬೋರೇಟರಿ ಇಲ್ಲ. ನಮ್ಮ ಜಿಲ್ಲೆಯಲ್ಲಿ, ಬೆಳಗಾವಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವೈರೆಸ್ ಪ್ರಕರಣಗಳು ಕಂಡುಬಂತು. ಆ ವ್ಯಕ್ತಿಗಳ ಸ್ಯಾಂಪಲ್ ಪರೀಕ್ಷೆ ಮಾಡಬೇಕಾದರೆ ಅದನ್ನು ಬೆಂಗಳೂರಿಗೆ ತೆಗೆದುಕೊಂಡು ಬರಬೇಕು. ನಿನ್ನೆ ರಾತ್ರಿ ವೈದ್ಯಕೀಯ ಶಿಕ್ಷಣ ಸಚಿವರು ಮಾತನಾಡಿದ್ದನ್ನು ಕೇಳಿದೆ. ಗುಲ್ಬರ್ಗಾದಲ್ಲಿ ಸಿದ್ದಿಕಿ ಎನ್ನುವ ಸುಮಾರು 75 ವರ್ಷದ ವ್ಯಕ್ತಿ ಕೊರೊನಾ ವೈರೆಸ್‌ನಿಂದ ಪೀಡಿತರಾಗಿ ತೀರಿಹೋದರು. ಅವರ ಮಗಳ ಗಂಟಲು ದ್ರವದ ಸ್ಯಾಂಪಲ್ ಪರೀಕ್ಷೆಗೆ ಒಳಪಡಿಸಿದಾಗ ಅದು ಪಾಸಿಟಿವ್ ಬಂತು. ಆದರೆ ಅದು ಅಷ್ಟು ಎಫೆಕ್ಟಿವ್ ಇಲ್ಲ. ಪುನಃ ಅದನ್ನು ಪರೀಕ್ಷೆ ಒಳಪಡಿಸುತ್ತೇವೆ ಎಂದು ದೂರದರ್ಶನದಲ್ಲಿ ಹೇಳಿದ್ದನ್ನು ಕೇಳಿದೆ. ಅಂದರೆ ಬೆಂಗಳೂರಿನಲ್ಲೂ ಎಫೆಕ್ಟಿವ್ ಆಗಿ ಕಂಡುಹಿಡಿಯುವಂತಹ ಉತ್ತಮ ಮಟ್ಟದ ಲ್ಯಾಬೋರೇಟರಿ ಇಲ್ಲ ಎಂದಾಯಿತು. ಆ ರಿಪೋರ್ಟ್ vitality ಇಲ್ಲ ಎಂದು ಹೇಳಿದರೂ ಫಲಿತಾಂಶ ‘Positive’ ಎಂದು ಬಂದಿದೆ. ‘Positive’ ನಲ್ಲಿ ‘less positive, more positive’ ಎಂದು ಎರಡು ನಮೂನೆಗಳು ಇರುತ್ತವೆಯೇ? ಮಾನ್ಯ ಸಚಿವರೇ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀವೊಂದು ಕಡೆ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಒಂದು ಕಡೆ ಇರುತ್ತೀರಿ. ಇಬ್ಬರೂ ಒಂದು ಕಡೆ ಕೂಡಿ ಏನಾದರೂ ಮಾಡಿ. ಇಬ್ಬರೂ ಹಂಚಿಕೊಂಡು ಕೆಲಸ ಮಾಡುತ್ತಿದ್ದರೆ ನನ್ನದೇನೂ ಅಭ್ಯಂತರ ಇಲ್ಲ.

**ಶ್ರೀ ಬಿ. ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಇಡೀ ದೇಶ ಒಂದಾಗಿದೆ. ಕೊರೊನ ವೈರೆಸ್ ಅನ್ನು ಎದುರಿಸಲು ಇಡೀ ವಿಶ್ವವೇ ಒಂದಾಗಿದೆ. ಆಡಳಿತ ಪಕ್ಷದಲ್ಲಿರುವ ನಾನು ಮತ್ತು ಮಾನ್ಯ ಸುಧಾಕರ್‌ರವರು ಒಳ್ಳೆಯ ಸ್ನೇಹಿತರು. ಅವರು ವೈದ್ಯಕೀಯ ಶಿಕ್ಷಣ ಇಲಾಖೆಯನ್ನು ನೋಡುತ್ತಿದ್ದಾರೆ ನಾನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯನ್ನು ನೋಡುತ್ತಿದ್ದೇನೆ. ಇಡೀ ವಿಶ್ವವೇ ಒಂದಾಗಿರುವಾಗ ನಾವು ಬೇರೆ ಬೇರೆ ಆಗಿರುವುದಕ್ಕೆ ಸಾಧ್ಯವಿಲ್ಲ. ಈ ವೈರೆಸ್ ಎದುರಿಸಬೇಕಾದರೆ ನಾವು–ನೀವು ಒಂದಾಗಬೇಕು. ನಾವು ಮಾತ್ರ ಎದುರಿಸುವುದಕ್ಕೆ ಆಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, two hundred per cent, we will support the Hon'ble Minister.

**ಶ್ರೀ ಬಿ.ಶ್ರೀರಾಮುಲು–** ನಾನೊಬ್ಬನೇ ಏನು ಮಾಡುವುದಕ್ಕಾಗುತ್ತದೆ ಅಥವಾ ನೀವೊಬ್ಬರೇ ಏನು ಮಾಡುವುದಕ್ಕಾಗುತ್ತದೆ? ಇಡೀ ವಿಶ್ವವೇ ಒಂದಾಗಿದೆ. ಅಂತಹ ಸಂದರ್ಭದಲ್ಲಿ ನಾವು–ನೀವು ಒಂದಾಗಿ ಈ ವೈರೆಸ್ ಅನ್ನು ಎದುರಿಸಬೇಕು. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ನಾವು ಕೆಲಸವನ್ನು ಹಂಚಿಕೊಂಡು ಮುಂದುವರೆಯುತ್ತಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಬಹಳ ಸಂತೋಷ. ನಾನು ಬಹಳ ಹೆಮ್ಮೆ ಪಡುತ್ತೇನೆ. Because, I am much concerned with the misery of people. ನಿಮ್ಮಲ್ಲಿ ಭಿನ್ನಾಭಿಪ್ರಾಯ ಇದೆ ಎಂದು ಹೇಳಲಿಲ್ಲ. ಬೇರೆ ಬೇರೆಯಾಗಿ ಕೆಲಸ ಮಾಡುತ್ತಿದ್ದೀರಲ್ಲಾ ಎಂದು ನಾನು ಹೇಳಿದೆ ಅಷ್ಟೆ. ವಿಶ್ವ ಒಂದಾಗಿದೆ ಎಂದು ಹೇಳಿದಿರಿ. ಅದೇರೀತಿ ನಿಮ್ಮ ಪಕ್ಕದಲ್ಲಿ ಕುಳಿತಿರುವವರ (ಶ್ರೀ ಆನಂದ್ ಸಿಂಗ್ ಮತ್ತು ಶ್ರೀ ಅರೆಬೈಲು ಹೆಬ್ಬಾರ ಶಿವರಾಮ್) ಜೊತೆ ಒಂದಾಗಿದ್ದರೆ ಸಾಕು. ಹಾಗೆ ಒಂದಾದರೆ ವಿಶ್ವ ಒಂದಾಗುವುದಕ್ಕಿಂತಲೂ ಅದು ದೊಡ್ಡ ಶಕ್ತಿ ಆಗುತ್ತದೆ.

**ಶ್ರೀ ಅರಬೈಲು ಹೆಬ್ಬಾರ ಶಿವರಾಂ:–** ಮಾನ್ಯ ಪಾಟೀಲ್‌ರವರೇ, ಪಕ್ಕದಲ್ಲಿ ಕುಳಿತುಕೊಂಡ ಮೇಲೆಯೇ ನಾವು ಹೀಗಾಗಿದ್ದೇವೆ. ನಾನು ಈ ಕುರಿತು ಏನನ್ನೂ ಹೇಳಬಾರದು ಎಂದು ಸುಮ್ಮನೆ ಕುಳಿತುಕೊಂಡಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:–** ದಯವಿಟ್ಟು ಹೇಳಬೇಡಿ, ವಿಷಯಾಂತರವಾಗುತ್ತದೆ. This is a serious issue. Don't dilute this issue. This is a very serious matter.

**ಶ್ರೀ ಅರಬೈಲು ಹೆಬ್ಬಾರ ಶಿವರಾಂ:–** ಕೊರೊನಾ ವೈರೆಸ್‌ಗೆ ಬಿಜೆಪಿ, ದಳ, ಕಾಂಗ್ರೆಸ್ ಎನ್ನುವ ವ್ಯತ್ಯಾಸ ಇಲ್ಲ. ನಾವೆಲ್ಲರೂ ಒಟ್ಟಾಗಿ ಸೇರಿ ಎದುರಿಸಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ನೀವು ಒಟ್ಟಾಗಿ, ಒಂದಾಗಿ, ಐಕ್ಯತೆಯಿಂದ, ಒಂದೇ ಕುಟುಂಬದ ಸದಸ್ಯರಾಗಿ, ಒಂದೇ ತಾಯಿ ಮಕ್ಕಳಾಗಿ, ಒಂದೇ ರಕ್ತವನ್ನು ಹಂಚಿಕೊಂಡು ಹುಟ್ಟಿದಂತಹ ಸಹೋದರರಂತೆ ಭ್ರಾತೃತ್ವ, ಪ್ರೇಮದೊಂದಿಗೆ ಬದುಕಿ ಬಾಳಿ ನಾನು ಬೇಡ ಎನ್ನುವುದಿಲ್ಲ.

**ಶ್ರೀ ಅರುಣ ಶಹಾಪುರ:–** ಅವರು ನಿಮ್ಮನ್ನೂ ಜೊತೆಗೆ ಸೇರಿಸಿಕೊಳ್ಳುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಅದಕ್ಕೋಸ್ಕರ ಸದನದಲ್ಲಿ ನಾನು ನಿಮ್ಮ ಎದುರಿಗೆಯೇ ಕುಳಿತುಕೊಂಡಿದ್ದೇನೆ. ನೀವು ಚರ್ಚೆ ಮಾಡಿಕೊಳ್ಳುವುದು ನನಗೆ ಗೊತ್ತಾಗುತ್ತದೆ, ನಾನು ಹೇಳುವುದು ನಿಮಗೆ ಗೊತ್ತಾಗುತ್ತದೆ. ನೀವೇನು ಮಾತನಾಡಿಕೊಳ್ಳುತ್ತೀರಾ ಎಂದು ತಿಳಿದುಕೊಳ್ಳಲು ನಾನು ನಿಮ್ಮ ಎದುರಿಗೆ ಕುಳಿತುಕೊಂಡಿದ್ದೇನೆ.

**ಶ್ರೀ ಅರುಣ ಶಹಾಪುರ:–** ನೀವು ಅವರನ್ನು (ಶ್ರೀ ಆನಂದ್ ಸಿಂಗ್ ಮತ್ತು ಶ್ರೀ ಅರಬೈಲು ಹೆಬ್ಬಾರ ಶಿವರಾಮ್) ಏಕೆ ಪ್ರತ್ಯೇಕವಾಗಿ ನೋಡುತ್ತಿದ್ದೀರಿ? ಮಾನ್ಯ ಸಚಿವರು, ನಾವು–ನೀವು ಸೇರಿಕೊಂಡು ಈ ವೈರೆಸ್ ಅನ್ನು ಎದುರಿಸೋಣ ಎಂದು ಹೇಳಿಬಿಟ್ಟಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಅವರೂ ನಮ್ಮವರೇ ಆಗಿದ್ದಾರೆ. ಮೊನ್ನೆ ಏನು ಉಪಚುನಾವಣೆಯಾಯಿತೋ ಆ 12 ರಲ್ಲಿ 11 ಜನ ನಮ್ಮವರೇ ಗೆದ್ದಿದ್ದಾರೆ. ನಿಮ್ಮವರು ಕೇವಲ ಒಬ್ಬರು ಮಾತ್ರ ಗೆದ್ದರು.

**ಸಭಾಪತಿಯವರು:–** ದಯವಿಟ್ಟು ವಿಷಯಕ್ಕೆ ಬನ್ನಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪುರರವರು ನಮ್ಮ ಜಿಲ್ಲೆಯವರಾಗಿದ್ದುಕೊಂಡು ನಮ್ಮನ್ನು ಕೆಣುಕುತ್ತಿದ್ದಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಅವರು ಕೆಣಕಲಿ ಬಿಡಿ. ನೀವು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಹಿಂದೆಯೇ ವಿಮಾನ ನಿಲ್ದಾಣದಲ್ಲಿ ತಪಾಸಣೆಯಿಂದ ಹಿಡಿದು ಎಲ್ಲಾ ರೀತಿಯ ಕ್ರಮ ಕೈಗೊಂಡಿದ್ದರೆ ಬಹುತೇಕ ಈ ರೀತಿಯ ಪರಿಸ್ಥಿತಿಗೆ ತಲುಪುತ್ತಿರಲಿಲ್ಲ. ನಮಗೆ ಇನ್ನೊಂದು ಆತಂಕ ಇದೆ. ಇವತ್ತು ರಾಜ್ಯದ ಆರ್ಥಿಕ ಪರಿಸ್ಥಿತಿ ಪಾತಾಳಕ್ಕೆ ಹೋಗಿದೆ. ಮೊನ್ನೆ ಪ್ರವಾಹ ಬಂತು, 2009ರಲ್ಲೂ ಪ್ರವಾಹ ಬಂತು. ಶತಮಾನದಲ್ಲಿ ಕಂಡರಿಯದಂತಹ, ಕೇಳರಿಯದಂತಹ 22 ಜಿಲ್ಲೆಗಳ 103 ತಾಲ್ಲೂಕುಗಳಲ್ಲಿ ಲಕ್ಷಾಂತರ ಮನೆ–ಮಠ, ಆಸ್ತಿ–ಪಾಸ್ತಿ ಮುಳುಗಿ ಹೋಯಿತು. ರೂ. 38 ಸಾವಿರ ಕೋಟಿ ಹಾನಿಯಾದಾಗ ನಮಗೆ ರೂ. 1800 ಕೋಟಿ ಹಣ ಬಂತು. ಈ ರಾಜ್ಯದ ಬೊಕ್ಕಸದಿಂದ ಖರ್ಚು ಮಾಡುವಂತಹ ದುಸ್ಥಿತಿ ನಮ್ಮ ಸರ್ಕಾರಕ್ಕೆ ಬಂತು. ಈಗಿರುವುದು ಬಿಜೆಪಿ ಸರ್ಕಾರ ಅಲ್ಲ, ಕರ್ನಾಟಕ ರಾಜ್ಯದ ಸರ್ಕಾರ; ನಮ್ಮೆಲ್ಲರ ಸರ್ಕಾರ. ಮೊನ್ನೆ ಬಜೆಟ್‌ನಲ್ಲಿ ರೂ. 11 ಸಾವಿರ ಕೋಟಿಗಳ ತೆರಿಗೆ ಪಾಲಿನ ಮೊತ್ತವನ್ನು ಕೇಂದ್ರದವರು ಕಡಿಮೆ ಕೊಟ್ಟಿದ್ದಾರೆ. ಇಡೀ ರಾಜ್ಯ ಇವತ್ತು ಸ್ತಬ್ಧವಾಗಿದೆ; ಇಡೀ ವ್ಯಾಪಾರ–ವಹಿವಾಟು ನಿಂತಾಗ, ಇಡೀ ಉದ್ಯಮಗಳು ನಿಂತು ಹೋಗಿರುವಾಗ ಆರ್ಥಿಕ ಸ್ಥಿತಿಯೂ ಚಿಂತಾಜನಕವಾಗುತ್ತದೆ. ದೇಶದ ಆರ್ಥಿಕ ಸ್ಥಿತಿ ಸರಿಯಾಗಿಲ್ಲದೇ ಇರುವ ಸಂದರ್ಭದಲ್ಲಿ ಕರ್ನಾಟಕದ ಆರ್ಥಿಕ ಸ್ಥಿತಿಯೂ ಸರಿಯಾಗಿಲ್ಲ. ಈ ಕುರಿತು ನಾನು ಬಜೆಟ್‌ನ ಮೇಲೆ ಚರ್ಚೆ ಮಾಡುವಾಗ ಮಾತನಾಡುತ್ತೇನೆ, ಈಗ ಮಾತನಾಡುವುದಿಲ್ಲ. ಆದರೆ, ಇದರ ಪರಿಣಾಮ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಬೀಳುತ್ತದೆ. Global economy, aviation, tourism, food industry -ಇವೆಲ್ಲವೂ ಕಷ್ಟಕ್ಕೆ ತುತ್ತಾಗುತ್ತವೆ. Tourism suffer ಆಗುತ್ತದೆ. ಇಂತಹ ಪರಿಸ್ಥಿತಿ ಇರುವಾಗ ಪ್ರವಾಸವನ್ನು ಯಾರು ಕೈಗೊಳ್ಳುತ್ತಾರೆ? ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ ವಾಸ ಮಾಡುವ ಜನರಿಗೆ ದೇವರುಗಳ ಮೇಲೆ ಎಷ್ಟು ಭಕ್ತಿ ಇದೆ ಎನ್ನುವುದು ನಮಗೆ ಗೊತ್ತು. 100ಕ್ಕೆ 90ರಷ್ಟು ಜನ ಧಾರ್ಮಿಕರಾಗಿದ್ದಾರೆ. ಆದರೆ ಈಗ ಜನ ದೇವರ ಗುಡಿಗೆ ಹೋಗುತ್ತಿಲ್ಲ; ದೇವರ ಹತ್ತಿರ ಹೋಗುತ್ತಿಲ್ಲ. ಹೀಗಾಗಿ ಇದು ಆರೋಗ್ಯ ಪರಿಸ್ಥಿತಿ ಮೇಲೆ ಮಾತ್ರವಲ್ಲ, ಆರ್ಥಿಕ ಸ್ಥಿತಿಯ ಮೇಲೆಯೂ ಪರಿಣಾಮ ಬೀರುತ್ತದೆ. Not only health effect, it will have its effect on the economy. Global economy suffer ಆಗುತ್ತದೆ. ಸೆನ್ಸೆಕ್ಸ್ ಇವತ್ತು ಪಾತಾಳ ಕಂಡಿದೆ. Aviation, tourism, food industry ಇವೆಲ್ಲದರ ಮೇಲೂ ಪರಿಣಾಮ ಬೀರುತ್ತಿದೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಕೊರೊನಾ ವೈರಸ್ ಬಗ್ಗೆ ಇಡೀ ಪ್ರಪಂಚದಲ್ಲೇ ಚರ್ಚೆ ಆಗುತ್ತಿದೆ. ನಾವೂ ಈಗ ಏನು preventive measures ಮಾಡಬೇಕು ಎನ್ನುವ ವಿಚಾರದಲ್ಲಿ ನಮ್ಮ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಲಹೆಗಳನ್ನು ಕೊಟ್ಟರೆ ಸಮಯವೂ ಉಳಿಯುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ದಯವಿಟ್ಟು ತಪ್ಪಾಗಿ ತಿಳಿದುಕೊಳ್ಳಬೇಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅನಗತ್ಯ ಗೊಂದಲಗಳೆಲ್ಲವನ್ನೂ ನಿವಾರಿಸಿ, ಉತ್ತಮ ವೈದ್ಯಕೀಯ ಸೌಲಭ್ಯಗಳೊಂದಿಗೆ ಇದಕ್ಕೆ ವಿಶೇಷ ಅನುದಾನ ಕೊಡಬೇಕು.

(ಮುಂದು...)

(439)16-3-2020 4.20 ಡಿಎಸ್-ಎಂಡಿ
**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ಯು.ಎಸ್.ಎ. ನಲ್ಲಿ ಟ್ರಂಪ್‌ರವರು ಐದು ಸಾವಿರ ಕೋಟಿ ಡಾಲರ್ ಕೊಟ್ಟರು, ಮೂರೂವರೆ ಲಕ್ಷ ಕೋಟಿ ಹಣ ಇಲ್ಲಿಯೂ ಹಣ ಬಿಡುಗಡೆಯಾಗಬೇಕಲ್ಲವೇ? ಇಂತಹ ಭಯಾನಕ ಕಾಯಿಲೆ. ಇಡೀ ಮನುಕುಲಕ್ಕೆ ಮಾರಕವಾಗುವಂತಹ, ಮನುಕುಲವನ್ನೇ ಸರ್ವನಾಶ ಮಾಡುವಂತಹ dangerous virus ಇದೆಯಲ್ಲಾ ಇದನ್ನು ನಿಲ್ಲಿಸುವುದಕ್ಕೆ ವಿಶೇಷವಾದಂತಹ ಅನುದಾನವನ್ನು ಘೋಷಣೆ ಮಾಡಬೇಕು. ಜನರಲ್ಲಿ ಧೈರ್ಯ ತುಂಬಬೇಕು. ಜನರನ್ನು ನಾವು panic ಮಾಡಬಾರದು. ಜನರಿಗೆ ಧೈರ್ಯ ತುಂಬುವಂತಹ ಕೆಲಸವನ್ನು ಮಾಡಬೇಕು. ಇವತ್ತು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಯೂರೋಪ್, ಚೈನಾ, ಯಾವುದೇ affected ದೇಶದಿಂದ ಪ್ರವಾಸಿಗರು ಬಂದರೆ ಅವರು ಏನು ಬೇಕಾದ್ದು ಹೇಳಲಿ, ಅವರನ್ನು ಅಲ್ಲಿಂದ ನೇರವಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ Isolation Ward ನಲ್ಲಿ 14 ದಿವಸ ಇಡಿ. ಅವರು ಬೇಕಾದ್ದು ಜಿಗಿದಾಡಲಿ. ಅದನ್ನು ಸರ್ಕಾರ ಮಾಡಬೇಕು. ಅವರನ್ನು isolate ಮಾಡಿಬಿಟ್ಟರೆ ನಮ್ಮಲ್ಲಿ ಹಬ್ಬುವುದು ಕಡಿಮೆಯಾಗುತ್ತದೆ. ಅವರನ್ನು ರಾಜಾರೋಷವಾಗಿ city entry ಮಾಡುವುದಕ್ಕೆ ಬಿಟ್ಟರೆ ಅವರು ಎಲ್ಲೆಲ್ಲಿ ಹೋಗಿ ಯಾರ್ಯಾರಿಗೆ ಅಂಟಿಸುತ್ತಾರೆಯೋ ಯಾರಿಗೆ ಗೊತ್ತಿದೆ. ಇದು ಮೂರನೇ ಹಂತಕ್ಕೆ, ನಾಲ್ಕನೇ ಹಂತಕ್ಕೆ ಹೋಗುವ ಸಾಧ್ಯತೆ ಇದೆ. ಇದಕ್ಕೆ ನನ್ನ ಮನವಿ ಏನೆಂದರೆ, ಈ Corona Virus(Covid-19) ನಿಯಂತ್ರಣ ಮಾಡುವುದಕ್ಕೆ, ಈ ಭಯಾನಕ ವೈರಸ್‌ನ್ನು ನಿಯಂತ್ರಣ ಮಾಡುವುದಕ್ಕೆ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ವಿಮಾನ ನಿಲ್ದಾಣ ಇದೆ, ವಿದೇಶದಿಂದ ಬರುವಂಥವರು ಯಾರ್ಯಾರು ಇದ್ದಾರೆ ಅವರೆಲ್ಲರಿಗೂ, ಅವರು ಏನೇ ಕಾರಣ ಹೇಳಲಿ, 14 or 15 days, medical norms ಪ್ರಕಾರ ಅವರನ್ನು ಸ್ಪೆಷಲ್ ವಾರ್ಡ್‌ನಲ್ಲಿ isolation ನಲ್ಲಿ ಇಡಿ. ಈ ರೀತಿ ಮಾಡುವುದರಿಂದ ನಮ್ಮಲ್ಲಿ ಹಬ್ಬುವ ಪ್ರಶ್ನೆಯೇ ಇಲ್ಲ. ಈ ರೀತಿ ಮೊದಲೇ ಮಾಡಿದ್ದರೆ ಈ ರೋಗ ನಮ್ಮಲ್ಲಿ ಹಬ್ಬುತ್ತಿರಲಿಲ್ಲ. ಅವರು ಬರುವುದಕ್ಕೆ ಅವಕಾಶ ಮಾಡಿಕೊಟ್ಟರು, ಅವರ ಕುಟುಂಬಕ್ಕೆ entry ಯಾದರು, ಅವರ ಕುಟುಂಬ ಸದಸ್ಯರೆಲ್ಲರೂ ಬಾಳಿ ಬದುಕುತ್ತಿದ್ದರು, ಅವರು ಸೋಂಕಿತ ವ್ಯಕ್ತಿ ಕುಟುಂಬದ ಸದಸ್ಯರ ಜೊತೆಗಿದ್ದರು. ಆ ಕುಟುಂಬ ಸದಸ್ಯರು ಎಲ್ಲೆಲ್ಲಿ ಅಡ್ಡಾಡುತ್ತಿರುತ್ತಾರೆಯೋ, ಯಾರ ಜೊತೆ ಕೈ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಜೋಡಿಸುತ್ತಾರೆಯೋ, ಯಾರ ಜೊತೆ ಊಟ, ತಿಂಡಿ ಮಾಡುತ್ತಾರೆಯೋ ಅವರೆಲ್ಲರಿಗೂ ಬಂದುಬಿಡುತ್ತದೆ. ಅದಕ್ಕೆ ಈಗಾದರೂ ಎಚ್ಚತ್ತುಕೊಳ್ಳಬೇಕು. This is not a light matter; it is a serious matter. So be serious.

**ಶ್ರೀ ಆನಂದ್ ಸಿಂಗ್ (ಅರಣ್ಯ ಸಚಿವರು):–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನಾನು ಮಾನ್ಯ ಆರೋಗ್ಯ ಸಚಿವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ನನ್ನ ಮಗಳು ಇಟಲಿಯಲ್ಲಿದ್ದಾರೆ. ನಮ್ಮ ಭಾರತೀಯರು ಸುಮಾರು 60 ಮಕ್ಕಳು ರೋಮ್ ವಿಮಾನ ನಿಲ್ದಾಣದಲ್ಲೇ ಬೆಂಚ್, ಟೇಬಲ್ ಮೇಲೆ ಊಟ ಮಾಡಿಕೊಂಡು ಇದ್ದಾರೆ. ಈ ರೀತಿ ಇಡೀ ಪ್ರಪಂಚದಲ್ಲಿ ಎಲ್ಲೆಲ್ಲಿ ಇದ್ದಾರೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ನಮಗೇನು ಮಾಹಿತಿಯೂ ಸಿಗುತ್ತಿಲ್ಲ. ಏಕೆಂದರೆ, ಇವತ್ತು ನಮ್ಮ ಭಾರತ ದೇಶದಿಂದ ಕೆಲವು ವೈದ್ಯರು ಹೋಗಿ testing ಗೆ ರಕ್ತ, ಏನೇನು ಬೇಕು ಅವೆಲ್ಲಾ ತೆಗೆದುಕೊಂಡಿದ್ದಾರೆ. ಆದರೆ testing ಆಗಿರುವುದನ್ನು ಭಾರತಕ್ಕೆ ಬಂದೇ ಸರ್ಟಿಫಿಕೇಟ್ ತೆಗೆದುಕೊಂಡು ಅವರು ಪ್ರಯಾಣ ಮಾಡುವಂತಹ ಪರಿಸ್ಥಿತಿ ಆ ರೋಮ್ ವಿಮಾನ ನಿಲ್ದಾಣದಲ್ಲಿದೆ. ನಾನು ಭಾರತೀಯನಾಗಿ ನನ್ನ ಮಗಳು ಸುಮಾರು 11ನೇ ತಾರೀಖು ಅಲ್ಲಿಗೆ ಬಂದು ಉಳಿದುಕೊಂಡಿದ್ದಾಳೆ. ನನ್ನ ಮಗಳು ಎಂದಲ್ಲ, ಈ ರೀತಿ ಎಷ್ಟು ಜನ ಮಕ್ಕಳಿದ್ದಾರೆಯೋ ನನಗೆ ಗೊತ್ತಿಲ್ಲ. ದಯವಿಟ್ಟು ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಬೇರೆ ಬೇರೆ ದೇಶದಲ್ಲಿ ಬಹಳಷ್ಟು ವಿದ್ಯಾರ್ಥಿಗಳು ಈ ರೀತಿ ವಿಮಾನ ನಿಲ್ದಾಣದಲ್ಲೇ ಇದ್ದಾರೆ. ಏಕೆಂದರೆ, ಅವರು ಸರ್ಟಿಫಿಕೇಟ್ ಇದ್ದರೆ ಮಾತ್ರ ಪ್ರಯಾಣ ಮಾಡಬೇಕು. ನನ್ನ ಮಗಳ ಜೊತೆಯಲ್ಲಿ ಕೆಲವರು ಟಿಕೆಟ್ ಕೊಟ್ಟು ವಿಮಾನದಲ್ಲಿ ಕುಳಿತಂಥವರಿಗೆ ವಾಪಸ್ ಕೆಳಗಡೆ ಇಳಿಸಿಕೊಂಡರು. ಇಲ್ಲದಿದ್ದರೆ ಇಷ್ಟೊತ್ತಿಗೆ ಬಂದುಬಿಡುತ್ತಿದ್ದರು. ಹಾಗಾಗಿ ತಮ್ಮ ಮುಖಾಂತರ ನಾನು ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಬೇರೆ ಬೇರೆ ದೇಶದಲ್ಲಿ ಇಂತಹ ಭಾರತೀಯರು ಎಷ್ಟು ತೊಂದರೆ ಪಡುತ್ತಿದ್ದಾರೆ. ದಯವಿಟ್ಟು ಅದರ ಬಗ್ಗೆ ಚರ್ಚೆ ಮಾಡಿ Embassy ಗೆ ಮಾತಾಡಿ ಈ ವಿದ್ಯಾರ್ಥಿಗಳನ್ನು, ಭಾರತೀಯರನ್ನು ಕರೆದುಕೊಂಡು ಬರಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಚಿವರು ತಮ್ಮ ಸಂಪುಟದ ಸ್ನೇಹಿತರಿಗೆ ಮನವಿ ಮಾಡುತ್ತಿದ್ದಾರೆ. ಈ ರೀತಿ ಬೇರೆಯವರಿಗೂ ಆಗಬಾರದು. ಅವರು ಈ ವಿಚಾರವನ್ನು ಪ್ರಸ್ತಾಪಿಸಿದ್ದು ನನಗೆ ಸಂತೋಷವಾಗಿದೆ. ನಿಮ್ಮ ಮಗಳ ಜೊತೆ ಹೋದವರೆಲ್ಲರೂ ಮಕ್ಕಳೇ.

**ಶ್ರೀ ಆನಂದ್‌ಸಿಂಗ್:–** ನಾನು ನನ್ನ ಮಗಳ ಬಗ್ಗೆ ಹೇಳುತ್ತಿಲ್ಲ. ಎಲ್ಲರ ಬಗ್ಗೆಯೂ ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, I have not told like that. ಅವರ ಮಗಳ ಜೊತೆ ಹೋದವರೆಲ್ಲರೂ ಮಕ್ಕಳೇ. ಯಾರ ಮಕ್ಕಳಾದರೂ ಅವರು ಭಾರತೀಯ ವಿದ್ಯಾರ್ಥಿಗಳು. ಅಂದರೆ, ಭಾರತೀಯ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು ಎಂದು ಮಾನ್ಯ ಸಚಿವರು ಏನು ಸಲಹೆ ಕೊಟ್ಟಿದ್ದಾರೆ ಅದು ಒಳ್ಳೆಯ ಸಲಹೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ನಾವು ಹೇಳುವುದನ್ನು ಅವರು ಹೇಳಿದ್ದಾರೆ. ನನಗೆ ಅನುಭವವಿಲ್ಲ. He has experienced that bitter experience. ಅದಕ್ಕೆ ಅವರು ಹೇಳಿದ್ದಾರೆ, ಸಂತೋಷ. Dr Zhong Naushan, the great Medical Scientist from China, who helped China from previous *SARS (Severe acute respiratory syndrome)* epidemic tells, by June end we will be able to control if all countries come together and strictly follow WHO (World Health Organization) guidelines and this virus does not survive. When there was SARS epidemic Dr. Zhong Naushanಅವರಿಂದಲೇ ಅದು ನಿಯಂತ್ರಣಕ್ಕೆ ಬಂದಿತ್ತು. ಇದು ಅವರು ಹೇಳಿದ್ದು. ಎಲ್ಲಾ ದೇಶಗಳು ಒಂದಾಗಿ ಜಾಗತಿಕ ಆರೋಗ್ಯ ಸಂಸ್ಥೆಗಳು ಹೇಳಿದಂತಹ ಮಾರ್ಗಸೂಚಿಗಳೇನಿವೆ ಅವೆಲ್ಲಾ ನಾವು ಫಾಲೋ ಮಾಡಿದರೆ ಜೂನ್ ಅಂತ್ಯಕ್ಕೆ ಇದರ ತೀವ್ರತೆ ಕಡಿಮೆಯಾಗುವ ಸಾಧ್ಯತೆ ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು reference ಮಾಡುವುದರ ಜೊತೆಗೆ WHO ಇನ್ನೊಂದು ಮಾತನ್ನು ಹೇಳುತ್ತದೆ. The severity of Covid-19 is, it is 80% mild disease, 14% severe and 6% serious. At high risk are more than 60 years existing heart and lung disease. ಅಂದರೆ 60 ವರ್ಷ ಮೇಲ್ಪಟ್ಟು heart and lung disease ಇದ್ದವರಿಗೆ ಇದು ಸ್ವಲ್ಪ ತೊಂದರೆದಾಯಕ ಎನ್ನುವ ಮಾತನ್ನು ಹೇಳಿದ್ದಾರೆ. Precaution measures ಕೈಗೊಳ್ಳಬೇಕು. ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ಎಲ್ಲಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಯಾರೇ ಬರಲಿ, ನಮ್ಮ ಭಾರತ ದೇಶದವರೇ ಬೇರೆ ದೇಶದಿಂದ ಬಂದರೆ ಸ್ಪೆಷಲ್ ವಾರ್ಡ್‌ಗೆ ಕರೆದುಕೊಂಡು ಹೋಗಿ isolation ನಲ್ಲಿ ಇಡಿ. ಜನರಿಗೆ panic ಮಾಡುವುದು ಬೇಡ. If you take strict measure, then you can very well control it. ಇವತ್ತು ನಮ್ಮ ದೇಶ 2ನೇ ಹಂತದಲ್ಲಿರುವುದರಿಂದ ಅಲ್ಲೇ ಉಳಿಯುತ್ತದೆ. ಇಲ್ಲದಿದ್ದರೆ ಇದು 3ನೇ ಹಂತಕ್ಕೆ ಬರುತ್ತದೆ. ಸರ್ಕಾರ ನಿಷ್ಕಾಳಜಿ ಮಾಡಿದರೆ ಇದು ನಾಲ್ಕನೇ ಹಂತಕ್ಕೆ ಹೋದರೆ ಚೈನಾ ಇಟಲಿ ಆಗುವ ಸಾಧ್ಯತೆ ಇದೆ. ತಮ್ಮ ಮೂಲಕ ಈ ಸರ್ಕಾರಕ್ಕೆ ಅತ್ಯಂತ ಕಾಳಜಿ ಪೂರ್ವಕವಾಗಿ ನಾನು ಪ್ರಾರ್ಥನೆ ಮಾಡುತ್ತೇನೆ. ಇದು ಗಂಭೀರವಾದಂತಹ ವಿಷಯ. 'Prevention is better than cure'. ವಿಮಾನ ನಿಲ್ದಾಣಕ್ಕೆ ಯಾರೇ ಬರಲಿ, Affected Country ದಿಂದ ನಮ್ಮವರೇ ಬರಲಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ Isolation Ward ನಲ್ಲಿ ಇಟ್ಟು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

positive ಬಂದರೆ ಅವರಿಗೆ ಚಿಕಿತ್ಸೆ ಕೊಡಿ. ಈ ದೊಡ್ಡ ಭಯಾನಕ ವ್ಯಾದಿಯಿಂದ ನಮ್ಮ ರಾಜ್ಯ ಹೊರಗೆ ಬರುತ್ತದೆ ಎನ್ನುವಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಡೀ ಜಗತ್ತಿನ ತಲ್ಲಣಕ್ಕೆ ಕಾರಣವಾಗಿರುವಂತಹ ಕೊರೊನಾ ಸಾಂಕ್ರಾಮಿಕ ರೋಗದ ಬಗ್ಗೆ ನಿಯಮ 68 ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಂಡಿರುವುದು ಅತ್ಯಂತ ಸಕಾಲಿಕ ಮತ್ತು ಅರ್ಥಪೂರ್ಣ ಎಂದು ನಾನು ಭಾವಿಸುತ್ತೇನೆ. ಇವತ್ತು ಇಡೀ ಜಗತ್ತು ಭಾರತ ಸೇರಿದ ಹಾಗೆ ಅತ್ಯಂತ ಆತಂಕದಲ್ಲಿದ್ದೇವೆ. ಬಹುಶಃ 1918 ರಲ್ಲಿ ನಮ್ಮೆಲ್ಲರನ್ನು ತೀವ್ರವಾಗಿ ಕಾಡಿದಂತಹ ಪ್ಲೇಗ್ ಆ ಕಾಲಕ್ಕೆ 50 ಕೋಟಿ ಜನರು ಭಾದಿತರಾಗಿದ್ದರು. ನಾವು ಅವತ್ತು 5 ಕೋಟಿ ಜನರನ್ನು ಕಳೆದುಕೊಂಡಿದ್ದೆವು. ಆನಂತರ ದಿನಗಳಲ್ಲಿ ಮತ್ತೆ ಅದೇ ರೀತಿಯ ಜಾಗತಿಕ ಮಟ್ಟದ ಮತ್ತೊಂದು ತೀವ್ರವಾದ ಕಾಯಿಲೆ ನಮ್ಮನ್ನು ಕಾಡುವುದಕ್ಕೆ ಪ್ರಾರಂಭ ಮಾಡಿದೆ. ಚೀನಾದಲ್ಲಿ ಈ ಕಾಯಿಲೆ ಬಂದಿದೆ. ಕಾಯಿಲೆ ಹೇಗೆ ಬಂತು, ಏಕೆ ಬಂತು ಎಂದು ಕಾರಣ ಇನ್ನೂ ನಾವು ಹುಡುಕುತ್ತಿದ್ದೇವೆ. ಬಹಳ ಜನ ಆಹಾರ ಪದ್ಧತಿಯಿಂದ ಬಂದಿದೆ ಎನ್ನುತ್ತಾರೆ, ಇನ್ನು ಏನೇನೋ ಹೇಳುತ್ತಿದ್ದಾರೆ. ನಿಖರವಾದ ಕಾರಣ ನಮಗೆ ಇನ್ನು ಕೇಳಿಬಂದಿಲ್ಲ. ಆದರೆ ಇವತ್ತು 1,62,467 ಜನರು ಇಡೀ ಜಗತ್ತಿನಲ್ಲಿ ಈ ರೋಗದಿಂದ ಭಾದಿತರಾಗಿದ್ದಾರೆ. ಇಲ್ಲಿಯವರೆಗೆ ಇಡೀ ಜಗತ್ತಿನಲ್ಲಿ ಭಾರತವೂ ಸೇರಿದ ಹಾಗೆ 6,069 ಜನರು ಹಸುನೀಗಿದ್ದಾರೆ. ನಿನ್ನೆ ಒಂದೇ ದಿನ ಇಟಲಿಯಲ್ಲಿ 368 ಜನರು ಸಾವನ್ನಪ್ಪಿರುವುದು ಒಂದು ದೊಡ್ಡ ದಾಖಲೆಯಾಗಿದೆ. ಇಟಲಿಯಲ್ಲಿ ಏಕೆ ಈ ಸಮಸ್ಯೆ ಆಯಿತು ಎಂದರೆ, ಇಟಲಿಯಲ್ಲೂ ಆರಂಭದಲ್ಲಿ ನಮ್ಮ ಹಾಗೆ 5–10 ಜನರು ಇದ್ದರು ಅಷ್ಟೆ.

(ಮುಂದು)

440/16–3–2020/4–30/ಬಿಕೆಪಿ–ಎಂಡಿ
**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು)**

ಇವತ್ತು ಅಲ್ಲಿ ಬಾಧಿತರ ಸಂಖ್ಯೆ 24,747 ಕ್ಕೆ ಏರಿದೆ. ನಿನ್ನೆ ಭಾನುವಾರ ಒಂದೇ ದಿವಸ 3590 ಹೊಸ ಕೊರೋನಾ ಪ್ರಕರಣಗಳು ಪತ್ತೆಯಾಗಿವೆ. ಇದಕ್ಕೆ ಕಾರಣ ಇಟಲಿಯವರ ಉದಾಸೀನತೆ. ಇದು ನಮ್ಮನ್ನು ಏನು ಮಾಡುತ್ತದೆ, ಇದು ವಯಸ್ಸಾದವರನ್ನು ಕಾಡುತ್ತದೆ ಅಂತೆ, ಸಕ್ಕರೆ ಕಾಯಿಲೆ ಇರುವವರಿಗೆ, ಹಾರ್ಟ್ ವೀಕ್ ಇರುವವರಿಗೆ, ಶ್ವಾಸಕೋಶದ ತೊಂದರೆ ಇರುವವರಿಗೆ ಕಾಡುತ್ತದೆಯಂತೆ ಎಂದು ಹೇಳಿ ಇಟಲಿಯವರು ಉದಾಸೀನ ಮಾಡಿ ಎಲ್ಲವನ್ನೂ ಸಹ ಅವರು ಮಾಮೂಲಿಯಂತೆ ಮಾಡಲಿಕ್ಕೆ ಹೊರಟರು. ಇಟಲಿ ಅಂದರೆ ಕರ್ನಾಟಕದಷ್ಟು ಜನಸಂಖ್ಯೆ ಅಷ್ಟೆ. ಅಲ್ಲಿನ ಜನಸಂಖ್ಯೆ ದೊಡ್ಡದೇನೂ ಇಲ್ಲ. ಒಂದೇ ದಿನ 368 ಜನ ಸತ್ತು ಹೋದರು, ಒಂದೇ ದಿನ 3590 ಜನ ಹೊಸ ರೋಗಿಗಳು ಅಲ್ಲಿ ಪತ್ತೆಯಾದರು ಎಂದರೆ ಎಷ್ಟು ವ್ಯಾಪಕವಾಗಿ, ಗಂಭೀರವಾಗಿ ಈ ರೋಗ ಹರಡುತ್ತಿದೆ ಎನ್ನುವುದನ್ನು ಗಮನಿಸಬೇಕು. ಏತಕ್ಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆಂದರೆ ಈ ಕಾಯಿಲೆ ಬಗ್ಗೆ ಯಾವುದೇ ಕಾರಣಕ್ಕೂ ಉದಾಸೀನ ಮಾಡಬಾರದು. ಈಗ ಕೇರಳದ ಉದಾಹರಣೆಯನ್ನು ತೆಗೆದುಕೊಳ್ಳೋಣ. ಕೇರಳದ ಶ್ರೀಮತಿ ಕೆ.ಕೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶೈಲಜ ರವರು ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಇಡೀ ದೇಶ ಅವರನ್ನು ಮೆಚ್ಚಿದೆ. ಕೇರಳದ ಮಾದರಿಯನ್ನು ಆಂಧ್ರ ಮತ್ತು ತೆಲಂಗಾಣ ರಾಜ್ಯ ಒಪ್ಪಿಕೊಂಡಿದೆ. ಇವತ್ತು ಕೇರಳದಲ್ಲಿ 22 ಜನರು ಬಾಧಿತರಿದ್ದಾರೆ. ಅಲ್ಲಿ ಏನಾಯಿತು ಎಂದರೆ 11 ರಿಂದ 19 ರವರೆಗೆ ಇಂಗ್ಲೇಂಡ್‌ನ 19 ಜನರ ಒಂದು ತಂಡ ಪ್ರವಾಸಕ್ಕೆ ಬಂತು. ಅವರ ಪೈಕಿ ಗಂಡ–ಹೆಂಡತಿಯವರಿಗೆ ಆ ಒಂದು ಪ್ರಕರಣ ಕಾಣಿಸಿಕೊಂಡಿದೆ. ಅವರು ಪರೀಕ್ಷೆಗೆ ರಕ್ತವನ್ನು ಕೊಟ್ಟರು. ಅವರು ಎರಡು ದಿವಸಗಳ ಕಾಲ ಆಸ್ಪತ್ರೆ ಇದ್ದು, ಯಾರಿಗೂ ಕೇಳದೆ ಅಲ್ಲಿಂದ ಬಿಟ್ಟು ಹೋದರು. ತಪ್ಪಿಸಿಕೊಂಡು ಪ್ರವಾಸಕ್ಕೆ ಮುಂದೆ ಹೋದರು. ಆದರೆ, ಸರ್ಕಾರ ಈ ವಿಚಾರವನ್ನು ಬಿಡದೇ ಅವರ ಪರೀಕ್ಷೆಯನ್ನು ಫಾಲೋಅಪ್ ಮಾಡಿತು. 19ನೇ ತಾರೀಖು ಅವರು ಕೊಚ್ಚಿನ್‌ಗೆ ಹೋಗಲಿಕ್ಕೆ ಏರ್‌ಪೋರ್ಟ್‌ನಲ್ಲಿ ಕುಳಿತಿದ್ದಾರೆ, ಇವರು 19 ಜನರು ಮತ್ತು ಬೇರೆ 270 ಜನರು ಸೇರಿದಂತೆ ಒಟ್ಟು 289 ಜನರು ಕುಳಿತಿದ್ದರು. ಇವರ ರಕ್ತ ಪರೀಕ್ಷೆಯ ಫಲಿತಾಂಶ ಸಿಕ್ಕಿದ ಕೂಡಲೇ ಏರ್‌ಪೋರ್ಟ್‌ಗೆ ಪೋನ್ ಮಾಡುತ್ತಾರೆ. ಆ ವಿಮಾನ ಇನ್ನು ಏನು take-off ಆಗಬೇಕಾಗ ಅದನ್ನು ನಿಲ್ಲಿಸುತ್ತಾರೆ. ಆ 289 ಜನರನ್ನೂ ಸಹ ಇಳಿಸುತ್ತಾರೆ. ಅಷ್ಟು ಜನರನ್ನು ತಪಾಸಣೆಗೆ ಒಳಪಡಿಸುತ್ತಾರೆ. ಬ್ರಿಟನ್‌ನ ಗಂಡ–ಹೆಂಡತಿಗೆ ಈ ರೋಗ ತೀವ್ರವಾಗಿ ಕಾಡುತ್ತಿರುವುದು ಸ್ಪಷ್ಟವಾಗುತ್ತದೆ. ಇವರ ಜೊತೆಗೆ ಬಂದ ಇನ್ನುಳಿದ 17 ಮಂದಿ ಇನ್ನೂ ಕೇರಳದಲ್ಲಿಯೇ ಇದ್ದಾರೆ. ಅವರನ್ನು ಆ ರಾಜ್ಯದಿಂದ ಹೊರಗಡೆ ಬಿಟ್ಟಿರುವುದಿಲ್ಲ. ಇಷ್ಟೇ ಅಲ್ಲದೇ ಅಲ್ಲಿನ ಆರೋಗ್ಯ ಇಲಾಖೆ ದಿಶಾ ಎನ್ನುವ ಒಂದು ಸಂಸ್ಥೆಯನ್ನು ಸೃಷ್ಟಿ ಮಾಡಿದೆ. ಆ ದಿಶಾ ಎನ್ನುವ ಸಂಸ್ಥೆ ಇಡೀ ಕೊರೊನಾ ಕಾಯಿಲೆಯನ್ನು, ಇಡೀ ಆರೋಗ್ಯ ಇಲಾಖೆಯನ್ನು coordinate ಮಾಡಿ, ಕಂಟ್ರೋಲ್ ಮಾಡುವುದಕ್ಕೆ ಈ ಕಾಯಿಲೆಯನ್ನು ಪತ್ತೆ ಮಾಡುವಲ್ಲಿ ಅವರುಗಳನ್ನು ಪರೀಕ್ಷೆಗೆ ಒಳಪಡಿಸುವುದರಿಂದ ಹಿಡಿದು, ಅವರ ಚಿಕಿತ್ಸೆಯಿಂದ ಹಿಡಿದು, ಕಡೆಯವರೆಗಿನ ಎಲ್ಲಾ ಉಸ್ತುವಾರಿಯನ್ನು ಹೊಸದಾಗಿ ಹುಟ್ಟಿ ಹಾಕಿದಂತಹ ದಿಶಾ ಎನ್ನುವ ಸಂಸ್ಥೆ ಮಾಡುತ್ತಿದೆ. ಆರೋಗ್ಯ ಸಚಿವರಾದ ಆ ಹೆಣ್ಣು ಮಗಳು war footing ನಲ್ಲಿ ಈ ಕೆಲಸವನ್ನು ಕೈಗೆತ್ತಿಕೊಂಡಿದ್ದಾರೆ. ಅಲ್ಲಿ ಯಾರಾದರೂ ಶಂಕಿತರು ಎಂದು ಕಂಡು ಬಂದಲ್ಲಿ ಇಡೀ ಮನೆಯನ್ನು ಸ್ವಚ್ಛಗೊಳಿಸುವಂತಹ ಕೆಲಸವನ್ನು ಆ ಸರ್ಕಾರವೇ ಮಾಡುತ್ತಿದೆ. ಇಡೀ ಮನೆ ಮಂದಿಯನ್ನು, ಇಡೀ ಬೀದಿಯನ್ನು ಸ್ವಚ್ಛಗೊಳಿಸುವಂತಹ ಕೆಲಸ ಮಾಡುತ್ತಿದೆ. ಇಡೀ ಬೀದಿಯ ಎಲ್ಲಾ ಜನರನ್ನು ಪರೀಕ್ಷೆಗೆ ಒಳಪಡಿಸುವಂತಹ ಕೆಲಸವನ್ನು ಮಾಡುತ್ತಿದೆ. ಹೀಗಾಗಿ, ನಮಗಿಂತ ಮುಂಚಿತವಾಗಿ ರೋಗಿಗಳು ಕಾಣಿಸಿಕೊಂಡರು. ಆದರೆ, ಅಲ್ಲಿ ಯಾರೂ ಸಹ ಸಾವಿಗೆ ತುತ್ತಾಗಿಲ್ಲ. ಕೇರಳ ರಾಜ್ಯ ಎಲ್ಲಾ ರೀತಿಯ ಕ್ರಮಗಳನ್ನು ಕೈಗೆತ್ತಿಕೊಂಡಿದೆ. ಆದರೆ, ಈಗ ನಮ್ಮ ಶಿಕ್ಷಣ ಇಲಾಖೆಯ ಸಚಿವರು ಹೊರಗಡೆ ಹೋದರು. ಇವರು ಈ ವಿಚಾರವನ್ನು ಸೀರಿಯಸ್ ಆಗಿ ಗಮನಕ್ಕೆ ತೆಗೆದುಕೊಂಡಿರುವುದನ್ನು ಬಿಟ್ಟರೆ ಆರೋಗ್ಯ ಇಲಾಖೆಯ ಕೆಲಸಗಳು ನಮಗೆ ಸಮಾಧಾನ ತಂದಿಲ್ಲ. ಬಹುಶಃ ನಾವು ಇನ್ನೂ ಇಟಲಿಯ ಹಾದಿಯಲ್ಲಿದ್ದೇವೆ. ಬಹುಶಃ ಕರ್ನಾಟಕದಲ್ಲಿ ಮತ್ತು ಭಾರತದಲ್ಲಿ ಏನಾದರೂ ಚೈನಾ ದೇಶದ ರೀತಿ ಇದು ವ್ಯಾಪಕವಾಗಿ ಹರಡುವುದಾದರೆ ಈಗ ಇಲ್ಲಿ ವೈದ್ಯರೊಬ್ಬರು ಅರ್ಧ ತಾಸಿನ ಹಿಂದೆ ಏನು ಹೇಳಿದರು, ಅದರಂತೆ ಇನ್ನು 20 ದಿವಸಕ್ಕೆ ಇದೇ ಪರಿಸ್ಥಿತಿ ಮುಂದುವರಿದರೆ ಕರ್ನಾಟಕ ಮತ್ತು ಭಾರತ ಮತ್ತೊಂದು ಇಟಲಿ ಆಗುತ್ತದೆ. ಏಕೆಂದರೆ, ನಮ್ಮ ಆರೋಗ್ಯ ಇಲಾಖೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಗಲಿ, ಆರೋಗ್ಯ ಇಲಾಖೆಯ ಅಧಿಕಾರಿಗಳಾಗಲಿ ಅಥವಾ ನಮ್ಮ ಸರ್ಕಾರ ಆಗಲಿ, ತಳಮಟ್ಟದಲ್ಲಿ ಈ ಒಂದು ಹತೋಟಿಯ ಕ್ರಮಕ್ಕೆ ಗಂಭೀರವಾಗಿ ಮುಂದಾಗಿಲ್ಲ. ಎಲ್ಲಿ ತಪಾಸಣಾ ಕೇಂದ್ರಗಳು ಕರಾರುವಕ್ಕಾಗಿ ಕೆಲಸ ಮಾಡುತ್ತಿವೆ ಎನ್ನುವುದನ್ನು ಹೇಳಬೇಕು. ಚೈನಾ ದೇಶದಲ್ಲಿ ಈ ಸೋಂಕು ತಗುಲಿದ 10 ದಿನಗಳಲ್ಲಿಯೇ ಬೃಹತ್ ಆಸ್ಪತ್ರೆಯನ್ನು ನಿರ್ಮಾಣ ಮಾಡಿದರು. 24 ತಾಸುಗಳ ಕಾಲ 100 ಮಿಷನರಿಗಳು ಅಲ್ಲಿ ಕೆಲಸ ಮಾಡಿದವು. ಅಲ್ಲಿ ದೊಡ್ಡ ಪ್ರಮಾಣದಲ್ಲಿ ಆಸ್ಪತ್ರೆ ನಿರ್ಮಾಣವಾಯಿತು. ಚೈನಾ ದೇಶ ತನ್ನ ಇತಿಹಾಸದಲ್ಲಿ ಬಹುಶಃ ಈ ಕಾಯಿಲೆಯನ್ನು ಹತೋಟಿಗೆ ತಗೆದುಕೊಳ್ಳುವಲ್ಲಿ ತೆಗೆದುಕೊಂಡ ಕ್ರಮಗಳು ಅಂದರೆ ಅಲ್ಲಿನ ರಸ್ತೆಗಳನ್ನು ದಿನಕ್ಕೆ ಎರಡು ಬಾರಿ ತೊಳೆಯುತ್ತಾರೆ. ಮನೆಗಳನ್ನು, ಆಸ್ಪತ್ರೆಗಳನ್ನು ತೊಳೆಯುತ್ತಾರೆ. ಸರ್ಕಾರಿ ಕಚೇರಿಯ ಕಟ್ಟಡಗಳನ್ನು ತೊಳೆಯುತ್ತಾರೆ. ಆದರೆ, ನಾವು ಇಲ್ಲಿ ಏನು ಮಾಡುತ್ತಿದ್ದೇವೆ, ನಮ್ಮ ಎಂಎಲ್ಎ.ಗಳು ಗೇಟ್‌ನಲ್ಲಿ ಬಂದರೆ sanitizer ಇದೆ. ಎಂಎಲ್‌ಸಿ.ಗಳ ಗೇಟ್‌ನಲ್ಲಿ sanitizer ಎಲ್ಲಿದೆ? Once in two hours sanitize ಮಾಡಿಕೊಳ್ಳಬೇಕು. ನಾವು ಆಸ್ಪತ್ರೆಗೆ ಹೋಗಿ ಕೇಳಿದರೆ ಇಲ್ಲವೆಂದು ಹೇಳುತ್ತಾರೆ. "ಏನ್ರೀ ಡಾಕ್ಟರ್ ಇಲ್ಲವೆಂದ ಮೇಲೆ ಇನ್ನು ಏತಕ್ಕೆ ಕುಳಿತಿದ್ದೀರಿ ಎಂದರೆ ಏನು ಮಾಡಬೇಕು ಸರ್" ಎಂದವರು ಹೇಳುತ್ತಾರೆ. ಈ ವಿಚಾರದಲ್ಲಿ ಕೇರಳದಲ್ಲಿನ ಆ ಸಚಿವರು ಏನು ಕ್ರಮ ತೆಗೆದುಕೊಂಡರು ಎನ್ನುವುದನ್ನು ಹೇಳಲಿಕ್ಕೆ ಬಯಸುತ್ತೇನೆ. ಕೇರಳದಲ್ಲಿರುವ ಎಲ್ಲಾ ಬಂಧಿಖಾನೆಯಲ್ಲಿರುವ ಎಲ್ಲಾ ಜನರಿಗೂ ಮಾಸ್ಕ್ ಹೊಲಿಯುವ ತರಬೇತಿಯನ್ನು ಕೊಟ್ಟರು. ಇವತ್ತು ಲಕ್ಷಾಂತರ ಮಾಸ್ಕ್‌ಗಳು ಕೇರಳದ ಜೈಲಿನಿಂದ ಬರುತ್ತಿವೆ. Sanitizer ಉತ್ಪತ್ತಿ ಬಹಳ ಕಡಿಮೆ ಇತ್ತು. ಇಲ್ಲಿ ಇಲ್ಲವೇ ಇಲ್ಲ ಬಿಡಿ. 10 ಮೆಡಿಕಲ್ ಸ್ಟೋರ್‌ಗಳನ್ನು ಹುಡುಕಿದರೂ ಸಿಕ್ಕಿರುವುದಿಲ್ಲ. ಕಡೆಗೆ ನಮ್ಮ ಅಳಿಯ ಡಾಕ್ಟರ್ ಹತ್ತಿರ sanitizer ತರಿಸಿಕೊಂಡೆ. ಇದು ಇವತ್ತು ಬಹಳ ದುರಂತದ ವಿಚಾರ. sanitizer ಎಲ್ಲಿ ಸಿಕ್ಕುತ್ತದೆ. ಇದನ್ನು ಒದಗಿಸುವಲ್ಲಿ ಆರೋಗ್ಯ ಇಲಾಖೆಯವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಒಂದು ದಿನ ಹಾಕಿದ ಮಾಸ್ಕ್ ಅನ್ನು ಮತ್ತೊಮ್ಮೆ ಹಾಕಬಾರದು ಎಂದು ಹೇಳುತ್ತಾರೆ. ಆದರೆ, ಮಾಸ್ಕ್ ಎಲ್ಲಿ ಸಿಕ್ಕುತ್ತಿದೆ ಎಂದು ಹೇಳಬೇಕು. Sanitizer and Dettol ಎಲ್ಲಿ ಸಿಕ್ಕುತ್ತದೆ ಎನ್ನುವುದನ್ನು ಹೇಳಿ. ಯಾವ ಕ್ರಮಕ್ಕೆ ಮುಂದಾಗಿದ್ದೀರಿ ಎನ್ನುವುದನ್ನು ಹೇಳಿ. ಇವತ್ತು ಒಬ್ಬರಿಗೊಬ್ಬರು 6 ಅಡಿ ದೂರ ಇರಬೇಕೆಂದು ಹೇಳುತ್ತಾರೆ. ಆದರೆ, ಇಲ್ಲಿ ಪಕ್ಕದಲ್ಲಿಯೇ ಇದ್ದಾರೆ. ನಾವುಗಳೆಲ್ಲರೂ ಹೀಗೆಯೇ ಕುಳಿತಿದ್ದೇವೆ. ಈ ಸೋಂಕು ತಗುಲಬಾರದು ಎಂದರೆ ಏನು ಮಾಡಬೇಕೆಂದು ಹೇಳಿ. Sanitize ಮಾಡಿಕೊಳ್ಳಿ ಎಂದು, 2 ಗಂಟೆಗೊಮ್ಮೆ ಕೈತೊಳೆಯಿರಿ ಎಂದು ಹೇಳುತ್ತೀರಿ, ಎಲ್ಲಿ ತೊಳೆಯಬೇಕು, ಹೇಗೆ ತೊಳೆಯಬೇಕು, ಏನು ವ್ಯವಸ್ಥೆ ಮಾಡಿದ್ದೀರಿ? ಎ.ಸಿ.ಯಲ್ಲಿ ಇರಬಾರದು, ಇದು ಬಹಳ ಅಪಾಯಕಾರಿ ಎಂದು ಹೇಳಲಾಗುತ್ತಿದೆ. ವಯಸ್ಸಾದವರನ್ನು ನೋಡಿಕೊಳ್ಳಿ, ಮಕ್ಕಳನ್ನು ನೋಡಿಕೊಳ್ಳಿ ಎಂದು ಹೇಳುತ್ತೀರಿ.

**ಸಭಾಪತಿಯವರು:–** ಎ.ಸಿ. ಬೇಡವೆಂದು ಹೇಳಿದರೆ, ಎ.ಸಿ.ಬೇಕೆಂದು ಹೇಳುತ್ತೀರಿ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಆದರೆ, ಅದನ್ನು ಬಿಟ್ಟು ಗಾಳಿ ಬರಲಿಕ್ಕೆ ಬೇರೆ ವ್ಯವಸ್ಥೆ ಇಲ್ಲಿ ಇರುವುದಿಲ್ಲ. ನಾವು ಆಮ್ಲಜನಕದಿಂದ ಉಸಿರಾಡಬೇಕು. ಯಾವರೀತಿಯಲ್ಲಿ ಇಲ್ಲಿ ಅಮ್ಲಜನಕ ಬರುತ್ತದೆ? ಇದು ಎ.ಸಿ.ಯಾಗಿ ನಿರ್ಮಾಣವಾಗಿ ಹೋಗಿದೆ. ಇದೇ ಎ.ಸಿ.ಯಲ್ಲಿ ನಾವುಗಳು ಇರಬೇಕು. ಇಲ್ಲವೆಂದರೆ ಉಷ್ಣಾಂಶ ಹೆಚ್ಚಿರಬೇಕು ಅಷ್ಟೆ. ನಮ್ಮ ಅದೃಷ್ಟ. ಭಾರತದಲ್ಲಿ ನಾವೀಗ ಬೇಸಿಗೆಯಲ್ಲಿದ್ದೇವೆ. ಬೇಸಿಗೆ ಅಲ್ಲದೇ ನಾವು ಏನಾದರೂ ಶೀತ ವಲಯದಲ್ಲಿದ್ದರೆ ಈ ಪರಿಸ್ಥಿತಿ ಇನ್ನು ಎಲ್ಲಿಗೆ ಹೋಗಿ ನಿಲ್ಲುತ್ತಿತ್ತೋ ಎನ್ನುವುದನ್ನು ಎಲ್ಲರೂ ಯೋಚನೆ ಮಾಡಬೇಕು. ನಾನು ಈಗಲೂ ಹೇಳುವುದೇನೆಂದರೆ ನಮ್ಮಲ್ಲಿ ಈ ಕೊರೋನಾ ವೈರಸ್ ಅನ್ನು ಪರಿಣಾಮಕಾರಿಯಾಗಿ ತಪಾಸಣೆ ಮಾಡುವಂತಹ ಹಂತವನ್ನು ಮುಟ್ಟಿಲ್ಲ. ನೀವು ಒಬ್ಬ ಈ ರೋಗಿಯನ್ನು ತಪಾಸಣೆಗೆಂದು ತೆಗೆದುಕೊಂಡು observation ನಲ್ಲಿ ಇಟ್ಟುಕೊಂಡು ಇನ್ನು 10–15 ದಿವಸಗಳ ಸಮಯವನ್ನು ಕೇಳುತ್ತಿದ್ದೀರಿ. ಶ್ರೀ ಅಹಮದ್ ಸಿದ್ದಿಕಿ ಇವರ ವಿಚಾರದಲ್ಲಿ ಎಷ್ಟು ದಿವಸ ತೆಗೆದುಕೊಂಡಿದ್ದೀರಿ? ಅವರು ಸತ್ತು, cremation ಆದ 3 ದಿನಗಳ ನಂತರ ಇವರು Covid-19 virus ನಿಂದ ಸತ್ತಿದ್ದಾನೆಂದು ಹೇಳಿದಿರಿ. ಅದಕ್ಕಿಂತ ಮುಂಚೆ ಎಲ್ಲಿ ಸಾಧ್ಯವಾಯಿತು? ಎಲ್ಲಿ ನಾವು advance ಇದ್ದೇವೆ, ಯಾವ ಜಿಲ್ಲೆಯಲ್ಲಿ ಪರೀಕ್ಷಾ ಕೇಂದ್ರ ಇದೆ ಎಂದು ಹೇಳಿ. ಜಿಲ್ಲೆಯಲ್ಲಿ ಎಷ್ಟು ICU (Intensive Care Unit) ಗಳಿವೆ ಎಂದು ಹೇಳಿ. ತಾಲ್ಲೂಕುಗಳಲ್ಲಿ ಎಷ್ಟು ICU ಗಳಿವೆ ಎಂದು ಹೇಳಿ. ಇನ್ನು ಸಹ ಇರುವಂತಹ ಆಸ್ಪತ್ರೆಗಳಲ್ಲಿಯೇ ಬೇರೆ ವಾರ್ಡ್‌ಗಳಲ್ಲಿ ಅವರನ್ನು ಇಡುತ್ತಿದ್ದೀರಿ. ಪ್ರತ್ಯೇಕವಾದ ಆಸ್ಪತ್ರೆಗಳನ್ನು ಎಲ್ಲಿ ಮಾಡಿದ್ದೀರಿ ಎನ್ನುವುದನ್ನು ಹೇಳಬೇಕು. ಏನು precautionary measures ನ್ನು ಮಾಡಿದ್ದೀರಿ. ಏನಾದರೂ ಭಾರತದ ಕೊಳಗೇರಿಗೆ/ಸ್ಲಮ್‌ಗೆ ಈ ಒಂದು ಪರಿಸ್ಥಿತಿ ಬಂದರೆ ಏನಾಗಬಹುದು ಎನ್ನುವುದನ್ನು ಸರ್ಕಾರ ಯೋಚನೆ ಮಾಡಿದೆಯೇ? ಯಾವುದಾದರೂ ನಗರಗಳಿಗೆ ಈ ರೋಗ ಬಂದರೆ ಪರಿಸ್ಥಿತಿ ಗಂಭೀರವಾಗುತ್ತದೆ ಎನ್ನುವುದರ ಬಗ್ಗೆ ಯೋಚನೆ ಮಾಡಿದ್ದೀರಾ, ಪರ್ಯಾಯ ವ್ಯವಸ್ಥೆಗೆ ಸರ್ಕಾರ ಮುಂದಾಗಿದೆಯೇ? ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದಂತೆ 156 ರಾಷ್ಟ್ರಗಳಲ್ಲಿ ಈ ಸೋಂಕು ಕಾಯಿಲೆ ಇದೆ.

**(ಗೊಂದಲ)**

ಒಂದೊಂದು ನಿಮಿಷಕ್ಕೂ ಈ ಕಾಯಿಲೆ ವಿಸ್ತರಣೆಯಾಗುತ್ತಾ ಹೋಗುತ್ತಿದೆ. ಇಡೀ ಜಗತ್ತಿಗೆ ಈ ಕಾಯಿಲೆ ಹಬ್ಬುವುದರಲ್ಲಿ ಯಾವುದೇ ಅನುಮಾನವಿಲ್ಲ, ಆತಂಕವಿಲ್ಲ. ಆದರೆ, ನನ್ನ ಆತಂಕ ಏನೆಂದರೆ ನಮ್ಮ ಕರ್ನಾಟಕ ಸರ್ಕಾರ ಈ ವಿಚಾರವಾಗಿ ತೆಗೆದುಕೊಳ್ಳಬೇಕಾದ ಕ್ರಮದಲ್ಲಿ ಗಂಭೀರವಾದ ಸಿದ್ಧತೆಯಲ್ಲಿ precautionary measure ನಲ್ಲಿ ಎಡವುತ್ತಿದೆ. ಶಾಲಾ ಮಕ್ಕಳು ಪರೀಕ್ಷೆಗೆ ಹೋಗುತ್ತಿದ್ದಾರೆ. ಅವರು ಹೋಗುವ ಮುನ್ನ ಅವರಿಗೆ sanitization ಮಾಡಿ ಕಳುಹಿಸುತ್ತಿದ್ದೀರಾ? ಆ ರೀತಿಯಲ್ಲಿ ಮಾಡುತ್ತಿಲ್ಲ. ಇವತ್ತು ಯಾವುದಾರೊಂದು ಕಚೇರಿಗೆ ಹೋದರೆ ಅವರನ್ನು sanitize ಮಾಡಿ ಒಳಗಡೆ ಬಿಡುತ್ತಿದ್ದೀರಾ, sanitization ವ್ಯವಸ್ಥೆಯಾಗಿರುವ ಬಗ್ಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮಗೆ ಹೇಳಿ. ಮದುವೆ ಮನೆಗೆ ಹೋಗುವ ಮುನ್ನ sanitization ಮಾಡಿಕೊಂಡು ಹೋಗುತ್ತಿದ್ದಾರೆಯೇ, ಆರೋಗ್ಯ ಇಲಾಖೆ ವತಿಯಿಂದ ಎಲ್ಲಿ ಯಾವ ಸಾರ್ವಜನಿಕ ಸೇವೆಗಳಲ್ಲಿ sanitization ವ್ಯವಸ್ಥೆ ಆಗಿದೆ ಎಂದು ಹೇಳಿ. ಮೊದಲು ಇಡೀ ರಾಜ್ಯದಲ್ಲಿ sanitization ವ್ಯವಸ್ಥೆಯಾಗಬೇಕು. ಇಡೀ ಕೇರಳ ರಾಜ್ಯದಲ್ಲಿ ಪುಕ್ಕಟ್ಟೆಯಾಗಿ ಮಾಸ್ಕ್ ವ್ಯವಸ್ಥೆಯಾಗಿದೆ. ಈ ಸರ್ಕಾರ ಏತಕ್ಕೆ ಕೊಡಲಿಕ್ಕೆ ಆಗುತ್ತಿಲ್ಲ. ಇದನ್ನು ಕೊಡುವುದಕ್ಕಿಂತಲೂ ದೊಡ್ಡ ಜವಾಬ್ದಾರಿ ಸರ್ಕಾರಕ್ಕೆ ಯಾವುದು ಇದೆ ಎಂದು ಹೇಳಬೇಕು. ಪ್ರತ್ಯೇಕವಾದಂತಹ ಒಂದು ವ್ಯವಸ್ಥೆಯನ್ನು ನಮ್ಮ ಆರೋಗ್ಯ ಇಲಾಖೆಯಿಂದ ಮಾಡಿ, ಎಲ್ಲರನ್ನೂ coordinate ಮಾಡಿಕೊಂಡು war footing ನಲ್ಲಿ ಕೆಲಸ ಮಾಡುವಲ್ಲಿ ಇನ್ನೂ ಹೆಜ್ಜೆಯನ್ನಿಟ್ಟಿಲ್ಲ. ಈ ರೋಗವನ್ನು ತಪಾಸಣೆ ಮಾಡುವಲ್ಲಿ ಯಾರು ತಜ್ಞರು ಇದ್ದಾರೆಂದು ಹೇಳಿ. ಏರ್‌ಪೋರ್ಟ್‌ನಿಂದ ಬಂದ ಸ್ನೇಹಿತರು ನನಗೆ ಏನು ಹೇಳುತ್ತಾರೆಂದರೆ ಇವರು ಪರೀಕ್ಷೆಯನ್ನು ಮಾಡುವುದನ್ನು ನೋಡಿದರೆ ಇವರಿಗೆ ಈ ಕಾಯಿಲೆಯನ್ನು ಪತ್ತೆ ಹಚ್ಚಲಿಕ್ಕೆ ಆಗುವುದಿಲ್ಲ, ಆ ರೀತಿಯಲ್ಲಿ ತಪಾಸಣೆ ಮಾಡುತ್ತಾರೆಂದು ಹೇಳುತ್ತಾರೆ. ಇದನ್ನು ಬರಿ ಕಾಟಾಚಾರಕ್ಕೆ ಮಾಡುತ್ತಾರೆ ಅಷ್ಟೆ. ಈ ಕೆಲಸವನ್ನು ನಾವು ಗಂಭೀರವಾಗಿ ಮಾಡುತ್ತಿಲ್ಲ. ಯಾವುದಾದರೊಂದು ಏರ್‌ಪೋರ್ಟ್‌ನಲ್ಲಿ ಆಸ್ಪತ್ರೆಯನ್ನು ಸರ್ಕಾರ ಮಾಡಿದೆಯೇ? ಅದಕ್ಕೆ ವ್ಯವಸ್ಥೆ ಮಾಡಿದ್ದೀರಾ? ಈ ವಿಚಾರವಾಗಿ ನಮ್ಮ ಮಾನ್ಯ ಸಚಿವರು ಬಹಳ ಚೆನ್ನಾಗಿ ಹೇಳಿದರು. ಭಾರತದ ಅದರಲ್ಲೂ ಕರ್ನಾಟಕದವರು ಎಲ್ಲಾ ರಾಷ್ಟ್ರಗಳಲ್ಲಿ ವಾಸಿಸುತ್ತಿದ್ದಾರೆ. ಅವರು ಇಲ್ಲಿಗೆ ಬರಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಬಹಳ ಜನರು ಏರ್‌ಪೋರ್ಟ್‌ನಲ್ಲಿದ್ದಾರೆ. ಅವರನ್ನು ಕರೆದುಕೊಳ್ಳಲಿಕ್ಕೆ ಸರ್ಕಾರದ ವತಿಯಿಂದ ಏನು ಚಿಂತನೆ ಮಾಡಲಾಗಿದೆ, ಅವರುಗಳು ಬಂದರೆ ಅವರನ್ನು ಎಲ್ಲಿ ಇಡುತ್ತೀರಿ, ಇದಕ್ಕೆ ಏನು ಏರ್ಪಾಡು ಮಾಡಿದ್ದೀರಿ, ಏನು ಸಿದ್ಧತೆ ಮಾಡಿಕೊಂಡಿದ್ದೀರಿ? ಈ ವಿಚಾರವಾಗಿ ಒಂದು ತೀರ್ಮಾನಕ್ಕೆ ಬರಬೇಕಲ್ಲವೇ? ಕರ್ನಾಟಕದ ಜನರು ಯಾವ್ಯಾವ ದೇಶದಲ್ಲಿದ್ದಾರೆ, ಎಷ್ಟು ಜನರು ಬರಲಿಕ್ಕೆ ತಯಾರಿದ್ದಾರೆ, ಅವರನ್ನು ಕರೆಸಬೇಕು, ಹೇಗೆ ಕರೆಸಬೇಕು, ಅವರುಗಳಿಗೆ ವೀಸಾ ಕೊಡಿಸುವಲ್ಲಿ ಹೇಗೆ ಕೊಡಿಸಬೇಕು? ಏಕೆಂದರೆ, ಅವರನ್ನು ಅಲ್ಲಿಯೇ ಬಿಡಲಿಕ್ಕೆ ಆಗುವುದಿಲ್ಲ. ಅವರುಗಳನ್ನು ಕರೆಸಿಕೊಳ್ಳಬೇಕಲ್ಲವೇ, ಅವರುಗಳನ್ನು ಕರೆಸಿಕೊಂಡ ಮೇಲೆ ಅವರುಗಳಿಗೆ ಪ್ರತ್ಯೇಕವಾದ ಆಸ್ಪತ್ರೆಗಳನ್ನು ಏರ್ಪಾಡು ಮಾಡಬೇಕಲ್ಲವೇ, ಅಲ್ಲಿ ಅವರನ್ನು ಇಡಬೇಕಲ್ಲವೇ, ಅಲ್ಲಿಂದ ಬರುವಂತಹ ಸಾವಿರಾರು, ಲಕ್ಷಾಂತರ ಜನರನ್ನು ಅಲ್ಲಿ ಇಡಬೇಕಲ್ಲವೇ, ಅವರುಗಳನ್ನು ಪರೀಕ್ಷೆಗೆ ಒಳಪಡಿಸಬೇಕಲ್ಲವೇ?

**(ಮುಂದು)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(441) 16.03.2020 04.40 ಎಸ್‌ವಿ–ಎಕೆ**
**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು)**

ಅವರಿಗೆ ಪ್ರತ್ಯೇಕವಾದ ಆಸ್ಪತ್ರೆಯನ್ನು ನಿರ್ಮಾಣ ಮಾಡಬೇಕಲ್ಲವೆ? ಕರ್ನಾಟಕ ರಾಜ್ಯದಲ್ಲಿ ಕೊರೊನಾ ವೈರಸ್‌ನಿಂದ ಬರುವ ರೋಗಕ್ಕಾಗಿ ಯಾವ ಒಂದು ಪ್ರತ್ಯೇಕ ಆಸ್ಪತ್ರೆಯಿದೆ ಎಂಬುದನ್ನು ಹೇಳಿ. ಸಂಜಯಗಾಂಧಿ ಆಸ್ಪತ್ರೆಯಲ್ಲಿ ಎರಡು ವಾರ್ಡ್ ಅಥವಾ ಇನ್ನಾವುದೋ ಆಸ್ಪತ್ರೆಯಲ್ಲಿ ನಾಲ್ಕು ಬೆಡ್ ಎಂಬುದಾಗಿ ಹೇಳುತ್ತಾರೆ. ಇದೇನಾ ವ್ಯವಸ್ಥೆ? Is

this the way to avoid and control this disease? ಪ್ರತ್ಯೇಕವಾಗಿ ಎಲ್ಲೆಲ್ಲಿ ಖಾಲಿ ಕಟ್ಟಡಗಳು ಈ ರಾಜ್ಯದಲ್ಲಿದೆಯೋ ಅವುಗಳನ್ನು ಸಜ್ಜುಗೊಳಿಸಿ. ಅವುಗಳಿಗೆ ಸುಣ್ಣ ಬಣ್ಣ ಮಾಡಿಸಿ, ಸುಸಜ್ಜಿತವಾದ ಆಸ್ಪತ್ರೆಗಳನ್ನು ನಿರ್ಮಾಣ ಮಾಡಿ. ಐಸಿಯು ಗಳನ್ನು ನಿರ್ಮಿಸಿ. ವಿದೇಶದಲ್ಲಿರುವವರನ್ನು ಮತ್ತು ಹೊರರಾಜ್ಯಗಳಲ್ಲಿರುವ ವೈದ್ಯರನ್ನು ಕರೆಸಿಕೊಳ್ಳಿ. ಗಂಭೀರವಾಗಿ ಸಮರೋಪಾದಿಯಲ್ಲಿ ಈ ಕಾಯಿಲೆಗೆ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳದೆ ಹೋದರೆ, ಕರ್ನಾಟಕ ರಾಜ್ಯವು ಬಹಳ ದೊಡ್ಡ ಬೆಲೆಯನ್ನು ತೆರಬೇಕಾಗುತ್ತದೆ. ಬಹಳಷ್ಟು ಬಡವರು ವಾಸಿಸುವ ಕೊಳಗೇರಿಗಳಿರುವ, ಗುಂಪು ಗುಂಪುಗಳಲ್ಲಿ ಜನಗಳು ವಾಸ ಮಾಡುವ ಈ ರಾಜ್ಯದಲ್ಲಿ ನಾವು ಇನ್ನಿಲ್ಲದ ಕ್ರಮಗಳನ್ನು ಕೈಗೊಂಡು ಎಚ್ಚರಿಕೆಯನ್ನು ವಹಿಸದಿದ್ದಲ್ಲಿ ಖಂಡಿತಾ ದೊಡ್ಡ ಬೆಲೆಯನ್ನು ತೆರಬೇಕಾಗುತ್ತದೆ. ಇಟಲಿ ಈಗೇನು ನೋವನ್ನು ಅನುಭವಿಸುತ್ತಿದೆಯೋ ಆ ಪರಿಸ್ಥಿತಿಗೆ ಅವಕಾಶ ಮಾಡಿಕೊಡದೆ ಎಲ್ಲ ರೀತಿಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಮುಂದಾಗಬೇಕೆಂದು ನಾನು ಆಗ್ರಹಿಸುತ್ತೇನೆ.

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮೊದಲಿಗೆ ನಾನು ವಿರೋಧಪಕ್ಷದ ನಾಯಕರಿಗೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಏಕೆಂದರೆ ನಿಯಮ 68ರ ಅಡಿಯಲ್ಲಿ ಕೈಗೆತ್ತಿಕೊಂಡಿರುವ ಈ ಚರ್ಚೆಯಲ್ಲಿ ನನ್ನ ಹೆಸರನ್ನೂ ಸೇರಿಸಿದ್ದಾರೆ. ಅವರ ಹಾಗೂ ನನ್ನ tuning perfect ಇದೆ. ಏಕೆಂದರೆ ನಾನು ಕೊರೋನಾ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ದಿನಾಂಕ 02.03.2020ರಂದು ಮನವಿಯನ್ನು ನೀಡಿದ್ದೆನು. ಅವರು ಭಾಷಣ ಮಾಡುವಾಗ ಗೊಂದಲವಾಗಿದ್ದು, ತಮ್ಮ ಭಾಷಣದಲ್ಲಿ ಕೊರೊನಾ ಬಗ್ಗೆ ಪ್ರಸ್ತಾಪ ಮಾಡಿದ್ದರು. ತಕ್ಷಣ ಮಾನ್ಯ ಸಭಾಪತಿಯವರು ಕೊರೊನಾ ಬಗ್ಗೆ ಚರ್ಚೆ ಮಾಡಿದ್ದು, ಅರ್ಧ ದಿನ ಚರ್ಚೆಯೂ ನಡೆಯಿತು. ಬಹುಶಃ ಆ ಚರ್ಚೆ ದಿನಾಂಕ 04.03.2020ರಂದು ನಡೆಯಿತು. ಆಗ ಕೇವಲ 28 ಕೊರೊನಾ ವೈರಸ್ patients declare ಆಗಿತ್ತು. ಇಂದು ನೂರರ ಮೇಲೆ ದಾಟಿಹೋಗಿದೆ. ಇದನ್ನು ಪತ್ತೆ ಮಾಡುವ ವಿಧಗಳು ಬೇರೆ ಬೇರೆ ಇದೆ. ಆದರೆ ಇದರಲ್ಲಿ ಒಂದು ಆಧ್ಯಾತ್ಮಿಕ ಸಂದೇಶವೂ ಇದೆ. ನಾವು ಎಷ್ಟೇ ಬಲಿಷ್ಠರಾಗಿದ್ದರೂ, ಎಷ್ಟೇ ತಾಕತ್ತಿದ್ದವರಾಗಿದ್ದರೂ ದೇವರು ಎನ್ನುವ ಶಕ್ತಿಯ ಮುಂದೆ ಶರಣಾಗಲೇಬೇಕಾಗುತ್ತದೆ. ಅಂತಹ ಪರಿಸ್ಥಿತಿ ಇಂದು ಪೂರ್ಣ ವಿಶ್ವಕ್ಕೇ ಬಂದಿದೆ. ಷೇರು ಮಾರುಕಟ್ಟೆ, ಚಿನ್ನ, ಬೆಳ್ಳಿ ಇವೆಲ್ಲವನ್ನೂ ಇಂದು ಜನ ಮರೆತಿದ್ದಾರೆ. One expert from Harvard University, Marc Lipstich, Professor of Epidemiology says that this virus will affect over 40% of people across the world. Therefore, we have to be very cautious. ಅದೊಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. We may not agree with him but a professor from Harvard University has given a statement that,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

*"Experts have differed on whether the virus will die or lose potency in heat wave. While experts from the UNSW University, Australia and Chinese universities say these viruses may lose its potency in heat. The Harvard University professor has given a different point of view. At this point, we can't say. The experts say they have conclusive proof to suggest that the virus would die in summer."*

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಲಹರ್‌ಸಿಂಗ್ ಅವರೇ, ಎಷ್ಟು ಉಷ್ಣಾಂಶದಲ್ಲಿ ಆ ವೈರಸ್ ಸಾಯುತ್ತದೆ ಎಂದು ಹೇಳಿದ್ದಾರೆ?

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಪಾಟೀಲರೇ, ಕೆಲವರು 27 ಡಿಗ್ರಿ ಸೆಲ್ಷಿಯಸ್ ಎಂದು ಹೇಳಿದ್ದಾರೆ, ಕೆಲವರು 30 ಡಿಗ್ರಿ ಸೆಲ್ಷಿಯಸ್ ಎಂದು ಹೇಳಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಹಾಗಾದರೆ ನಮ್ಮ ಜಿಲ್ಲೆಯಲ್ಲಿ 45 ಡಿಗ್ರಿ ಸೆಲ್ಷಿಯಸ್‌ವರೆಗೆ ಉಷ್ಣಾಂಶವಿರುತ್ತದೆ. ವೈರಸ್ ಎಲ್ಲಿ ಉಳಿಯುತ್ತದೆ? ಕಲಬುರಗಿಯಲ್ಲಿ ನಮ್ಮ ಜಿಲ್ಲೆಗಿಂತಲೂ ಹೆಚ್ಚು.

**Sri LAHAR SINGH SIROYA:** 'The first death due to Covid-19 has happened in Gulbarga, Karnataka' ಎಂದು ಪ್ರಸ್ತಾಪ ಮಾಡಿದರು. ಎರಡು–ಮೂರು ಬಾರಿ ತಾವು ಉಪಯೋಗಿಸಿದ್ದಿರಿ. ಅದರ ಬಗ್ಗೆ ನಮಗೆಲ್ಲರಿಗೂ ಬಹಳ ನೋವಿದೆ. We are cautious. But the State of Karnataka is not the reason for that. The patient who died due to Covid-19 had come from Saudi Arabia. ಹೇಳದೆ ಕೇಳದೆ ಅವರು ಕಲಬುರಗಿಯಲ್ಲಿ ಇದ್ದರು. ನಂತರ ಅವರು ಹೈದರಾಬಾದ್‌ಗೆ ಚಿಕಿತ್ಸೆಗಾಗಿ ಯಾರಿಗೂ ಹೇಳದೆ ಕೇಳದೆ ಹೋದರು. ಪುನಃ ಹೈದರಾಬಾದಿನಿಂದ ಕಲಬುರಗಿಗೆ ಬಂದಿದ್ದರು. ಈ ಕಾರಣಕ್ಕಾಗಿ ಕರ್ನಾಟಕ ಸರ್ಕಾರದ್ದೇನೂ ಜವಾಬ್ದಾರಿಯಿರಲಿಲ್ಲ. ಆದರೆ ಅದು ಆಗಬಾರದಿತ್ತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಲಹರ್ ಸಿಂಗ್ ಅವರೇ, ತಾವು ಹೇಳಿದಂತೆ ಕರ್ನಾಟಕ ಸರ್ಕಾರ ಜವಾಬ್ದಾರರಲ್ಲ ಎಂಬುದಕ್ಕೆ ಪೂರಕವಾಗಿ ನನ್ನದೊಂದು ಪ್ರಶ್ನೆಯಿದೆ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಅಪ್ಪಾಜಿಗೌಡರೇ, I am not yielding, please. ನೀವು ನಮ್ಮ ಸ್ನೇಹಿತರು. ದಯವಿಟ್ಟು ನೀವು ನಮಗೆ ಸಹಕಾರ ನೀಡಬೇಕು. ಅದರ ಬಗ್ಗೆ ಚರ್ಚೆ ಮಾಡುವುದು ಬೇಡ. We have to be proud of the Union Government as it was very cautious about Covid-19. It started taking steps in this direction one month back itself and it has already taken many steps.

ನಮ್ಮ ಅಕ್ಕಪಕ್ಕದ ರಾಷ್ಟ್ರಗಳೊಂದಿಗೆ ಹೇಗೆ ಸಹಕರಿಸಬೇಕು ಎಂದು suo moto ಬೆಳಿಗ್ಗೆ ಟ್ವೀಟ್ ಮಾಡಿ ಸಾರ್ಕ್ ರಾಷ್ಟ್ರಗಳು ಸೇರೋಣ ಎಂದು ಕರೆಯನ್ನು ಕೊಟ್ಟಾಗ, ಅವರ ಮಾತನ್ನು ಗೌರವಿಸಿ ಸಾರ್ಕ್‌ನ ಎಂಟು ದೇಶಗಳು ಸೇರಿದುದನ್ನು ನಾವೆಲ್ಲಾ ನಿನ್ನೆ ನೋಡಿದ್ದೇವೆ. ಈಗ ಇಡೀ ವಿಶ್ವವೇ ಒಂದಾಗಿದೆ. ಮಾನ್ಯ ಭೋಜೇಗೌಡರು ನಮ್ಮ ಸಲಹೆಗಳನ್ನು ಸರ್ಕಾರಕ್ಕೆ ನೀಡೋಣ ಎಂದು ಬಹಳ ಒಳ್ಳೆಯ ಮಾತನ್ನು ಹೇಳಿದರು. ನಾನು ನನ್ನ ಕೆಲವು ಸಲಹೆಗಳನ್ನು ನಂತರ ಕೊಡುತ್ತೇನೆ.

ಕೇಂದ್ರ ಸರ್ಕಾರವು ಏನು ಕ್ರಮಗಳನ್ನು ತೆಗೆದುಕೊಂಡಿದೆಯೆಂದರೆ, the central government has done a good thing by suspending non-work and non-diplomatic visas till April 15. Unlike the European countries, the Centre has taken serious measures. ಮಾನ್ಯ ಸದಸ್ಯರು ಇಟಲಿಯ ಬಗ್ಗೆ ಹೇಳಿದರು. ಇಟಲಿಯು ಸ್ವಲ್ಪ ಹಗುರವಾಗಿ ಪರಿಗಣಿಸಿತು. But India has taken it very seriously. ಕೇವಲ 5–10 ಪ್ರಕರಣಗಳು ಬಂದರೂ ಸಹ we have stopped the visas for the entire country. ಈ ವಿಷಯದಲ್ಲಿ ರಾಜಕೀಯವನ್ನು ಬಿಟ್ಟು ನಾವೆಲ್ಲರೂ ಒಂದಾಗಿ ಸರ್ಕಾರಕ್ಕೆ ಸಹಕಾರವನ್ನು ನೀಡಬೇಕು. ಸಲಹೆಗಳನ್ನು ನೀಡಬೇಕು. ಇಲ್ಲದಿದ್ದರೆ ಮಾನವೀಯತೆ ಎನ್ನುವುದೇ ಒಂದು ಪ್ರಶ್ನಾರ್ಥಕ ಚಿಹ್ನೆಯಾಗುತ್ತದೆ. Because as a human being we must look at ourselves as to what we are. A small virus somewhere is finishing many people. ನಮ್ಮ ತಾಕತ್ತು ಏನು ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾನು ನಮ್ಮ ವ್ಯವಸ್ಥೆಗೆ ಇನ್ನೊಂದು ಸಲಹೆಯನ್ನು ಕೊಡಬಯಸುತ್ತೇನೆ. ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಒಂದಾಗಬೇಕು. ಇದರ ಬಗ್ಗೆ ಎಲ್ಲರೂ ಚರ್ಚೆ ಮಾಡಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು. Karnataka is lucky because both our Deputy Chief Minister and the Minister for Medical Education are doctors. ಹಾಗೂ ಮಾನ್ಯ ಶ್ರೀರಾಮುಲುರವರಂತಹ ಜನಪರ ಕಳಕಳಿಯುಳ್ಳವರು ಆರೋಗ್ಯ ಸಚಿವರಾಗಿದ್ದಾರೆ. Therefore, my humble request to the government is both the aforementioned departments should be unified.

ಮಾನ್ಯ ಸಭಾಪತಿಯವರೇ, ಈಗ ಐದಾರು ವರ್ಷಗಳ ಹಿಂದೆ 15ನೇ ಆಗಸ್ಟ್ 2014ರಂದು ಕೆಂಪುಕೋಟೆಯಿಂದ ಭಾಷಣವನ್ನು ಮಾಡುತ್ತಾ ಮಾನ್ಯ ಪ್ರಧಾನಿಗಳು ಸ್ವಚ್ಛತೆಯ ಬಗ್ಗೆ ಒಂದು ಕರೆಯನ್ನು ಕೊಟ್ಟರು. ಈಗ hygiene ಬಗ್ಗೆ ಇಡೀ ಪ್ರಪಂಚವೇ ಮಾತನಾಡುತ್ತಿದೆ. ನಾವು ಮಾತನಾಡುತ್ತೇವೆ. ಈಗ ಇಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳು ಇದ್ದಾರೆ, ಹಲವಾರು ಸಚಿವರು ಇದ್ದಾರೆ. ಈಗಲಾದರೂ ನಾವು ಸ್ವಚ್ಛತೆಯನ್ನು ಕಾಪಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ನಾನು ನಿನ್ನೆ ಹುಬ್ಬಳ್ಳಿಗೆ ಹೋಗಿದ್ದೆ. ನನಗೆ ಹುಬ್ಬಳ್ಳಿಯ ಆಸ್ಪತ್ರೆಯಲ್ಲಿನ ವ್ಯವಸ್ಥೆಯನ್ನು ನೋಡಿ ಬಹಳ ವಿಷಾದವುಂಟಾಯಿತು. ಮಾನ್ಯ ಗೃಹ ಸಚಿವರು ನನ್ನ ಜೊತೆಯಲ್ಲಿದ್ದರು.

**(ಮುಂದು)**

**(442) 16.03.2020 (4–50) ಕೆಜಿ–ಎಕೆ** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಲಹರ್ ಸಿಂಗ್ ಸಿರೋಯಾ (ಮುಂದು..)**

ನಾವು ಸ್ವಚ್ಛ ಭಾರತ ಅಭಿಯಾನವನ್ನು ನಿಜವಾಗಿಯೂ ಕಳಕಳಿಯಿಂದ ಪರಿಗಣಿಸಬೇಕು. We have to accept it. ನಮ್ಮ ಮಕ್ಕಳೆಲ್ಲ ಸ್ವಲ್ಪ ಎಚ್ಚರವಾಗಿದ್ದಾರೆ. ನಾವು ಇನ್ನೂ ಆಗಿಲ್ಲ. ನಾವೆಲ್ಲರೂ ಆಸ್ಪತ್ರೆಗಳ ಸ್ಥಿತಿಗಳನ್ನು ನೋಡಿದ್ದೇವೆ. ಬೆಂಗಳೂರಿನಲ್ಲಿ ಶಾಸಕರು ಇದ್ದಾರೆ, ಶ್ರೀಮಂತರು ಇದ್ದಾರೆ, MLC ಗಳು ಇದ್ದಾರೆ. ಈ hospitals ನಲ್ಲಿ hygiene ಬಗ್ಗೆ ಇಲ್ಲಿಯವರೆಗೆ ಯಾರಿಗೂ ಸಹ ಕಳಕಳಿಯಾಗಿಲ್ಲ. ನಾವೆಲ್ಲರೂ ಕೇಂದ್ರ ಸರ್ಕಾರಕ್ಕೆ ಸಲಹೆ ಕೊಡುವುದು ಕೋಡೋಣ. ಇದು ನಮ್ಮ ವ್ಯಾಪ್ತಿಯಲ್ಲಿದೆ, ನಾಳೆಯಿಂದ ಪ್ರಾರಂಭ ಮಾಡಬಹುದು. ಒಬ್ಬ MLC ಒಂದು ಆಸ್ಪತ್ರೆಯ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ನಾನು cleaning ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ, ಆ ರೀತಿ hygiene ಬಗ್ಗೆ ಮಾತನಾಡುವಂತೆ ಮಾಡಬಹುದಾ; ಮಾನ್ಯ ಸದಸ್ಯರಾದ ಭೋಜೇಗೌಡರು ಸಹ ಇದಕ್ಕೆ ಧ್ವನಿಗೊಡಿಸಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಯವರೇ, ನನ್ನ ಗಮನಕ್ಕೆ ಬಂದ ಹೊರದೇಶಗಳ ಮಾಹಿತಿಯನ್ನು ಹೇಳುತ್ತೇನೆ. Travel restriction, quarantines, social distancing and heightened hygiene were implemented in Hong Kong, Singapore and Taiwan. As a result, they could control the spread of Covid-19. Taiwan used more home quarantines. Disobeying quarantines also drew a penalty up to Rs.25 lakhs in that country. ನಾನು ಇಟಲಿ, U.K, U.S. ಗೆ ಮತ್ತು Spain ಗೆ ಹೋಗಿದ್ದೆ. Taiwan ಗೆ Covid-19 ಬಂದಿಲ್ಲ. Because the Hong Kong, Singapore and Taiwan have taken strong steps and disobeying quarantines also drew a penalty up to Rs.25 lakhs in that country. In Hong Kong, the social distancing measure seemed to have given results. ನಾವು ದೂರ ದೂರ ಇರಬೇಕೆಂದು ಮಾತನಾಡುತ್ತೇವೆ. ಆದರೆ, ಇದರಲ್ಲಿ ನಮ್ಮ ಕರ್ತವ್ಯವು ಸಹ ಇದೆ. ನಾನು ನಿನ್ನೆ ದಿವಸ ಬೆಳಗಾವಿಗೆ ಮದುವೆ ಸಮಾರಂಭದಲ್ಲಿ ಭಾಗವಹಿಸಲು ಹೋಗಿದ್ದೆ. ಹೋಗಬಾರದಿತ್ತು. ಇದರ ಬಗ್ಗೆ ನಮ್ಮ ರಾಜಕಾರಣಿಗಳು ಚಿಂತನೆ ಮಾಡುತ್ತಾರಾ; ಏಕೆಂದರೆ, Bangalore Palace Ground ನಲ್ಲಿ ಆಗುವಂತಹ ಮದುವೆಗಳ ಅಡಿಗೆ ಮನೆ ಕಡೆಗೆ ಹೋಗಿ ನೋಡಿದರೆ, ಊಟ ಮಾಡುವುದಕ್ಕೆ ಆಗುವುದಿಲ್ಲ. ಆ ತರಹ ಪರಿಸ್ಥಿತಿ ಎಲ್ಲಾ ಕಡೆ ಇದೆ. ಅಲ್ಲಿರುವಂತಹ ಗಲೀಜನ್ನು ನೋಡಿದರೆ the next day you cannot eat there. And there is no hygiene in almost all the choultries. ನಾವು ರಾಜಕಾರಣಿಗಳು ಇಂತಹ ಮದುವೆಗಳಿಗೆ ಹೋಗಬೇಕೇ ಬೇಡವೆ ಎನ್ನುವುದನ್ನು ನೋಡಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರ ಜೊತೆಗೆ ಬಹಳ hygienic food ಸೇವಿಸಿದ್ದೇನೆ. ಅವರ ಆಹಾರ ಬಹಳ hygienic ಆಗಿರುತ್ತದೆ.

**Sri LAHAR SINGH SIROYA:** Thank you Sir. ಮಾನ್ಯ ಸಭಾಪತಿಯವರೇ, ಇಲ್ಲಿ ಏನಾಗುತ್ತದೆ ಎಂದರೆ, ಈ ಮದುವೆಗಳಿಗೆ ರಾಜ್ಯಪಾಲರು ಬರುತ್ತಾರೆ, ಮಾನ್ಯ ಮುಖ್ಯ ಮಂತ್ರಿಯವರು ಬರುತ್ತಾರೆ, ಮಾನ್ಯ ಉಪ ಮುಖ್ಯಮಂತ್ರಿಯವರು ಮತ್ತು ಶ್ರೀ ಸಿದ್ದರಾಮಯ್ಯನವರು, ಮಾನ್ಯ ಸಚಿವರು ಬರುತ್ತಾರೆಂದರೆ, ಅವರು ಇನ್ನೂ ಜೋರಾಗಿ ಮಾಡುತ್ತಾರೆ. ಒಂದು ಮೂರು ತಿಂಗಳ ಕಾಲ ಇದಕ್ಕೆ ಏನಾದರೂ ಕಡಿವಾಣ ಹಾಕಬಹುದಾ; ಕೇವಲ ಸರ್ಕಾರದ್ದು ಮಾತ್ರ ಅಲ್ಲ, ನಮ್ಮೆಲ್ಲರದ್ದು ಇಲ್ಲಿ ಸಮಸ್ಯೆ ಇದೆ. ಅದಕ್ಕೆ ನಾವೆಲ್ಲರೂ ಕೈಜೋಡಿಸಬಹುದಾ, ಧ್ವನಿಗೂಡಿಸಬಹುದಾ; I would just like to suggest, can we think on those lines.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಇನ್ನೊಂದು ಸಲಹೆ ಇದೆ. I think there seems to be a fear psychosis among people in our country than the real education about Corona virus. ನಮಗೆ ಏನಾಗಿದೆ ಎಂದರೆ, ಈ T.V., social media ಗಳಿಂದ ಇದರ ಬಗ್ಗೆ ಬಹಳ ಗೊಂದಲವಾಗುತ್ತಿದೆ. ಇದರ ಬಗ್ಗೆ ನಮಗೆ ನಿಜವಾದ ಸಂಗತಿ ಗೊತ್ತಾಗುತ್ತಿಲ್ಲ. I am upset with the electronic media. They are showing suspected cases of Covid-19 as though they are showing breakup of election results. ಆ ಮಟ್ಟಕ್ಕೆ ಹೋಗಿದ್ದಾರೆ. They must remember that all suspected cases need not necessarily be tested positive. Suspect ಮಾಡಿದರೆ, ಅದು prove ಆಗಿದೆಯೇ ಎಂದರೆ, ಇಲ್ಲ. ಇದಕ್ಕೆ ಸ್ವಲ್ಪ cool down ಮಾಡಬೇಕು. The government should highlight this. So far, we have not highlighted this. The government should direct the T.V. channels to stop telecasting the breakup of suspected figures. It is very unfortunate that all have become experts of this highly technical subject of infectious disease which is part of a branch of medical science i.e. Virology.

ಮಾನ್ಯ ಸಭಾಪತಿಯವರೇ, ಇದಕ್ಕೆ ಏನಾಗಿದೆ ಎಂದರೆ, ನಮಗೆ ಬೇರೆಯವರ ಸಲಹೆಗಳಿಂದ, ನಮ್ಮ expertಗಳಿಂದ, T.V. ಮಾಧ್ಯಮದವರಿಂದ ನಮಗೆ ಆತಂಕ ಜಾಸ್ತಿಯಾಗಿದೆ. ಮೊನ್ನೆ ದಿವಸ ಮಾನ್ಯ ಪ್ರಧಾನ ಮಂತ್ರಿಯವರು “We should take the best steps but not the kneejerk reactions” ಎಂದು ಹೇಳಿದ್ದಾರೆ. ಇದರ ಬಗ್ಗೆ ನಾವು ಆತಂಕ ಪಡಬಾರದೆಂದು ಹೇಳಿದ್ದಾರೆ. ನಾವು ಆತಂಕ ಪಟ್ಟರೆ, ನಮ್ಮ ಮಕ್ಕಳು ಭಯ ಪಡುತ್ತಾರೆಂದು ಹೇಳಿದ್ದಾರೆ. ಅದಕ್ಕೆ social media ನ ಯಾವ ರೀತಿ control ಮಾಡುತ್ತೀರಿ ಎನ್ನುವ ಬಗ್ಗೆ ಸರ್ಕಾರ ಉತ್ತರ ಕೊಡುವ ವೇಳೆಯಲ್ಲಿ ಹೇಳಬಹುದು. ತಮ್ಮ ಸಲಹೆಗಳು ಏನಾದರೂ ಇದ್ದರೆ ಕೊಡಬಹುದು. You can give suggestions as to how to control this wrong confusing campaign which is not true. At least once, we as a society should strictly follow the guidelines being implemented by the government. It is needless to say that these guidelines were approved by the medical fraternity. I request my friends from the opposition parties not to indulge in politics on this issue. ಇದರ ಬಗ್ಗೆ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಮಾತನಾಡಿದ್ದಾರೆ,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನನಗೆ ಬಹಳ ಸಂತೋಷ ಇದೆ. ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಸರ್ಕಾರಕ್ಕೆ ಬಹಳ ಗಂಭೀರವಾಗಿ ಎಚ್ಚರಿಕೆ ಕೊಟ್ಟಿದ್ದಾರೆ. He has used some strong words. But it's good that they have highlighted all these points.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ಈ ವಿಷಯದ ಮೇಲೆ ಇನ್ನೂ 5 ಜನ ಸದಸ್ಯರು ಮಾತನಾಡುವವರಿದ್ದಾರೆ, ತಾವು ಸರ್ಕಾರಕ್ಕೆ ಇದರ ಬಗ್ಗೆ ಏನು ಸಲಹೆ ಕೊಡುತ್ತೀರಿ ಎಂಬುದನ್ನು ನೇರವಾಗಿ ಹೇಳಿ. ಇದು ಬಹಳ ಮುಖ್ಯವಾದ ವಿಚಾರ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಇನ್ನೂ 10 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ, We should strictly follow the directions of doctors on hygiene, quarantine and medication while dealing with suspected or infected cases. Others should follow home remedies to increase the immunity. For that, I feel people should use *kahi bevu* (neem), *arishina* (turmeric)and *jeerige* (Jeera).ನಾನು ಒಂದು ಸಲಹೆ ಕೊಡುತ್ತೇನೆ. ಕಹಿಬೇವು, i.e. neem, turmeric, ಮತ್ತೆ ಜೀರಿಗೆಯನ್ನು ಜಾಸ್ತಿ ಬಳಸಿದರೆ ಅನುಕೂಲವೆಂದು ನಾನು ಅಂದುಕೊಂಡಿದ್ದೇನೆ. ತಾವೆಲ್ಲರೂ ಒಪ್ಪಿದರೆ ಇನ್ನೊಂದು ಸಲಹೆ ಕೊಡುತ್ತೇನೆ. And I am also following it. Steam Inhaler ಮೆಡಿಕಲ್ ಸ್ಟೋರ್‌ನಲ್ಲಿ ಸಿಗುತ್ತದೆ. If you inhale the steam for 4-5 minutes every day, it will give lot of relief to everyone in the normal cases also. ಅದನ್ನು ದಯವಿಟ್ಟು ಪಾಲಿಸಿ. It will give relief for many things in our body. Everybody should please do it.

I would like to tell one more important matter. When crisis comes, we discuss lot of issues and give many suggestions. But when diseases subside, we forget and the departments too do not implement anything. I think the government should take both short term and longterm measures for it. I would like to give an example for it. ಶಿವಮೊಗ್ಗದಲ್ಲಿರುವ ನಮ್ಮ ಗೆಳೆಯ ಹೇಳಿದರು. They told me about the status of a testing laboratory sanctioned for monkey-disease. The government had sanctioned a testing lab. What

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

is the status now? Instruments have come and ACs have come but there is no proper building. If officials do such work, how can we mitigate a crisis like this? ಶಿವಮೊಗ್ಗದಲ್ಲಿ ಯಾವ ತರಹ ಪರಿಸ್ಥಿತಿ ಇದೆ ಎನ್ನುವುದನ್ನು ನೋಡಬೇಕು. You must check whether it is true or not. When the disease subsides, we will forget about it. This is the best opportunity for the government to take certain steps on war footing. We have so many infectious diseases and more and more new diseases may appear in future. We should have world-class testing laboratories in every district. The government should use this Corona virus experience as an example and go for setting up of laboratories very quickly. If the government gives infrastructure, trained staff, very good work and research culture, then setting up of such labs will make sense and they can serve the society better. Otherwise, these laboratories will exist only on paper but will not help the people. Garbage and Cleaning ಬಗ್ಗೆ ನಾನು ಎಲ್ಲರಿಗೂ ವಿನಂತಿ ಮಾಡುತ್ತೇನೆ. ಬೆಂಗಳೂರಿನ garbage mafia ಸಮಸ್ಯೆಯಿಂದ ಮುಕ್ತ ಮಾಡಿ. ಇದಕ್ಕೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. ಇದಕ್ಕೆ ಆ ಸರ್ಕಾರ, ಈ ಸರ್ಕಾರ ಎನ್ನುವ ಪ್ರಶ್ನೆ ಬೇಡ.

(ಮುಂದು...

(443)16–03–2020(5–00)ಎಂವಿ–ಆರ್‌ಎನ್

**ಶ್ರೀ ಲಹರ್ ಸಿಂಗ್ ಸಿರೋಯಾ (ಮುಂದು)**

ಏಕೆಂದರೆ, ಇದು ಯಾವ ರೀತಿ garbage ಸಮಸ್ಯೆಯಾಗಿದೆ, ಬೇರೆ ಬೇರೆ ಕಾರಣಕ್ಕೆ ಈ ಸರ್ಕಾರ ಮತ್ತು ಆ ಸರ್ಕಾರ ಎಂಬ ಪ್ರಶ್ನೆ ಇಲ್ಲ. It is the duty of the Government to control the garbage mafia and to act on the situation. Otherwise, they don't clean alone themselves. This is the hi-time to control the situation. Sir, ಇದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳಾದ ಅಶ್ವತ್ಥ್ ನಾರಾಯಣರವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 68ರ ಅಡಿಯಲ್ಲಿ, ಈ ಕೊರೊನಾ ವೈರಸ್ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು ಸಾಕಷ್ಟು ವಿಷಯಗಳನ್ನು ಹೇಳಿದ್ದಾರೆ. ನಾನು ಒಂದೇ ಒಂದು ಹೇಳುವುದು ಏನೆಂದರೆ, ಈ ವೈರಸ್ ಡಿಸೆಂಬರ್ 31, 2019ರಂದು ಚೀನಾದಲ್ಲಿ ಹುಟ್ಟಿದ್ದು. ಅಂದರೆ ಇದು ನಾಲ್ಕು ತಿಂಗಳ ಕೂಸು ಇದ್ದ ಹಾಗೆ. ಇದು ಇಷ್ಟು ಪರಿಣಾಮ ಉಂಟು ಮಾಡಿದೆ. ಇಡೀ ಪ್ರಪಂಚದಲ್ಲಿ ಇದಕ್ಕೆ ಯಾವುದೇ ರೀತಿಯ ಮದ್ದು ಇಲ್ಲ. ಈಗ ವೈರಸ್ ಬಂದಿದೆ ಇದಕ್ಕೆ ಯಾವುದೇ ರೀತಿಯ ಲಸಿಕೆ ಇಲ್ಲ ಮತ್ತು ಏನೂ ಇಲ್ಲ ಎಂಬುದು ಒಂದು establish ಆಗಿ, ಇಡೀ ಪ್ರಪಂಚ ಇದರಿಂದ ತಲ್ಲಣಗೊಂಡಿದೆ. ಇಪ್ಪತ್ತಿನ ದಿವಸ ಆ ರೋಗದ ಲಕ್ಷಣಗಳೆಂದರೆ, ಕಣ್ಣಿನಲ್ಲಿ ನೀರು ಬಂದರೆ, ಮೂಗಿನಲ್ಲಿ ನೀರು ಸೋರಿದರೆ, ಆಮೇಲೆ ಗಂಟಲು ಹಿಡಿದುಕೊಂಡರೆ ಮತ್ತು ಜ್ವರ ಬಂದರೆ, ಇವೆಲ್ಲಾ ಲಕ್ಷಣಗಳು ನಮ್ಮ Viral Infection ನಲ್ಲಿ ಇರುವುದು ಸಾಮಾನ್ಯವಾಗಿದೆ. ಈ ತರಹ ಬಂದಾಗ ನಾವು ಏನು ಮಾಡುತ್ತಿದ್ದೆವು ಎಂದರೆ, ಡಾಕ್ಟರ್‌ಗಳಿಗೆ ತಿಳಿಸಿ ಒಂದೆರಡು Montelukast and Wysolone ಟ್ಯಾಬ್ಲೆಟ್‌ಗಳನ್ನು ನಾಲ್ಕೈದು ದಿವಸ ತೆಗೆದುಕೊಂಡರೆ, ಇದು ಕಡಿಮೆಯಾಗುತ್ತಿತ್ತು. ಆದರೆ, ಇದೇ ಲಕ್ಷಣಗಳು ಇರುವುದು ಈ ವೈರಸ್‌ನಲ್ಲಿ ಬಂದಿದೆ. ಈ ವೈರಸ್ ಹೊರದೇಶದಿಂದ ಬಂದಿರುವುದು ಅಂದರೆ, ಸೌದಿ ಅರೇಬಿಯಾ ಮತ್ತು ಸಿಂಗಾಪುರದಿಂದ ಬಂದಂತಹವರಿಂದ ಇದು ಹರಡುತ್ತಿದೆ ಎಂಬ ಮಾಹಿತಿ ಇದೆ. ಇದೇ ಸದನದಲ್ಲಿ 4ನೇ ತಾರೀಖಿನಂದು ಕೊರೊನಾ ಬಗ್ಗೆ ಹೇಳಿದಾಗ, ಹೈದರಾಬಾದ್‌ಗೆ ಒಬ್ಬ ಟೆಕ್ಕಿ ಬಂದಿದ್ದ, ಅವನು ಹೈದರಾಬಾದ್‌ಗೆ ಹೋದಾಗ, ಅವನನ್ನು chase ಮಾಡಿ, ಅವನು ಎಲ್ಲೆಲ್ಲಿಗೆ ಹೋಗಿದ್ದಾನೆ ಎಂದು ಎಲ್ಲಾ ವಿವರಗಳನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಆದರೂ ಏನಾಯಿತು ಎಂದರೆ, ಗುಲ್ಬರ್ಗಾದಲ್ಲಿ ಮೊಟ್ಟ ಮೊದಲ ಪ್ರಕರಣ, ಸೌದಿ ಅರೇಬಿಯಾದಿಂದ ಬಂದಂತಹ ಶ್ರೀ ಸಿದ್ದಿಕ್ಕಿಗೆ attack ಆಗಿದೆ. ಅದು ಆದಮೇಲೆ ಅವನಿಗೆ ಎಫೆಕ್ಟ್ ಆಗಿ, ಹೈದರಾಬಾದ್ ಆಸ್ಪತ್ರೆಯಲ್ಲಿ ಅವನು ತೀರಿಹೋದ ಎಂದು confirm ಆಯಿತು. ಇಂಡಿಯಾದಲ್ಲಿ first death case ಕರ್ನಾಟಕದಲ್ಲಿ ಆಯಿತು. ಇದು ಆದಮೇಲೆ, ಏರಪೋರ್ಟ್‌ನಲ್ಲಿ verify ಮಾಡುವುದು ಮತ್ತು ಆಸ್ಪತ್ರೆಗಳು ಇವೆ. ಆದರೆ, ನನಗೆ ಒಂದು ಆಶ್ಚರ್ಯ, ಇದೆಲ್ಲಾ ಬಂದಾಗ ನಾವು ಬಹಳ ಅನುಭವಿಸಿದ್ದೇವೆ. ಈಗ ಪ್ಲೇಗ್ ರೋಗ ಬಂದಾಗ, ಕಾಲರಾ ರೋಗ ಬಂದಾಗ, ಹೆಚ್1ಎನ್1 ಮತ್ತು SARS (Severe Acute Respiratory Syndrome) ಇವೆಲ್ಲಾ ಇದ್ದಾಗ, ಇವತ್ತಿಗೂ ನನಗೆ ಆಶ್ಚಯವೆಂದರೆ, ಪ್ರತಿ ಜಿಲ್ಲೆಯಲ್ಲಿ ಇದನ್ನು ಪರೀಕ್ಷಿಸಲು ಲ್ಯಾಬೋರೇಟರಿ ಇದೆಯೇ ಎಂದು ಕೇಳಿದ್ದೆ. ಬಳ್ಳಾರಿ ಜಿಲ್ಲೆಯಲ್ಲಿ ಎರಡು ಪ್ರಕರಣಗಳು ವರದಿಯಾಗಿವೆ ಎಂದ ಕೂಡಲೆ ನಾನು ಡಿ.ಹೆಚ್.ಓ.ರವರಿಗೆ ಫೋನ್ ಮಾಡಿ, ಏನು ಎಂದು ತಿಳಿದುಕೊಂಡೆ. ಅದಕ್ಕೆ ಅವರು ಹೇಳಿದರು, ಅವರನ್ನು ದಾಖಲು ಮಾಡಿಕೊಂಡಿದ್ದೇವೆ, ಅವರು ದುಬೈಯಲ್ಲಿ ಇದ್ದವರು, ಅವರು ಟೂರ್‌ಗೆ ಹೋಗಿದ್ದರಂತೆ, ಅಲ್ಲಿಂದ ಬಂದಿದ್ದಾರೆ, ಅವರ ರಕ್ತದ ಮಾದರಿಯನ್ನು ಬೆಂಗಳೂರಿಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಳುಹಿಸಿದ್ದೇವೆಂದು ಹೇಳಿದರು. ಇಷ್ಟು ವರ್ಷಗಳಲ್ಲಿ ಇಲ್ಲಿ ಮೆಡಿಕಲ್ ಕಾಲೇಜು ಇದೆ ಮತ್ತು ಆಸ್ಪತ್ರೆಗಳಿವೆ, ಇಲ್ಲಿ ಲ್ಯಾಬೋರೇಟರಿ ಇಲ್ಲವೆ ಎಂದರೆ, ಅದಕ್ಕೆ ಅವರು ಇಲ್ಲವೆಂದು ಹೇಳಿದರು. ಅಂದರೆ, ಇವತ್ತಿನವರೆಗೂ ಒಂದು ಟೆಸ್ಟ್ ಮಾಡುವುದಕ್ಕೆ ನಮ್ಮ ರಾಜ್ಯದ ಜಿಲ್ಲಾ ಕೇಂದ್ರದಲ್ಲಿ ಲ್ಯಾಬೋರೇಟರಿ ಇಲ್ಲವೆಂದರೆ, ಇದಕ್ಕಿಂತ serious ಆದಂತಹ ವಿಷಯಗಳು ಏನಿದೆ ಎಂದು ಹೇಳಿ. ಇವತ್ತು ಸದಸ್ಯರಾದ ಮಾನ್ಯ ಲಹರ್ ಸಿಂಗ್ ಸಿರೋಯಾ ರವರು ಇನ್ನಿತರ ಸದಸ್ಯರು ಮಾತನಾಡಿದರು. ನಾವು ಸ್ವಚ್ಚತೆಯನ್ನು ಮಾಡುತ್ತಲೇ ಇದ್ದೇವೆ. ಈ ವೈರಸ್ ಬಂದಿರುವುದನ್ನು ತಡೆಗಟ್ಟುವುದಕ್ಕೆ ಏನಾಗಿದೆ ಎಂದರೆ, ತಕ್ಷಣವಾಗಿ ಒಂದೊಂದು ಲ್ಯಾಬೋರೇಟರಿಯನ್ನು ಜಿಲ್ಲಾ ಕೇಂದ್ರಗಳಲ್ಲಿ ಮಾಡಬೇಕು. ಇಲ್ಲವಾದರೆ ವರದಿ ಬರುವುದಕ್ಕೆ ಮೂರು–ಮೂರು ದಿವಸ ಕಾಯಬೇಕಾಗುತ್ತದೆ. ಇವತ್ತು ನಮ್ಮಲ್ಲಿ ಐದು ದಿವಸದ ಕೆಳಗೆ ದುಬೈಯಿಂದ ಬಂದಂತಹ ಒಬ್ಬ ಇಂಜಿನಿಯರ್‌ನನ್ನು ಅಡ್ಮಿಟ್ ಮಾಡಿದರೆ, ಅವನನ್ನು ಟೆಸ್ಟ್ ಮಾಡಿದಾಗ ಅವನ ವರದಿ ನಿನ್ನೆಯ ರಾತ್ರಿ ಬಂದಿದೆ. ಆ report ಹೇಗೋ, ಏನೋ ಅಂದುಕೊಂಡೆವು ಅದು negative ಅಂದರು ನಾವು ತಣ್ಣಗಾದೆವು. ಸರಿ ಅದು ಬಳ್ಳಾರಿ ಜಿಲ್ಲೆಯಲ್ಲಿ ಹರಡುತ್ತಿಲ್ಲವೆಂದು ತಿಳಿದುಕೊಂಡೆವು. ಆದರೆ, ಸರ್ಕಾರ ಮಾಡಬೇಕಾಗಿರುವುದು, ತಕ್ಷಣ ಹೆಚ್ಚಿನ ಪ್ರಚಾರಕ್ಕೆ ಹೋಗದೆ, ಇವತ್ತು ಏರ್‌ಪೋರ್ಟ್‌ನಲ್ಲಿ check ಮಾಡಿದೆವು. ಅದನ್ನು ಮಾಡಿದೆವು, ಇದನ್ನು ಮಾಡಿದೆವು ಎಂದು ಪ್ರಚಾರವಲ್ಲ. ಇದನ್ನು check ಮಾಡುವುದಕ್ಕೆ minimum ಒಂದು ಲ್ಯಾಬೋರೇಟರಿ ಹಾಕುವುದಕ್ಕೆ ಏನಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಉತ್ತರ ನೀಡಿ. ಚೈನೀಸ್‌ನ ಒಬ್ಬ ವಿಜ್ಞಾನಿ ಹೇಳಿದರು, ಈ Bats, ಅಂದರೆ ಕಣ್ ಕಪ್ಪಟ (ಬಾವಲಿ). ಈ ಕಣ್ ಕಪ್ಪಟಗಳಿಂದಲೇ ಇದು ಹರಡುತ್ತಿದೆ ಎಂದು. ಆ ಪಕ್ಷಿಗಳಿಂದ ಏನಾದರೂ ಹರಡುತ್ತದೆಯೇ? ಎಂದು ಪಕ್ಷಿ ತಜ್ಞರನ್ನು ಏನಾದರೂ consult ಮಾಡಿದ್ದಾರಾ? ನಾವು ಇದನ್ನು ಸಹ ನೋಡಬೇಕಾಗುತ್ತದೆ. ಇವತ್ತು normal course ನಲ್ಲೇ ಈ season change ಆದಾಗ ಈ ತರಹದ ರೋಗ ಲಕ್ಷಣಗಳು ಬರುತ್ತವೆ. ಈ Viral Infection ಎನ್ನುವುದು normal. ನಾನು ಎಲ್ಲಾ ವರದಿಗಳನ್ನು ನೋಡುತ್ತಿದ್ದೇನೆ. ಅದರ ಲಕ್ಷಣಗಳು ಏನು ಎಂದರೆ, same ಇದೆ. ಇವತ್ತು ನಾನು ಒಂದು article ಅನ್ನು ಓದಿದೆ, ಕಣ್ಣಿನಲ್ಲಿ ಏನಾದರೂ ಆದರೆ ಅದನ್ನು ತಿಕ್ಕಿಕೊಳ್ಳಬಾರದು ಎಂದು. ಇವೆಲ್ಲಾ ಲಕ್ಷಣಗಳು Viral Infection ಗಳು ನಮ್ಮ ಇಂಡಿಯಾದಲ್ಲಿ ಈಗಲೂ ಸಹ ಇವೆ. ವಾತಾವರಣ ಬದಲಾವಣೆಗೊಂಡಾಗ, ಮಳೆಗಾಲದಿಂದ ಬಿಸಿಲು ಕಾಲ ಬಂದಾಗ ಈ ತರಹದ ರೋಗ ಲಕ್ಷಣಗಳಿವೆ. ಆದರೆ, ಬಂದಿರುವಂತಹ ಈ ವೈರಸ್ ಅನ್ನು ತಡೆಗಟ್ಟುವುದಕ್ಕೆ ಯಾವ ರೀತಿಯ ವಿಧಗಳಿವೆ. ಇದಕ್ಕೆ ಔಷಧಿ ಮತ್ತು ಲಸಿಕೆ ಇಲ್ಲವೆಂದು ಹೇಳುತ್ತಾರೆ. ಆದಕಾರಣ ನಾನು ಸರ್ಕಾರವನ್ನು ಒತ್ತಾಯ ಮಾಡುವುದು, root cause of this disease. ಈ ವೈರಸ್ ಬಂದಿರುವುದಕ್ಕೆ ಸರ್ಕಾರ ತಕ್ಷಣ ಏನಾದರೂ ಕ್ರಮ ಕೈಗೊಂಡರೆ, ನಿನ್ನೆಯ ದಿವಸ ನೋಡಿದೆ, ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಸುಮಾರು 800 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆಂದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಕ್ಷಣ ಲ್ಯಾಬೋರೇಟರಿಗಳನ್ನು ತೆರೆಯಿಸಬೇಕು. ಉದಾಹರಣೆಗೆ; ಬಳ್ಳಾರಿ ಜಿಲ್ಲಾ ಕೇಂದ್ರದಲ್ಲಿ ಸುಮಾರು 400 ಹಾಸಿಗೆಗಳ ಆಸ್ಪತ್ರೆ ಇದೆ. ಅಲ್ಲಿ ಮೆಡಿಕಲ್ ಕಾಲೇಜು ಸಹ ಇದೆ. ಆದರೆ, ಅಲ್ಲಿ ಲ್ಯಾಬೋರೇಟರಿ ಇಲ್ಲವೆಂದರೆ ಪರೀಕ್ಷಿಸುವುದು ಹೇಗೆ? ಒಮ್ಮೊಮ್ಮೆ ಕಳುಹಿಸಿದ sample ಗಳ ವರದಿ ಬರುವುದಕ್ಕೆ ಮೂರರಿಂದ ಐದು ದಿವಸವಾಗುತ್ತದೆ. ಒಂದು ಆಸ್ಪತ್ರೆಯಲ್ಲಿ ಬಂದಿರುವ ವರದಿಯಲ್ಲಿ ಅನುಮಾನವಿದೆ, ಅದಕ್ಕೆ ಅದನ್ನು ಮತ್ತೆ ಪೂನಾಗೆ ಕಳುಹಿಸುತ್ತೇವೆಂದುಹೇಳಿದರು. ಅಂದರೆ ಇಂತಹ ಸ್ಥಿತಿ ನಮ್ಮ ಕರ್ನಾಟಕಕ್ಕೆ ಏಕೆ ಬೇಕು? ಇದು ಇಡೀ ರಾಜ್ಯದಲ್ಲೇ ಇಲ್ಲವೆಂದ ಮೇಲೆ, ತಕ್ಷಣ ನೀವು concentration ಈ ಲ್ಯಾಬೋರೇಟರಿ ಮೇಲೆ ಮಾಡಿ ಎಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ಎಲ್ಲಾ Isolation Ward ನಲ್ಲಿ ಯಾವ ರೋಗ ಲಕ್ಷಣಗಳು ಕಂಡಿವೆ ಅದನ್ನು ನೋಡಿಕೊಂಡು ಮಾಡುತ್ತೇವೆಂದು ಹೇಳಿದ್ದಾರೆ. ಇವತ್ತು ನಮ್ಮ ನಾಯಕರುಗಳೆಲ್ಲಾ ಮಾತನಾಡಿದ್ದಾರೆ, ಅವರ ಜೊತೆಗೂಡಿಸಿ ನಾನು ಒತ್ತಾಯ ಮಾಡುವುದೆನೆಂದರೆ, ಕನಿಷ್ಠ ಪಕ್ಷ ಪ್ರತಿ ಜಿಲ್ಲಾ ಕೇಂದ್ರದಲ್ಲಿ ತಕ್ಷಣ war-footing ನಲ್ಲಿ ಎಲ್ಲಿ ಸಿಗುತ್ತದೆ ಮತ್ತು ಯಾರು ಲ್ಯಾಬೋರೇಟರಿ ಸರಬರಾಜುದಾರರು ಇದ್ದಾರೆ, ಅವರನ್ನು ಅಳವಡಿಸಿಕೊಂಡು, ಕನಿಷ್ಠ ಪಕ್ಷ ಈ ರೋಗಗಳನ್ನು ಪತ್ತೆ ಹಚ್ಚುವುದು ಮತ್ತು ಇಂತಹ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈ ರೋಗ ಲಕ್ಷಣ ಬರಬಾರದು ಮತ್ತು ಇದು ಹರಡಬಾರದು ಎಂದು ನಾವೆಲ್ಲರೂ ಸಹ ಒಂದಾಗಿದ್ದೇವೆ. ಇವತ್ತು ಸಚಿವರಾದ ಮಾನ್ಯ ಆನಂದ್ ಸಿಂಗ್ ರವರು ತಮ್ಮ ಮಗಳ ಅನುಭವವನ್ನು ಹೇಳಿದ್ದಾರೆ. ಏಕೆಂದರೆ, ಇವತ್ತಿನ ದಿವಸ ಇಟಲಿಯಲ್ಲಿ ಒಂದೇ ದಿವಸ ಸುಮಾರು 300 ಜನರು ಸತ್ತಿದ್ದಾರೆ. ಏಕೆಂದರೆ, ಬೇರೆ ಬೇರೆ ದೇಶಗಳಿಂದ ಪ್ರವಾಸ ಹೋದವರ ಕಡೆಯಿಂದ ಇದರ ಪರಿಣಾಮವಾಗಿರಬಹುದು. ನಮ್ಮ ಭಾರತ ದೇಶದಲ್ಲಿ ಒಂದು ವೇಳೆ temperature ಹೆಚ್ಚಾದರೆ ಇದು ಕಡಿಮೆಯಾಗಬಹುದು ಎಂದು. ನಾವು ದೇವರಲ್ಲಿ ಪ್ರಾರ್ಥನೆ ಮಾಡೋಣ, ಒಳ್ಳೆಯ ಬಿಸಿಲು ಕಾಲ ಶುರುವಾಗಿದೆ, ಈಗ 25 ರಿಂದ 45 ಡಿಗ್ರಿ temperature ಆದಾಗ, ಇದರ ರೋಗ ಲಕ್ಷಣಗಳು ಹೋಗಲಿ ಎಂದು ಆ ಭಗವಂತನಲ್ಲಿ ಪ್ರಾರ್ಥಿಸಿ, ಸರ್ಕಾರ ಇದರಲ್ಲಿ ಏನೇ ಹೆಜ್ಜೆ ಇಡಲಿ, ನಾವು ಇಡೀ ಪ್ರತಿಪಕ್ಷದವರು ಬೆರೆತು ಇದನ್ನು ಶಮನಗೊಳಿಸುವುದಕ್ಕೆ ಒಂದು ಕಾರ್ಯಕ್ರಮವನ್ನು ಮಾಡೋಣವೆಂದು ತಮಗೆ support ಮಾಡಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಲ್ಲಿ ವಿನಂತಿ ಏನೆಂದರೆ, ತಾವು ದಯಮಾಡಿ, ಈ disease ಹೇಗೆ ಬಂದಿದೆ ಮತ್ತು ಏನು ಎಂಬುದರ ಬಗ್ಗೆ ಎಲ್ಲರಿಗೂ ಮನವರಿಕೆಯಾಗಿದೆ. ಈಗ ಮುಂಜಾಗ್ರತಾ ಕ್ರಮ ಮತ್ತು ಮುಂದೆ ಮಾಡಬೇಕಾದ ಕ್ರಮಗಳ ಬಗ್ಗೆ ಮಾತ್ರ ಹೇಳಿದರೆ ಒಳ್ಳೆಯದು. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ದಯಮಾಡಿ ಎಲ್ಲರೂ ಸಹ ಎರಡೆರಡು ನಿಮಿಷ ಮಾತನಾಡಿ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–**ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಐದ್ಹೈದು ನಿಮಿಷ ಮಾತನಾಡುತ್ತೇವೆ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):–**ಮಾನ್ಯ ಸಭಾಪತಿಯವರೇ, ತಮಗೆ ನಮ್ಮ ಸಮಸ್ಯೆಗಳನ್ನು ಹೇಳುತ್ತೇವೆ.

**ಉಪ ಸಭಾಪತಿಯವರು:–** ಮಾನ್ಯ ಡಿ'ಸೋಜಾರವರೇ, ತಾವು ಮಾತನಾಡುವುದಕ್ಕೆ ಐದು ಸಾಕಾದರೆ, ಐದು ನಿಮಿಷ ಆದಮೇಲೆ ಮಾನ್ಯ ಸಚಿವರು ಉತ್ತರವನ್ನು ನೀಡುತ್ತಾರೆ. ಈಗ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಮಾನ್ಯ ಎಂ.ನಾರಾಯಣ ಸ್ವಾಮಿಯವರು ಮಾತನಾಡುವುದು.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 68ರ ಅಡಿಯಲ್ಲಿ, ಸಾರ್ವಜನಿಕ ಮಹತ್ವದ ವಿಷಯವಾದಂತಹ ಕೊರೊನಾ ವೈರಸ್ ಕಾಯಿಲೆ ಬಗ್ಗೆ ಹೇಳುವುದಾದರೆ, ಅದು ಯಾವ ರೀತಿ ನಮ್ಮ ರಾಜ್ಯದಲ್ಲಿ ಹರಡುತ್ತಿದೆ. ಎಂಬುದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಇವತ್ತು ಈ ಕೊರೊನಾ ವೈರಸ್ ಏನು ಬಂದಿದೆ, ಅದು ಕೇವಲ ಕರ್ನಾಟಕ ರಾಜ್ಯ ಮತ್ತು ಭಾರತ ದೇಶದಲ್ಲಿ ಮಾತ್ರವಲ್ಲ. ಅದು ಇಡೀ ಪ್ರಪಂಚದಲ್ಲೇ ಆತಂಕವನ್ನು ಸೃಷ್ಟಿ ಮಾಡಿರುವಂಥದ್ದು. ಇವತ್ತು ಮಾಧ್ಯಮಗಳಲ್ಲಿ ವರದಿಯಾಗಿರುವಂಥದ್ದನ್ನು ನೋಡಿದರೆ, **'**ಕೊರೊನಾ–ರಾಜ್ಯ ಭಾಗಶಃ ಸ್ತಬ್ದ' ಎನ್ನುವಂತಹ heading ಅನ್ನು ಕೊಟ್ಟಿದ್ದಾರೆ. ಇವತ್ತು ಏನಾಗಿದೆ ಎಂದರೆ, ಈ ಕಾಯಿಲೆ ಜನರಲ್ಲಿ panic ಅನ್ನು ಸೃಷ್ಟಿ ಮಾಡುವುದಕ್ಕೆ ಆಗುತ್ತಿದೆ. ಆದರೆ, ಇವತ್ತು ಸರ್ಕಾರ ಯಾವ ರೀತಿಯ precautionary measures ಅನ್ನು ತೆಗೆದುಕೊಳ್ಳಬೇಕು ಎಂಬುದನ್ನು ಹೆಚ್ಚು ಪ್ರಚಾರ ಮಾಡುತ್ತಿಲ್ಲ. ಇವತ್ತು ಶಾಲೆಗಳಲ್ಲಿ 7, 8 ಮತ್ತು 9ನೇ ತರಗತಿಯ ಪರೀಕ್ಷೆಗಳನ್ನು ಮುಂದೂಡಿದ್ದಾರೆ. ಇನ್ನು ಪ್ರೈಮರಿ ಶಾಲೆಗಳಿಗೆ ರಜೆ ಕೊಟ್ಟಾಗಿದೆ. ಇನ್ನು ಮಾಲ್‌ಗಳು ಮತ್ತು ಸಿನಿಮಾ ಥಿಯೇಟರ್‌ಗಳು ಬಂದ್ ಆಗಿವೆ. ನಿನ್ನೆ ರಜೆ ಇದ್ದುದ್ದರಿಂದ ಬೆಂಗಳೂರಿನ ಮುಖ್ಯರಸ್ತೆಗಳೆಲ್ಲಾ ಖಾಲಿ ಖಾಲಿ ಹೊಡೆಯುತ್ತಿದ್ದವು. ಜನರಿಗೆ ಏನೋ ಆತಂಕವಾಗಿ ಹೋಗಿದೆ. ಕೊರೊನಾ ಎನ್ನುವಂತಹ ವೈರಸ್ ಬಂದು, ನಾಳೆ ಏನಾಗುತ್ತದೆಯೋ ಎನ್ನುವಂತಹ ಆತಂಕದಲ್ಲಿ ಬದುಕುವಂತಹ ಪರಿಸ್ಥಿತಿ ಜನರಲ್ಲಿ ನಿರ್ಮಾಣವಾಗಿ ಹೋಗಿದೆ. ಆದುದರಿಂದ ಮಾನ್ಯ ಆರೋಗ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದಕ್ಕೆ ನಮ್ಮಲ್ಲಿ ಔಷಧಿ ಇದೆಯೇ? ಈಗ ಒಂದು ವೇಳೆ ಬೇರೆ ಬೇರೆ ದೇಶ ಮತ್ತು ರಾಜ್ಯಗಳಿಂದ ಬರತಕ್ಕಂಥ ಜನರಿದ್ದಾರೆ.

**(ಮುಂದು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(444) 16.03.2020 05.10 LL-RN
**ಶ್ರೀ ಎಂ. ನಾರಾಯಣಸ್ವಾಮಿ (ಮುಂದುವರೆದಿದ್ದು)**

ರೈಲ್ವೇ ಸ್ಟೇಷನ್ ಇರಬಹುದು, ಬಸ್ ಸ್ಟಾಂಡ್ ಇರಬಹುದು, ಜನರನ್ನು ತಪಾಸಣೆಗೆ ಒಳಪಡಿಸುತ್ತಿದ್ದೇವೆ. ಅವರನ್ನು ಕರೆದುಕೊಂಡು ಹೋಗಿ ಆಸ್ಪತ್ರೆಯಲ್ಲಿ ಇಡುತ್ತೇವೆ. ಅವರ ರಕ್ತ ಪರೀಕ್ಷೆಗೆ ಸ್ಯಾಂಪಲ್ ತೆಗೆದುಕೊಳ್ಳುತ್ತೇವೆ ಅಥವಾ ಗಂಟಲಿನ ಎಂಜಲನ್ನು ಪರೀಕ್ಷೆಗೆ ತೆಗೆದುಕೊಳ್ಳುತ್ತೇವೆ. ಅದು ಪಾಸಿಟಿವ್ ಅಥವಾ ನೆಗೆಟಿವ್ ಎಂದು ತಿಳಿದುಕೊಳ್ಳುವುದೇ ನಮಗೆ ಕಷ್ಟವಾಗುತ್ತಿದೆ. ಒಂದು ವೇಳೆ ಅದು ಪಾಸಿಟಿವ್ ಆದರೆ, ಅದಕ್ಕೆ ಔಷಧಿಗಳನ್ನು ಕೊಡತಕ್ಕಂತಹ ಶಕ್ತಿ ನಮಗೆ ಇದೆಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಮಾನ್ಯ ಸದಸ್ಯರಾದ ಶ್ರೀ ಕೆ.ಸಿ. ಕೊಂಡಯ್ಯನವರು ಮಾತನಾಡಿದಂತೆ, ಜಿಲ್ಲಾ ಕೇಂದ್ರಗಳ ಆಸ್ಪತ್ರೆಗಳಲ್ಲಿ ಯಾವುದೇ ರೀತಿಯ ಸೌಲಭ್ಯಗಳಿರುವುದಿಲ್ಲ. ಆರ್ಡಿನರಿ ಕಾಯಿಲೆಗಳಿಗಾಗಿ ಒಬ್ಬ ರೋಗಿ ಆಸ್ಪತ್ರೆಗೆ ಹೋದರೆ, ಅವನಿಗೆ ಸರಿಯಾದ ರೀತಿಯಲ್ಲಿ ಚಿಕಿತ್ಸೆ ಕೊಡುವುದಕ್ಕೆ ನಮಗೆ ಶಕ್ತಿಯಿಲ್ಲ. ಆ ಮಟ್ಟಕ್ಕೆ ಜಿಲ್ಲಾ ಆಸ್ಪತ್ರೆಗಳು ಇವೊತ್ತಿನ ದಿವಸ ಹೋಗಿವೆ. ಆದರೆ, ಈ ಕೊರೋನಾ ವೈರಸ್‌ಗೆ ಪಾಸಿಟಿವ್ ಎಂದು ಗೊತ್ತಾದರೆ ಅಥವ ಪಾಸಿಟಿವ್ ಅಥವಾ ನೆಗಟಿವ್ ಎಂದು ಇನ್ನೂ ಗೊತ್ತಾಗಿರುವುದಿಲ್ಲ. ಸಂಶಯ ಬಂದು ಅವನನ್ನು ಪರೀಕ್ಷೆ ಮಾಡಬೇಕಾದರೆ, ಆತನ ರಕ್ತ ಮಾದರಿಯನ್ನು ಸಂಗ್ರಹಿಸಿ ಅದನ್ನು ಬೆಂಗಳೂರಿಗೆ ಕಳುಹಿಸಿಕೊಡಬೇಕು. ಬೆಂಗಳೂರಿನಲ್ಲಿ ಆ ರಕ್ತವನ್ನು ಪರೀಕ್ಷೆ ಮಾಡಿ, ಅದು ಪಾಸಿಟಿವ್ ಅಥವಾ ನೆಗಟಿವ್ ಎಂದು ತಿಳಿದುಕೊಳ್ಳುವುದರಲ್ಲಿ ಆತನ ಪರಿಸ್ಥಿತಿ ಏನಾಗಿರುತ್ತದೆ ಎಂಬುದು ನಮಗೆ ಅರ್ಥವಾಗಿರುವುದಿಲ್ಲ. ಅಂತಹ ಪರಿಸ್ಥಿತಿ ಇವೊತ್ತಿನ ದಿವಸ ನಮ್ಮಲ್ಲಿ ನಿರ್ಮಾಣವಾಗಿದೆ. ರಾಜ್ಯ ಸರ್ಕಾರ ಈಗಾಗಲೇ ಬಹಳಷ್ಟು ಎಚ್ಚೆತ್ತುಕೊಳ್ಳಬೇಕಾಗಿತ್ತು. ಆದರೆ, ಇನ್ನೂ ನಾವು ಅದರ ಬಗ್ಗೆ ಸುದೀರ್ಘವಾಗಿ ಯೋಚನೆ ಮಾಡುತ್ತಿಲ್ಲ ಹಾಗೂ ಕೊರೋನಾ ವೈರಾಣುವಿನ ಗಂಭೀರತೆಯನ್ನು ಅರ್ಥಮಾಡಿಕೊಳ್ಳುತ್ತಿಲ್ಲ.

ಈ ರೋಗ ಚೈನಾ ದೇಶದಲ್ಲಿ ಉತ್ಪತ್ತಿಯಾಗಿದ್ದರೂ ಕೂಡ, ಅವರು ಎಷ್ಟರ ಮಟ್ಟಿಗೆ ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆಂದರೆ, ಒಂದು ವೇಳೆ ಚೈನಾ ದೇಶ ಅಷ್ಟರಮಟ್ಟಿಗೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳದೇ ಹೋಗಿದ್ದರೆ, ಅವರು ಕೊಟ್ಟಿರುವಂತಹ ಅಂಕಿ–ಅಂಶಗಳ ಪ್ರಕಾರ ಸುಮಾರು 4–5 ಸಾವಿರ ಜನ ಈ ರೋಗದಿಂದ ಸತ್ತಿದ್ದಾರೆಂದು ಏನು ಹೇಳುತ್ತಿದ್ದಾರೆ, ಆ ಅಂಕಿ–ಅಂಶಗಳು ಲಕ್ಷಗಳನ್ನು ದಾಟಬಹುದಾಗಿತ್ತು. ಅಷ್ಟೊಂದು ಮುಂಜಾಗ್ರತಾ ಕ್ರಮಗಳನ್ನು ಅವರು ತೆಗೆದುಕೊಳ್ಳುತ್ತಿದ್ದಾರೆ. ಆದರೆ, ನಾವು ನಮ್ಮ ರಾಜ್ಯದಲ್ಲಿ ಮತ್ತು ನಮ್ಮ ದೇಶದಲ್ಲಿ ಇನ್ನೂ ಗಂಭೀರವಾಗಿ ಈ ರೋಗದ ಬಗ್ಗೆ ಆಲೋಚನೆ ಮಾಡುತ್ತಿಲ್ಲ. ಇವೊತ್ತಿನ ದಿವಸ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇರುತ್ತಾರೋ ಅಥವಾ ಇಲ್ಲವೋ ನಮಗೆ ಗೊತ್ತಿರುವುದಿಲ್ಲ. ಜಿಲ್ಲಾ ಕೇಂದ್ರಗಳಿರಬಹುದು ಅಥವಾ ತಾಲ್ಲೂಕು ಆಸ್ಪತ್ರೆಗಳಿರಬಹುದು ಅಲ್ಲಿ surprise visit ಮಾಡಿ ನೋಡಬಹುದಾಗಿರುತ್ತದೆ. ಅಲ್ಲಿ ಇವೊತ್ತಿನ ದಿವಸ ಡಾಕ್ಟರ್‌ಗಳಿರುವುದಿಲ್ಲ. ಅವರಿಗೆ ಇಷ್ಟ ಬಂದ ಹಾಗೆ ಬರುತ್ತಾರೆ ಹೋಗುತ್ತಾರೆ. ರೋಗಿಗಳು ಬಂದರೆ ಅವರನ್ನು ಯಾರು ನೋಡುತ್ತಾರೆ? ಅಟೆಂಡರ್‌ಗಳು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನೋಡುತ್ತಾರೆಯೇ? **(ಗೊಂದಲ)** ಮಾನ್ಯ ಸಿ.ಸಿ. ಪಾಟೀಲ್‌ರು ನಾನು ಹೇಳುವುದು ತಪ್ಪು ಎಂದು ಭಾವಿಸಬಹುದು. ಇಲ್ಲ, ನಾನು ಹೇಳುವುದು ನಿಜ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಜಿಲ್ಲಾ ಕೇಂದ್ರಗಳ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇವೊತ್ತಿನ ದಿವಸ ಮಧ್ಯಾಹ್ನ ಬಂದರೆ ಬರಬಹುದು, ಇಲ್ಲ ಅಥವಾ ಇವೊತ್ತಿನ ದಿವಸ ಬರದೇ ಇದ್ದರೆ ನಾಳೆಯ ದಿವಸ ಬಂದರೂ ಬರಬಹುದು. ಈ ರೀತಿಯ ಪರಿಸ್ಥಿತಿ ಇದೆ. ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಆಡಳಿತ ಪಕ್ಷದಲ್ಲಿರುವ ಸರ್ಕಾರವನ್ನು ನಾವು ದೂಷಣೆ ಮಾಡುತ್ತಿಲ್ಲ. **(ಗೊಂದಲ)** ಇದು ಸತ್ಯ ಹಾಗೂ ವಾಸ್ತವವಾಗಿದೆ. ಆದುದರಿಂದ, ದಯಮಾಡಿ ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನೂ ಬೆಂಗಳೂರು ನಗರ, ವಾಣಿಜ್ಯ ನಗರ ಹಾಗೂ ರಾಜ್ಯದ ರಾಜಧಾನಿಯಾಗಿದೆ. ಇಲ್ಲಿ ಇವೊತ್ತಿನ ದಿವಸ ಯಾವುದೇ ಕೆಲಸ-ಕಾರ್ಯಗಳು ಆಗುತ್ತಿಲ್ಲ. ಕೊರೋನಾ ವೈರಸ್‌ನಿಂದ ಎಲ್ಲರಲ್ಲಿಯೂ ಆತಂಕವಾಗಿದೆ. ಯಾವುದೇ ಕಟ್ಟಡಗಳು ಕಟ್ಟಬೇಕಾದರೆ ಕೂಲಿಗಳು ಬರುತ್ತಿಲ್ಲ; ವ್ಯವಸಾಯ ಮಾಡಬೇಕಾದರೆ ಕೂಲಿಗಳು ಸಿಗುತ್ತಿಲ್ಲ; ಇದರಿಂದಾಗಿ, ಏನು ಕೆಲಸಗಳು ಆಗದೇ ಎಲ್ಲಾ ಕೆಲಸಗಳು ಸ್ತಬ್ಧವಾಗಿವೆ. "ಮುಂದೆ ಏನಾಗಬಹುದೆಂಬ ಆತಂಕದಿಂದ" ಇವೊತ್ತಿನ ದಿವಸ ಎಲ್ಲರೂ ಬದುಕುತ್ತಿದ್ದಾರೆ. ಇದಕ್ಕೆ ನಾವು ಯಾವ ರೀತಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ ಎನ್ನುವುದನ್ನು ಹೇಳಬೇಕಾಗಿದೆ. ಮಾಧ್ಯಮದವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, "ಬ್ರೇಕಿಂಗ್ ನ್ಯೂಸ್"; "ಇದೀಗ ಬಂದ ಸುದ್ಧಿ"; "ನಮ್ಮ ಚಾನಲ್‌ನಲ್ಲಿಯೇ ಮೊದಲು, ಬೇರೆ ಎಲ್ಲಿಯೂ ಇಲ್ಲ" ಈ ರೀತಿಅವರು ಬೇಡದೇ ಇರುವಂಥದ್ದನ್ನು ಏನೇನೋ ತೋರಿಸುತ್ತಾರೆ. "ಯಾರೋ ಒಬ್ಬ ವ್ಯಕ್ತಿ ಮದುವೆಯಾಗಿ ಇನ್ನೊಬ್ಬಳನ್ನು ಕರೆದುಕೊಂಡು ಹೋದ" ಅಥವಾ "ಯಾವುದೋ ಒಬ್ಬ ರೌಡಿ ಹಾಡಹಗಲೇ ರಸ್ತೆಯಲ್ಲಿ ಮರ್ಡರ್ ಮಾಡಿದ್ದನ್ನು" ಬೆಳಿಗ್ಗೆಯಿಂದ ಸಂಜೆಯವರೆಗೆ ಇಂತಹ ವಿಷಯಗಳನ್ನು ಮಾಧ್ಯಮದವರು ತೋರಿಸುತ್ತಾರೆ. ದಯಮಾಡಿ, ಸರ್ಕಾರ ಒಂದು ನಿರ್ದಿಷ್ಟವಾದ ಹಾಗೂ ಗಮನ ಸೆಳೆಯುವಂತಹ ಮಾರ್ಗದರ್ಶನವನ್ನು ಮಾಧ್ಯಮದವರಿಗೆ ಕೊಡಬೇಕು. ದಿನದಲ್ಲಿ ಕನಿಷ್ಠ ಪಕ್ಷ, ಉದಾಹರಣೆಗೆ, ಸೀರಿಯಲ್‌ಗಳನ್ನು ಪ್ರಸಾರ ಮಾಡುವಂತಹ ಸಂದರ್ಭದಲ್ಲಿ, ಮಧ್ಯದಲ್ಲಿ ಕೊರೋನಾ ವೈರಸ್ ಬಗ್ಗೆ ಯಾವ ರೀತಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ತೋರಿಸಬೇಕು. ಉದಾಹರಣೆಗೆ, ಯಾವುದಾದರೂ ವಸ್ತುವನ್ನು ಮುಟ್ಟಿದ ನಂತರ ನಾವು, "ಕಣ್ಣನ್ನು ಜಾಸ್ತಿ ಉಜ್ಜಿಕೊಳ್ಳಬಾರದು, ಮೂಗನ್ನು ಮುಟ್ಟಿಕೊಳ್ಳಬಾರದು ಅಥವಾ ಬಾಯಿಯನ್ನು ಮುಟ್ಟಿಕೊಳ್ಳಬಾರದು ಮತ್ತು ಬಿಸಿ ನೀರಿಗೆ ಉಪ್ಪು ಮತ್ತು ಅರಿಶಿನ ಹಾಕಿ gargling ಮಾಡಿದರೆ ಕೂಡ ಕೊರೋನಾ ವೈರಸ್ ಹರಡದಂತೆ ಮುಂಜಾಗ್ರತೆ ಕ್ರಮವನ್ನು ಅನುಸರಿಸಬಹುದು" ಎನ್ನುವುದನ್ನು ನಾವು ಕೂಡ ಓದಿದ್ದೇವೆ. ಇಂಥದ್ದನ್ನು ಮಾಧ್ಯಮಗಳಲ್ಲಿ ತೋರಿಸುವುದಕ್ಕೆ ಸರ್ಕಾರ ಏತಕ್ಕೆ ಆದೇಶ ಕೊಡಬಾರದು?

ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚೈನಾ ದೇಶದ ಒಂದು ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಅದೇನೆಂದರೆ, ಚೈನಾ ದೇಶದಲ್ಲಿ ನಮ್ಮ ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಒಬ್ಬ ಹುಡುಗ ವ್ಯಾಸಂಗ ಮಾಡುತ್ತಿದ್ದಾನೆ. ಆತನ ತಂದೆ–ತಾಯಿಗಳು, "ಚೈನಾ ದೇಶದಲ್ಲಿ ಕೊರೋನಾ ವೈರಸ್ ಜಾಸ್ತಿಯಾಗಿದೆ, ನೀನು ವಾಪಸ್ಸು ಬಾ" ಎಂದು ಹೇಳುತ್ತಾರೆ. ಅದಕ್ಕೆ ಆ ಹುಡುಗ, "ನಾನು ನಮ್ಮ ದೇಶಕ್ಕೆ ವಾಪಸ್ಸು ಬರುವುದಿಲ್ಲ, ಒಂದು ವೇಳೆ ನಾನು ಸತ್ತರೆ ಇಲ್ಲಿಯೇ ಸಾಯುತ್ತೇನೆ. ಆದರೆ, ಚೈನಾ ದೇಶದಲ್ಲಿ ಕೊರೋನಾ ವೈರಸ್ ಜಾಸ್ತಿಯಾಗಿದೆ, ಅದನ್ನು ಕರ್ನಾಟಕಕ್ಕೆ ತಂದು ಹಬ್ಬಿಸುವುದಕ್ಕೆ ನನಗೆ ಇಷ್ಟಪಡುವುದಿಲ್ಲ. ಅದರ ಜೊತೆಗೆ, ಯಾರೂ ಕೂಡ ಪ್ಯಾನಿಕ್ ಆಗಬಾರದು. ಕೊರೋನಾ ವೈರಸ್ ಎಲ್ಲರಿಗೂ ಬರುವುದಿಲ್ಲ. ಅದಕ್ಕೆ ಏನೇನು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು" ಎಂದು ಅವನದ್ದೇ ಆದಂತಹ ಭಾಷೆಯಲ್ಲಿ ಹೇಳುತ್ತಾನೆ. ಅದನ್ನು ಏತಕ್ಕೆ ಪ್ರಚಾರ ಮಾಡಬಾರದು?

ಇವೊತ್ತಿನ ದಿವಸ ಕೊರೋನಾ ವೈರಸ್ ಹರಡುವುದು ತಡೆಗಟ್ಟಲು ಮುಖಕ್ಕೆ ಮುಖಗವಸು(ಮಾಸ್ಕ್) ಅನ್ನು ಧರಿಸಿಕೊಳ್ಳುತ್ತಿದ್ದೇವೆ. ಈ ಸದನದಲ್ಲಿ ಮಾನ್ಯ ಸದಸ್ಯರು, ಪತ್ರಿಕಾ ಮಾಧ್ಯಮದ ಸಹೋದರಿ, ಹಾಗೂ ಇಲಾಖೆ ಅಧಿಕಾರಿಗಳು ಆ ಮಾಸ್ಕ್ ಅನ್ನು ಹಾಕಿಕೊಂಡಿದ್ದರು. ಆದರೆ, ನಮ್ಮಲ್ಲಿರತಕ್ಕಂಥ ಮಾಸ್ಕ್‌ಗಳು ಸಿಂಗಲ್ ಲೇಯರ್ ಅಥವಾ ಡಬಲ್ ಲೇಯರ್‌ಗಳಷ್ಟೇ. ಆದರೆ, ಈ ವೈರಾಣು ಹರಡದಂತೆ ತಡೆಗಟ್ಟಲು ಕನಿಷ್ಠ ಪಕ್ಷ ಸಿಕ್ಸ್ ಲೇಯರ್ ಮಾಸ್ಕ್ ಉಪಯೋಗಿಸಬೇಕು. ಇದರ ಜೊತೆಗೆ, ನಿನ್ನೆಯ ದಿವಸ ಸೋಶಿಯಲ್ ಮೀಡಿಯಾದಲ್ಲಿ ಒಂದು ಸುದ್ದಿ ಪ್ರಸಾರವಾಗುತ್ತಿದೆ. ಅದರ ಬಗ್ಗೆ ದಯಮಾಡಿ ಆರೋಗ್ಯ ಸಚಿವರು ಗಮನ ಹರಿಸಬೇಕು. ಅದೇನೆಂದರೆ, ಆಸ್ಪತ್ರೆಗಳಲ್ಲಿ ಉಪಯೋಗಿಸಿ ಬಿಸಾಕಿದಂತಹ ಮಾಸ್ಕ್ ಅನ್ನು ಬೀದಿಯನ್ನು ಕಸ ಆರಿಸುವಂತಹ ಜನರು, ಅಂದರೆ, 'ಮೆಡಿಕಲ್ ವೇಸ್ಟ್' ಎಂದು ನಾವು ಏನು ಕರೆಯುತ್ತೇವೆ ಅದನ್ನು ಬಿಸಾಕಿದಾಗ, ಅದನ್ನು ಪುನಃ ಸ್ವಚ್ಛ ಮಾಡಿ, ರೀ–ಪ್ಯಾಕ್ ಮಾಡಿ ಮಾರಾಟ ಮಾಡುತ್ತಿದ್ದಾರೆ. ಇವೊತ್ತಿನ ದಿವಸ ಹೊಸ ಮಾಸ್ಕ್‌ಗಳು ಅಂಗಡಿಯಲ್ಲಿ ಸಿಗುತ್ತಿಲ್ಲ. ಮೊದಲು ಈ ಮಾಸ್ಕ್‌ಗಳು 5–10 ರೂಪಾಯಿಗೆ ಒಂದು ಮಾಸ್ಕ್ ದರದಲ್ಲಿ ಸಿಗುತ್ತಿತ್ತು. ಆದರೆ, ಇವೊತ್ತಿನ ದಿವಸ ಆ ಮಾಸ್ಕ್ ಅನ್ನು 50–75 ರೂಪಾಯಿಗೆ ಒಂದು ಮಾಸ್ಕ್ ಎಂದು ಕಳ್ಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಜೊತೆಗೆ, ಈಗಾಗಲೇ ಉಪಯೋಗಿಸಿದಂತಹ ಮಾಸ್ಕ್ ಅನ್ನು ಸ್ವಚ್ಛ ಮಾಡಿ ಪುನರ್‌ಬಳಕೆ ಮಾಡುವುದಕ್ಕೆ ಕಳುಹಿಸಿಕೊಡುತ್ತಿದ್ದಾರೆ. ದಯಮಾಡಿ, ಇದಕ್ಕೆ ಕಡಿವಾಣ ಹಾಕಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡುತ್ತಿದ್ದೇನೆ. ಚೈನಾ ದೇಶದಿಂದ ಪ್ರತಿ ವರ್ಷ ಶೇಕಡ 10 ರಷ್ಟು ಕಬ್ಬಿಣವನ್ನು ನಾವು ಆಮದು ಮಾಡಿಕೊಳ್ಳುತ್ತಿದ್ದೇವೆ. ಅದೇ ರೀತಿ, ಮೆಷಿನರಿಗಳು ಹಾಗೂ ಶಸ್ತ್ರಚಿಕಿತ್ಸೆಗೆ ಬೇಕಾದಂತಹ ಸಲಕರಣೆಗಳು ನಾವು ಆಮದು ಮಾಡಿಕೊಳ್ಳುತ್ತೇವೆ. ಇವೆಲ್ಲವನ್ನೂ ಆಮದು ಮಾಡಿಕೊಳ್ಳುವುದರ ಜೊತೆಗೆ, ಯಾವ ವೈರಸ್ ನಮ್ಮ ದೇಶಕ್ಕೆ ಬರಬಹುದೆಂಬ ಬಗ್ಗೆ ಕಟ್ಟೆಚ್ಚರ ವಹಿಸಿಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಲಹರ್ ಸಿಂಗ್ ಸಿರೋಯಾರವರು ಮಾತನಾಡುತ್ತಾ, 'ಸ್ವಚ್ಛ ಭಾರತ್' ಕಡೆಗೆ ಗಮನಹರಿಸಬೇಕೆಂದು ಹೇಳಿದರು. ಅದು ಸತ್ಯ, ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ನಮ್ಮ ಬೆಂಗಳೂರಿನಲ್ಲಿರುವ ಬಿಬಿಎಂಪಿ ಇಲಾಖೆಯಲ್ಲಿ ಕಸ ಸಂಗ್ರಹಣೆ ಮಾಡುವುದರಲ್ಲಿ ಒಂದು ಮಾಫಿಯಾ ಆಗಿ ಹೋಗಿದೆ. ಬಿಬಿಎಂಪಿಯಲ್ಲಿ ಕಸ ಸಂಗ್ರಹಣೆ ಮಾಡುವ ಕಂಟ್ರಾಕ್ಟರ್‌ಗಳು ಕಸವನ್ನು ಸರಿಯಾಗಿ ತೆಗೆಯುತ್ತಿಲ್ಲ. ನಾವು ಯಾವುದಾದರೂ ರಸ್ತೆಗಳಿಗೆ ಹೋಗಿ ನೋಡಿದರೂ ಸಹ ಕಸ ಅಲ್ಲಲ್ಲಿ ಬಿದ್ದಿರುತ್ತದೆ. ಸಾರ್ವಜನಿಕ ಶೌಚಾಲಯಗಳನ್ನು ಸ್ವಚ್ಛ ಮಾಡುವವರಿಲ್ಲ. ಹೋಟೆಲ್‌ಗಳಲ್ಲಿ ಪ್ರತಿಯೊಬ್ಬರಿಗೂ ತಟ್ಟೆಗಳಲ್ಲಿ ಊಟ–ತಿಂಡಿ ನೀಡುತ್ತಾರೆ. ಆದರೆ, ಅವುಗಳನ್ನು ಹೈಜೆನಿಕ್ ಆಗಿ ಸ್ವಚ್ಛ ಮಾಡುವುದಿಲ್ಲ. ಇದೆಲ್ಲರಿಂದಲೂ ಕೂಡ ಕೊರೋನಾ ವೈರಸ್ ಹರಡುವಂತಹ ಸಾಧ್ಯತೆಗಳಿವೆ. ಆದರೆ, ಮಾನ್ಯ ಸದಸ್ಯರು 'ಸ್ವಚ್ಛ ಭಾರತ್ ಯೋಜನೆ' ಬಗ್ಗೆ ಹೇಳಿದರು. ಆದರೆ, 'ಸ್ವಚ್ಛ ಭಾರತ್ ಯೋಜನೆ'ಯನ್ನು ಏನು ಘೋಷಣೆ ಮಾಡಿದ್ದಾರೆ, ಸ್ವಚ್ಛ ಭಾರತ್ ಮಾಡುವುದಕ್ಕೆ ಎಷ್ಟು ಹಣ ಖರ್ಚು ಮಾಡಿದರೋ ಅದರ ನಾಲ್ಕರಷ್ಟು ಜಾಹೀರಾತಿಗೆ ಖರ್ಚು ಮಾಡಿದ್ದೇವೆ. ನಾವು ಸತ್ಯವನ್ನು ಒಪ್ಪಿಕೊಳ್ಳಲೇಬೇಕು. ಎಲ್ಲಿ ಸ್ವಚ್ಛ ಭಾರತ್ ಆಗಲಿಲ್ಲ. ಆದರೆ, ಪ್ರತಿದಿನ ಟಿ.ವಿ.ಯಲ್ಲಿ ದಿನಪತ್ರಿಕೆಯಲ್ಲಿ ಹಾಗೂ ಇತರೆ ಕಡೆಗಳಲ್ಲಿ ಸ್ವಚ್ಛ ಭಾರತ್ ಎಂದು ಹೇಳಿ ಅದಕ್ಕೆ ಕೋಟ್ಯಂತರ ರೂಪಾಯಿ ಹಣ ಖರ್ಚು ಮಾಡಲಾಯಿತು.

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು. ನಾನು ಈ ಬಗ್ಗೆ ಹೇಳುವುದು ಸುಳ್ಳಾದರೆ ಮಾನ್ಯ ಸದಸ್ಯರು ಮಾತನಾಡಬಹುದು. ಆಡಳಿತ ಪಕ್ಷದವರೇ ಆದಂತಹ ಕೇಂದ್ರ ಸಚಿವರು ಬೆಂಗಳೂರಿಗೆ ಬಂದಾಗ, ಬಸವನಗುಡಿ ಹತ್ತಿರ ಸ್ವಚ್ಛ ಭಾರತ ಯೋಜನೆಯನ್ನು ಉದ್ಘಾಟನೆ ಮಾಡುವುದಕ್ಕೆ ಬರುತ್ತಾರೆ. ಆದರೆ, ಕಾರ್ಪೋರೇಷನ್ ನವರು ಬೆಳಿಗ್ಗೆಯೇ ಆ ರಸ್ತೆಯನ್ನು ಸ್ವಚ್ಛ ಮಾಡಿದ್ದರು. ಆದರೆ, ಕೇಂದ್ರ ಸಚಿವರು 10–00 ಗಂಟೆಗೆ ಸ್ವಚ್ಛ ಭಾರತ್ ಯೋಜನೆಯನ್ನು ಉದ್ಘಾಟನೆ ಮಾಡಬೇಕು, ರಸ್ತೆಯಲ್ಲಿ ಕಸ ಇಲ್ಲವೆಂದು, ಪುನಃ ಕಸವನ್ನು ರಸ್ತೆಯಲ್ಲಿ ಹಾಕಿ ಅದನ್ನು ಗುಡಿಸುವುದರ ಮುಖಾಂತರ ಯೋಜನೆ ಉದ್ಘಾಟನೆ ಮಾಡಿರುತ್ತಾರೆ. ಇದರಲ್ಲಿ ನಾನು ಯಾರನ್ನೂ ದೂಷಿಸುತ್ತಿಲ್ಲ. ಇದರಲ್ಲಿ ನಾವೆಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡಬೇಕಾಗುತ್ತದೆ. ನಾನು ಇನ್ನೂ ಮಾತನಾಡುವುದಕ್ಕೆ ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ. ಮಾನ್ಯ ಆರೋಗ್ಯ ಸಚಿವರು ನಿನ್ನೆಯ ದಿವಸ ಒಂದು ಆಸ್ಪತ್ರೆಗೆ ಹೋಗಿ ಸ್ಪೆಷಲ್ ವಾರ್ಡ್‌ಗೆ ವಿಸಿಟ್ ಮಾಡಿರುತ್ತಾರೆ. ಅದಕ್ಕಾಗಿ, ಧನ್ಯವಾದಗಳು. ಈ ರೀತಿಯಾಗಿ, surprise ಆಗಿ ಪ್ರತಿಯೊಂದು ಜಿಲ್ಲಾ ಕೇಂದ್ರಗಳಿಗೆ ಮಾನ್ಯ ಸಚಿವರು ಭೇಟಿ ಕೊಡಬೇಕಾಗುತ್ತದೆ. ಯಾವ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಹಾಗೂ ಸಂಬಂಧಪಟ್ಟ ಸಿಬ್ಬಂದಿಗಳು ಈ ರೋಗದ ಬಗ್ಗೆ ಹೆಚ್ಚು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗಮನ ಕೊಡುವುದಿಲ್ಲ, ಅವರ ವಿರುದ್ಧ ನಿರ್ದಾಕ್ಷಿಣ್ಯವಾದಂತಹ ಕ್ರಮವನ್ನು ತೆಗೆದುಕೊಳ್ಳುವಂತಹ ಕೆಲಸ ಪ್ರಾಮಾಣಿಕವಾಗಿ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಕೊರೋನಾ ವೈರಸ್ ಬಗ್ಗೆ ಚರ್ಚೆಯಾಗುತ್ತಿದೆ.

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ ತಾವು 5 ನಿಮಿಷದಲ್ಲಿ ತಮ್ಮ ಮಾತುಗಳನ್ನು ಮುಗಿಸಬೇಕು. ಏಕೆಂದರೆ, ಸಮಯ ಇರುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿ ಮೊನ್ನೆಯ ದಿವಸ ಅಂದರೆ, ಶನಿವಾರ ದಿವಸ ಕೊರೋನಾ ವೈರಸ್ ಬಗ್ಗೆ ಜಿಲ್ಲಾಡಳಿತದಿಂದ ಹಾಗೂ ಉಸ್ತುವಾರಿ ಸಚಿವರಿಂದ ಒಂದು ಸಭೆ ನಡೆಯಿತು. ನಮ್ಮ ಜಿಲ್ಲೆಯಲ್ಲಿ ಈ ಕೊರೋನಾ ವೈರಸ್ ಪರೀಕ್ಷೆ ಮಾಡಲು ಬೇಕಾದಂತಹ ಲ್ಯಾಬೋರೇಟರಿ ಇರುವುದಿಲ್ಲ. ಒಂದು ವೇಳೆ ನಮ್ಮ ಜಿಲ್ಲೆಯಲ್ಲಿ ಯಾರಾದರೂ ಶಂಕಿತ ರೋಗಿಗಳು ಇದ್ದರೆ, ಅವರ ರಕ್ತ ಪರೀಕ್ಷೆ ಮಾಡಬೇಕಾದರೆ ಶಿವಮೊಗ್ಗ, ಹಾಸನ ಅಥವಾ ಬೆಂಗಳೂರಿಗೆ ಹೋಗಬೇಕು.

(ಮುಂದುವರೆದಿದೆ)

(445)16.03.2020/5.20/ವೈಎಲ್–ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ(ಮುಂದು)**

ಹಾಗಾಗಿ ಇದರ ಬಗ್ಗೆ ಏನು ಮಾಡಬೇಕು. ಹಳ್ಳಿಗಳಲ್ಲಿರುವ ಜನರಿಗೆ ಕೊರೋನಾ ಬಂದರೆ ಅಥವಾ ಕೊರೋನಾ ಸೋಂಕಿತರು ಎಂದು ಗುರುತಿಸಲ್ಪಟ್ಟರೆ ಆ ಜನರು ಏನು ಮಾಡಬೇಕು, ಎಲ್ಲಿ ಹೋಗಬೇಕು? ಈ ಬಗ್ಗೆ ನಮಗೆ ಮಾಹಿತಿ ನೀಡಬೇಕು. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಇದರ ಬಗ್ಗೆ laboratory ತೆಗೆಯುವುದಕ್ಕೆ ಸಾಧ್ಯವಿದೆಯೇ? ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದಾಗ, ಸರ್ಕಾರಿ ಆಸ್ಪತ್ರೆಯವರು ಸರ್ಕಾರದ ನಿರ್ದೇಶನದನ್ವಯ isolated room, 2 to 3 beds, intensive care unit ಮತ್ತು ವಾರ್ಡ್‌ಗಳಲ್ಲಿ ಕೆಲವು ಬೆಡ್‌ಗಳನ್ನು ಮೀಸಲಿಟ್ಟಿದ್ದಾರೆ. ಯಾರಾದರೂ ಒಬ್ಬರಿಗೆ ಈ ರೋಗ ಬಂದರೆ ಎಷ್ಟು ಜನ ಆ ರೋಗಿಯನ್ನು ಭೇಟಿ ಮಾಡಲು ಬರುತ್ತಾರೆಯೋ ಅವರನ್ನೆಲ್ಲಾ isolated room ನಲ್ಲಿಟ್ಟು ಪರೀಕ್ಷೆ ಮಾಡಬೇಕು. ಹಾಗಾಗಿ ಎಷ್ಟು ಜನರಿಗೆ ಪರೀಕ್ಷೆ ಮಾಡಲು ವ್ಯವಸ್ಥೆ ಮಾಡಲಾಗಿದೆ? ಜೊತೆಗೆ ನಮ್ಮಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ ವೈದ್ಯಕೀಯ ಆಸ್ಪತ್ರೆಗಳಿದ್ದು, ಅವರ್ಯಾರು ಈ ರೋಗಕ್ಕೆ ಉಪಚರಿಸುವುದಕ್ಕೆ ಪ್ರತಿಕ್ರಿಯೆ ನೀಡುತ್ತಿಲ್ಲ. ಇಂತಹ ವೈರಸ್ ಹರಡುವಿಕೆಯಿಂದಾಗಿ ಖಾಸಗಿ ವೈದ್ಯಕೀಯ ಆಸ್ಪತ್ರೆಯಲ್ಲಿ

" ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೆಚ್ಚು ಸಲಕರಣೆಗಳು, ಹೆಚ್ಚು ಆಸ್ಪತ್ರೆಗಳು, ಬೇಕಾದಷ್ಟು ವಾರ್ಡ್‌ಗಳಿರುತ್ತವೆ. ಹಾಗಾಗಿ ಖಾಸಗಿ ವೈದ್ಯಕೀಯ ಆಸ್ಪತ್ರೆಗಳ ಸಹಾಯವನ್ನು ತೆಗೆದುಕೊಳ್ಳುವುದಕ್ಕೆ ಮಾನ್ಯ ಸಚಿವರು ಕ್ರಮವಹಿಸಬೇಕೆಂದು ಹೇಳುತ್ತೇನೆ.

Mask ಗಳ ಬಗ್ಗೆ ನಾವು suo moto statement ಅನ್ನು ಈ ಸದನದಲ್ಲಿ ಮಾಡಿದಾಗ ಡಾ॥ ಕೆ.ಸುಧಾಕರ್‌ರವರಿಗೆ ಮಾಸ್ಕ್‌ಗೆ ಸಂಬಂಧಿಸಿದಂತೆ ಸಲಹೆ ನೀಡಿ, instructions ಕೊಡಿ, check ಮಾಡಿ ಹಾಗೂ medical store ಗಳಲ್ಲಿ ಮಾಸ್ಕ್‌ಗಳು ಎಷ್ಟು ರೂಪಾಯಿಗಳಿಗೆ ಸಿಗುತ್ತದೆ ಎಂಬುದನ್ನು ತಿಳಿದುಕೊಂಡು, ನಿರ್ದಿಷ್ಟವಾದ ಬೆಲೆಯನ್ನು ನಿಗದಿ ಮಾಡಿ, ಜನರಿಗೆ ಅದರ ಮಾಹಿತಿಯನ್ನು ತಿಳಿಸುವಂತೆ ಹೇಳಲಾಗಿತ್ತು. ನನ್ನ ಹತ್ತಿರ ಇರುವ ಮಾಸ್ಕ್ ಬೆಲೆ, ನನ್ನ ಹೆಂಡತಿ ಡಾಕ್ಟರ್ ಆದ ಪ್ರಯುಕ್ತ ಅವರು ನೀಡಿರುವುದರಿಂದ ನಾನು ಈ ಮಾಸ್ಕ್‌ನ್ನು ತೆಗೆದುಕೊಂಡು ಜೇಬಿನಲ್ಲಿಟ್ಟುಕೊಂಡು ಬಂದೆ. ಕಾರಣ ಈ ಮಾಸ್ಕ್ ಹಾಕಿಕೊಂಡರೆ, ಎಲ್ಲಿ ನನ್ನನ್ನು ಆಸ್ಪತ್ರೆಗೆ ಎಳೆದುಕೊಂಡು ಹೋಗಿ ಪರೀಕ್ಷೆ ಮಾಡುತ್ತಾರೆಯೋ ಎಂದು ಭಯವಾಗುತ್ತದೆ. ಜೊತೆಗೆ ಸದನಕ್ಕೆ ಬರಬೇಕಾಗಿರುವುದರಿಂದ ಜೇಬಿನಲ್ಲಿಟ್ಟುಕೊಂಡು ಬಂದಿದ್ದೇನೆ. ನಾನು ವಿಮಾನದಲ್ಲಿ ಕುಳಿತಿದ್ದಾಗ ನನ್ನ ಬದಿಯಲ್ಲಿದ್ದವರು Air Hostess ಗೆ ನೀವು ಏತಕ್ಕೆ ಮಾಸ್ಕ್ ಧರಿಸುವುದಿಲ್ಲ, ಇದರಲ್ಲಿರುವ ಶೇಕಡಾ 60 ರಷ್ಟು ಪ್ರಯಾಣಿಕರು ಮಾಸ್ಕ್ ಧರಿಸಿದ್ದಾರಲ್ಲ ಎಂದು ಕೇಳಿದ್ದರು. ಅದಕ್ಕೆ ಅವರು ಹಾಕಿಕೊಳ್ಳಬೇಕಾಗಿತ್ತು ಆದರೆ ಅವರು ಏನು ಮಾತನಾಡದೇ ಮಾತನ್ನು ನಿಲ್ಲಿಸಿ ಬಿಟ್ಟರು. ಅಂದರೆ ಅದರರ್ಥ Air Hostess ಗಳಿಗೆ ಮಾಸ್ಕ್ ಸರಬರಾಜು ಮಾಡಲಿಲ್ಲ ಎನ್ನುವುದನ್ನು ಪರೋಕ್ಷವಾಗಿ ಹೇಳಿದ್ದರು. ಈ ಮಾಸ್ಕ್ ಎಲ್ಲರೂ ಧರಿಸಬೇಕೇ, ಬೇಡವೇ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಮಾಸ್ಕ್ ಧರಿಸುವುದರಿಂದ ಏನು ಅವಶ್ಯಕತೆ ಇದೆ, ಮಾಸ್ಕ್ ಧರಿಸದೇ ಇರುವುದರಿಂದ ಏನಾಗುತ್ತದೆ? ಪ್ರತಿ ದಿನ ಮಾಧ್ಯಮಗಳಲ್ಲಿ 24 ಘಂಟೆಗಳ ಕಾಲ ಕೊರೋನಾ ವಿಚಾರ ಬಗ್ಗೆಯೇ ತೋರಿಸುತ್ತಿದ್ದಾರೆ. ನಮಗೂ ಟಿ.ವಿ. ಯನ್ನು ನೋಡಿದರೆ ಹೊರಗೆ ಹೋಗುವುದೇ ಬೇಡ ಎಂದು ಅನ್ನಿಸುತ್ತದೆ. ಅಷ್ಟು ಹೆದರಿಕೆ ಹುಟ್ಟುವಂಥ ರೀತಿಯಲ್ಲಿ ಇವತ್ತು ಅದರ ಬಗ್ಗೆ awareness create ಮಾಡುತ್ತಿದ್ದಾರೆ.

ನಮ್ಮ ಆಸ್ಪತ್ರೆಗಳ ಸುತ್ತ-ಮುತ್ತಲಿನಲ್ಲಿರುವ ಖಾಸಗಿ ಆಸ್ಪತ್ರೆಗೆ ಹೋದರೆ, ಈ ರೋಗಕ್ಕೆ ಭರಿಸಬೇಕಾದ ವೆಚ್ಚವೆಷ್ಟು? ಇದರ ಬಗ್ಗೆ ಜನರಿಗೆ ಮಾಹಿತಿ ತಿಳಿಯಬೇಕಲ್ಲವೇ? ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡುತ್ತಾರೆ. ಕೆಲವು ವ್ಯಕ್ತಿಗಳು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರವೇಶ ಪಡೆಯಲು ಇಚ್ಛಿಸುವುದಿಲ್ಲ. We will go to the private hospital ಎನ್ನುತ್ತಾರೆ. Government hospital ನಿಂದ private hospital ಗೆ refer ಮಾಡಿ ಹೋಗಿ ಎಂದು ಹೇಳಿದರೆ, what is the charges ಎನ್ನುವುದರ ಬಗ್ಗೆ ಜನರಿಗೆ awareness ನೀಡಬೇಕು. ಸರ್ಕಾರವು 100 ಜನರಿಗಿಂತ ಹೆಚ್ಚು ಜನರು ಸೇರಿಕೊಂಡು ಕಾರ್ಯಕ್ರಮವನ್ನು ಮಾಡಬಾರದು ಎಂದು ಆದೇಶ ಹೊರಡಿಸಲಾಗಿದೆ. ಯಾವುದೇ ಕಾರ್ಯಕ್ರಮಗಳನ್ನು ಮಾಡುವಾಗ ಪೊಲೀಸ್ ಅಧಿಕಾರಿಗಳು ಆ ಕಾರ್ಯಕ್ರಮಕ್ಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

interfere ಹಾಗೆ ಆಗಿರುತ್ತಾರೆ. ನಮ್ಮಲ್ಲಿ ಭಯಲಾಟ, ಯಕ್ಷಗಾನ ಕಾರ್ಯಕ್ರಮ ನಡೆಸಲಾಗುತ್ತದೆ. ಹಾಗಾಗಿ ಯಕ್ಷಗಾನ ಮಾಡಬೇಡಿ ಎಂದು ನಮಗೆ ಸೂಚನೆ ನೀಡಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಹೇಳುತ್ತಾರೆ. ಎಲ್ಲಿಯಾದರೂ ನಿಶ್ಚಿತಾರ್ಥ, ಮದುವೆ ಸಮಾರಂಭಗಳಿದ್ದರೆ 100 ಜನರಿಗಿಂತ ಹೆಚ್ಚಿನ ಜನಸಂಖ್ಯೆಯಲ್ಲಿ ಸೇರಿ ಮಾಡಬೇಡಿ ಎಂದು ಹೇಳುತ್ತಿದ್ದಾರೆ. ಆಗಲಿ, ಸರ್ಕಾರಕ್ಕೆ ಗೌರವ ಸಲ್ಲಿಸಿ ಅದರಂತೆ ನಡೆದುಕೊಳ್ಳುತ್ತೇವೆ. ಹಾಗೆಯೇ ನಾನು ಸಹ ನಿನ್ನೆ ದಿವಸ ಬೆಳಗಾವಿಯ ಮದುವೆ ಸಮಾರಂಭಕ್ಕೆ ಹೋಗಬೇಕಾಗಿದ್ದ ಪ್ರಯುಕ್ತ flight ticket book ಮಾಡಿದ್ದೆ. ಉದಾಹರಣೆಗೆ ಹೇಳುವುದಾರೆ, ನಮ್ಮ ಸಭಾನಾಯಕರು ಬೆಂಗಳೂರಿನಲ್ಲಿ ಸಭೆ ನಡೆಯುವಂಥ ಸಂದರ್ಭದಲ್ಲಿ 'ನಾಳೆ ಬೆಳಿಗ್ಗೆ ಸರ್ಕಾರದ ಮುಖ್ಯ ಸಚೇತಕರ ಕಡೆಯ ಮದುವೆ ಸಮಾರಂಭವಿದ್ದು, ಜನಸಂಖ್ಯೆ ಕಡಿಮೆ ಮಾಡಿ ಮದುವೆ ಮಾಡಬೇಕೆಂದು ಇರುವುದರಿಂದ ಆಲೋಚನೆ ಮಾಡಿ, ಮೊಬೈಲ್‌ನಲ್ಲಿ ಸಂದೇಶ ಕಳುಹಿಸಿದ್ದಾರೆ' ಎಂದು ಹೇಳಿದರು. ಅದರರ್ಥ indirect ಆಗಿಹೆಚ್ಚು ಜನರು ಮದುವೆಗೆ ಬರುವುದು ಬೇಡ ಎನ್ನುವ ಸಂದೇಶ ನೀಡಿದ್ದರು. ನನಗೂ ಆ ರೀತಿಯ ಸಂದೇಶ ಬಂದ ಪ್ರಯುಕ್ತ ticket cancel ಮಾಡಿ, ಮದುವೆಗೆ ಹೋಗಲಿಲ್ಲ. ಆದರೆ, ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮದುವೆಗೆ ಹೋಗಿ ಬಂದಿದ್ದಾರೆ. ಇದರಿಂದ ನಮಗೆ ಹೇಗೆ ಅನ್ನಿಸುತ್ತದೆ? ಅವರು ಹೇಳುವುದೊಂದು, ಮಾಡುವುದು ಒಂದು ಎನ್ನುವ ರೀತಿ ಆಗಬಾರದು. ಒಂದು ವಿಚಾರವನ್ನು ಹೇಳಿದ ಮೇಲೆ ನಾವು ಫಾಲೋ,..

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರ ಮಾತಿನ ಬಗ್ಗೆಯೇ ಮಾತನಾಡುವುದಕ್ಕೆ ಬರುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾನಾಯಕರೇ, ಒಂದು ನಿಮಿಷ. ನಾನು ಮಾತನಾಡಿದ ಮೇಲೆ ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಸಂದೇಶ ಕಳುಹಿಸಿದ್ದು ಏಕೆಂದರೆ, ಸಾಧ್ಯವಾದಷ್ಟು ಸರಳವಾಗಿ ಮದುವೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ ಎಂದು ಅವರು ಹೇಳಿರುತ್ತಾರೆ. ಹಾಗಾಗಿ ಸಾಧ್ಯವಾದಷ್ಟು ಕಡಿಮೆ ಜನ ಬನ್ನಿ ಎನ್ನುವುದಾಗಿರುತ್ತದೆ. ಇಡೀ ರಾಜ್ಯದ ಅಂದರೆ, ನಮ್ಮ ಪರವಾಗಿ, ಅವರ ಪರವಾಗಿ ಪ್ರತಿನಿಧಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳೆ ಹೋಗಿ ಗೌರವ ನೀಡಿ ಬಂದಿದ್ದಾರೆ. ಅದರರ್ಥ ಮದುವೆಗೆ ಬರಬಾರದು ಎನ್ನುವುದಲ್ಲ. ಸರಳವಾಗಿ ಮದುವೆ ಮಾಡುತ್ತೇವೆ ಎಂದು ಸಂದೇಶ ಕಳುಹಿಸಿದ್ದ ಪ್ರಯುಕ್ತ ನನ್ನನ್ನು ಮತ್ತು ಮಾನ್ಯ ಐವನ್ ಡಿ'ಸೋಜಾರವರನ್ನು ಸೇರಿಸಿ ಎಲ್ಲಾ ಶಾಸಕರು ಸೇರಿ 150 ಜನಕ್ಕೂ ಹೆಚ್ಚಾಗಿ ಸೇರುತ್ತಾರೆ ಎನ್ನುವ ಕಾರಣದಿಂದ ಮಾನ್ಯ ಮುಖ್ಯಮಂತ್ರಿಗಳೆ ಹೋಗಿರುವುದರಿಂದ ಅವರಿಗೆ ನಾವು ಅಭಿನಂದನೆ ಸಲ್ಲಿಸೋಣ. ಅದರಿಂದ ನಮಗೇನು ನಷ್ಟ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಐವನ್ ಡಿ'ಸೋಜಾ:–** ಆಯಿತು, ಸಭಾನಾಯಕರೆ. ಮಾನ್ಯ ಸಭಾಪತಿಯವರು ನನಗೆ 5 ನಿಮಿಷ ಮಾತ್ರ ಸಮಯ ನೀಡಿರುವುದು. ನಾನು ಹೇಳಿದ ಉದ್ದೇಶ ಮಾನ್ಯ ಮುಖ್ಯಮಂತ್ರಿಗಳು ಮದುವೆಗೆ ಹೋಗಬಾರದಿತ್ತು ಎಂಬುದಲ್ಲ! I am very happy, ಅವರು ಹೋಗಿ represent ಮಾಡಿದ್ದು, ನನಗೆ ಬಹಳ ಸಂತೋಷವಾಗಿತ್ತು. ಆದರೆ, ಇವತ್ತು ಪತ್ರಿಕೆಯಲ್ಲಿ ತಮ್ಮದೇ ಆದೇಶವನ್ನು ಉಲ್ಲಂಘಿಸಿದ್ದಾರೆ ಎಂದು ವರದಿಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಮ್ಮೆಲ್ಲರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಮ್ಮನ್ನೆ ಮನೆಯಲ್ಲಿ ಕೂರುವಂತೆ ಏಕೆ ಮಾಡಿಸಿದ್ದಾರೆ ಎಂದು ಕೇಳಿದು. ಎರಡನೆಯದಾಗಿ, ಹೀಗೆ ಸಮಾರಂಭ ನಡೆಸಿ ಎಂದು ಅನೇಕ ಆದೇಶವನ್ನು follow ಮಾಡಿ ಎಂದು ಹೊರಡಿಸಲಾಗಿದೆ. ನಾವೇ ಆ ಆದೇಶದಂತೆ ನಡೆದುಕೊಳ್ಳುತ್ತಿಲ್ಲ. ಇವತ್ತು ಸದನದಲ್ಲಿ ಅಧಿವೇಶನ ನಡೆಯುತ್ತಿದ್ದೆ. ಸದನದೊಳಗೆ 150 ಕ್ಕಿಂತಲೂ ಹೆಚ್ಚು ಜನರಿದ್ದೇವೆ. 100 ಜನರಿಗಿಂತ ಹೆಚ್ಚಾಗಿ ಎ.ಸಿ. ಕೊಠಡಿಯಲ್ಲಿ ಸೇರಿ ಸಭೆ ನಡೆಸಬೇಡಿ ಎಂದು ಹೇಳುತ್ತಾರೆ. ಆಡಳಿತ ಪಕ್ಷದವರು, ವಿರೋಧ ಪಕ್ಷದವರು ಜಿಲ್ಲಾಧಿಕಾರಿಯವರ ಕಛೇರಿಯ ಸಭೆಗೆ ಹೋದಾಗ ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ Air Conditioner on ಮಾಡಿರಲಿಲ್ಲ. ನನ್ನ ಹತ್ತಿರ ಕುಳಿತ್ತಿದ್ದವರನ್ನು ಏತಕ್ಕೆ Air Conditioner on ಮಾಡಿಲ್ಲವೆಂದು ಕೇಳಿದ್ದೆ. ಅದಕ್ಕೆ ಅವರು ಕಾನೂನಿಗೆ ವಿರುದ್ಧವಲ್ಲವೇ ಎಂದು ಹೇಳಿದ್ದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕಾನೂನಿಗೆ ವಿರುದ್ಧವೆಂದು ಅಲ್ಲ. ಮಾನ್ಯ ಮುಖ್ಯಮಂತ್ರಿಗಳು ಆದೇಶ ಹೊರಡಿಸಿದ್ದಾರೆ. ಕೊರೊನಾ ಎಂಬ ರೋಗವು ತಕ್ಷಣ ಬಂದಿರುವುದರಿಂದ 100 ಜನರಿಗೂ ಹೆಚ್ಚು ಜನರು ಸೇರದೆ ಇರುವಂತೆ ವ್ಯವಸ್ಥೆ ಮಾಡಿ, ಒಟ್ಟಿಗೆ ಇಲ್ಲದ ಹಾಗೆ ವ್ಯವಸ್ಥೆ ಮಾಡಿ, ಶಾಲಾ–ಕಾಲೇಜುಗಳಿಗೆ ರಜೆ ಘೋಷಣೆ ಮಾಡಿ ಎನ್ನುವುದು ಮುನ್ಸೂಚನೆ ಮತ್ತು ಮುಂಜಾಗ್ರತಾ ಕ್ರಮವಾಗಿದೆ. 101 ಬಂದರೆ ಹೇಗೇ, 100 ಬಂದರೆ ಹೇಗೆ, 98 ಜನರು ಬಂದರೆ ಹೇಗೆ ಎಂದು ಹೇಳಬಾರದು. ದಯವಿಟ್ಟು ನಾನು ವಿನಂತಿಸುವುದೇನೆಂದರೆ, ಮಾನ್ಯ ಸದಸ್ಯರು ಕಾಂಗ್ರೆಸ್ ಪಕ್ಷದಲ್ಲಿದ್ದಾಗ ಈ ಹಿಂದೆ ಸರ್ಕಾರದ ಮುಖ್ಯ ಸಚೇತಕರಾಗಿದ್ದವರು. ಸರ್ಕಾರಕ್ಕೆ ಸಲಹೆ ನೀಡಿ, ತಪ್ಪಿದ್ದರೆ ಸರಿಪಡಿಸಿ. ಕೊರೋನಾ ರೋಗದ ವಿಚಾರದಲ್ಲಿಯು ಸರ್ಕಾರವನ್ನು ದೋಷಾರೋಪ ಮಾಡಿದರೆ ಹೇಗೆ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನನ್ನ ವಿನಂತಿಯೇನೆಂದರೆ, ಸರ್ಕಾರದಿಂದ ಏನಾದರೂ ಒಂದು ಆದೇಶವನ್ನು ಹೊರಡಿಸಿದ ಮೇಲೆ ನಾವು ಅದನ್ನು ಅನುಸರಿಸಬೇಕಲ್ಲವೇ? ಬೇರೆಯವರಿಗೆ ಹೇಳಿ ನಾವು ಅನುಸರಿಸದಿದ್ದರೆ ನಮಗೇನು ಗೌರವ ಸಿಗುತ್ತದೆ?

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅದು ಅವರ ದೃಷ್ಟಿಕೋನ ಇರಬಹುದು.

**ಸಭಾಪತಿಯವರು:–** ಅವರು ಮಾತನಾಡುವುದಕ್ಕೆ ಅವಕಾಶ ಸಿಕ್ಕಿದ ಮೇಲೆ ಮಾತನಾಡುವುದನ್ನು ಬಿಡಿ ಎಂದು ಹೇಳಿದರೆ ಬಿಡುತ್ತಾರೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಗಲ್ಲ. ಎಲ್ಲಿಯಾದರೂ ಸದನವನ್ನು ಮುಂದೂಡುತ್ತಾ ಹೋದರೆ, ಸದನದಲ್ಲಿ 100 ಜನರಿಗಿಂತ ಜಾಸ್ತಿ ಜನ ಸೇರುತ್ತೇವೆ ಎಂದು ,ಸದನವನ್ನು ಮುಂದೂಡುವುದಕ್ಕೆ ಸಾಧ್ಯವೇ? ಒಂದು ವೇಳೆ ಕೊರೋನಾ ರೋಗದಿಂದ ಸದನವನ್ನು ಮುಂದೂಡಿದರೆ ಜನರಿಗೆ ಎಂತಹ ಸಂದೇಶ ತಲುಪಬಹುದು. ಇವೆಲ್ಲಾವನ್ನು ಯೋಚನೆ ಮಾಡಬೇಕಾದ ಸ್ಥಿತಿ ಇದೆ. ಮಾನ್ಯ ಸದಸ್ಯರು ತುಂಬಾ ಬುದ್ಧಿವಂತರು ಸರ್ಕಾರಕ್ಕೆ ಸಲಹೆಯನ್ನು ನೀಡಲಿ. ಇದು ಪ್ರತಿಷ್ಠೆ ಪ್ರಶ್ನೆ ಅಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಯಾವುದಾದರೂ ವಿಚಾರವನ್ನು ಸಾರ್ವಜನಿಕರಿಗೆ ಹೇಳುವಾಗ ನಮ್ಮನ್ನು ಯಾರೂ ಪ್ರಶ್ನೆ ಮಾಡುವವರು ಇಲ್ಲವೇ? ಅದು ಬೇರೆಯವರಿಗೆ ಹೇಳಿದ್ದು, ಅವರಿಗೆ ಲಗಾಮು ಇಲ್ಲ. ಹಾಗಾಗಿ ಸರ್ಕಾರ ಈ ವಿಚಾರದಲ್ಲಿ ಸ್ವಲ್ಪ clarification ನೀಡಬೇಕು. ಮಾತನಾಡುವುದೇ ಒಂದು ನಡೆದುಕೊಳ್ಳುವುದೇ ಒಂದು ಎನ್ನುವಂತೆ ಮಾಡಿದರೆ ಸರಿ ಹೋಗುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದಂಥ ಮತ್ತು ಎಲ್ಲಾ ಕಡೆ ಆತಂಕ ಹುಟ್ಟಿಸಿರುವಂಥ ವಿಷಯದ ಬಗ್ಗೆ ಸದನದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಜನಪ್ರತಿನಿಧಿಗಳ ಸಭೆ ಮಾಡಬೇಕಾಗಿರುವಂಥ ಒಂದು ಮಹತ್ತರ ಸಭೆ ಮಾಡುತ್ತಿದ್ದೇವೆ. ಇದನ್ನು ಎಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕೋ ಅಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕೇ ಹೊರತು ಆತಂಕಪಡಬೇಕಾಗಿಲ್ಲ. ನಮ್ಮ ಮಾಧ್ಯಮದವರು ಜನಸಂಖ್ಯೆ ಕಡಿಮೆಯಾಗುತ್ತಿರುವುದನ್ನು ನೋಡಿರುವುದರಿಂದ ಸಾಕಷ್ಟು ಪ್ರಚಾರ ಮಾಡಿದ್ದೆ. ಸರ್ಕಾರದಿಂದ ಸಹ ಪ್ರಚಾರವಾಗುತ್ತಿದೆ. ಮೊಬೈಲ್‌ಗಳಲ್ಲಿ caller tune ಸಹ ಇಟ್ಟು ಕೊರೋನಾ ರೋಗದ ಬಗ್ಗೆ ಜನಜಾಗೃತಿ ಮೂಡಿಸುವಂಥ ಕೆಲಸವನ್ನು ಮಾಡಲಾಗುತ್ತಿದೆ. ಇಷ್ಟೆಲ್ಲಾ ಮಾಡಿದ ಮೇಲೆಯು ಎಲ್ಲೆಲ್ಲಿ ಕೊರತೆ ಇದೆ ಎನ್ನುವುದನ್ನು ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಇವೆಲ್ಲಾ ಕೊರತೆಗಳನ್ನು ಸರ್ಕಾರ ಸರಿಪಡಿಸಬೇಕು. ಸರ್ಕಾರ ಮಾಡುವಂಥ ಆದೇಶವನ್ನು ಕೆಲವೊಮ್ಮೆ ಅಧಿಕಾರಿಗಳು ಜಾರಿಗೆ ತರುವುದಿಲ್ಲ. ನಿನ್ನೆ ದಿವಸ ನನ್ನ ಮೊಬೈಲ್ Health Commissionerate ರವರು ಎಲ್ಲಾ ಕಡೆ ಸಾರ್ವಜನಿಕ ಸ್ಥಳಗಳಲ್ಲಿ thermal scanning ಮಾಡುತ್ತೇವೆ public places ಗಳಲ್ಲಿ ಎಂದು WhatsApp ಗೆ ಬಂದಂತಹ ಸಂದೇಶ ನೋಡಿದ್ದೆ. ಒಂದು ವೇಳೆ ಆ ಸುತ್ತೋಲೆ ನಿಜವಾಗಿದ್ದರೆ, ವಿಧಾನಸೌಧದಲ್ಲಿ public point ಗಳಲ್ಲಿ, ಶಾಸಕರ ಭವನ, ನ್ಯಾಯಾಲಯದಲ್ಲಿ ಮಾಡುತ್ತೇವೆ ಎನ್ನುವಂಥ ಒಂದು ಸುತ್ತೋಲೆ ನೋಡಿದ್ದೆ. Commissionerate ಸಹಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿ ಕಳುಹಿಸಿದ್ದಾರಲ್ಲ ಹಾಗಾದರೆ ಮಾಡುತ್ತಿದ್ದಾರೆಯೇ? ಶಾಸಕರ ಭವನದಲ್ಲಿ thermal scanning ಆಗುತ್ತಿದೆ. ವಿಧಾನಸೌಧದ ಗೇಟ್‌ನಲ್ಲಿ ಆಗುತ್ತಿದೆ, ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಎಲ್ಲಿ ಮಾಡುತ್ತಿದ್ದಾರೆ? ಎಲ್ಲಿಯು ಸಹ ಮಾಡದೇ ಈ ರೀತಿ ಸುತ್ತೋಲೆ ಹೊರಡಿಸಿ ಆಯುಕ್ತರು ಕುಳಿತುಕೊಂಡು ಬಿಟ್ಟರೆ ಅವರ ಜವಾಬ್ದಾರಿ ಮುಗಿದು ಹೋಗುತ್ತದೆಯೇ?

(ಮುಂದು)

(446)/16.03.2020/5.30/ಎಸ್‌ಕೆ-ವಿಕೆ
**ಶ್ರೀ ಆಯನೂರು ಮಂಜುನಾಥ್(ಮುಂದು)**

ಸುತ್ತೋಲೆಗಳ ಮೂಲಕ ಆಡಳಿತವನ್ನು ನಡೆಸಬಹುದು. ಆದರೆ ಇಂತಹ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗುವುದಿಲ್ಲ. Commissionerate ಇನ್ನು ಏತಕ್ಕೆ active ಆಗಲಿಲ್ಲ? ಈ ಸುತ್ತೋಲೆಯನ್ನು ಹೊರಡಿಸುವಾಗ, ಅಧಿಕಾರಿಗಳು ತಯಾರಿ ಮಾಡಿಕೊಳ್ಳದೇ ಏನು ಹುಡುಗಾಟ ಮಾಡುತ್ತಾರಾ? ಅಧಿಕಾರಿಗಳು ಮಂತ್ರಿಗಳ control ನಲ್ಲಿ ಇಲ್ಲವೇಎಂದು ನಾವು ಮಂತ್ರಿಗಳಿಗೆ ಕೇಳಬೇಕಾಗುತ್ತದೆ. ಖುಷಿ ಬಂದ ಹಾಗೇ action ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿ ದಾರಿ ತಪ್ಪಿಸುತ್ತಿದ್ದಾರಾ. ಅವರು action ಏಕೆ ತೆಗೆದುಕೊಂಡಿಲ್ಲ? ಸದನ ನಡೆಯುತ್ತಿರುವುದರಿಂದ ಇಷ್ಟರಮಟ್ಟಿಗೆ ಸಾಧ್ಯವಿದೆ. ಸದನ ಯಾವುದಾದರೂ ಕಾರಣಕ್ಕೆ ಮುಂದೂಡಿದರೆ, ಬಹುಶಃ ಅಧಿಕಾರಿಗಳಿಂದ ಮಂತ್ರಿಗಳಿಗೆ ಮಾಹಿತಿ ಸಿಗುವುದಷ್ಟು ಬಿಟ್ಟರೆ, ಬೇರೆ ಯಾರಿಗೂ ಮಾಹಿತಿ ಸಿಗುವುದಿಲ್ಲ. ಸದನ ನಡೆಯುತ್ತಿದೆ ಚರ್ಚೆಯಾಗುತ್ತದೆ ಎನ್ನುವ ಕಾರಣಕ್ಕೆ ಆ ಭಯಕ್ಕಾದರೂ ಕೂಡ ಪರಿಣಾಮಕಾರಿಯಾದ ಕೆಲಸಗಳಾಗುತ್ತವೆ.

**ಶ್ರೀ ಕೆ. ಗೋವಿಂದರಾಜು (ವಿಧಾನಸಭಾ ಕ್ಷೇತ್ರ):–** ಸದನ extend ಆಗಲಿ ಎಂದು ಹೇಳಿ.

**ಸಭಾಪತಿಯವರು:–** ಮಾನ್ಯ ಸದಸ್ಯರನ್ನು ಮಾತನಾಡುವುದಕ್ಕೆ ಬಿಡಿ.

**ಶ್ರೀ ಆಯನೂರು ಮಂಜುನಾಥ:–** ಸದನ scheduled ಪ್ರಕಾರ ನಡೆಯಲಿ. ಈಗಾಗಲೇ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದರ ಬಗ್ಗೆ ಮಧ್ಯೆದಲ್ಲಿ ಪ್ರಸ್ತಾಪವನ್ನು ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಲ್ಲವೆ. ನಿನ್ನೆ ಚಿತ್ರದುರ್ಗದ ಮಾರ್ಗವಾಗಿ ಬರುತ್ತಿರುವಾಗ ಅಲ್ಲಿ ದೊಡ್ಡ ಪ್ರಮಾಣದಲ್ಲಿ ಜಾತ್ರೆ ನಡೆಯುತ್ತಿತ್ತು. ಎಲ್ಲಾ ಊರುಗಳಲ್ಲಿ ಮದುವೆಗಳು ನಡೆಯುತ್ತವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೇ, That is the matter to be discussed.

**ಸಭಾಪತಿಯವರು:–** ಮಾನ್ಯ ಸದಸ್ಯರೇ ದಯವಿಟ್ಟು ಮಾತನಾಡಬೇಡಿ.

**ಶ್ರೀ ಐವನ್ ಡಿ'ಸೋಜಾ:–**ತಾವು ಮಾತನಾಡಬೇಡಿ ಎಂದರೆ, ...

**ಸಭಾಪತಿಯವರು:–** ಮಾನ್ಯ ಸದಸ್ಯರೇ ತಮಗೆ ಎಷ್ಟು ಬಾರಿ ಹೇಳಲಿ, ಹೇಳಿ. ಈಗಾಗಲೇ ಈ ವಿಚಾರವನ್ನು ಒಂದು ಬಾರಿ ಹೇಳಿದ್ದೀರಿ. ಅದಕ್ಕೆ ಸರ್ಕಾರದವರು ಉತ್ತರ ಕೊಡುತ್ತಾರೆ. ತಾವು ಮತ್ತೆ ಈಗ ಪುನಃ ಹೇಳಿದಿರಿ.

**ಶ್ರೀ ಆಯನೂರು ಮಂಜುನಾಥ:–** ಮಾನ್ಯ ಐವನ್ ಡಿ'ಸೋಜಾರವರೇ ನಾನು ತಮಗೆ ಉತ್ತರವನ್ನು ಕೊಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇಲೆ, ಆ ಬಗ್ಗೆ ಕ್ರಮ ಜರುಗಿಸಬೇಕಾದಂತಹ ಹೊಣೆಗಾರಿಕೆ ಯಾರದು ಎಂಬ ಅಂಶವನ್ನಿಟ್ಟುಕೊಂಡು ನಾನು ಮಾತನಾಡುತ್ತಿದ್ದೇನೆ. Highest Office of the state, ಅವರು ಹೇಳಿದ್ದಾರೆ. ಆದರೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಯಾರ ಮದುವೆಗಳು ನಡೆದರೆ ಏನಂತೆ? ಜಾತ್ರೆಗಳು ನಡೆಯುತ್ತಿವೆ. ನಮ್ಮ ಊರುಗಳಲ್ಲಿ ಮದುವೆಗಳು ನಡೆಯುತ್ತಿವೆ. ಅದನ್ನು ನಿಯಂತ್ರಿಸುವುದಕ್ಕೆ ಅಲ್ಲಿರುವ ಜಿಲ್ಲಾಧಿಕಾರಿಗಳು, ಎಸ್.ಪಿ, ತಹಶೀಲ್ದಾರ್ ಏನು ಮಾಡುತ್ತಿದ್ದಾರೆ? ಜಾತ್ರೆ ಹಬ್ಬ–ಹರಿದಿನಗಳು ಜೋರಾಗಿ ನಡೆಯುತ್ತಿವೆ. ಇದರ ಬಗ್ಗೆ ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ? ಅಧಿಕಾರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ನೋಡಬೇಕಾ? Video Conference ಮಾಡಿ check ಮಾಡಬೇಕಾ? ಇಷ್ಟೊಂದು sensitive issue ಬಗ್ಗೆ insensitive ಆಗಿರತಕ್ಕಂಥ ನಮ್ಮ ಅಧಿಕಾರ ವರ್ಗದವರು Insensitiveness ನಿಲ್ಲಬೇಕು. ಒಮ್ಮೆ ಇದು ಕೈತಪ್ಪಿ ಹೋದರೆ, ಹಿಡಿತಕ್ಕೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಸ್ವಚ್ಛ ಭಾರತ ಮಿಷನ್ ಬಗ್ಗೆ ಟೀಕೆಯಾಗಿದ್ದಾವೋ ಅಥವಾ ಇಲ್ಲವೋ ಎಂಬುದು ಬೇರೆ ವಿಚಾರ. ಈಗ ಸ್ವಚ್ಛತೆ ಅನಿವಾರ್ಯತೆ ಇದೆ ಎಂಬುದನ್ನು ನಾವು ಮನಗಾಣಬೇಕು. ಮುನ್ನೂರು ಜನ ಶಾಸಕರಿದ್ದೇವೆ. ಬರೀ ಕೇವಲ ಪ್ರಶ್ನೆ ಮಾಡುವುದಕ್ಕಲ್ಲ. ನಮಗೆ ಹೊಣೆಗಾರಿಕೆ ಇದೆ. ಜನರನ್ನು ಪ್ರೀತಿಸುವುದು ಸತ್ಯವಾದರೆ, ನಮ್ಮ ನಮ್ಮ ಕ್ಷೇತ್ರಗಳಲ್ಲಿ ಇದೆಲ್ಲಾ ಆಗುತ್ತಿದೆಯೇ ಎಂದು ಯಾವ ಶಾಸಕರು ಹೋಗಿ ನೋಡುತ್ತೇವೆ ಎನ್ನುವ ಜವಾಬ್ದಾರಿಯನ್ನು ನಾವು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು. ಮುನ್ನೂರು ವಿಧಾನ ಸಭಾ ಕ್ಷೇತ್ರ; ಅಡುಗೆ ಮಾಡಿದಾಗ, ಚೆನ್ನಾಗಿಲ್ಲ ಎಂದು ರುಚಿ ಹೇಳುವುದೇ ಬೇರೆ. ಅಡುಗೆಯನ್ನು ನಾವೇ ಮಾಡಲು ಹೊರಟಾಗ ಅಡುಗೆ ಮಾಡಲು ಬರುತ್ತಿಲ್ಲ ಎಂದು ನೋಡುವುದು ಬೇರೆ. ಈ ದೇಶದಲ್ಲಿ ರೈಲ್ವೆ ನಿಲ್ದಾಣಗಳಲ್ಲಿ ನಿಂತುಕೊಂಡಾಗ, ಅಲ್ಲಿ ವಾಸನೆ ಕುಡಿಯವುದಕ್ಕಾಗುತ್ತಿರಲಿಲ್ಲ. ಹೊಟ್ಟೆ ತೊಳೆಸುತ್ತಿತ್ತು. ಆದರೆ ಈಗ ಆ ರೀತಿ ಇಲ್ಲ. ಬಹುಶಃ ಕರೊನಾ ವೈರಸ್ ಎಲ್ಲಿ ಬೇಕಾದರೂ, ಅಲ್ಲಿ ಬಂದು ಬಿಡುತ್ತಿತ್ತೇನೋ? ನಮ್ಮ ನಮ್ಮ ಕ್ಷೇತ್ರಗಳಲ್ಲಿ ಸ್ವಚ್ಛ ಭಾರತ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅಭಿಯಾನವನ್ನು ಪಾಲಿಸಬೇಕಾದ ಅನಿವಾರ್ಯತೆ ಮತ್ತು ಹೊಣೆಗಾರಿಕೆ ಇದೆ. ಅದನ್ನು ಮಾಡಲೇಬೇಕು. ಕೊನೆಯದಾಗಿ ನಾನು ಭಾಷಣವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಕೆ.ಟಿ. ಶ್ರೀಕಂಠೇಗೌಡರು ವಿಶೇಷವಾಗಿ ಎಲ್ಲೆಲ್ಲಿ ಏನೇನು ನ್ಯೂನತೆಗಳಿವೆ ಎಂಬ ಬಗ್ಗೆ ಹೇಳಿದ್ದಾರೆ, ನಮ್ಮ ಸರ್ಕಾರ ಎಷ್ಟೊಂದು active ಆಗಿದೆ ನೋಡಿ. ನಿರಾಶೆ ಪಡಬೇಕಾಗಿಲ್ಲ. ಮಾನ್ಯ ಕೆ.ಟಿ. ಶ್ರೀಕಂಠೇಗೌಡರೇ ಅಸೆಂಬ್ಲಿಯಲ್ಲಿ ಮಾತ್ರ sanitizer ಬೇಕಾ, ನಮಗೆ ಬೇಡವೇ ಎಂಬ ಪ್ರಶ್ನೆಯನ್ನು ಎತ್ತಿಬಿಟ್ಟಿರಿ. ಕಾಫಿ ಕುಡಿಯಲು ಹೋಗಬೇಕಾದರೆ, ನಮ್ಮ ಕೈಗೆಲ್ಲಾ sanitizer ಹಚ್ಚಿ ಬಿಟ್ಟರು. ಹಾಗಾದರೆ ಇಲ್ಲಿಯ ತನಕ ಪ್ರಜ್ಞೆ ಇರಲಿಲ್ಲವೋ? ಅದಕ್ಕಾಗಿ ಒಬ್ಬ ಶಾಸಕ ಎದ್ದು ನಿಂತುಕೊಂಡು ಹೇಳಬೇಕೇ? ವಿಧಾನ ಸಭೆಯಲ್ಲಿರುವ ಶಾಸಕರು ಮಾತ್ರ ಮನುಷ್ಯರು. ವಿಧಾನ ಪರಿಷತ್ತಿನ ಶಾಸಕರು ಮನುಷ್ಯರಲ್ಲ ಎಂಬ ಭಾವನೆ ಅಧಿಕಾರಿಗಳಿಗೆ ಇತ್ತೇ? ಅಥವಾ ಹೀಗಿದ್ದರೂ ಇರಬಹುದು; ವಿಧಾನ ಸಭೆಯವರು ಎಲ್ಲೆಲ್ಲೋ ಹೋಗಿ ಕಾಯಿಲೆ ಅಂಟಿಸಿಕೊಂಡು ಬಂದಿರುತ್ತಾರೆ, ವಿಧಾನ ಪರಿಷತ್ತಿನವರು ಹಾಗಲ್ಲ ಎಂದು ನಮ್ಮ ಬಗ್ಗೆ ಗೌರವನಾ!

ನಾವೆಲ್ಲರೂ ಪಾಸಿಟಿವ್ ಆಗಿ ತಿಳಿದುಕೊಳ್ಳೋಣ. ವಿಧಾನ ಪರಿಷತ್ತಿನಲ್ಲಿರುವವರು ನಾವು ಸ್ವಚ್ಛರು ಎಂದಷ್ಟೇ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಹಾಗಾಗಿ ಇದು ತಕ್ಷಣಕ್ಕೆ ಬಂದಿದೆ. ಆದರೆ Commissionerate ಹೇಳಿದ ಕೆಲಸವನ್ನು ಮಾಡಬೇಕು. ಕೊನೆಯದಾಗಿ ಕರೋನಾ ವೈರಸ್ ಬಗ್ಗೆ ವ್ಯಕ್ತಿಗತವಾಗಿ ನನಗೆ ಅನಿಸುವುದೇನೆಂದರೆ, ಪ್ರಪಂಚದಲ್ಲಿರುವ ಎಷ್ಟು ದೇಶಗಳಿಗೆ ಹರಡಿವೆ ಎಂಬುದನ್ನು ನೋಡುತ್ತಿದ್ದೇವೆ. ಇಷ್ಟಾದ ಮೇಲೆ without defect ಒಂದೇ ಒಂದು ವಾಕ್ಯದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ದೇಶದ ಜನಸಂಖ್ಯೆ ಸುಮಾರು 130 ಕೋಟಿ. ಅದರೆ report ಆಗಿದ್ದು, within hundreds. ಬೇರೆ ದೇಶದ ಜನಸಂಖ್ಯೆಗೆ ನಮ್ಮ ಜನಸಂಖ್ಯೆಯನ್ನು ಹೋಲಿಸಿದಾಗ it is not even 1 percent. ಇದು ನಿಯಂತ್ರಣದಲ್ಲಿದೆ. ಸರ್ಕಾರದಲ್ಲಿರುವ ಅಧಿಕಾರಿಗಳು ಯಾವ ಹಂತದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ ಎನ್ನುವಂತಹ ಅಂಶವನ್ನು ಸರ್ಕಾರ ಮತ್ತು ನಾವೆಲ್ಲರೂ ಗುರುತಿಸಬೇಕು. ಅನಗತ್ಯವಾಗಿ ಆತಂಕಕ್ಕೆ ಒಳಗಾಗಬಾರದು. ಆರು ಕೋಟಿ ಜನಸಂಖ್ಯೆಯಿರುವ ಈ ರಾಜ್ಯದಲ್ಲಿ ಎಷ್ಟು ಜನರಿಗೆ ಈ ಸೋಂಕು ತಗುಲಿದೆ ಎನ್ನುವಂತಹ ಅಂಶವನ್ನು ನಾವು ಮನಗಾಣಬೇಕೆಂದು ವಿನಂತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ತಿಪ್ಪೇಸ್ವಾಮಿಯವರೇ, ಈಗ ತಾವು ಮಾತನಾಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವ ಆರೋಗ್ಯ ಸಂಸ್ಥೆ Corona Virus (Covid-19) ನ್ನು endemic disease ಎಂದು ಘೋಷಣೆ ಮಾಡಿದೆ. ಅಂದರೆ ವಿಶ್ವದ ಸುಮಾರು 123 ರಾಷ್ಟ್ರಗಳಲ್ಲಿ ಈಗಾಗಲೇ ಈ ಸೋಂಕು ಹಬ್ಬಿದೆ. ಭಾರತ ದೇಶ ಕೂಡ WHO (World Health Organization) notification ಅನ್ವಯ ಈ ರೋಗವನ್ನು endemic disease ಎಂದು ಘೋಷಿಸಿದೆ ಮತ್ತು ಈ ರೋಗ ತಡೆಗಟ್ಟಲು ಮತ್ತು ಬಾಧಿತರಾಗಿರುವ ರೋಗಿಗಳನ್ನು ಉಪಚರಿಸಲು ತಗಲುವ ಖರ್ಚು–ವೆಚ್ಚವನ್ನು State Disaster Relief Fund ನಿಂದ ವಿನಿಯೋಗಿಸಲು ಆದೇಶಿಸಿದೆ. ಅಂದರೆ, ಇದಕ್ಕೆ ಕೇಂದ್ರ ಸರ್ಕಾರ ಕೊಡುವುದಿಲ್ಲ. Untied funds ಏನಿದೆ ಅದರಿಂದ ರಾಜ್ಯ ಸರ್ಕಾರವೇ ಖರ್ಚು ಮಾಡಿಕೊಳ್ಳಿ ಎಂಬುದು ಇದೆ. ಕೇಂದ್ರ ಸರ್ಕಾರದಿಂದ ಈ ನಿಯಂತ್ರಣಕ್ಕೋಸ್ಕರವಾಗಿ ಯಾವುದೇ ಹಣಕಾಸು ಬರುವುದಿಲ್ಲ.

ಮಾನ್ಯ ಸಭಾಪತಿಯವರೇ, ಕೇಂದ್ರದಿಂದ ಸುಮಾರು 52 ಪ್ರಮುಖ ಆಸ್ಪತ್ರೆಗಳಲ್ಲಿ ಶಂಕಿತ ವ್ಯಕ್ತಿಗಳನ್ನು ಗುರುತಿಸಲಾಗಿದೆ. ಅದರಲ್ಲಿ ನಮ್ಮ ರಾಜ್ಯದ 5 ಮೆಡಿಕಲ್ ಕಾಲೇಜುಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ ಬೆಂಗಳೂರು ಮೆಡಿಕಲ್ ಕಾಲೇಜು, ಮೈಸೂರು ಮೆಡಿಕಲ್ ಕಾಲೇಜು, ಹಾಸನ ಮೆಡಿಕಲ್ ಕಾಲೇಜು, National Institute of *Virology,*ಶಿವಮೊಗ್ಗ ಮೆಡಿಕಲ್ ಕಾಲೇಜುಗಳಾಗಿವೆ. ಆದರೆ ಮಂಗಳೂರು, ಕಲ್ಬುರ್ಗಿ, ಹುಬ್ಬಳ್ಳಿ–ಧಾರವಾಡ ಮತ್ತು ಬಳ್ಳಾರಿ, ಬೆಳಗಾವಿ ಜಿಲ್ಲೆಗಳಲ್ಲಿ ಯಾವುದೇ ಸೆಂಟರ್‌ನ್ನು ಗುರುತಿಸಿಲ್ಲ. ಏಕೆಂದರೆ, ನಮಗೆ ಗೊತ್ತಿರಬಹುದು. ವಿಜಯಪುರ, ಬೆಳಗಾವಿ, ಕಲ್ಬುರ್ಗಿ, ಬೀದರ್, ಬಳ್ಳಾರಿ, ಬಾಗಲಕೋಟೆ, ಹುಬ್ಬಳ್ಳಿ–ಧಾರವಾಡ, ರಾಯಚೂರು ಜಿಲ್ಲೆಗಳಿಂದ ಪುಣೆ ಮತ್ತು ಹೈದರಾಬಾದ್, ಮುಂಬೈಗೆ ವ್ಯಾಪಾರದ ಸಲುವಾಗಿ ಪ್ರತಿನಿತ್ಯ ಸುಮಾರು ಜನರು ಹೋಗುತ್ತಾರೆ. ಅಲ್ಲಿರುವ ಜನಗಳ ಹತ್ತಿರ ಬೆರೆಯುತ್ತಾರೆ. ಈ ವೈರಸ್‌ನ್ನು ಯಾರು ತೆಗೆದುಕೊಂಡು ಬರುತ್ತಾರೆಂಬುದು ಗೊತ್ತಿಲ್ಲ. ಅದಕ್ಕೋಸ್ಕರವಾಗಿ, ಪ್ರಸ್ತುತ ಕರ್ನಾಟಕ ಮೆಡಿಕಲ್ ಕಾಲೇಜುಗಳಾದ ಬೆಳಗಾವಿ, ಕಲ್ಬುರ್ಗಿ, ಬಳ್ಳಾರಿ ಜಿಲ್ಲೆಗಳಲ್ಲಿರುವಂತಹ ಕಾಲೇಜುಗಳನ್ನು ಗುರುತಿಸಬೇಕು. ಇನ್ನು ಹೆಚ್ಚಿನದಾಗಿ ಹೆಸರಾಂತ ಖಾಸಗಿ ಮೆಡಿಕಲ್ ಕಾಲೇಜುಗಳು ಏನಿವೆ, ಅವುಗಳನ್ನು ಗುರುತಿಸಿ, ಅಲ್ಲಿಯೂ ಕೂಡ ತಪಾಸಣೆ ಕೇಂದ್ರಗಳ ತೆರೆಯಬೇಕೆಂದು ನಾನು ಸಲಹೆ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಕೊರೊನಾ ವೈರಸ್ *Acute Respiratory Diseases,* ಬಹುಶಃ ಯಾರಾದರೂ ಅದರಿಂದ ಬಾಧಿತರಾದರೆ, ಸುಮಾರು 10 ರಿಂದ 15 ದಿವಸಗಳ ನಂತರ ಕೆಮ್ಮು, ಕೆಮ್ಮಿನಿಂದ ಹೊರ ಬರುವ ಕಫದಿಂದ ಬೆದರಿಕೆ ಆಗುತ್ತಿದೆ. ಆದ್ದರಿಂದ, ಸುಮಾರು 123 ಶಂಕಿತ ಹೊರ ದೇಶಗಳೇನಿವೆ, ಅಲ್ಲಿಂದ ಬರುವ ಯಾರೇ ಪ್ರಯಾಣಿಕರಾಗಲಿ, ಅವರನ್ನು ಒಂದು *screen* ಮಾಡಿ ಕನಿಷ್ಠ ಪಕ್ಷ ನಾಲ್ಕರಿಂದ ಎಂಟು ದಿನಗಳವರೆಗೆ ಕೂಡ ಅವರನ್ನು *quarantine* ಮಾಡಬೇಕೆಂದು ಸಲಹೆಯನ್ನು ಕೊಡುತ್ತೇನೆ. ಅಗತ್ಯವಿರುವಂತಹ ರಾಜ್ಯದಲ್ಲಿರುವ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಲ್ಲಾ ಆಸ್ಪತ್ರೆಗಳಲ್ಲಿ *Intensive Care Unit* ಅನ್ನು ಇಟ್ಟು ಮಾಡಬೇಕು. ಈಗಾಗಲೇ ನಾನು ತಿಳಿಸಿರುವಂತೆ ಇದು *Acute Respiratory Diseases* ಆಗಿರುವುದರಿಂದ ಅಲ್ಲಿ ಉಸಿರಾಟಕ್ಕೆ ಅಗತ್ಯವಿರುವಂತಹ ventilator ಸೌಲಭ್ಯವನ್ನು ಕೂಡ ಕೊಡಬೇಕು. ಏಕೆಂದರೆ, ventilator ಇಲ್ಲದೇ ಎಷ್ಟೋ ಜನರು ಈ ಉಸಿರಾಟದ ತೊಂದರೆಯಲ್ಲಿ ಸತ್ತು ಹೋಗಿಬಿಡುತ್ತಾರೆ. ಈಗ ಎಷ್ಟು ventilator ಗಳಿವೆ? ಎಷ್ಟು ವಾರ್ಡ್‌ಗಳಿವೆ? ಎಂಬುದರ ಬಗ್ಗೆ ಕೂಡ ಮಾಹಿತಿ ಕೊಡಬೇಕು. ಇದಲ್ಲದೇ, ವಿಧಾನಸೌಧ, ವಿಕಾಸ ಸೌಧ ಮತ್ತು ಬಹು ಮಹಡಿ ಕಟ್ಟಡಗಳಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಈಗಾಗಲೇ ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದ್ದಾರೆ. ಇಲ್ಲಿ ನಾಲ್ಕು ಗೇಟ್‌ಗಳಲ್ಲಿ ಕೂಡ ಪ್ರತಿನಿತ್ಯ Thermal Screening ಮೂಲಕ temperature ನೋಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಎಲ್ಲಾ ಪ್ರವೇಶ ದ್ವಾರಗಳಲ್ಲಿ sanitizer ಅನ್ನು ಇಡಬೇಕು. ಯಾರೇ ಒಳಗಡೆ ಬರಬೇಕಾದರೂ ಕೂಡ sanitizer ನಿಂದ hands wash ಮಾಡಿಕೊಂಡು ಒಳಗಡೆ ಬರಬೇಕು. ಇನ್ನು ವಿಧಾನಮಂಡಲದ ಉಭಯ ಸದನಗಳಲ್ಲಿ ಒಳಗಡೆ ಮತ್ತು ಹೊರಗಡೆ ಆವರಣಗಳಿಗೆ fumigation ಕೂಡ ಮಾಡಬೇಕು. ಏಕೆಂದರೆ, fumigation ಮಾಡದಿದ್ದರೆ ಈ ಸಮಸ್ಯೆ ಹೆಚ್ಚಾಗುತ್ತದೆ. ಅದಲ್ಲದೇ ಸದನದೊಳಗೆ ಇರುವಂತಹ Red Carpet ನ್ನು ಸಹ fumigation ಪ್ರಕ್ರಿಯೆಗೆ ಒಳಪಡಿಸಬೇಕು. Hecker wooden things,Air Condition Duct ಗಳು ಏನಿವೆ, ಅವುಗಳನ್ನು ಕೂಡ ಕಾಲಾನುಕಾಲಕ್ಕೆ ಶುಚಿಗೊಳಿಸಬೇಕು. 80 ಪೈಸೆ ಇರುವಂತಹ ಮಾಸ್ಕ್ ಇವತ್ತು 80 ರೂಪಾಯಿಗೆ ಮಾರಾಟವಾಗುತ್ತಿದೆ. ಈಗ ಅದೂ ಕೂಡ ಸಿಗುತ್ತಿಲ್ಲವಾದ್ದರಿಂದ ಸರ್ಕಾರ ಇದನ್ನು ಉಚಿತವಾಗಿ ಕೊಡಬೇಕು.

(ಮುಂದು...)

(447) 16-03-2020(5-40)ಟಿಸಿಹೆಚ್(ಎಂವಿ)-ಬಿಎನ್‌ಎಸ್
**ಶ್ರೀ ಕೆ.ಎ.ತಿಪ್ಪೇಸ್ವಾಮಿ(ಮುಂದು...)**

ಮತ್ತೆ ಈ ಮಾಲ್‌ಗಳಲ್ಲಿ ಇರತಕ್ಕಂಥ ಹೈಪರ್ ಮಾರ್ಕೆಟ್ ಏನಿದೆ ಅಲ್ಲಿ ತಾಜಾ ತರಕಾರಿಗಳನ್ನು ಮಾರಾಟ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ತಮಗೆ ಧನ್ಯವಾದಗಳು.

**ಶ್ರೀ ಆರ್.ಬಿ.ತಿಮ್ಮಾಪುರ(ವಿಧಾನಸಭೆಯಿಂದ ಚುನಾಯಿತರಾದವರು):**–ಮಾನ್ಯ ಸಭಾಪತಿಯವರೇ, ಈಗ ವಿಶ್ವವನ್ನು ಕಾಡುತ್ತಿರುವಂತಹ ಕೋವಿಡ್–19.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:**–ಮಾನ್ಯ ಸಭಾಪತಿಯವರೇ, ಸುಮಾರು ನಾಲ್ಕು ಗಂಟೆಗಳಿಂದ ಇದನ್ನೇ ಮಾತನಾಡುತ್ತಿದ್ದಾರೆ, ಅದು ಎಲ್ಲಾ ಗೊತ್ತಿದೆ. ಉತ್ತರ ಕೇಳಿಕೊಂಡು ಅದನ್ನು clarify ಮಾಡಲಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–**ಇಲ್ಲಿ ಸಹಿ ಮಾಡಿರುವವರನ್ನು ಬಿಟ್ಟು ಮುಕ್ತಾಯ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪುರ:–**ಮಾನ್ಯ ಸಭಾಪತಿಯವರೇ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಲವಾರು ವಿದ್ಯಾರ್ಥಿಗಳು ಬೇರೆ ದೇಶಗಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಹೋಗಿದ್ದಾರೆ. ಈಗ ಆ ವಿದ್ಯಾರ್ಥಿಗಳ ಪರಿಸ್ಥಿತಿ ಏನಾಗಿದೆ, ಅವರ ವಿಚಾರವಾಗಿ ಸರ್ಕಾರ ಏನೇನು ಕ್ರಮವನ್ನು ತೆಗೆದುಕೊಂಡಿದೆ ಎಂದು ಅವರ ಪಾಲಕರಿಗೆ ತಿಳಿಸಬೇಕು. ಬಹುಶಃ ಅವರ ಎಲ್ಲಾ ಪಾಲಕರು ಆತಂಕದಲ್ಲಿದ್ದಾರೆ. ಅಲ್ಲಿರುವ ಮಕ್ಕಳಿಗೆ ಸ್ವಲ್ಪ ನೆಗಡಿ ಮತ್ತು ಕೆಮ್ಮು ಬಂದರು ಸಹ ಆತಂಕವಿದೆ. ಅಲ್ಲಿ ಏನು ಕಾಂಪ್ಲೆಕ್ಸ್‌ನಲ್ಲಿ ಇರುತ್ತಾರೆ, ಅಲ್ಲಿಗೇನಾದರೂ ಡಾಕ್ಟರ್ ಹೋಗಿ ಅವರನ್ನು ತಪಾಸಣೆ ಮಾಡಿ ಅವರನ್ನು ಹೊರಗೆ ಹಾಕಿಬಿಟ್ಟರೆ ಎನ್ನುವಂತಹ ಭಯದಿಂದ ಅದನ್ನು ತೋರಿಸುವುದಕ್ಕೂ ಆಗುತ್ತಿಲ್ಲ. ಅಲ್ಲಿನ ಡಾಕ್ಟರ್‌ಗಳಿಗೆ ಈ ಸರ್ಕಾರದಿಂದ ಏನಾದರು ವ್ಯವಸ್ಥೆಯನ್ನು ಮಾಡಿದ್ದಾರೆಯೇ? ದುಡಿಯುವುದಕ್ಕೆ ಹೋದಂತಹವರಿಗೆ ಮತ್ತು ಪ್ರವಾಸಕ್ಕೆ ಹೋದವರು ಎಷ್ಟು ಜನ ಇದ್ದಾರೆ ಎಂಬುದನ್ನು ತಾವು ಒಂದು ಕಡೆ ಯೋಚನೆ ಮಾಡಬೇಕು. ಇನ್ನು ಅಲ್ಲಿಂದ ಬಂದ ತಕ್ಷಣ ಅವರನ್ನು ದವಾಖಾನೆಗೆ ಕರೆದಕೊಂಡು ಹೋಗುವುದಕ್ಕೆ ಹೇಗೆ ಆಗುತ್ತದೆ? ಅದಕ್ಕೆ ಏನಾದರೂ ಒಂದು ಆಸ್ಪತ್ರೆ ನಿಗದಿಪಡಿಸಿ, ಒಂದು lodge ಅನ್ನು separate ಆಗಿ ತೆಗೆದುಕೊಂಡು, ಅವರನ್ನು ಒಂದು ವಾರ ಪ್ರತ್ಯೇಕವಾಗಿ ಇಟ್ಟು ನೋಡಿ. ಅದು ಬಿಟ್ಟು ಈ ರೋಗದ ಲಕ್ಷಣ ಕಂಡು ಬರದಿದ್ದರೂ ಸಹ ಅವರು ವಿದೇಶದಿಂದ ಬಂದಿದ್ದಾರೆಂದು ಅವರನ್ನು ದವಾಖಾನೆಗೆ ಕರೆದುಕೊಂಡು ಹೋದರೆ ಆತಂಕ ಪ್ರಾರಂಭವಾಗುವುದಿಲ್ಲವೆ? ಆದುದರಿಂದ ಅವರಿಗೇನಾದರೂ ವ್ಯವಸ್ಥೆ ಮಾಡಲಾಗುವುದೆ?

ಇನ್ನು ಮಾಸ್ಕ್ ಬಗ್ಗೆ ಹೇಳಬೇಕೆಂದರೆ, ಈಗ ಎಲ್ಲೂ ಮಾಸ್ಕ್‌ಗಳು ಸಿಗುತ್ತಿಲ್ಲ, ಅದನ್ನು ದಯಮಾಡಿ ಎಲ್ಲಾ ಕಡೆ ದೊರೆಯುವಂತೆ ಮಾಡಬೇಕು. ಈಗ ಟಿ.ವಿ.ಯಲ್ಲಿ ಯಾರ್ಯಾರೋ ಏನನ್ನು ಹೇಳುತ್ತಾರೆ ನಮಗೆ ಏನೂ ಅರ್ಥವಾಗುತ್ತಿಲ್ಲ. ನಾವು ಆ ಚಾನಲ್‌ಗಳನ್ನು ನೋಡಿದ ತಕ್ಷಣ ಭಯಾನಕವಾಗುತ್ತಿದೆ. ಆದಕಾರಣ, ಇಲಾಖೆಯ ಡಾಕ್ಟರ್‌ಗಳು ಬೆಳಿಗ್ಗೆ ಮತ್ತು ಸಂಜೆ ಟಿ.ವಿ. ಚಾನಲ್‌ಗಳ ಮುಖಾಂತರ ಸರ್ಕಾರದಿಂದ ಈ ತರಹದ ಕ್ರಮವನ್ನು ಕೈಗೊಂಡಿದ್ದೇವೆ, ಇದರಿಂದ ಏನೂ ತೊಂದರೆಯಾಗುವುದಿಲ್ಲ ಎಂಬುದನ್ನು ಪ್ರತಿ ದಿವಸ ಅವರ ಕಡೆಯಿಂದ ಜನರಿಗೆ ತಿಳುವಳಿಕೆ ಮೂಡಿಸಬೇಕು. ಇವತ್ತು ಈ ರೋಗದಿಂದಾಗಿ ಬೇರೆ ಊರಿನಿಂದ ಇಲ್ಲಿಗೆ ಬಂದು ದುಡಿಯುವಂತಹ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಅವರ ಪರಿಸ್ಥಿತಿ ಹೇಳತೀರದು. ಅವರಿಗೆ ಈ ರೋಗ ಬಂದರೆ ಅವರು ಎಲ್ಲಿಗೆ ಹೋಗಬೇಕು ಎಂಬ ಆತಂಕದಲ್ಲಿದ್ದಾರೆ. ಇನ್ನೊಂದು ಕಡೆ ಕೋಳಿಯನ್ನು ತಿಂದರೆ ಬರುತ್ತದೆ ಎಂದು ಹೇಳುತ್ತಾರೆ. ಆದುದರಿಂದ ಕೋಳಿಗಳನ್ನು ಗುಂಡಿಗೆ ಹಾಕಿ ಮುಚ್ಚಿ ಹಾಕುತ್ತಿದ್ದಾರೆ. ಪಾಪ ಅವರಿಗೆ ವಿಷ ತೆಗೆದುಕೊಳ್ಳುವಂತಹ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರಿಸ್ಥಿತಿ ಇದೆ. ಈ ಕೊರೊನಾ ರೋಗದಿಂದ other effects ಏನೇನು ಆಗಿದೆ, ಅದರ ಬಗ್ಗೆಯೂ ಸರ್ಕಾರ ಕ್ರಮ ಕೈಗೊಳ್ಳಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–**ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇದರಲ್ಲಿ ಬಹಳ ಮುಖ್ಯವಾಗಿ ಸರ್ಕಾರ ಆದೇಶ ಮಾಡಿ ಒಂದು ವಾರವಾಗಿದೆ. I will not take a second more after five minutes. ಸರ್ಕಾರ ಆದೇಶ ಮಾಡಿದ ಮೇಲೆ ಅದನ್ನು ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕಾದುದು ಅಧಿಕಾರಿಗಳ ಕರ್ತವ್ಯ. ಉದಾಹರಣೆಗೆ ಇದನ್ನು ಏಕೆ ಹೇಳುತ್ತೇನೆಂದರೆ, ಮೊನ್ನೆಯ ದಿವಸ ಅಂದರೆ ಶನಿವಾರ ಉಡುಪಿಯಲ್ಲಿ ಒಂದು ಕಾರ್ಯಕ್ರಮಕ್ಕೆ ಹಾಜರಾಗಿದ್ದೆ. ಆ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನ ಜಡ್ಜ್‌ಗಳು ಇದ್ದರು. ನಾನು ಜಿಲ್ಲಾಧಿಕಾರಿಗಳನ್ನು ಕೇಳಿದೆ. How can I tell them?, ನಾನು ಹೇಳುವುದಕ್ಕೆ ಆಗುತ್ತದೆಯೇ ಎಂದರು ಜಿಲ್ಲಾಧಿಕಾರಿಗಳು. He said the very same words. ಅದಕ್ಕೆ ನಾನು ಹೇಳಿದೆ, ಸರ್ಕಾರದ ಆದೇಶವಿದೆ ಅದನ್ನು ಅವರಿಗೆ ತಿಳಿಸಿ. ಅವರು ಸುಪ್ರೀಂ ಕೋರ್ಟ್ ಜಡ್ಜ್ ಇರಬಹುದು ಮತ್ತು ಹೈಕೋರ್ಟ್ ಜಡ್ಜ್ ಇರಬಹುದು. There was a gathering of more than 1,000 people. It was inevitable. ಅಲ್ಲಿಗೆ ನಾನು ಹೋಗದೆ ಹೋದರೆ ತಪ್ಪಾಗುತ್ತದೆ. ಆಹ್ವಾನ ಪತ್ರಿಕೆಯಲ್ಲಿ ನನ್ನನ್ನು ಅತಿಥಿ ಎಂದು ಹಾಕಿದ್ದಾರೆ. ಅದಕ್ಕೆ ನಾನು ಆ ಕಾರ್ಯಕ್ರಮಕ್ಕೆ ಹಾಜರಾಗುವಂತಹ ಅನಿವಾರ್ಯ ಪರಿಸ್ಥಿತಿ ಬಂತು. ಈಗ ಯಾರೇ ಇರಲಿ, ನಿರ್ದಾಕ್ಷಿಣ್ಯವಾಗಿ ಸರ್ಕಾರದ ಆದೇಶವನ್ನು ಪಾಲನೆ ಮಾಡಿದರೆ, ಖಂಡಿತವಾಗಿ implement ಆಗುತ್ತದೆ. ಈಗ ಒಂದು ವಾರವೆಂದು ಹೇಳಿದ್ದಾರೆ, ಇನ್ನು ಒಂದು ವಾರ ಮುಂದುವರೆಸುತ್ತಾರೆ. ಇದು ಬಹಳ ಮುಖ್ಯವಾಗಿ ಆಗಬೇಕಾಗಿರುವಂಥದ್ದು, ಜಾತ್ರೆ ಮತ್ತು ಮದುವೆ ಈ ವಿಚಾರದಲ್ಲಿ, ಬಹಳ ವಿಶೇಷವಾಗಿ ನನಗೆ ಆತಂಕ ಇರತಕ್ಕಂಥದ್ದು ಎಂದರೆ, ಆಟೋರಿಕ್ಷಾ ಡ್ರೈವರ್‌ಗಳು ಮತ್ತು ಟ್ಯಾಕ್ಸಿ ಡ್ರೈವರ್‌ಗಳು. ಅವರು ಯಾರ್‍ಯಾರನ್ನೋ ಕರೆದುಕೊಂಡು ಬಂದು ಅವರನ್ನು ಕಳುಹಿಸಿಕೊಡುತ್ತಾರೆ. ಅವರಿಗೆ ಅದನ್ನು ಯಾವರೀತಿ ತಡೆಗಟ್ಟಬೇಕು ಎನ್ನುವಂತಹ ವಿಚಾರದಲ್ಲಿ ಇದುವರೆಗೂ ಸರ್ಕಾರ ಏನು ಮಾಡುತ್ತದೆ ಎಂಬುದನ್ನು ಸರ್ಕಾರ ನೋಡಬೇಕಾಗುತ್ತದೆ. ಆಸ್ಪತ್ರೆಗಳಲ್ಲಿ ಏನು ಸಿಬ್ಬಂದಿ ಇದ್ದಾರೆ, ಬಹಳ ಮುಖ್ಯವಾಗಿ ನಮಗೆ ಚಿಕಿತ್ಸೆ ಕೊಡುವಂತಹ ಸಿಬ್ಬಂದಿಗಳಿಗೆ, precautionary ಯಾಗಿ ಅವರಿಗೆ, ಈಗ ನಾನು ನೋಡಿದಂತೆ ಗಗನ ಯಾತ್ರಿಗಳಿಗೆ ಹಾಕುವಂತಹ ಡ್ರೆಸ್‌ಗಳನ್ನು ಚೀನಾದಲ್ಲಿ ನಾನು ನೋಡಿದ್ದೇನೆ. ಆ ತರಹ ಡ್ರೆಸ್ ಹಾಕಿದರೆ, ಅವರ full body cover ಆಗಿರುತ್ತದೆ. ಸ್ವಲ್ಪವೂ ಜಾಗ ಇರುವುದಿಲ್ಲ. ಆ ತರಹದ ಡ್ರೆಸ್‌ಗಳನ್ನು ನಮ್ಮವರಿಗೆ ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ? ದಯವಿಟ್ಟು ಈ ವಿಚಾರದಲ್ಲಿ ಆರೋಗ್ಯ ಇಲಾಖೆಯವರು ಗಮನ ಹರಿಸುವಂತಹ ವ್ಯವಸ್ಥೆಯನ್ನು ಮಾಡಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ||ಜಯಮಾಲ(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಎರಡು ನಿಮಿಷಗಳನ್ನು ತೆಗೆದುಕೊಳ್ಳುತ್ತೇನೆ. ಮಕ್ಕಳ ವಿಷಯದಲ್ಲಿ ಅಂದರೆ, ಈಗ ನನ್ನ ಮಗಳು ಕೂಡ ಹೊರ ರಾಷ್ಟ್ರದಲ್ಲಿ ಓದುತ್ತಿದ್ದಾಳೆ. ಅವಳು ತನ್ನ ಸ್ಥಿತಿಯನ್ನು ತಿಳಿಸಿ ನನಗೆ ಬರೆದಿರುವಂತಹ ಕಾಗದವನ್ನು ನೋಡಿದಾಗ ಆತಂಕವಾಗುತ್ತದೆ. ಇವತ್ತಿನ ದಿವಸ ಅವಳಿಗೆ ಪಾಠ ಮಾಡುವಂತಹ ಪ್ರೊಫೆಸರ್‌ಗೆ ಕೊರೊನಾ ಬಂದಿದೆ. ಅಲ್ಲಿ ಹತ್ತು ಜನರನ್ನು ಗುರುತಿಸಿದ್ದಾರೆ. ಈಗ ಅಲ್ಲಿ ಎಲ್ಲಿಗೆ ಹೋದರು ಸಹ ಊಟವಿಲ್ಲವೆಂದು ಹೇಳುತ್ತಾರೆ. ಇಂತಹ ಒಂದು ಸ್ಥಿತಿಯಲ್ಲಿ ಬೇರೆ ಬೇರೆ ರಾಷ್ಟ್ರಗಳಲ್ಲಿ ಓದುವಂತಹ ಮಕ್ಕಳಿಗೆ ಅವರು ರಜವನ್ನು ಸಹ ಕೊಡುವುದಿಲ್ಲ. ಇಂತಹ ಸಂದರ್ಭದಲ್ಲಿ ಆ ಮಕ್ಕಳನ್ನು ಇಲ್ಲಿಗೆ ಕರೆಸುವುದಕ್ಕೆ ಆಗುವುದಿಲ್ಲ. ನಮ್ಮ ಹಾಗೆ ಈ ರಾಜ್ಯ ಮತ್ತು ದೇಶದಲ್ಲಿ ಇರತಕ್ಕಂಥ ಮಕ್ಕಳ ಸ್ಥಿತಿ ಹೇಗೆ ಇರಬಹುದು ಎಂದು ನಾನು ಊಹಿಸಿಕೊಳ್ಳಬಲ್ಲೆ. ಇವತ್ತಿನ ದಿವಸ ಆಸ್ಪತ್ರೆಗಳಲ್ಲಿ ಇದು ಹೇಗೆ ಹರಡುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇವತ್ತು ನಾವೆಲ್ಲರನ್ನು ಕೂಡ ಒಬ್ಬರನ್ನೊಬ್ಬರು ಅನುಮಾನದಿಂದ ನೋಡುವಂತಹ ಸ್ಥಿತಿಯಿದೆ. ಈ ಒಂದು ಕಾಯಿಲೆ ಬಂದರೆ ಅದು ಎಷ್ಟು ದಿವಸದಲ್ಲಿ ಹೋಗುತ್ತದೆ ಎಂದು ಗೊತ್ತಾಗುವುದಿಲ್ಲ. ಶೀನಿರುವುದನ್ನು ಮುಟ್ಟಿದರು ಕೂಡ, ಕಣ್ಣು, ಮೂಗು ಮತ್ತು ಬಾಯಿಗಳಿಗೆ touch ಆದಾಗ ಬರುತ್ತದೆ ಎಂದು ಹೇಳುತ್ತಾರೆ. ಇಂತಹ ಸಂದರ್ಭದಲ್ಲಿ ನಮ್ಮಲ್ಲಿ ಹಣವಿಲ್ಲ, ಬಜೆಟ್‌ನಲ್ಲೂ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಆದರೆ, ಇದಕ್ಕೆ ಒಂದು ವಿಶೇಷ ನಿಧಿ ಬೇಕಾಗುತ್ತದೆ. ಹಳ್ಳಿಗಳಲ್ಲಿ ಅಲ್ಲ, ನಗರಗಳಲ್ಲಿ ಇರತಕ್ಕಂಥ ಸ್ಲಮ್‌ಗಳಿಗೆ ಡಾಕ್ಟರ್‌ಗಳನ್ನು ಕಳುಹಿಸಿ, ಅವರನ್ನು ಚೆಕ್ ಮಾಡುವಂತಹ ಕೆಲಸಗಳಾಗಬೇಕಾಗಿದೆ. ಎಲ್ಲೆಲ್ಲಿ ಜನದಟ್ಟಣಿ ಇದೆಯೋ, ಆ ಭಾಗಕ್ಕೆ ಹೋಗಿ voluntary ಆಗಿ ಕೆಲಸ ಮಾಡಬೇಕಾಗಿದೆ. ನಿಜಕ್ಕೂ ನಾವು ಬಹಳ ಹಗುರವಾಗಿ ಯೋಚನೆ ಮಾಡುತ್ತಿದ್ದೇವೆ. ಇದನ್ನು ಹಗುರವಾಗಿ ತೆಗೆದುಕೊಳ್ಳಬಾರದು, ನಾಳೆಯ ದಿವಸ ಈ ಸದನ ಮುಗಿದು ನಾವು ಹೊರಗೆ ಹೋದಾಗ, ಎಷ್ಟು ಜನ ಬಾಕಿ ಉಳಿಯುತ್ತೇವೆಯೋ ಇಲ್ಲವೋ ಎಂದು ಭಯವಾಗುತ್ತದೆ. ಏಕೆಂದರೆ, ದೇಶಾದ್ಯಂತ ಈ ರೀತಿಯಾದಂತಹ ಹೆದರಿಕೆ ಹುಟ್ಟಿಸುವಂತಹ ಈ ಕಾಯಿಲೆ ಯಾರನ್ನು ಹೇಗೆ ತೆಗೆದುಕೊಳ್ಳುತ್ತದೆ ಎಂದು ಗೊತ್ತಿಲ್ಲ. ಆದುದರಿಂದ ನಾನು ಆರೋಗ್ಯ ಸಚಿವರನ್ನು ಕೇಳಿಕೊಳ್ಳುವುದು ಇಷ್ಟೆ. ಇದನ್ನು ಗಂಭೀರವಾಗಿ ತೆಗೆದುಕೊಳ್ಳಿ, ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ precautionary measures ಅನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಅರುಣ ಶಹಾಪೂರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿರುವುದಕ್ಕಾಗಿ ಧನ್ಯವಾದಗಳು. ಮಾನ್ಯ ಹೊರಟ್ಟಿಯವರು ಬೇಗ ಮುಗಿಸಿ ಎಂದು ತಿಳಿಸುತ್ತಿದ್ದಾರೆ. ನಾನು ಒಂದೇ ಒಂದು ಸಂಗತಿಯನ್ನು ತಿಳಿಸುತ್ತೇನೆ. ಆದರೆ, ಹೇಳಬೇಕಾಗಿರುವಂತಹ ಎರಡು ಅಂಶಗಳನ್ನು ಹೇಳಲೇಬೇಕು ಎಂಬ ಕಾರಣಕ್ಕಾಗಿ ಎದ್ದು ನಿಂತಿದ್ದೇನೆ. ಈಗ ನಾನು ಹೇಳುತ್ತಿರುವುದು ಪತ್ರಿಕೆಯಲ್ಲಿ ಬಂದಿದೆ ಅದು ಏನೆಂದರೆ, 'ದೇವರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುತ್ತಿದ್ದಾನೆ, ಆರೋಗ್ಯ ಜೋಪಾನ' ಎಂದು. 'ಕುಕ್ಕೆ ಸೇವೆಗೆ ಇಬ್ಬರಿಗಷ್ಟೆ ಅವಕಾಶ'. 'ವಿದೇಶಿಯರು ಬರಬೇಡಿ ಎಂದ ಕೊಲ್ಲೂರು'. 'ಅಂಜನಾದ್ರಿ ಬೆಟ್ಟದಲ್ಲಿ ಪ್ರಸಾದ ವಿತರಣೆ ಇಲ್ಲ'. 'ಗೋಲ್ಡನ್ ಟೆಂಪಲ್‌ಗೆ ಏಪ್ರಿಲ್ ಒಂದರವರೆಗೆ ನಿರ್ಬಂಧ' ಎಂದು ಈ ರೀತಿಯಲ್ಲಿ ಪತ್ರಿಕೆಯಲ್ಲಿ ಬರುತ್ತಿದೆ. ಅಂದರೆ ಇವತ್ತಿನ ದಿವಸ ದೇವರು ಬರಬೇಡ ಎನ್ನುವಂತಹ ಸ್ಥಿತಿ ಬಂದಿದೆ. ಆದರೆ, ಒಂದೇ ಒಂದು ಗಮನ ಸೆಳೆಯುವಂತಹ ಒಂದು ಸಂದೇಶ ಸಿಕ್ಕಿತು. ಇದು ಬಹಳ ಖುಷಿಯಾಗಿರುವಂಥದ್ದು, ಇದನ್ನು ನೋಡಿದಾಗ, ನಾವು ಮಾನವ ಜನಾಂಗ ಕೊರೊನ ವಿರುದ್ಧದ ಹೋರಾಟ ಎಂದು ಭಾವಿಸಬೇಕಾಗಿರುವಂತಹ ಅಗತ್ಯ ಇದೆ, ಆ ಹಿನ್ನೆಲೆಯಲ್ಲಿ ಈ ಮೆಸೇಜ್. ಇವತ್ತು ದೇವರುಗಳು ಗುಡಿಗೆ ಬರಬೇಡಿ ಎಂದು ಹೇಳುವಂತಹ ಸಂದರ್ಭದಲ್ಲಿ, ಕರ್ನಾಟಕ ಮೆಡಿಕಲ್ ಅಸೋಸಿಯೇಷನ್ ನವರು ಹೇಳಿರುವಂತಹ ಒಂದು ಮೆಸೇಜ್ ಬಂತು. ಇದನ್ನು ನೋಡಿದಾಗ ನನಗೆ ಬಹಳ ಖುಷಿಯಾಯಿತು; "when god has closed door, only doctors and their team opening their doors to serve humanity." ಎಂದು. ಇವತ್ತು ಭಗವಂತನೇ ಬಾಗಿಲು ಮುಚ್ಚಿರುವಂತಹ ಸಂದರ್ಭದಲ್ಲಿ, ರಾಜ್ಯದ ವೈದ್ಯರ ಮಾನಸಿಕತೆ ಯಾವುದಕ್ಕೆ ಸನ್ನದ್ಧವಾಗಿದೆ ಎಂದರೆ, ನಮ್ಮ ಬಾಗಿಲು ತೆಗೆದಿದೆ, ನಮ್ಮ ತಂಡ ರೆಡಿ ಇದೆ, ನೀವು ಬಂದರೆ ನಿಮಗೆ ಸೇವೆ ಕೊಡುತ್ತೇವೆಂದು. ಇದನ್ನು ನೋಡಿ ನನಗೆ ಸಾರ್ಥಕವಾಯಿತು ಎಂದು ಭಾವಿಸುತ್ತೇನೆ. ಇಂತಹ ಭಾವನೆ ಹುಟ್ಟಬೇಕಾಗಿದೆ. ಎಲ್ಲೋ ಒಂದು ಕಡೆ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಕೊರೊನಾ ವಿರುದ್ಧದ ಹೋರಾಟವಾಗಬಾರದು. ಇದು ನಾವು ಮಾನವ ಜನಾಂಗ ಈ ಕೊರೊನಾ ವಿರುದ್ಧ ಹೋರಾಡಿ ಗೆಲ್ಲಬೇಕಾದಂತಹ ಅಗತ್ಯವಿದೆ. ಈ ಸಂದರ್ಭದಲ್ಲಿ ನಾನು ಮಾನ್ಯ ಸಚಿವರಿಗೆ ಮತ್ತು ಅವರ ತಂಡಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಿನ್ನೆಯ ದಿವಸ ನಾನು ಟಿ.ವಿ. ನೋಡಿಕೊಂಡು ಮನೆಯಲ್ಲಿ ಕುಳಿತುಕೊಂಡಿದ್ದೆ. ರಜೆ ಕೊಟ್ಟಂತಹ ಸಂದರ್ಭದಲ್ಲಿ ನನ್ನ ಮಗಳು ಬೆಂಗಳೂರಿಗೆ ಬರುವುದು ಒಂದು ರೂಢಿ. ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಂಡು ಮಾನ್ಯ ಶಿಕ್ಷಣ ಸಚಿವರು ಶಾಲೆಗಳಿಗೆ ರಜೆಯನ್ನು ಘೋಷಣೆ ಮಾಡಿದ್ದಾರೆ. ನನ್ನ ಮಗಳನ್ನು ಬೆಂಗಳೂರಿಗೆ ಬಾ ಎಂದು ಹೇಳಿದಾಗ, ಬೇಡ ಅಪ್ಪ life risk ಇದೆ, ಅದಕ್ಕೆ ಬೆಂಗಳೂರಿಗೆ ಬರುವುದಿಲ್ಲವೆಂದು ಹೇಳಿದಳು. ನೋಡಿ ಈ ರಾಜ್ಯದಲ್ಲಿ ಕಲ್ಬುರ್ಗಿಯಲ್ಲಿ ಸಾವು ಆಗಿರುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಉಲ್ಲೇಖ ಮಾಡಿದರು. ಆದರೆ, ಮಾನ್ಯ ಸಚಿವರಾದ ಸನ್ಮಾನ್ಯ ಶ್ರೀರಾಮುಲುರವರು ಆ ಆಸ್ಪತ್ರೆಗೆ ಹೋಗುವಂತಹ ಕೆಲಸವನ್ನು ಮಾಡಿದ್ದಾರೆ. ಇದು ನಿಜವಾಗಿಯೂ ಮಾನವೀಯತೆಯ ವಿರುದ್ಧದ ಈ ಕೊರೊನಾ ಹೋರಾಟದಲ್ಲಿ ಸೇನಾಪತಿಯಾಗಿ, ಸನ್ಮಾನ್ಯ ಆರೋಗ್ಯ ಸಚಿವರು ಆಸ್ಪತ್ರೆಗೆ ಹೋಗುವ ಮೂಲಕ, ಒಂದು ಮನೋಬಲವನ್ನು ಉಂಟು ಮಾಡುವಂತಹ ಕೆಲಸವನ್ನು ಮಾಡಿದ್ದಾರೆ, ಜನರಿಗೆ ಧೈರ್ಯವನ್ನು ತುಂಬುವಂತಹ ಕೆಲಸವನ್ನು ಮಾಡಿದ್ದಾರೆ. ಹಾಗಾಗಿ ಈ ಕೆಲಸ ಹಾಗೆಯೇ ಮುಂದುವರೆಯಬೇಕು. ಒಂದು ಕಡೆ ಡಾಕ್ಟರ್‌ಗಳು, ಮತ್ತೊಂದು ಕಡೆ ಈ ರಾಜ್ಯದ ಆರೋಗ್ಯ ವ್ಯವಸ್ಥೆಯಲ್ಲಿ ಇರುವಂತಹವರು ಮತ್ತೊಂದು ಕಡೆ ಈ ಸರ್ಕಾರದ ಮಂತ್ರಿಗಳು. ನಾವು ಇದರ ವಿರುದ್ಧ ಹೋರಾಡುವುದಕ್ಕೆ ತಯಾರಾಗಿದ್ದೇವೆ ಎನ್ನುವಂತಹ ಸಂದೇಶವನ್ನು ಕೊಟ್ಟಿದ್ದಾರೆ. ಇದು ತುಂಬಾ ಒಳ್ಳೆಯದು. ಕೊನೆಗೆ ಒಂದೇ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಂದು ಅಂಕಿ–ಅಂಶವನ್ನು ಅರ್ಥ ಮಾಡಿಕೊಳ್ಳಬೇಕಾಗಿರುವುದು, ಬಹಳ ಜನರು ಕೊರೊನಾ ರೋಗಕ್ಕೆ ಔಷಧಿ ಇಲ್ಲವೆಂದು ತಿಳಿದುಕೊಂಡಿದ್ದಾರೆ.

**(ಮುಂದು...)**

**(448)16.3.2020/5.50/ಎಂ.ಎಂ.–ಬಿ.ಎನ್.ಎಸ್.**
**ಶ್ರೀ ಅರುಣ್ ಶಹಾಪೂರ (ಮುಂದು):**

ಪಾಸಿಟಿವ್ ಅಂಶವೇನೆಂದರೆ, 1,62,000 ಜನ ಕೊರೋನಾ ಪೀಡಿತರಲ್ಲಿ ಸುಮಾರು 75 ಸಾವಿರ ಜನರು ಉಳಿದುಕೊಂಡಿದ್ದಾರೆ. ಆ ಮೂಲಕ ಧೈರ್ಯ ತುಂಬಿಸಬೇಕಾದ ಅಗತ್ಯ ಇದೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ವೈದ್ಯರುಗಳ ಸಭೆ ಕರೆಯುವುದಕ್ಕೆ ಹೇಳಿ. ಮೊದಲು ಎಲ್ಲಾ ಖಾಸಗಿ ವೈದ್ಯರುಗಳನ್ನು enlighten ಮಾಡಿ.

**ಶ್ರೀ ಬಿ. ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಬಹಳಷ್ಟು ಜನರು ಮಾನ್ಯ ಎಸ್.ಆರ್. ಪಾಟೀಲ್‌ರವರಿಂದ ಮಾನ್ಯ ಕೊಂಡಯ್ಯನವರು ಮತ್ತು ಎಲ್ಲಾ ವಿರೋಧಪಕ್ಷದ ನಾಯಕರು ಮತ್ತು ಅನೇಕ ಮಂದಿ ಸದಸ್ಯರು ಇಲ್ಲಿ ಕೂಡ ನಮ್ಮ ಸದಸ್ಯರು ಎಲ್ಲರೂ ಕೂಡ 'ಕೊರೋನಾ ವೈರಸ್' ಬಗ್ಗೆ ಸುದೀರ್ಘವಾಗಿ ನಾಲ್ಕು ತಾಸುಗಳ ಕಾಲ ಚರ್ಚೆ ಕೂಡ ಆಗಿದೆ. ಏಕೆಂದರೆ, ಈ ಕಾಯಿಲೆ ಬಗ್ಗೆ ಇಡೀ ರಾಜ್ಯದ ಜನರು ಆತಂಕಗೊಂಡಿದ್ದಾರೆ, ಭಯಭ್ರಾಂತರಾಗಿದ್ದಾರೆ. ಅದಕ್ಕೋಸ್ಕರವಾಗಿ ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡು ಸುಮಾರಾಗಿ ಎಲ್ಲೋ ಒಂದು ಕಡೆ ಜನರಿಗೆ ಧೈರ್ಯವನ್ನು ತುಂಬುವಂತಹ ಕೆಲಸ ಆಗಬೇಕು, ಜೊತೆಗೆ ಜನರಿಗೆ ಎಲ್ಲಾ ರೀತಿಯಲ್ಲೂ ಆತ್ಮಸ್ಥೈರ್ಯವನ್ನು ತುಂಬುವಂತಹ ಕೆಲಸ ಆಗಬೇಕು ಎಂದು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇವತ್ತು ಗಂಭೀರವಾಗಿ ಏನು ಚರ್ಚೆಯಾಯಿತು ಅದರಲ್ಲಿ ಅನೇಕ ವಿಷಯಗಳು ಉಲ್ಲೇಖವಾಗಿವೆ. ಸರ್ಕಾರ ಈ ಕಾಯಿಲೆ ಚೈನಾದಿಂದ 'ಕೋವಿಡ್–19' ಏನು ಪ್ರಾರಂಭವಾಯಿತ್ತು, ಪ್ರಾರಂಭವಾದ ನಂತರ ಇಡೀ ವಿಶ್ವದಲ್ಲಿದ್ದಂತಹ ಜನರು ಆತಂಕಕ್ಕೆ ಒಳಗಾದ ನಂತರ ನಮ್ಮ ದೇಶದಲ್ಲಿ, ಕರ್ನಾಟಕದಲ್ಲಿ ಕೂಡ ಅನೇಕ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಕೆಲಸಗಳನ್ನು ಮಾಡಿದ್ದೇವೆ. ವಿಶೇಷವಾಗಿ ಇವತ್ತು ಏರ್‌ಪೋರ್ಟ್‌ಗಳಲ್ಲಿ, ಬಂದರು ಪ್ರದೇಶಗಳಲ್ಲಿ ಬೇರೆ ರಾಷ್ಟ್ರಗಳಿಂದ ಬರುತ್ತಿರುವ ಜನರನ್ನು ಪ್ರವಾಸಿಗರನ್ನು ಸುಮಾರು 1,11,85,000 ಜನರನ್ನು ಒಂದು ರೀತಿ ಸ್ಕ್ಯಾನಿಂಗ್ ಮಾಡುವಂತಹ ಕೆಲಸ, ಅವರಿಗೆ ಎಲ್ಲಾ ರೀತಿಯಲ್ಲೂ ಸ್ಕ್ಯಾನಿಂಗ್ ಮಾಡಿ, ಅನುಮಾನ ಬಂದಂತಹ ಜನರನ್ನು 'ಥರ್ಮಲ್ ಸ್ಕ್ಯಾನಿಂಗ್' ಮಾಡಿ ಅವರನ್ನು ಎಲ್ಲಾ ರೀತಿಯಲ್ಲಿ isolated ward ನಲ್ಲಿ ಇಡುವಂತಹ ಕೆಲಸ ಮಾಡುತ್ತಿದ್ದೇವೆ. ಇಡೀ ದೇಶದಲ್ಲಿ ಸುಮಾರು ಕರ್ನಾಟಕದಲ್ಲಿ ಮಂಗಳೂರಿನಲ್ಲಿ ಆಗಿರಬಹುದು, ಬೆಂಗಳೂರಿನಲ್ಲಿ ಆಗಿರಬಹುದು, ಬಂದರು ಪ್ರದೇಶದಲ್ಲಿ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆಗಿರಬಹುದು ಎಲ್ಲಾ ರೀತಿಯಲ್ಲಿಯೂ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವಂತಹ ಕೆಲಸ ಕೂಡ ಸರ್ಕಾರ ಮಾಡುತ್ತಿದೆ. ಸುಮಾರು 600–700 ಜನರು ಕೂಡ ಅವರ ಮೇಲೆ ಅನುಮಾನ ಬಂದಂತಹ ಸಮಯದಲ್ಲಿ ಸಾಕಷ್ಟು ಜನರನ್ನು ಕೂಡ ಪರೀಕ್ಷೆಗೆ ಒಳಪಡಿಸಿ, ಆ ಸಮಯದಲ್ಲಿ 862 ಜನರ ಕಫ ಸಂಗ್ರಹಣೆ ಮಾಡಿಕೊಂಡು ಲ್ಯಾಬ್ ಪರೀಕ್ಷೆಗೆ ಕಳುಹಿಸಿದ ಸಮಯದಲ್ಲಿ ಸುಮಾರು 609 ಜನರಿಗೆ negative report ಬಂದಿದೆ. ಸಾಕಷ್ಟು ಜನರ blood samples ಮತ್ತು ಕಫ ಸಂಗ್ರಹಣೆಯನ್ನು ಲ್ಯಾಬ್‌ಗೆ ಪರೀಕ್ಷೆಗೆ ಕಳುಹಿಸಿದ ಸಂದರ್ಭದಲ್ಲಿ ಕೂಡ ಸಾಕಷ್ಟು ಜನರದ್ದು ನೆಗೆಟಿವ್ ರಿಪೋರ್ಟ್ ಬಂದಿದೆ. ಇವತ್ತು ಸರ್ಕಾರ ಸನ್ಮಾನ್ಯ ಯಡಿಯೂರಪ್ಪನವರು ಮೊನ್ನೆ ತಾನೇ ಒಂದು ಮೀಟಿಂಗ್ ಕರೆದು ಇಡೀ ರಾಜ್ಯದಲ್ಲಿ ಜನಸಂದಣಿ ಎಲ್ಲಿಯೂ ಕೂಡ ಜಾಸ್ತಿಯಾಗಬಾರದು, ಜನಸಂದಣಿಯಾದಂತಹ ಸಮಯದಲ್ಲಿ ಈ ಕಾಯಿಲೆ, ವೈರಸ್ ಜಾಸ್ತಿಯಾಗುತ್ತದೆ ಎಂದು ತಿಳಿದುಕೊಂಡು, ಸಿನಿಮಾ ಥಿಯೇಟರ್‌ಗಳು, ಶಾಪಿಂಗ್ ಮಾಲ್‌ಗಳು, ಎಲ್ಲೆಲ್ಲಿ ಜಾತ್ರೆಗಳು ನಡೆಯುತ್ತವೆ, ಬೇರೆ ಬೇರೆ ಕಡೆ ಎಲ್ಲಿ ಜನಸಂದಣಿಯಾಗುತ್ತದೆ ಅದೆಲ್ಲಾ ಬ್ಯಾನ್ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಈ ಕಾಯಿಲೆ ಬಂದ ತಕ್ಷಣವೇ ಸಾಯುತ್ತಾರೆ ಎಂದು ಏನು ಜನರು ಭಯಭೀತರಾಗಿದ್ದಾರೋ ಈ ಕಾಯಿಲೆ ಬಂದ ತಕ್ಷಣವೇ ಯಾರೂ ಸಾಯುವುದಿಲ್ಲ. ಯಾರಿಗೆ resistance power ಕಡಿಮೆ ಇರುತ್ತದೋ ಅಂತಹವರು, ವಯಸ್ಸಾದ ಜನರು; ಇವತ್ತು ಕರ್ನಾಟಕದಲ್ಲಿ ಕೂಡ ಒಂದು ಸಾವನ್ನು ನೋಡಿದ್ದೇವೆ. ಕರ್ನಾಟಕದ ಕಲಬುರ್ಗಿಯಲ್ಲಿ ಸಾವನ್ನಪ್ಪಿರುವ ಅವರ ವಯಸ್ಸು ಸುಮಾರು 76 ವರ್ಷಗಳು. 76 ವರ್ಷಗಳ ಆ ಮನುಷ್ಯ ಸೌದಿ ಅರೇಬಿಯಾಗೆ ತೀರ್ಥಯಾತ್ರೆಗೆ ಹೋಗಿ ವಾಪಸ್ ಅವನು ಹೈದರಾಬಾದ್‌ನಲ್ಲಿ ಲ್ಯಾಂಡ್ ಆಗಿ ಹೈದರಾಬಾದ್‌ನಿಂದ ಕಲಬುರ್ಗಿಗೆ ಹೋಗಿ, ಅಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿ, ಯಾರದೋ ಸಲಹೆಯ ಮೇರೆಗೆ ಮತ್ತೆ ಡಿಸ್‌ಚಾರ್ಜ್ ಆಗದೇ, ಏಳಲಾರದೇ ಮತ್ತೆ ಹೈದರಾಬಾದ್‌ಗೆ ತೆರಳಿ, ಹೈದರಾಬಾದ್‌ನಿಂದ ವಾಪಸ್ ಬರುವ ವೇಳೆಯಲ್ಲಿ ಆ ವ್ಯಕ್ತಿಗೆ ಸಾವು ಸಂಭವಿಸಿದ ನಂತರ ಅಂದು ನಮ್ಮ ಡಿ.ಹೆಚ್.ಓ. ರವರು ಮತ್ತು ಕಲಬುರ್ಗಿ ಜಿಲ್ಲಾಧಿಕಾರಿಯವರು ಮತ್ತು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಸೇರಿಕೊಂಡು ಇದು corona virus suspect ಇದೆಯೆಂದು ತಿಳಿದುಕೊಂಡರು. ಅವತ್ತು ನಾನು ಏನು ಹೇಳಿಕೆಗಳನ್ನು ಕೊಟ್ಟೆ ಕಲಬುರ್ಗಿಯಲ್ಲಿ ಸತ್ತಂತಹ ವ್ಯಕ್ತಿ ಇದೇ ಕಾಯಿಲೆಯಿಂದ ಸತ್ತಿದ್ದಾರೆಂದು ಇವತ್ತಿನ ತನಕ ಯಾವುದೇ ಪುರಾವೆ ಇಲ್ಲ. ನಾವು ಎಲ್ಲಾ blood sample ಮತ್ತು throat swab ಅನ್ನು ಕೂಡ testing ಗೆ ಕಳುಹಿಸಿಕೊಟ್ಟಿದ್ದೆವು. ಆ ಮನುಷ್ಯನ life history ತೆಗೆದುಕೊಂಡ ಸಂದರ್ಭದಲ್ಲಿ ಆತನಿಗೆ ನ್ಯುಮೋನಿಯಾ ಇತ್ತು, ಬೇರೆ ಬೇರೆ ಕಾಯಿಲೆಗಳಿತ್ತು, ಅದರಿಂದ ಏನಾದರೂ ಆಗಿರಬಹುದು, ಏನು blood sample ಮತ್ತು throat swab ಅನ್ನು testing ಗೆ ಕಳುಹಿಸಿಕೊಟ್ಟಿದ್ದೆವು test report ಬಂದ ನಂತರ cause of death ಗೊತ್ತಾಗುತ್ತದೆ ಎಂದು ಹೇಳಿಕೆ ಕೊಟ್ಟಿದ್ದೆ. ನಂತರದ ದಿನಗಳಲ್ಲಿ blood sample ಮತ್ತು ಕಫ ಸಂಗ್ರಹ ಮಾಡಲಾಗಿತ್ತು, ಕಫ ಪರೀಕ್ಷೆಯ ವರದಿ ಬಂದ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಂತರ cause of death is due to corona virus ಎಂಬುದು ಗೊತ್ತಾಯಿತು. ನಂತರ ಇದರಿಂದಲೇ ಸತ್ತಿದ್ದಾರೆ ಎಂದು ಮಾಧ್ಯಮಗಳಿಗೆ ವರದಿಯನ್ನು ಕೊಟ್ಟಿದ್ದೇವೆ. ಆ ಶಂಕಿತ ರೋಗಿಯ ಅಂತಿಮ ಸಂಸ್ಕಾರವನ್ನು ಕೇಂದ್ರ ಸರ್ಕಾರ ನಾರ್ಮ್ಸ್ ಕೊಟ್ಟಿರುವ ರೀತಿಯಲ್ಲಿ ಆಗಬೇಕೆಂದು ಅಂತಿಮ ಸಂಸ್ಕಾರವನ್ನು ಅದೇ ರೀತಿಯಲ್ಲಿ ನಡೆಸಿಕೊಡುವಂತಹ ಕೆಲಸ ಮಾಡಿದ್ದೇವೆ ಮತ್ತು ಬೇರೆಯವರಿಗೆ ಯಾವುದೇ ರೀತಿಯಿಂದಲೂ ತೊಂದರೆಯಾಗಬಾರದು ಎಂಬ ಕಾರಣದಿಂದ ಆ ರೀತಿ ಅಂತ್ಯಸಂಸ್ಕಾರ ಮಾಡಿದ್ದೇವೆ. ಅವರ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗಿದ್ದ ಸುಮಾರು 71 ಜನರು, ಅವರ ಕುಟುಂಬದಲ್ಲಿದ್ದ 4–5 ಜನರನ್ನು ಕೂಡ monitor ಮಾಡುತ್ತಿದ್ದೇವೆ. 71 ಮಂದಿಯನ್ನು monitor ಮಾಡಿದ ಟೈಮಲ್ಲಿ ಸಾಕಷ್ಟು ಜನರನ್ನು isolated ward ನಲ್ಲಿ ಇಟ್ಟು, isolated ward ನಲ್ಲಿ ಇದ್ದವರನ್ನು ಸಂಪೂರ್ಣವಾಗಿ precautionary measures ಏನು ತೆಗೆದುಕೊಳ್ಳಬೇಕೋ ಆ precautionary measures ತೆಗೆದುಕೊಳ್ಳುವ ಕೆಲಸವನ್ನು ನಾವು ಮಾಡಿದ್ದೇವೆ. ಅದೇ ರೀತಿಯಲ್ಲಿ ಅವರ ಕುಟುಂಬದಲ್ಲಿದ್ದ 4 ಜನರ ಕಫ ಸಂಗ್ರಹ ಮಾಡಿಕೊಂಡು ಅದನ್ನು ಲ್ಯಾಬ್‌ಗೆ ಕಳುಹಿಸಿಕೊಟ್ಟಿದ್ದೆವು ಆ ಲ್ಯಾಬ್‌ನಿಂದ ಮೊನ್ನೆ ನಾನು ಕಲಬುರ್ಗಿಗೆ ಹೋದಂತಹ ಟೈಮಲ್ಲಿ 3 ಜನರಿಗೆ ನೆಗೆಟಿವ್ ರಿಪೋರ್ಟ್ ಬಂದಿದೆಯೆಂದು ಆ ಸ್ಯಾಂಪಲ್ಸ್‌ನಲ್ಲಿ ಗೊತ್ತಾಗಿದೆ. ಶಂಕಿತರೊಬ್ಬರಿಗೆ ಪಾಸಿಟಿವ್ ಇದೆಯೆಂದು ನಿನ್ನೆ ಸಂಜೆ ಗೊತ್ತಾಯಿತು. ಅವರ ಕುಟುಂಬದಲ್ಲಿ ನಾಲ್ಕು ಜನರಲ್ಲಿ ಒಬ್ಬರಿಗೆ ಪಾಸಿಟಿವ್ ಬಂದಿರುವುದರಿಂದ ಮೂರು ಜನರಿಗೆ ಇ.ಎಸ್.ಐ. ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಲಾಗುತ್ತಿತ್ತು, ಅವರು ಈಗ ಗುಣಮುಖರಾಗಿದ್ದಾರೆ ಎನ್ನುವ ವಿಷಯವನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಇಡೀ ವಿಶ್ವದಲ್ಲಿ ಪಾಸಿಟಿವ್ ಇದ್ದಂತಹವರು, ದೇಶದಲ್ಲಿ ಕೂಡ ಕೆಲವು ಪಾಸಿಟಿವ್ ಕೇಸ್‌ಗಳು ಇದ್ದಂತಹವರು recovery ಆಗುತ್ತಿದ್ದಾರೆ. ಯಾರೂ ಕೂಡ ಭಯಭ್ರಾಂತರಾಗುವ ಅಗತ್ಯವಿಲ್ಲ. ಅವರಿಗೆ ಆತ್ಮಸ್ಥೈರ್ಯ ಇರಬೇಕು, ಅದು ಇದ್ದರೆ ಇಂತಹ ಯಾವುದೇ ಕಾಯಿಲೆಗಳು ಬಂದರೆ ಅದನ್ನು ನಿಭಾಯಿಸುವಂತಹ ಶಕ್ತಿ ಕೂಡ ಇರಬೇಕಾಗುತ್ತದೆ. ಇತ್ತೀಚೆಗೆ ಬಹಳಷ್ಟು ಕಡೆ ಮಾಸ್ಕ್‌ಗಳು ಕಡಿಮೆ ಇವೆ ಎಂದು ಹೇಳುತ್ತಿದ್ದಾರೆ. ಸರ್ಕಾರದಲ್ಲಿ ಬಹಳಷ್ಟು ಮಾಸ್ಕ್‌ಗಳು ಇವೆ. ಕೆಲವು ಕಡೆ ಕಿರಾಣಿ ಅಂಗಡಿಗಳಲ್ಲಿ, ಔಷಧಿ ಅಂಗಡಿಗಳಲ್ಲಿ ಮಾರಾಟವಾಗುತ್ತಿವೆ. ನಾನು ಹೇಳುವುದೇನೆಂದರೆ, ಯಾರೂ ಮಾಸ್ಕ್ ಹಾಕಿಕೊಳ್ಳುವ ಅಗತ್ಯ ಇಲ್ಲ. ಯಾರಿಗೆ ನೆಗಡಿ, ಜ್ವರ, ಕೆಮ್ಮು, ತಲೆನೋವು ಬಂದಾಗ, ಆ ರೀತಿಯ ಲಕ್ಷಣಗಳು ಕಂಡು ಬಂದರೆ ಅವರು ಬೇಕಾದರೆ ಮಾಸ್ಕ್‌ನ್ನು ಹಾಕಿಕೊಳ್ಳಲಿ. ಎಲ್ಲರೂ ಮಾಸ್ಕ್ ಹಾಕಿಕೊಂಡರೆ panic ಆಗುತ್ತಾರೆ. Panic ಆದಂತಹ ಟೈಮಲ್ಲಿ ಜನರಿಗೆ ಎಲ್ಲರೂ ಮಾಸ್ಕ್ ಹಾಕಿಕೊಂಡು ಓಡಾಡುತ್ತಿದ್ದಾರೆ ಎಂದು ಭಯ ಬೀಳುವುದು ಜಾಸ್ತಿಯಾಗುತ್ತದೆ, ಅದಕ್ಕೋಸ್ಕರವಾಗಿ ಯಾರೂ panic ಆಗುವುದು ಬೇಕಾಗಿಲ್ಲ. ಇತ್ತೀಚೆಗೆ ಮಾಸ್ಕ್‌ಗಳು ಬ್ಲಾಕ್‌ನಲ್ಲಿ ಮಾರಾಟವಾಗುತ್ತಿವೆ. ಮಾನ್ಯ ನಾರಾಯಣಸ್ವಾಮಿಯವರು ಬಹಳಷ್ಟು ಕಡೆ ಕಸದ ತೊಟ್ಟಿಯಲ್ಲಿ ಹಾಕಿರುವ ಮಾಸ್ಕ್‌ನ್ನು ಮತ್ತೆ ತೊಳೆದುಕೊಂಡು ವ್ಯಾಪಾರ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದರು. ನಾನು ಬಹಳ ಕಠಿಣವಾಗಿ ಮಾಸ್ಕ್‌ಗಳನ್ನು ಔಷಧ ಅಂಗಡಿಗಳಲ್ಲಿ ಯಾರ್ಯಾರು ಬ್ಲಾಕ್‌ನಲ್ಲಿ ಮಾರಾಟ ಮಾಡುತ್ತಿದ್ದಾರೋ ಅವರಿಗೆ ಒಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆದೇಶವನ್ನು ಕೊಟ್ಟಿದ್ದೇವೆ. ನನಗೆ ಯಾರಿಂದಲಾದರೂ ದೂರು ಬಂದಲ್ಲಿ ಔಷಧಿ ಮಳಿಗೆಗಳ ಲೈಸೆನ್ಸ್‌ನ್ನು ರದ್ದು ಮಾಡುತ್ತೇವೆ ಎಂದು ಆದೇಶ ಕೊಟ್ಟಿದ್ದೇನೆ. ಕಲಬುರ್ಗಿಯಲ್ಲಿ ವ್ಯಕ್ತಿ ಸಾವಿಗೀಡಾದ ನಂತರ ಮೊನ್ನೆ ನಾನು ಕೂಡ ಕಲಬುರ್ಗಿಗೆ ಹೋಗಿದ್ದೆ. ಅವರ ಕುಟುಂಬಸ್ಥರನ್ನು, isolated ward ನಲ್ಲಿ ಇದ್ದವರನ್ನು ಮಾತನಾಡಿಸಿಕೊಂಡು, ಇಡೀ ರಾಜ್ಯದಲ್ಲಿ BSF (Border Security Force) ನಲ್ಲಿ 300 ಹಾಸಿಗೆಗಳನ್ನು ಮೀಸಲಾಗಿಟ್ಟಿದ್ದೇವೆ, ಆರ್ಮಿಯಲ್ಲಿ ಕೂಡ ಸುಮಾರು 150 ಹಾಸಿಗೆಗಳನ್ನು ಮೀಸಲಾಗಿ ಇಟ್ಟಿದ್ದೇವೆ. ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಸುಮಾರು 2000 ಹಾಸಿಗೆಗಳನ್ನು ಮೀಸಲಿಟ್ಟಿದ್ದೇವೆ. ಎಲ್ಲೆಲ್ಲಿ ಮಾಸ್ಕ್‌ಗಳಿಲ್ಲ, ಅಗತ್ಯವಿದ್ದ ಸಂದರ್ಭಗಳಲ್ಲಿ ಕೂಡ ಡಿ.ಹೆಚ್.ಓ. ರವರಿಗೆ ಒಂದು ಆದೇಶವನ್ನು ಮಾಡಿದ್ದೇನೆ. ಕಡಿಮೆಯಾದ ಸಂದರ್ಭದಲ್ಲಿ ಮಾಸ್ಕ್‌ಗಳನ್ನು ಖರೀದಿ ಮಾಡಬೇಕೆಂದು ಆದೇಶ ಮಾಡಿದ್ದೇನೆ. ನಾಳೆ ಮತ್ತು ನಾಳಿದ್ದು ಕೂಡ ನಾನು ಮಂಗಳೂರು ಮತ್ತು ಬೆಳಗಾಂ ಕಡೆ ಪ್ರವಾಸ ಹೋಗುತ್ತಿದ್ದೇನೆ. ಇಂತಹ ಸಂದರ್ಭದಲ್ಲಿ war footing ನಲ್ಲಿ ಕೆಲಸ ಮಾಡಬೇಕಾಗುತ್ತದೆ. ಕಲಬುರ್ಗಿಯಲ್ಲಿ ವೈದ್ಯರುಗಳನ್ನು ನೋಡಿ ಬಹಳಷ್ಟು ಆಶ್ಚರ್ಯವಾಯಿತು. ಏಕೆಂದರೆ, ಡಾಕ್ಟರ್‌ಗಳು, ನರ್ಸ್‌ಗಳು

ಹಾಗೂ ಇಡೀ ಜನರೆಲ್ಲರೂ ಮಾಸ್ಕ್‌ಗಳನ್ನು ಹಾಕಿಕೊಂಡು ಅಡ್ಡಾಡುತ್ತಿದ್ದರು.

(ಮುಂದು)

(449) 16–03–2020/ 06–00/ ಕೆಹೆಚ್–ಜಿಆರ್
**ಶ್ರೀ ಬಿ.ಶ್ರೀರಾಮುಲು (ಮುಂದು)**

ಇವತ್ತಿನ ದಿವಸ ನಾನು ಯಾವ ರೀತಿಯಲ್ಲಿ ವೈದ್ಯರುಗಳಿಗೆ ಧನ್ಯವಾದಗಳನ್ನು ಮತ್ತು ಅಭಿನಂದನೆಯನ್ನು ಸಲ್ಲಿಸುವುದಕ್ಕೆ ನನ್ನ ಹತ್ತಿರ ಒಂದು ಶಬ್ದ ಕೂಡ ಇಲ್ಲ. ಆ ರೀತಿ ಇದೆ. ಏಕೆಂದರೆ, ಮಿಲಿಟರಿಯಲ್ಲಿ ಯುದ್ಧಕ್ಕೆ ಹೋಗಬೇಕಾದರೆ ಗಡಿ ಕಾಯುವಂತಹ ಸೈನಿಕರು ಯಾವ ರೀತಿಯಲ್ಲಿ ತಯಾರು ಆಗುತ್ತಾರೋ, ಆ ರೀತಿಯಲ್ಲಿ ನಮ್ಮ ವೈದ್ಯರುಗಳು ತಯಾರಾಗುತ್ತಿದ್ದಾರೆ. ಏನಾದರೂ ಆಗಲಿ, ನಮ್ಮ ರಾಜ್ಯದ ಜನರನ್ನು ನಾವು ರಕ್ಷಣೆ ಮಾಡಬೇಕು. ಬೇರೆ ರಾಷ್ಟ್ರಗಳಲ್ಲಿ ಇದ್ದಂತಹ ಸಾಕಷ್ಟು ಜನರು ಕರ್ನಾಟಕಕ್ಕೆ ಬರುತ್ತಿದ್ದಾರೆ. ನೆನ್ನೆಯ ದಿವಸ ನೋಡಿದಂತಹ ಸಮಯದಲ್ಲಿ ಕಲುಬುರ್ಗಿಯಲ್ಲಿ 16 ಜನ ವಿದೇಶಿಗರು ಬಂದಿದ್ದಾರೆ. ನೆನ್ನೆ ಮತ್ತು ಮೊನ್ನೆಯ ದಿವಸ ಕೇಂದ್ರ ಸರ್ಕಾರದಿಂದ ಒಂದು ಗೈಡ್‌ಲೈನ್ಸ್ ಬಂದಿದೆ. ಅದರಲ್ಲಿ ಯಾರೇ ವಿದೇಶಿಗರು ಬಂದಂತಹವರು ಆಗಿರಬಹುದು. ನಮ್ಮ ಭಾರತದಿಂದ ವಿದೇಶಕ್ಕೆ ಹೋದಂತಹ ಎಲ್ಲಾ ಜನರನ್ನು ಮಾನಿಟರ್ ಮಾಡಬೇಕು. ಅವರಿಗೆ thermal testing ಮಾಡಬೇಕು, ಸ್ಕ್ಯಾನಿಂಗ್ ಅನ್ನು ಮಾಡಬೇಕು. ಕಲುಬುರಗಿಯಲ್ಲಿ ಆಗಿರುವ ಘಟನೆಯ ಕುಟುಂಬ ಏನಿದೆ, ಆ ಕುಟುಂಬದ ಸುತ್ತಮುತ್ತಲಿನ 5 ಕಿ.ಮೀ ವರೆಗೂ buffer zone ಆಗಿ declare ಮಾಡಿದ್ದೇವೆ. ಆ buffer zone ನಲ್ಲಿದ್ದಂತಹ ಎಲ್ಲಾ ಮನೆಗಳಿಗೆ ಇವತ್ತು ಎಲ್ಲಾ ರೀತಿಯಲ್ಲಿಯೂ ಕೂಡ isolated ward ಎಂದು ಮಾಡಿ, ಅವರೆಲ್ಲರಿಗೂ ಚಿಕಿತ್ಸೆಯನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಡುತ್ತಿದ್ದಾರೆ. ಯಾರ್‍ಯಾರು ಹೊರಗಡೆ ಬಂದು ಅಡ್ಡಾಡುತ್ತಿದ್ದಾರೋ, ಯಾರು ಕೂಡ ಅಡ್ಡಾಡುವುದಕ್ಕೆ ಹೋಗಬೇಡಿ, ದಯವಿಟ್ಟು ನಿಮ್ಮ ಕೆಲಸಕ್ಕೆ ನೀವು ಹೋಗಿ ಎಂದು ಹೇಳಿದ್ದೇವೆ. ನಾನು ಪ್ರತಿಯೊಂದು ವಿಷಯದ ಬಗ್ಗೆಯೂ ಕೂಡ ಮಾನಿಟರ್ ಮಾಡುತ್ತಿದ್ದೇನೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಯವರಾದ ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಸೂಚನೆಯ ಮೇರೆಗೆ ಇಡೀ ರಾಜ್ಯದಲ್ಲಿಯೇ ಮತ್ತು ಇಡೀ ಭಾರತದಲ್ಲಿಯೇ ಒಂದು ಸಾವು ಕರ್ನಾಟಕದಲ್ಲಿ ಆಗಿದೆ. ಕರ್ನಾಟಕದಲ್ಲಿ ಸಾವು ಆಗಿರುವ ಬಗ್ಗೆ ನನಗೆ ನೋವು ಆಯಿತು. ಈ ರೀತಿ ಆಗಬಾರದಿತ್ತು. ಈ ರೀತಿ ಆಗಿದೆ ಎಂಬ ವಿಷಯವನ್ನು ನಾವು ಗಮನದಲ್ಲಿಟ್ಟುಕೊಂಡು ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕೆಂಬ ಒಂದು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಕೂಡ ನಾವೆಲ್ಲರೂ ಮಾಡುತ್ತಿದ್ದೇವೆ. ಸರ್ಕಾರದಲ್ಲಿ ನಾವು ದಿನನಿತ್ಯ ಸಂಜೆ ಸಮಯ ಎಂದರೆ 4 ಗಂಟೆ ಮತ್ತು 5 ಗಂಟೆಗೆ ಎಲ್ಲಾ ಮಾಧ್ಯಮ ಸ್ನೇಹಿತರಿಗೆ ಒಂದು ಬುಲೆಟಿನ್ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಅದಕ್ಕೋಸ್ಕರ ಮುಂದಿನ ದಿನಗಳಲ್ಲಿ ಇವತ್ತು ಸರ್ಕಾರದ ಜೊತೆಯಲ್ಲಿ ಸಾಕಷ್ಟು ಜನರು ಭಯಭೀತರಾಗಿ ಈ ರೀತಿ ಆಗುತ್ತಿದೆಯೇ, ಇದಕ್ಕೆ ನಾನು ವಿನಂತಿ ಮಾಡುವುದೇನೆಂದರೆ, ನಾವು ಎಲ್ಲಾ ರೀತಿಯಲ್ಲಿಯೂ ಕೂಡ ಮುಂಜಾಗ್ರತ ಕ್ರಮಗಳನ್ನು ಇವತ್ತಿನ ದಿವಸ ಸರ್ಕಾರ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತಿದೆ. ಅದಕ್ಕೋಸ್ಕರ ಇವತ್ತಿನ ದಿವಸ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ, ಜಿಲ್ಲಾ ಆಸ್ಪತ್ರೆಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿರುವ ವೈದ್ಯರುಗಳನ್ನು ರಜೆಯ ಮೇಲೆ ಕಳುಹಿಸುತ್ತಿಲ್ಲ. ಯಾರೂ ಕೂಡ ವೈದ್ಯರುಗಳು ರಜೆಯನ್ನು ತೆಗೆದುಕೊಳ್ಳಬಾರದು. ಏಕೆಂದರೆ, ಆಗಲೇ ಮಾನ್ಯ ಸ್ನೇಹಿತರಾದ ಹಿರಿಯ ಸದಸ್ಯರು ಇದರ ಬಗ್ಗೆ ಹೇಳುತ್ತಿದ್ದರು. ಮಾನ್ಯ ಸಚಿವರಾದ ಶ್ರೀರಾಮುಲುರವರೇ, ನಮ್ಮ ಹತ್ತಿರ ವೈದ್ಯರುಗಳ ಕೊರತೆ ಇದೆ. ಆ ವೈದ್ಯರುಗಳು ಕೊರತೆ ಎಲ್ಲಿ ಇದೆ ಎಂದು ಗೊತ್ತಾಗುತ್ತದೆಯೋ, ಅಂದರೆ ಕಲುಬುರ್ಗಿಯಲ್ಲಿ ಆಗಿರುವ ಘಟನೆಯಂತೆ ಬೇರೆ ಯಾವ ಜಿಲ್ಲೆಗಳಲ್ಲಿಯೂ ಈ ರೀತಿಯ ಘಟನೆ ನಡೆದಿಲ್ಲವೇ, ದಯವಿಟ್ಟು ಎಲ್ಲಿ ಗಂಭೀರವಿದ್ದಂತಹ ಸಂದರ್ಭದಲ್ಲಿ ತಮ್ಮೆಲ್ಲಾ ಕೆಲಸವನ್ನು ಬದಿಗಿಟ್ಟು ಅಲ್ಲಿಗೆ ಹೋಗಿ ಕೆಲಸವನ್ನು ಮಾಡಿ ಅಥವಾ ಬೇರೆ ಜಿಲ್ಲೆಗಳಲ್ಲಿ ಏನಾದರೂ ಅವಕಾಶವಿದ್ದರೆ ಅಲ್ಲಿಗೆ ನಿಯೋಜನೆ ಮೇಲೆ ಕೆಲಸವನ್ನು ಮಾಡುವಂತಹದ್ದನ್ನು ಸಹ ಮಾಡುತ್ತಿದ್ದೇವೆ. ಅದಕ್ಕೋಸ್ಕರ ಈಗತಾನೇ ಬಹಳಷ್ಟು ಮಂದಿ ಸ್ನೇಹಿತರೆಲ್ಲಾ ಸೇರಿಕೊಂಡು ಹೇಳುತ್ತಿದ್ದರು. ಮಾನ್ಯ ಸಚಿವರಾದ ಶ್ರೀರಾಮುಲುರವರೇ, ನಾವು ಇನ್ನು ಬಹಳಷ್ಟು precautionary measures ಅನ್ನು ತೆಗೆದುಕೊಳ್ಳಬೇಕಾಗಿತ್ತು. ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸಭೆಯನ್ನು ಕರೆದಂತಹ ಸಮಯದಲ್ಲಿ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಯವರಾದ ಡಾ॥ ಅಶ್ವಥ್‌ನಾರಾಯಣರವರು, ವೈದ್ಯಕೀಯ ಶಿಕ್ಷಣ ಸಚಿವರಾದ ಡಾ॥ ಸುಧಾಕರ್‌ರವರು ಸಹ ಆ ಸಭೆಯಲ್ಲಿ ಇದ್ದರು. ಏಕೆಂದರೆ, ಒಂದು ವಾರಗಳ ಕಾಲ ರಜೆಯನ್ನು ಘೋಷಣೆ ಮಾಡಿದಂತಹ ಸಮಯದಲ್ಲಿ ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಇದರಲ್ಲಿ ನಮ್ಮದು ಇಷ್ಟೇ ಉದ್ದೇಶ. ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲಿ ಈ ವೈರಸ್ ಹರಡುವುದು ಜಾಸ್ತಿ ಆಗಬಾರದು. ಇದನ್ನು ತಡೆಯಬೇಕಾದರೆ ಏನು ಮಾಡಬೇಕೆಂಬ ಬಗ್ಗೆ ಅನೇಕ ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ. ಈ ನಿರ್ಧಾರಗಳನ್ನು ತೆಗೆದುಕೊಂಡಂತಹ ಸಮಯದಲ್ಲಿ ಇದಕ್ಕೆ ಯಾವುದೇ ಹಣಕಾಸಿನ ತೊಂದರೆ ಇಲ್ಲ. ಹಣಕಾಸು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಚಾರಕ್ಕೆ ಕೇಂದ್ರ ಸರ್ಕಾರ ಸಂಪೂರ್ಣವಾಗಿ ಸಹಕಾರವನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದೆ. ಅದೇ ರೀತಿ ರಾಜ್ಯ ಸರ್ಕಾರ ಕೂಡ ಜವಾಬ್ದಾರಿಯನ್ನು ವಹಿಸಿಕೊಂಡು ಯಾವುದೇ ರೀತಿಯಲ್ಲಿ ಹಣಕಾಸಿನ ತೊಂದರೆ ಬರದಂತೆ ನೋಡಿಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡರವರು ಮತ್ತು ಇನ್ನು ಅನೇಕ ಸದಸ್ಯರು ಕರ್ನಾಟಕದಲ್ಲಿ ಲ್ಯಾಬ್‌ಗಳು ಇಲ್ಲ ಎಂದು ಹೇಳುತ್ತಿದ್ದರು. ಏಕೆಂದರೆ, Chest Diseases ಗೆ ಸಂಬಂಧಪಟ್ಟಂತೆ ಇದ್ದಕ್ಕಿಂತ ಮುಂಚೆ ನಾವು ಆ ಕಫವನ್ನು ಸಂಗ್ರಹಣೆ ಮಾಡಿಕೊಂಡು ಪೂನಾದಲ್ಲಿರುವ ಲ್ಯಾಬ್‌ಗೆ ಕಳುಹಿಸಬೇಕಾಗಿತ್ತು. ಕರ್ನಾಟಕದಲ್ಲಿ ತಕ್ಷಣವೇ *Rajiv Gandhi* Institute of Chest Diseasesಮತ್ತು ಬೆಂಗಳೂರಿನ ಮೆಡಿಕಲ್ ಕಾಲೇಜು ನಿಮ್ಹಾನ್ಸ್‌ನಲ್ಲಿಯೂ ಲ್ಯಾಬ್ ಮಾಡಿದ್ದೇವೆ. ನಂತರ ದಿನಗಳಲ್ಲಿ ಹಾಸನದ ಮೆಡಿಕಲ್ ಕಾಲೇಜು, ಮೈಸೂರು ಮೆಡಿಕಲ್ ಕಾಲೇಜು, ಶಿವಮೊಗ್ಗ ಮೆಡಿಕಲ್ ಕಾಲೇಜುಗಳಲ್ಲಿಯೂ ಶೀಘ್ರದಲ್ಲಿಯೇ ನಮ್ಮ ಕಲ್ಯಾಣ ಕರ್ನಾಟಕದಲ್ಲಿಯೂ ಕೂಡ ಮಾಡಬೇಕೆಂಬ ಅಭಿಪ್ರಾಯ ಬಂದ ನಂತರ ಕಲುಬುರರ್ಗಿ, ಬಳ್ಳಾರಿ, ಹುಬ್ಬಳ್ಳಿ, ಬೆಳಗಾವಿ, ರಾಯಚೂರು ಮತ್ತು ಮಂಗಳೂರು ಈ ಕಡೆ ಎಲ್ಲಾ ಲ್ಯಾಬ್ ಆಗಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರಾದ ಬಿ.ಎಸ್.ಯಡಿಯೂರಪ್ಪನವರು ಪ್ರತಿ ಜಿಲ್ಲೆಯಲ್ಲಿಯೂ ಒಂದು ಕಫಾ ಟೆಸ್ಟ್ ಮಾಡುವ ಲ್ಯಾಬ್ ಆಗಬೇಕೆಂದು ಹೇಳಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಚಿವರೇ ಇದು ಎಷ್ಟು ದಿನಗಳಲ್ಲಿ ಆಗುತ್ತದೆ ಎಂದಾದರೂ ಹೇಳಬೇಕಲ್ಲವೇ.

**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಪ್ರತಿ ಜಿಲ್ಲೆಯಲ್ಲಿಯೂ ಒಂದು ಕೊರೋನಾ ವೈರಸ್ ಬಗ್ಗೆ ಕಫಾ ಟೆಸ್ಟ್ ಮಾಡುವ ಲ್ಯಾಬ್ ಸ್ಥಾಪನೆ ಮಾಡಬೇಕೆಂದು ಹೇಳಿದ್ದಾರೆ. ಇದನ್ನು ಮಾಡುವುದಕ್ಕೆ 15 ದಿವಸಗಳು, ಒಂದು ತಿಂಗಳು ಆಗಬಹುದು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಎಂ.ಸಿ.ವೇಣುಗೋಪಾಲ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಪತಿಯವರೇ, ಒಂದು ನಿಮಿಷ. ಮಾನ್ಯ ಸಚಿವರು ಒಳ್ಳೆಯ ರೀತಿಯಿಂದ ಉತ್ತರವನ್ನು ಕೊಡುತ್ತಿದ್ದಾರೆ. ಇದಕ್ಕೆ ನಾವು ಧನ್ಯವಾದಗಳನ್ನು ತಿಳಿಸುತ್ತೇವೆ. ಆದರೆ, ಇಂತಹ ಸಂದರ್ಭಗಳಲ್ಲಿ ಖಾಸಗಿ ಕಾಲೇಜುಗಳಿಂದ ತಾವು ಏನು ಸೇವೆಯನ್ನು ತೆಗೆದುಕೊಳ್ಳುತ್ತಿದ್ದೀರಿ? ಅವರಿಗೂ ಸಹ ಜವಾಬ್ದಾರಿಯನ್ನು ಕೊಡಿ. ತಾವು ಸಮಾಜದ ದೃಷ್ಟಿಯಲ್ಲಿ ಎಚ್ಚೆತ್ತುಕೊಳ್ಳಬೇಕಾದರೆ ಕೇವಲ ಮೆಡಿಕಲ್ ಕಾಲೇಜುಗಳಲ್ಲಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಶೋಧನಾ ಕೇಂದ್ರವನ್ನು ಸೃಷ್ಠಿ ಮಾಡುವುದಕ್ಕೆ ಅದನೇನು ಕಾರ್ಖಾನೆಗಳಾ? ಅವರು ಮಾತ್ರ ಸಂಶೋಧನೆ ವಿದ್ಯಾರ್ಥಿಗಳಿಗೆ ಇಂತಹ ಕಾರ್ಯಕ್ರಮಗಳನ್ನು ಮಾಡಿದರೆ ಸಾಕಾಗುವುದಿಲ್ಲ. ಖಾಸಗಿಯವರಿಗೂ ಇಂತಹ ಸಂದರ್ಭದಲ್ಲಿ ಅವರು ಹೆಚ್ಚಿನ ಆಸಕ್ತಿಯನ್ನು ವಹಿಸಿ ಸಂಶೋಧನೆಗೆ ಉಪಯೋಗವಾಗುವಂತಹ ಕೆಲಸವನ್ನು ಮಾಡುವುದಕ್ಕೆ ದಾರಿ ಮಾಡಿಕೊಡಿ.

**ಶ್ರೀ ಬಿ.ಎಂ.ಫಾರೂಖ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, we require more Testing Centers. Because, Mangaluru has got an International Airport. ಒಂದು Seaport ಇದೆ. ಆ ಒಂದು ಸೆಂಟರ್‌ಗಳಲ್ಲಿ ಏಕೆ ಒಂದು ಟೆಸ್ಟಿಂಗ್ ಸೆಂಟರ್ ಇಲ್ಲ. Now, lakhs of people are required to be tested. ಈಗ ತಮ್ಮಲ್ಲಿ ಟೆಸ್ಟಿಂಗ್ ಸೆಂಟರ್‌ಗಳು ಎಷ್ಟಿವೆ? ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಟೆಸ್ಟಿಂಗ್ ಸೆಂಟರ್‌ಗಳು ಇದ್ದಾಗ ಅವರು ವೈರಸ್ ಅನ್ನು destroy ಮಾಡುವಂತಹ ಅಗತ್ಯವಿರುತ್ತದೆ. ಅಂತಹದರಲ್ಲಿ police protection ನಲ್ಲಿ ಇಟ್ಟು, under the guidance and protection of the police, ಇದನ್ನು destroy ಮಾಡಲಿ. ಇದಕ್ಕೆ more Testing Centers ಬೇಕಾಗುತ್ತದೆ. ಕೆಲವು ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಆ ರೀತಿಯ ಸೌಲಭ್ಯಗಳು ಇವೆ. Today, Corona virus is a most dangerous virus. ಮಾನ್ಯ ಸಚಿವರೇ, ತಮ್ಮ ಅಧ್ಯಕ್ಷರು ಯಾರೋ ಕಡತವನ್ನು ತಂದು ತಮ್ಮ ಕಡೆಗೆ ಕೊಡುತ್ತಾರೆ. ಆ ಕಡತದಲ್ಲಿ ಈ ವೈರಸ್‌ಗಳು transmit ಆಗುತ್ತವೆ. What is the precaution need to be taken? ಈಗ ಸದನದಲ್ಲಿ ಗಾಜಿನ ಲೋಟದಲ್ಲಿ ನೀರನ್ನು ಕೊಡಲಾಗುತ್ತಿದೆ. It is better to give it in a bottle. ಎಲ್ಲಾ disposable glass ಅನ್ನು ಉಪಯೋಗ ಮಾಡಬೇಕು. Moreover, we need to remove the carpet and put a wooden flooring or something like that. ಇಲ್ಲಿ ನಮಗೆ proper toiletsಇಲ್ಲ, ಇದರಲ್ಲಿ hygiene ಏನೂ ಇಲ್ಲ. ನಾವು ಶೌಚಾಲಯಗಳಿಗೆ ಹೋಗಿ ಸ್ವಚ್ಛ ಮಾಡಿಕೊಂಡು ಬರುತ್ತೇವೆ. ಮತ್ತೆ ಅದೇ ಟ್ಯಾಪ್‌ಗಳನ್ನು ಉಪಯೋಗ ಮಾಡುತ್ತೇವೆ. ಇವತ್ತಿನ ಖಾಸಗಿ ಮೆಡಿಕಲ್ ಕಾಲೇಜಿನ ಒಬ್ಬ ಮಾಲೀಕ ಹೇಳುತ್ತಾನೆ. ನಾನು ಮಾಸ್ಕ್‌ಗಳನ್ನು ಕೊಡುವುದಕ್ಕೆ 80 ರೂಪಾಯಿಗಳನ್ನು ಕೊಟ್ಟು ನಾನು ಎಲ್ಲಿಂದ ತರಲಿ. ಮಾಸ್ಕ್ ಒಂದು 80 ಪೈಸೆ, today it is costing Rs.80. Why should I pay? How many Ventilators we have? ಈಗ ನಾವು 14 ದಿನಗಳು ಅವರನ್ನು quarantine ಮಾಡಬೇಕಾದರೆ, artificial respiratory system ಕೊಡಬೇಕು, to keep them alive. There is no sufficient

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

number of Ventilators. ಖಾಸಗಿ ಆಸ್ಪತ್ರೆಗಳಿಗೂ ತಮಗೆ ಎಷ್ಟು ಸಾಧ್ಯವಾಗುತ್ತದೆಯೋ, ಅಷ್ಟು Ventilators ಗಳನ್ನು ಸರಬರಾಜು ಮಾಡಿ. That is the most critical equipment.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, Private Hospitals are not coming forward. ಅದರ ಬಗ್ಗೆ ಎಚ್ಚರ ತೆಗೆದುಕೊಳ್ಳಬೇಕು.

**ಶ್ರೀ ಬಿ.ಎಂ.ಫಾರೂಖ್:–** ಮಾನ್ಯ ಸಭಾಪತಿಯವರೇ, ಪಿ.ಜಿ. ವಿದ್ಯಾರ್ಥಿಗಳಿಗೆ interns ಗೆ ಅಲ್ಲಿ ರಜೆಯನ್ನು ಕೊಟ್ಟಿರುವುದಿಲ್ಲ. They are also human beings. Doctors are saying there is no proper protection. What are the protection measures we have taken for the safety of Doctors? Their life is also more important ಅಲ್ಲವೇ?

**ಸಭಾಪತಿಯವರು:–** ಮಾನ್ಯ ಸಚಿವರಾದ ಬಿ.ಶ್ರೀರಾಮುಲುರವರೇ, . . .

**ಶ್ರೀ ಬಿ. ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, . . .

**ಶ್ರೀ ತಿಮ್ಮಪ್ಪ ಕಮಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, . .

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ತಿಮ್ಮಪ್ಪ ಕಮಕನೂರರವರೇ, ಒಂದು ನಿಮಿಷ. Hon'ble Minister for Medical Education statement ಮಾಡಿದ ದಿವಸ ನಾವೆಲ್ಲರೂ ಇದರ ಬಗ್ಗೆ ಮಾನ್ಯ ಸಚಿವರಿಗೆ ಗಡಿನಾಡು ಪ್ರದೇಶಗಳಾದ ಗುಲ್ಬರ್ಗಾ, ಬೀದರ್, ರಾಯಚೂರು ಮತ್ತು ಮಂಗಳೂರು ಇಂತಹ ಪ್ರದೇಶಗಳಲ್ಲಿ ಮೊದಲು ಲ್ಯಾಬೋರೇಟರಿ ಮಾಡಬೇಕೆಂದು ಹೇಳಿದ್ದೇವೆ. ಇವತ್ತು ಇವರು ಶಿವಮೊಗ್ಗ, ಹಾಸನ, ಇಂತಹ ಪ್ರದೇಶಗಳಲ್ಲಿ ಈ ಲ್ಯಾಬೋರೇಟರಿಗಳನ್ನು ಮಾಡಿದ್ದಾರೆ. ಈ ಗಡಿನಾಡು ಪ್ರದೇಶಗಳಲ್ಲಿ ಮಾಡಿರುವುದಿಲ್ಲ. ರಾಯಚೂರು ಜಿಲ್ಲೆಯಲ್ಲಿ ಎರಡು ಸರ್ಕಾರಿ ಆಸ್ಪತ್ರೆಗಳು ಇವೆ. ಖಾಸಗಿ ಆಸ್ಪತೆಗಳು ಸೂಪರ್ ಸ್ಪೆಷ್ಯಾಲಿಟಿ ಆಸ್ಪತ್ರೆ ಕೂಡ ಇದೆ. ಇದನ್ನು ಮಾನ್ಯ ಸಚಿವರು ಗಡಿನಾಡು ಪ್ರದೇಶಗಳಲ್ಲಿ ಮಾಡಬೇಕು. ಹಾಸನ ಶಿವಮೊಗ್ಗ ಇನ್ನು ಮೊದಲಾದವುಗಳ ಕಡೆ ನಂತರ ಮಾಡಿ. ತಾವು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದೀರಿ. ತಮಗೂ ಕೂಡ ಇದರ ಬಗ್ಗೆ ಗೊತ್ತಿದೆ. ಪ್ರತಿನಿತ್ಯ ಹೈದರಾಬಾದ್‌ನಿಂದ ನೂರಾರು ಮಂದಿ ರಾಯಚೂರಿಗೆ ಬಂದು, ಮತ್ತೆ ರಾಯಚೂರಿನಿಂದ ಹೈದರಾಬಾದ್‌ಗೆ ಹೋಗುತ್ತಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ತಿಮ್ಮಪ್ಪ ಕಮಕನೂರ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುವುದೇನೆಂದರೆ, ನಾನು ಗುಲ್ಬರ್ಗಾದವನೇ ಆಗಿರುವುದರಿಂದ, ನಾನು ಇದರ ಬಗ್ಗೆ ತಮಗೆ ಮನವರಿಕೆ ಮಾಡಿಕೊಡಲೇ ಬೇಕಾಗುತ್ತದೆ. ಗುಲ್ಬರ್ಗಾದಲ್ಲಿ ಒಬ್ಬ ವ್ಯಕ್ತಿ ತೀರಿ ಹೋದ ಸಂದರ್ಭದಲ್ಲಿ ತಾವು ತಕ್ಷಣ ಗುಲ್ಬರ್ಗಾಕ್ಕೆ ಭೇಟಿ ಕೊಟ್ಟು, ಅಲ್ಲಿಯ ಜಿಲ್ಲಾಡಳಿತಕ್ಕೆ ಚುರುಕು ಮೂಡಿಸುವಂತಹ ಕೆಲಸವನ್ನು ತಾವು ಮಾಡಿರುವುದಕ್ಕೆ ನಾನು ಗುಲ್ಬರ್ಗಾ ಜನತೆಯ ಕಡೆಯಿಂದ ಹಾರ್ದಿಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮಲ್ಲಿ ಪರಿಸ್ಥಿತಿ ಏನಿದೆ ಎಂದರೆ, ಮಾನ್ಯ ಆರೋಗ್ಯ ಸಚಿವರೇ, ನಮ್ಮ ಕಡೆಯಲ್ಲಿ ಮಾಸ್ಕ್‌ಗಳ ತೊಂದರೆ ಬಹಳವಾಗಿದೆ. ನೆನ್ನೆಯ ದಿವಸ ನನಗೆ ಒಂದು ಮಾಸ್ಕ್‌ನ್ನು ತೆಗೆದುಕೊಳ್ಳಬೇಕೆಂದಾಗ ಮೆಡಿಕಲ್ ಸ್ಟೋರ್‌ನಲ್ಲಿ ಒಂದು ಮಾಸ್ಕ್ 450 ರೂಪಾಯಿಗಳಿಗೆ ಮಾರಾಟವಾಗಿದೆ. 450 ರೂಪಾಯಿಗಳನ್ನು ಕೊಟ್ಟರೂ ಸಹ ಮಾಸ್ಕ್‌ಗಳು ಸಿಗುತ್ತಿಲ್ಲ. ನಂತರ ನಾನು ಮುಖ್ಯ ಕಾರ್ಯದರ್ಶಿಯವರಿಗೂ ಕೂಡ ಪೋನ್ ಮಾಡಿ ನಿಮ್ಮ ಕಡೆ ಯಾವುದಾದರೂ ಮಾಸ್ಕ್‌ಗಳು ಸಿಗುವ ಆಗಿದ್ದರೆ ಕೊಡಿ ಎಂದು ಕೇಳಿದೆ. ಅವರು ಕೊಟ್ಟು ಕಳುಹಿಸುತ್ತೇನೆ ಎಂದು ಹೇಳಿದರು. ಆದರೆ ಅವರು ಕೂಡ ಮಾಸ್ಕ್‌ಗಳನ್ನು ಕೊಟ್ಟು ಕಳುಹಿಸಲಿಲ್ಲ. ದಯವಿಟ್ಟು, ಗುಲ್ಬರ್ಗಾಕ್ಕೆ ಹೆಚ್ಚಾಗಿ ಮಾಸ್ಕ್‌ಗಳನ್ನು ಒದಗಿಸಬೇಕು. ಏಕೆಂದರೆ, ಅಲ್ಲಿನ ಜನರು ತುಂಬಾ ಭಯಭೀತರಾಗಿದ್ದಾರೆ. ತಾವು ಹೇಳಿರುವ ಪ್ರಕಾರ ಗುಲ್ಬರ್ಗಾದಲ್ಲಿ ಯಾವುದೇ ವ್ಯಕ್ತಿ ತೀರಿಕೊಂಡಿಲ್ಲ. ಆ ವ್ಯಕ್ತಿ ಮತ್ತೆ ಹೈದರಾಬಾದ್‌ಗೆ ಹೋಗಿ ಹೈದರಾಬಾದ್‌ನಲ್ಲಿ ಅಲ್ಲಿ ತೀರಿಕೊಂಡಿದ್ದಾನೆ. ಆದರೂ ಕೂಡ ಆ ವ್ಯಕ್ತಿ ಗುಲ್ಬರ್ಗಾದಲ್ಲಿ ತೀರಿಕೊಂಡಿದ್ದಾನೆ ಎಂದು ಟಿ.ವಿ.ಮಾಧ್ಯಮಗಳಲ್ಲಿ ತೋರಿಸುತ್ತಿರುವುದರಿಂದ, ಇದರ ಬಗ್ಗೆ ನಮ್ಮ ಗುಲ್ಬರ್ಗಾ ಜನರು ಹೆಚ್ಚಾಗಿ ಭಯಪಡುತ್ತಿದ್ದಾರೆ. ಮಾನ್ಯ ಸಚಿವರೇ, ದಯವಿಟ್ಟು ಮಾಸ್ಕ್‌ಗಳ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಮ್ಮೆಲ್ಲಾ ಗೌರವಾನ್ವಿತ ಸದಸ್ಯರು ಇದರ ಬಗ್ಗೆ ಹೆಚ್ಚು ನಂಬಿಕೆ ಇಟ್ಟು ಹೇಳಿರುವುದೇನೆಂದರೆ, ಪ್ರತಿ ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ well-equipped ಒಂದು ಲ್ಯಾಬ್ ರೀತಿಯಲ್ಲಿ ಮಾಡಬೇಕು. ಅದರ ಜೊತೆಗೆ ಪ್ರತಿ ಜಿಲ್ಲಾ ಆಸ್ಪತ್ರೆಗಳಲ್ಲಿ Isolation Wards ಅನ್ನು ಮಾಡಬೇಕು. Isolation Ward ನಲ್ಲಿ ಇರುವಂತಹ ಪ್ರತಿಯೊಬ್ಬ ರೋಗಿಗೂ ವೆಂಟಿಲೇಟರ್ ಇರುವಂತಹ ಒಂದು ವ್ಯವಸ್ಥೆಯಾಗಬೇಕು. ನಾವು insist ಮಾಡುವಂತಹ ಗಡಿನಾಡು, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ಪ್ರತಿ ಜಿಲ್ಲಾ ಆಸ್ಪತ್ರೆಗಳಲ್ಲಿ well-equipped ಲ್ಯಾಬ್ ಮಾಡಬೇಕು. ಎರಡನೆಯದು, ಪ್ರತಿ ಆಸ್ಪತ್ರೆಗಳಲ್ಲಿಯೂ ಸಹ Special Ward ಗಳನ್ನು ಮಾಡಬೇಕು. Isolation Ward ಪ್ರತಿ ಜಿಲ್ಲೆಯಲ್ಲಿಯೂ ಮಾಡಬೇಕು. ಈ ಜಿಲ್ಲೆಗೆ ಮಾಡಿದ್ದೇನೆ, ಹಾಸನ, ಶಿವಮೊಗ್ಗ ಜಿಲ್ಲೆಗೆ ಮಾಡಿದ್ದೇನೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳುವುದಲ್ಲ. ಒಟ್ಟು ನಮ್ಮ ಜಿಲ್ಲಾ ಆಸ್ಪತ್ರೆಗಳು ಎಷ್ಟಿವೆ, ಪ್ರತಿ ಆಸ್ಪತ್ರೆಗಳಲ್ಲಿಯೂ well-equipped lab and one Special Ward for isolation purpose ಇವು ಬಹಳ ಅವಶ್ಯಕತೆ ಇದೆ.

(ಮುಂದು)

**(450) 16/03/2020/6:10/ಎಸ್‌ಪಿಆರ್/ಜಿಆರ್**
**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ, ಇತರೆ ರೋಗಿಗಳಿಗೆ medical equipments, ventilators ಇವುಗಳ ವ್ಯವಸ್ಥೆಯನ್ನು ಮಾಡಬೇಕು. ಮಾನ್ಯ ಮಂತ್ರಿಗಳು ತಮ್ಮ ಮಾತುಗಳನ್ನು ಪೂರ್ಣಗೊಳಿಸುವಾಗ ಇಂತಹ ಎಲ್ಲಾ ಅಂಶಗಳ ಬಗ್ಗೆ ವಿವರಿಸಿದಾಗ, ನಾವು ಪುನಃ ಸ್ಪಷ್ಟೀಕರಣ ಕೇಳುವ ಅವಶ್ಯಕತೆ ಇರುವುದಿಲ್ಲ.

**ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ):-** ಮಾನ್ಯ ಸಭಾಪತಿಯವರೇ, ಸಾಕಷ್ಟು . . .

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಬಹಳ ಮುಖ್ಯವಾದ ಬಾರ್ ಮತ್ತು ರೆಸ್ಟೋರೆಂಟ್ . . .

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಈ ಸದನದ ಎಲ್ಲಾ ಹಿರಿಯ ಸದಸ್ಯರು ಈ ವಿಚಾರದಲ್ಲಿ ತಮ್ಮ ಸಲಹೆಗಳನ್ನು ನೀಡುತ್ತಾ, ಸಾಕಷ್ಟು ಕಡೆ ಮಾಸ್ಕ್‌ಗಳ ತೊಂದರೆ ಇದೆ ಎಂದು ತಿಳಿಸಿದ್ದಾರೆ. ನಮ್ಮ ಬಳಿ ಮೂರು ತಿಂಗಳಿಗೆ ಬೇಕಾಗುವಷ್ಟು ಮಾಸ್ಕ್‌ಗಳಿವೆ. ಅದೇ ರೀತಿಯಲ್ಲಿ thermal scanning for personal protection ಏನಿತ್ತು,

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಸ್ಟೋರ್‌ಗಳಲ್ಲಿ ಮಾಸ್ಕ್‌ಗಳು ಲಭ್ಯವಿಲ್ಲವೆಂದು ಸಾರ್ವಜನಿಕರು ತಿಳಿಸುತ್ತಿದ್ದಾರೆ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಸರ್ಕಾರದ ವತಿಯಿಂದ ಜೆನರಿಕ್ ಔಷಧಿ ಮಳಿಗೆಗಳಲ್ಲಿ ಮಾಸ್ಕ್‌ಗಳನ್ನು ಸರಬರಾಜು ಮಾಡಲು ಆದೇಶಿಸಿದೆ. ಏಕೆಂದರೆ, ನಮ್ಮ ಬಳಿ ಮೂರು ತಿಂಗಳಿಗೆ ಬೇಕಾಗುವಷ್ಟು ಮಾಸ್ಕ್‌ಗಳು ಈಗಾಗಲೇ ಲಭ್ಯವಿದೆ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಎಲ್ಲಿ ಕೇಳಿದರೂ ಸಹ ಮಾಸ್ಕ್‌ಗಳು ಸಿಗುತ್ತಿಲ್ಲ. ಆದರೆ ಮಾನ್ಯ ಮಂತ್ರಿಗಳು ಮಾಸ್ಕ್‌ಗಳು ಸಿಗುತ್ತಿವೆ ಎಂದು ಹೇಳುತ್ತಿದ್ದಾರೆ. ನಾವು ಮಾಸ್ಕ್‌ಗಳು ಸಿಗುತ್ತಿಲ್ಲವೆಂದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೇಳುತ್ತಿದ್ದೇವೆ. ಇದು ಯಾವ ರೀತಿಯ ಪರಿಪಾಠ? ನಾವೇ ಸ್ವತಃ ಅಡ್ಡಾಡಿದರೂ ಸಹ ಮಾಸ್ಕ್‌ಗಳು ದೊರೆಯುತ್ತಿಲ್ಲ. ಇದಕ್ಕೆ ನಾವೇನೆಂದು ಹೇಳೋಣ?

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮಲ್ಲಿ ಮೂರು ತಿಂಗಳಿಗೆ ಅವಶ್ಯಕವಾಗಿರುವ ಮಾಸ್ಕ್‌ಗಳು ಲಭ್ಯವಿದೆ. ಆಕಸ್ಮಾತಾಗಿಯೂ ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಮಾಸ್ಕ್‌ಗಳು ಇಲ್ಲ ಅಥವಾ ಅವುಗಳನ್ನು ಬ್ಲಾಕ್‌ನಲ್ಲಿ ಮಾರಾಟ ಮಾಡುತ್ತಿದ್ದರೆ,

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿಯೇ ಮಾಸ್ಕ್‌ಗಳು ದೊರೆಯುತ್ತಿಲ್ಲ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಕಿರಾಣಿ ಅಂಗಡಿಗಳಲ್ಲಿ ಮಾರಾಟವಾಗುತ್ತಿದ್ದರೆ, ಅವಶ್ಯವಿದ್ದರೆ ಅಂತಹ ಔಷಧಿ ಅಂಗಡಿಗಳ ಪರವಾನಿಗೆಯನ್ನು ರದ್ದುಗೊಳಿಸುವ ಕ್ರಮಗಳನ್ನು ಸರ್ಕಾರವು ತೆಗೆದುಕೊಳ್ಳುತ್ತದೆ. ಕೆಲವೊಂದು ಜಿಲ್ಲೆಗಳಲ್ಲಿ ಮಾಸ್ಕ್‌ಗಳು ದೊರೆಯುತ್ತಿಲ್ಲವೆಂದು ಕೆಲವು ಸದಸ್ಯರು ಹೇಳುತ್ತಿದ್ದಾರೆ. ನಮ್ಮ ಸರ್ಕಾರವು ಈ ವಿಷಯದಲ್ಲಿ ಅವಶ್ಯಕವಿರುವ ಹಾಗೂ ಎಲ್ಲಾ ಕಡೆ ಮಾಸ್ಕ್‌ಗಳು ದೊರೆಯುವಂತಹ ಎಲ್ಲಾ ವ್ಯವಸ್ಥೆಗಳನ್ನು ಮಾಡುವ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ. ಇವತ್ತಿನ ದಿವಸ ಕರೋನಾ ವೈರಸ್ ಕಾಯಿಲೆ ಬಂದ ನಂತರದ ದಿನದಿಂದ ಇಂದಿನವರೆಗೂ ರಾಜ್ಯ ಸರ್ಕಾರ ಸುಮಾರು 36 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರವು ತನ್ನ ಅನುದಾನವನ್ನು ನೀಡಿದೆ. ಯಾವುದೇ ಹಣಕಾಸಿನ ತೊಂದರೆ ಇರಲಾರದಂತೆ, ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಈಗಾಗಲೇ ಆದೇಶ ನೀಡಲಾಗಿದೆ. ಈ ವಿಚಾರದಲ್ಲಿ ಎಲ್ಲಾ ಸದಸ್ಯರುಗಳು ತಮ್ಮ ಸಲಹೆಗಳನ್ನು ನೀಡಿದ್ದಾರೆ. ನಮ್ಮೆಲ್ಲರ ಉದ್ದೇಶವೇನೆಂದರೆ, ಇಷ್ಟು ದೊಡ್ಡ ವೈರಸ್ ಹರಡಿದಾಗ, ನಾವುಗಳೆಲ್ಲರೂ ಒಗ್ಗಟ್ಟಾಗಿ ಅದನ್ನು ಎದುರಿಸಬೇಕಾಗಿದೆ. ಕೇವಲ ಒಬ್ಬ ಮಂತ್ರಿ ಅಥವಾ ಸರ್ಕಾರ ಈ ವಿಚಾರದಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಎಲ್ಲರೂ ಒಂದಾಗಬೇಕು. ಇವತ್ತಿನ ದಿವಸ ಈ ವೈರಸ್ ಹೇಗೆ ಹರಡುತ್ತದೆ ಎನ್ನುವ ಬಗ್ಗೆ ಬಹಳಷ್ಟು ಜನರಿಗೆ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಜನರಿಗೆ ಮಾಹಿತಿ ಇಲ್ಲ. ಉಪಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಪ್ರತಿಯೊಂದು ಜಿಲ್ಲೆಗಳಲ್ಲಿ ತಪಾಸಣಾ ಲ್ಯಾಬ್‌ಗಳು ಆಗಬೇಕೆಂದು ಈಗಾಗಲೇ ಹೇಳಿದ್ದಾರೆ.

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನೊಂದು ಸ್ಪಷ್ಟೀಕರಣವನ್ನು ಕೇಳಬಯಸುತ್ತೇನೆ. ಮೊನ್ನೆಯ ದಿವಸ ಮಾನ್ಯ ಮರಿತಿಬ್ಬೇಗೌಡರು ಸದನದಲ್ಲಿ ಮಾತನಾಡುವಾಗ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Brandyಯಿಂದ ವೈರಸ್‌ನ್ನು ಕಡಿಮೆ ಮಾಡಬಹುದು ಎಂಬುದಾಗಿ ಹೇಳಿದ್ದಾರೆ. ಇದರಿಂದ ನಮಗೆ ಸ್ವಲ್ಪ ಗೊಂದಲವಾಗಿದೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ವಿದೇಶಗಳಲ್ಲಿ ಓದುವ ವಿದ್ಯಾರ್ಥಿಗಳ ಬಗ್ಗೆ ಮಾನ್ಯ ಮಂತ್ರಿಗಳು ಏನನ್ನೂ ಹೇಳಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್‌ರವರು ಹೇಳಿರುವ ವಿಚಾರವನ್ನು ಬಿಟ್ಟುಬಿಡಿ. ಟಿ.ವಿ. ಮಾಧ್ಯಮದವರು ಈ ವಿಚಾರದ ಬಗ್ಗೆ ಒಂದು ಗಂಟೆಗಳ ಕಾಲ ನಮ್ಮನ್ನು ಬೈದಿದ್ದಾರೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಚಾರದ ಕುರಿತಾಗಿ ನಾನು ವೈದ್ಯರನ್ನು ಕೇಳಿದ್ದೇನೆ. ನಾನು ಆ ರೀತಿಯ ಯಾವುದೇ ಪ್ರಕರಣಗಳಾಗಿವೆಯೇ ಎಂದು ಮಾನ್ಯ ಸದಸ್ಯರನ್ನು ಕೇಳಬಯಸುತ್ತೇನೆ. ಏಕೆಂದರೆ, Brandy ಯಿಂದ ದೇಹದೊಳಗೆ... ನಾನು ಈ ವಿಚಾರವಾಗಿ ಯಾವುದೇ ತಮಾಷೆಯನ್ನು ಮಾಡುತ್ತಿಲ್ಲ. ಈ ವಿಚಾರದ ಬಗ್ಗೆ ನಾವು ವೈದ್ಯರೊಂದಿಗೆ ಚರ್ಚೆ ಮಾಡಿದಾಗ ...

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಈ ಕಾಯಿಲೆಯನ್ನು ನಿಯಂತ್ರಣ ಮಾಡುವಲ್ಲಿ ಯಾವ ರೀತಿಯ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ವಿಜ್ಞಾನಿಗಳ ಮತ್ತು ಹೆಚ್ಚಿನ ತಜ್ಞ ವೈದ್ಯರುಗಳ ತಂಡವೊಂದನ್ನು ಸರ್ಕಾರ ರಚನೆ ಮಾಡಬೇಕು. ಅದು ಸಂಶೋಧನಾ ವಿಭಾಗವಾಗಿರಬೇಕು. ಈ ವಿಚಾರದಲ್ಲಿ ಮದ್ದು ಅಥವಾ ಚಿಕಿತ್ಸೆಗಳನ್ನು ನೀಡುವ ಪ್ರಯತ್ನವನ್ನು ಸರ್ಕಾರ ಮಾಡಬೇಕು. ನಮ್ಮ ರಾಜ್ಯದ ಅರಕಲಗೂಡು ತಾಲ್ಲೂಕಿನ ವೈದ್ಯರೊಬ್ಬರು World Health Organisation ನ ತಜ್ಞರ ತಂಡದಲ್ಲಿದ್ದಾರೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ವಿದೇಶಗಳಲ್ಲಿ ಓದುವ ವಿದ್ಯಾರ್ಥಿಗಳ ಬಗ್ಗೆ ಮಾನ್ಯ ಮಂತ್ರಿಗಳು ಏನನ್ನೂ ಹೇಳಿಲ್ಲ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ನನ್ನ ಮಾತುಗಳನ್ನು ಪೂರ್ಣಗೊಳಿಸಿಲ್ಲ. ಈ ವಿಚಾರದಲ್ಲಿ ಎಲ್ಲಾ ಸದಸ್ಯರುಗಳು ರಾಜ್ಯದ ಎಲ್ಲಾ ಕಡೆಗಳಲ್ಲಿ ಲ್ಯಾಬ್‌ಗಳ ನಿರ್ಮಾಣವಾಗಬೇಕೆಂದು ನೀಡಿರುವ ಸಲಹೆಗೆ ಪೂರಕವಾಗಿ, ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. Because, labs are very important. ಪ್ರತಿಯೊಂದು ಜಿಲ್ಲೆಗೆ ಒಂದೊಂದು ಲ್ಯಾಬ್‌ಗಳಾಗಬೇಕೆಂಬ ತೀರ್ಮಾನವನ್ನು ಮುಖ್ಯಮಂತ್ರಿಗಳು ತೆಗೆದುಕೊಂಡಿದ್ದಾರೆ. ಇದರ ಜೊತೆಗೆ, ಇವತ್ತಿನ ದಿವಸ ಎಲ್ಲಾ ರೀತಿಯ ಸಾಮಾಜಿಕ ಜಾಲ ತಾಣಗಳಲ್ಲಿ ಅಂದರೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Whatsapp, Facebook ಗಳಲ್ಲಿ sanitizers ಮತ್ತು ಮಾಸ್ಕ್‌ಗಳು ಲಭ್ಯವಿಲ್ಲ ಎಂಬ ಮಾಹಿತಿಯು ಬರುತ್ತಿದೆ. ಎಲ್ಲರೂ ಮಾಸ್ಕ್‌ಗಳ ಬದಲಾಗಿ ಕರ್ಚೀಫ್‌ಗಳನ್ನು ಬಳಸಬಹುದು ಅಥವಾ ಹಳೆಯ ಹತ್ತಿಯ ಬಟ್ಟೆಗಳಿಗೆ ನೀಲಗಿರಿ ತೈಲವನ್ನು ಹಾಕಿಯೂ ಸಹ ಬಳಸಬಹುದು. ಕರ್ಚೀಫ್ ಅಥವಾ ಬಟ್ಟೆಯನ್ನು ಕಟ್ಟಿಕೊಂಡು ಮೂಗನ್ನು ಮುಚ್ಚಿಕೊಳ್ಳಬಹುದು. ಮಾಸ್ಕೇ ಬೇಕು ಎನ್ನುವಂತಹದ್ದು ಏನೂ ಇಲ್ಲ. ಇವತ್ತಿನ ದಿವಸ ಆದಷ್ಟು ಉಳಿತಾಯ ಮಾಡುವಂತಹ ಕೆಲಸಗಳನ್ನು ನಾವು ಮಾಡಬೇಕು. ಜನರನ್ನು . . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಮಾಸ್ಕ್‌ನ ಅವಶ್ಯಕತೆ ಇದೆ. ಆದರೆ ಮಾನ್ಯ ಮಂತ್ರಿಗಳು ಕೇವಲ ಒಂದು ಬಟ್ಟೆಯನ್ನು ಕಟ್ಟಿಕೊಂಡು ಓಡಾಡಿ ಎಂದು ಹೇಳುತ್ತಿದ್ದಾರೆ. ಮಂತ್ರಿಗಳು ಸರ್ಕಾರವಾಗಿದ್ದಾರೆ. He is the Government. ಸರ್ಕಾರವು ಮಾಸ್ಕ್‌ಗಳನ್ನು ಒದಗಿಸಬೇಕು. ಎಲ್ಲಿ ಮಾಸ್ಕ್‌ಗಳನ್ನು ಬ್ಲಾಕ್‌ಗಳಲ್ಲಿ ಮಾರಾಟ ಮಾಡುತ್ತಾರೆ ಅಂತಹವರುಗಳನ್ನು ಹಿಡಿದು, ಶಿಕ್ಷೆಗೊಳಪಡಿಸಬೇಕು. ಒಟ್ಟಾರೆಯಾಗಿ ಮಾಸ್ಕ್‌ಗಳು ಎಲ್ಲಾ ಕಡೆಗಳಲ್ಲಿ ದೊರೆಯುವಂತಾಗಬೇಕು.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನೀಡಿರುವ ಸಲಹೆಯಂತೆ ಕ್ರಮಗಳನ್ನು ತೆಗೆದು ಕೊಳ್ಳಲಾಗುವುದು.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಾವು ಆಗಲೇ ಮಾತನಾಡುತ್ತಿರುವಾಗ ಪ್ರಸ್ತಾಪಿಸಿದಂತೆ, ನಾವುಗಳು ಬಳಸುತ್ತಿರುವ ಮಾಸ್ಕ್‌ಗಳು single layer ಆಗಿರುವುದರಿಂದ ಯಾವುದೇ ಪ್ರಯೋಜನವಾಗುತ್ತಿಲ್ಲ. ಮಾಸ್ಕ್‌ಗಳು six layer ಇರಲೇಬೇಕೆಂದು ಹೇಳುತ್ತಾರೆ. ಆದರೆ ಮಾನ್ಯ ಮಂತ್ರಿಗಳು ಕೇವಲ ಒಂದು ಬಟ್ಟೆಯನ್ನು ಕಟ್ಟಿಕೊಳ್ಳುವಂತೆ ಹೇಳುತ್ತಿದ್ದಾರೆ. ಇದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ನಗರ ಪ್ರದೇಶಗಳಲ್ಲಿ ಮಾತ್ರವೇ ಈ ಕಾಯಿಲೆಯ ಬಗ್ಗೆ ಮಾಹಿತಿ ಇದೆ. ಆದರೆ ಗ್ರಾಮೀಣ ಪ್ರದೇಶದ ನಿವಾಸಿಗಳಿಗೆ ಈ ಕಾಯಿಲೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ನಿನ್ನೆಯ ದಿವಸ ಕಲಬುರಗಿಯ ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ದೃಶ್ಯಗಳನ್ನು ನೋಡಿದಾಗ ನನಗೆ ಭಯವಾಯಿತು. ಅಲ್ಲಿ ಪ್ರತ್ಯೇಕ ವಾರ್ಡಿನ ಹೊರಗಡೆ ನಿಂತಿರುವವರು ಯಾವುದೇ ಮುಂಜಾಗ್ರತಾ ಧಿರಿಸುಗಳನ್ನು ಹಾಕಿಕೊಂಡಿರಲಿಲ್ಲ. ಈ ಕಾಯಿಲೆ ಹಾಗೂ ಮುಂಜಾಗ್ರತಾ ಕ್ರಮಗಳ ಬಗ್ಗೆ ಬಹಳಷ್ಟು ಜನರಿಗೆ ತಿಳುವಳಿಕೆ ಇಲ್ಲ. ಕಾಯಿಲೆಯ ಬಗ್ಗೆ ಮಾಹಿತಿ ಇಲ್ಲದವರಿಗೆ ಇವತ್ತಿನ ದಿವಸ publicity ನೀಡುವುದಕ್ಕಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಸಾಕಷ್ಟು ಮಾಹಿತಿಗಳನ್ನು ನೀಡುವ ನಿಟ್ಟಿನಲ್ಲಿ ದಿನಪತ್ರಿಕೆಗಳಲ್ಲಿ pamphlets

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಗಳನ್ನು ಇಟ್ಟಿದ್ದೇವೆ. ಇದರ ಜೊತೆಗೆ ಎಲ್.ಇ.ಡಿ., ವಾಹನಗಳಲ್ಲಿ ಇನ್ನಿತರೆ ಬೇರೆ ರೀತಿಯ ಸಾಂಕ್ರಾಮಿಕ ಕಾಯಿಲೆಗಳ ಮಾಹಿತಿಯ ಬದಲಾಗಿ ಕೇವಲ ಕರೋನಾ ವೈರಸ್‌ನ ಕುರಿತಾಗಿ ಮಾತ್ರವೇ ಪ್ರಸಾರ ಮಾಡಿ ಇದರ ಬಗ್ಗೆ ಜಾಗೃತಿಯನ್ನು ಮೂಡಿಸುವ ಕೆಲಸಗಳನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ಆಶಾ ಕಾರ್ಯಕರ್ತರು ಹಾಗೂ ಆರೋಗ್ಯ ಮಿತ್ರರು ಗ್ರಾಮೀಣ ಭಾಗದಲ್ಲಿನ ಎಲ್ಲಾ ಮನೆಗಳಿಗೆ ತೆರಳಿ ಕಾಯಿಲೆಯ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದೆ. ಕೇವಲ ಒಬ್ಬ ಮಂತ್ರಿ ಹಾಗೂ ಸರ್ಕಾರದಿಂದ ಎಲ್ಲಾ ಕೆಲಸಗಳಾಗುವುದಿಲ್ಲ. ಎಲ್ಲರ ಪರಿಶ್ರಮದಿಂದಾಗಿ ಈ ಯೋಜನೆಯು ಯಶಸ್ವಿಗೊಳ್ಳುತ್ತದೆ. ಈ ಸಮಯದಲ್ಲಿ ಎಲ್ಲರ ಸಹಕಾರ ಅವಶ್ಯಕವಾಗಿದೆ. ಒಂದು ಬಾರಿ ಬಳಕೆ ಮಾಡಿದ ಮಾಸ್ಕ್‌ಗಳನ್ನು ತಿಪ್ಪೆ ಗುಂಡಿಗೆ ಹಾಕಿದರೆ, ಅವುಗಳನ್ನು ತೊಳೆದು ಪುರ್ನಬಳಕೆ ಮಾಡುತ್ತಿದ್ದಾರೆ ಎಂಬ ಮಾಹಿತಿಯನ್ನು ಶ್ರೀ ಆನಂದ್ ಸಿಂಗ್, ಶ್ರೀ ತಿಮ್ಮಾಪೂರ ಮತ್ತು ಶ್ರೀ ಎಂ.ನಾರಾಯಣಸ್ವಾಮಿ ರವರುಗಳು ನೀಡಿದ್ದಾರೆ. ಅಂತಹ ಮಾಸ್ಕ್‌ಗಳು ಕಿರಾಣಿ ಅಂಗಡಿಗಳಲ್ಲಿ ಮಾರಾಟವಾಗುತ್ತಿವೆ. ಈ ವಿಚಾರದಲ್ಲಿ ಹೆಚ್ಚಿನ ನಿಗಾ ವಹಿಸುವಂತೆ ಹಾಗೂ ಅಕ್ರಮ ಕಂಡುಬಂದಲ್ಲಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವಂತೆ ಇಲಾಖೆಯ ಡಿ.ಹೆಚ್.ಓ. ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಆದೇಶವನ್ನು ನೀಡಲಾಗಿದೆ. ಇವತ್ತಿನ ದಿವಸ ಇಟಲಿ ಮತ್ತು ದುಬೈ ದೇಶಗಳಲ್ಲಿ ಕರೋನಾ ವೈರಸ್ ಕಾಯಿಲೆಯಿಂದ ನಮ್ಮ ಭಾರತೀಯರು ಸಿಕ್ಕಿಹಾಕಿಕೊಂಡಿದ್ದಾರೆ ಎಂದು ಶ್ರೀ ಆನಂದ್ ಸಿಂಗ್ ಮತ್ತು ಶ್ರೀ ತಿಮ್ಮಾಪೂರ ರವರುಗಳು ಪ್ರಸ್ತಾಪಿಸಿದ್ದಾರೆ. ಅಲ್ಲಿ ಜನರ ಹಾಗೂ ವಿದ್ಯಾರ್ಥಿಗಳ ಪರಿಸ್ಥಿತಿಯ ಬಗ್ಗೆ ಏನು ಎಂದು ಮಾನ್ಯ ಸದಸ್ಯರುಗಳು ಪ್ರಶ್ನಿಸುತ್ತಿದ್ದರು. ಇಟಲಿಯ ವಿಮಾನ ನಿಲ್ದಾಣದಲ್ಲಿದ್ದ ರೋಮ್ ಮತ್ತು ಮಿಲಾನ್‌ನ ಸುಮಾರು 211 ವಿದ್ಯಾರ್ಥಿಗಳು ನನ್ನನ್ನು video call ಮುಖಾಂತರ ಸಂಪರ್ಕಿಸಿ ಮಾತನಾಡಿದಂತಹ ಸಂದರ್ಭದಲ್ಲಿ 'ತಾವುಗಳೆಲ್ಲರೂ ವಿಮಾನ ನಿಲ್ದಾಣದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ, ದಯಮಾಡಿ ಏನಾದರೂ ಮಾಡಿ ನಮ್ಮನ್ನು ರಕ್ಷಣೆ ಮಾಡಿ' ಎಂದು ಕೇಳಿದರು. ಅವರುಗಳ blood samples test ಆಗಿ ಬಂದ ನಂತರ ಅದರ ಆಧಾರದ ಮೇಲೆ ಅವರುಗಳನ್ನು ಬಿಡುಗಡೆ ಮಾಡುವ ಸಂಭವವಿದೆ. ವಿಮಾನಗಳು ಬರುತ್ತಿವೆ ಹಾಗೂ ಹೋಗುತ್ತಿವೆ; ಆದರೆ ನಮಗೆ ಭಯವಾಗುತ್ತಿದೆ ಎಂದು ಅವರು ತಮ್ಮ ಆತಂಕವನ್ನು ವ್ಯಕ್ತಪಡಿಸಿದರು. ಆವಾಗಿನಿಂದ ನಾನು ಖುದ್ದಾಗಿ ಅವರುಗಳನ್ನು ಮಾನಿಟರ್ ಮಾಡುತ್ತಿದ್ದೇನೆ. ಆ ಸಂದರ್ಭದಲ್ಲಿ ಅಲ್ಲಿನ ಎಲ್ಲಾ ವಿದ್ಯಾರ್ಥಿಗಳೊಂದಿಗೆ ಹಾಗೂ ಕೇಂದ್ರದ ವಿದೇಶಾಂಗ ಮಂತ್ರಿಗಳೊಂದಿಗೆ ಸಹ ಮಾತನಾಡಿದ್ದೇನೆ. ಪ್ರತಿನಿತ್ಯವೂ ನಾವು ವಿದೇಶಿ ವಿದ್ಯಾರ್ಥಿಗಳೊಂದಿಗೆ ಸಂಪರ್ಕದಲ್ಲಿದ್ದೇನೆ. ಈ ಸಂದರ್ಭದಲ್ಲಿ ನಾನು ಕೇಂದ್ರ ವಿದೇಶಾಂಗ ಮಂತ್ರಿ ಹಾಗೂ ಕೇಂದ್ರ ಆರೋಗ್ಯ ಮಂತ್ರಿಗಳಿಗೆ ರಾಜ್ಯದಲ್ಲಿನ ಆಗುಹೋಗುಗಳ ಬಗ್ಗೆ ಮಾಹಿತಿಯನ್ನು ನೀಡುತ್ತಿದ್ದೇನೆ. ಆ ವಿದೇಶಿ ವಿದ್ಯಾರ್ಥಿಗಳು ಹೇಗೋ ನನ್ನ ದೂರವಾಣಿ ಸಂಖ್ಯೆಯನ್ನು ಪಡೆದುಕೊಂಡು ನನಗೆ ಕರೆ ಮಾಡಿ, ಅವರುಗಳು ಅಲ್ಲಿನ ವಿಮಾನ ನಿಲ್ದಾಣದಲ್ಲಿ ಸಿಕ್ಕಿಹಾಕಿಕೊಂಡಿದ್ದು ದಯಮಾಡಿ ತಮ್ಮನ್ನು ರಕ್ಷಣೆ ಮಾಡುವಂತೆ ಕೋರಿದರು. ಆ ವಿದೇಶಿ ವಿದ್ಯಾರ್ಥಿಗಳೊಂದಿಗೆ ನಾನು ಸತತವಾಗಿ ಸಂಪರ್ಕದಲ್ಲಿದ್ದೆನು. ಈ ವಿಚಾರದಲ್ಲಿ ವಿದೇಶಾಂಗ ಸಚಿವರೊಂದಿಗೆ ಮಾತನಾಡಿ, ಆ ವಿದ್ಯಾರ್ಥಿಗಳಿಗೆ clearance ನ ಅವಶ್ಯಕತೆ ಇದ್ದು,

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅದನ್ನು ನೀಡಬೇಕೆಂದು ಮನವಿ ಮಾಡಿದ್ದೇನೆ. ಈ ವಿಚಾರದಲ್ಲಿ ಇ–ಮೇಲ್ ಮುಖಾಂತರ ಪತ್ರ ವ್ಯವಹಾರ ಮಾಡಲಾಗಿದೆ. ಸುಮಾರು 211 ವಿದ್ಯಾರ್ಥಿಗಳೆಲ್ಲರೂ ಕನ್ನಡ ನಾಡಿನ ಮಕ್ಕಳಾಗಿದ್ದು, ಮೊನ್ನೆಯ ದಿನ ಬೆಂಗಳೂರಿಗೆ ಬಂದಿದ್ದಾರೆ. ಇನ್ನೂ ಕೆಲವು ಮಕ್ಕಳು ತಮ್ಮ ಸರದಿಗಾಗಿ ಕಾಯುತ್ತಿದ್ದಾರೆ. ಆದ್ಯತೆಯ ಮೇಲೆ ಮೊದಲು ಬಂದವರಿಗೆ ವೈದ್ಯಕೀಯ ಪರೀಕ್ಷೆಗಳನ್ನು ಮಾಡಲಾಗುತ್ತಿದ್ದು, ಅವರುಗಳನ್ನು ಬೇರೆ ಬೇರೆ ಕಡೆಗಳಿಂದ ವಿಮಾನದ ಮೂಲಕ ಕರ್ನಾಟಕಕ್ಕೆ ಕಳುಹಿಸಿಕೊಡುವ ಕೆಲಸಗಳನ್ನು ಮಾಡುತ್ತಿದ್ದಾರೆ. ಆ ಮಕ್ಕಳೂ ಸಹ ನನ್ನೊಂದಿಗೆ ನೇರವಾಗಿ Whatsapp Call ಮುಖಾಂತರ ಮಾತನಾಡುತ್ತಿದ್ದು, ಅವರ ಫೋಟೋಗಳನ್ನೂ ಸಹ ಕಳುಹಿಸಿಕೊಡುತ್ತಿದ್ದಾರೆ. ಅವರಿಗೆ ನಾನೂ ಸಹ ಖುದ್ದಾಗಿ ಪ್ರತಿಕ್ರಿಯಿಸುತ್ತಿದ್ದೇನೆ ಹಾಗೂ ಅವರ ಬಗ್ಗೆ ಕಾಳಜಿಯನ್ನು ವಹಿಸುತ್ತಿದ್ದೇನೆ. ಆ ವಿದ್ಯಾರ್ಥಿಗಳ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರವು ವಹಿಸಿಕೊಂಡಿದೆ.

**ಶ್ರೀ ಆನಂದ್ ಸಿಂಗ್(ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು):–** ಮಾನ್ಯ ಸಭಾಪತಿಯವರೇ, ವಿದೇಶದಲ್ಲಿರುವ ನಮ್ಮ ವಿದ್ಯಾರ್ಥಿಗಳ ವಿಚಾರದಲ್ಲಿ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಈಗಷ್ಟೇ ತಿಳಿಸಿದರು. ಆದರೆ ಅಲ್ಲಿನ ಕೆಲವು ವಿದ್ಯಾರ್ಥಿಗಳ ವೈದ್ಯಕೀಯ ತಪಾಸಣಾ ವರದಿ ಬರುವುದರೊಳಗಾಗಿ ಅಂದರೆ, ಇನ್ನು ಎರಡು–ಮೂರು ದಿವಸಗಳಲ್ಲಿ ಹಾಲಿ ಹಾರಾಡುತ್ತಿರುವ ವಿಮಾನಗಳ ಸಂಚಾರವನ್ನು ನಿಲ್ಲಿಸಲಾಗುತ್ತದೆ ಎನ್ನುವ ಮಾಹಿತಿಯು ನನಗೆ ಬಂದಿದೆ. ಹೀಗಾಗಿ ಈ ವಿಚಾರದಲ್ಲಿ ಸರ್ಕಾರವು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎನ್ನುವುದರ ಬಗ್ಗೆ ನಾವೂ ಸಹ ಬಹಳ ಆಂತಕದಲ್ಲಿದ್ದೇವೆ. ಒಂದು ವೇಳೆ ಭಾರತ ಸರ್ಕಾರವು ವಿಮಾನಗಳ ಸಂಚಾರವನ್ನು ರದ್ದುಪಡಿಸಿದರೆ, ಅಲ್ಲಿನ ಮಕ್ಕಳು ಸ್ವದೇಶಕ್ಕೆ ಹೇಗೆ ಮರಳುತ್ತಾರೆ ಎನ್ನುವ ಆಂತಕದಲ್ಲಿ ನಾವುಗಳೆಲ್ಲರೂ ಇದ್ದೇವೆ.

**(ಮುಂದು)**

(451)/16–3–2020/6–20/ಎಲ್‌ಎಂ/ಎಂಡಿ
**ಶ್ರೀ ಆನಂದ ಸಿಂಗ್(ಮುಂದು)**

ನಮ್ಮ ಮಕ್ಕಳು ಏನು ಹೇಳುತ್ತಿದ್ದಾರೆ ಎಂದರೆ, ನಾಳೆಯಿಂದ ಭಾರತದಿಂದ ಬರುವ ವಿಮಾನಗಳನ್ನು ರದ್ದುಗೊಳಿಸಿ ಏರಪೋರ್ಟ್‌ನ್ನೇ ಬಂದ್ ಮಾಡುತ್ತಾರೆ ಎಂದು ಅಲ್ಲಿ ಇರುವ ಮಕ್ಕಳು ಹೇಳುತ್ತಿದ್ದಾರೆ. 6 ದಿನಗಳಿಂದ ಅಲ್ಲಿ ಮಕ್ಕಳು ಏರಪೋರ್ಟ್‌ನಲ್ಲಿಯೇ ಬೆಂಚ್‌ಗಳ ಮೇಲೆ, ಅಲ್ಲಿ ಇಲ್ಲಿ ಕುಳಿತು ಕಾಲ ಕಳೆಯುತ್ತಿದ್ದಾರೆ. ನಮಗೂ ಆಂತಕವಿದೆ. ಪರಿಸ್ಥಿತಿಯನ್ನು ನೋಡಿ ನಾವು ಆ ವಿಚಾರವನ್ನು ಹೆಚ್ಚಿಗೆ ಮಾತನಾಡುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ನಮ್ಮ ಕನ್ನಡ ನಾಡಿನ ಮಕ್ಕಳು ಅಲ್ಲಿ ಬೆಂಚ್ ಮೇಲೆ ಅಲ್ಲಿ ಇಲ್ಲಿ ಕುಳಿತು ಕಾಲ ಕಳೆಯುತ್ತಿದ್ದಾರೆ ಎಂದರೆ, ನಮ್ಮ ಸರ್ಕಾರ ವಿಶೇಷ ವಿಮಾನದ ವ್ಯವಸ್ಥೆ ಮಾಡಿ ಆ ಮಕ್ಕಳನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕರೆಯಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕು. ಅಲ್ಲಿ ಕನ್ನಡ ನಾಡಿನ ಮಕ್ಕಳು ಆತಂಕದಲ್ಲಿದ್ದಾರೆ. The Government has to send a Special Flight and bring them back.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಗಳೆ, ಏರ್‌ಪೋರ್ಟ್, ಬಸ್ ಸ್ಟ್ಯಾಂಡ್, ರೈಲ್ವೆ ನಿಲ್ದಾಣಗಳನ್ನು ಒಂದು ವಾರ ಬಂದ್ ಮಾಡಿದರೆ ಒಳ್ಳೆಯದು. ಈಗ ಶಾಪಿಂಗ್ ಮಾಲ್‌ಗಳನ್ನು ಬಂದ್ ಮಾಡಿದ್ದಾರೆ, ದಿನನಿತ್ಯದ ಅವಶ್ಯಕತೆಗಳಾದ ಹಾಲು, ತರಕಾರಿ ಇವುಗಳು ಬೇಕಾಗುತ್ತವೆ. ಬಾಂಬೆನಲ್ಲಿ ಮಹಾರಾಷ್ಟ್ರ ಸರ್ಕಾರ ಶಾಪಿಂಗ್ ಮಾಲ್‌ಗಳಲ್ಲಿ ಹೈಪರ್ ಮಾರ್ಕೆಟ್‌ಗಳನ್ನು ಓಪನ್ ಮಾಡಲು ಅನುಮತಿಯನ್ನು ಕೊಟ್ಟಿದೆ. ಅದೇ ರೀತಿ ದಿನನಿತ್ಯದ ಅವಶ್ಯಕ ವಸ್ತುಗಳಿಗಾಗಿ ಶಾಪಿಂಗ್ ಮಾಲ್‌ಗಳಲ್ಲಿರುವ ಹೈಪರ್ ಮಾರ್ಕೆಟ್‌ಗಳನ್ನು ಓಪನ್ ಮಾಡಲು area wise ಅನುಮತಿಯನ್ನು ಕೊಡಿ.

**ಶ್ರೀ ಬಿ.ಜಯಮ್ಮ:–** ಮಾನ್ಯ ಸಭಾಪತಿಗಳೆ, ಕೊರೊನಾ ಹೇಗೆ ಹರಡುತ್ತದೆ ಎನ್ನುವ ಬಗ್ಗೆ ಎಲ್ಲರೂ ಮಾತನಾಡುತ್ತಿದ್ದಾರೆ. ದೋಬಿಘಾಟ್‌ನಲ್ಲಿ ದೋಬಿಗಳು ಎಲ್ಲರ ಬಟ್ಟೆಗಳನ್ನು ಸೇರಿಸಿ ಒಗೆಯುತ್ತಿರುತ್ತಾರೆ. ಇದರ ಬಗ್ಗೆಯು ಸರ್ಕಾರ ಗಮನಹರಿಸಬೇಕಾಗುತ್ತದೆ. ಕೊರೊನಾ ಹೋಗುವವರೆಗೆ ಅವರವರ ಬಟ್ಟೆಗಳನ್ನು ಅವರೇ ಒಗೆದುಕೊಂಡು ಐರನ್ ಮಾಡಿಕೊಳ್ಳಬೇಕು.

**ಶ್ರೀ ಬಿ.ಶ್ರೀರಾಮುಲು( ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಗಳೆ, ಎಲ್ಲಾ ಜವಾಬ್ದಾರಿಗಳನ್ನು ಸರ್ಕಾರ ವಹಿಸಿಕೊಂಡು ಕೆಲಸ ಮಾಡುತ್ತಿದೆ. ಮಾನ್ಯ ಸದಸ್ಯರು ಕೊಟ್ಟಿರುವ ಎಲ್ಲ ಸಲಹೆಗಳನ್ನು ಸಂಪೂರ್ಣವಾಗಿ ಪರಿಗಣಿಸಿ ನನ್ನ ನಾಯಕದಲ್ಲಿ ...

ಶ್ರೀ ಕಾಂತರಾಜ್ (ಬಿ.ಎಂ.ಎಲ್):– ಮಾನ್ಯ ಸಭಾಪತಿಗಳೆ, ಡಿಸಿ, ಎಸಿ ಗಳು ಇನ್ನು active ಆಗೇ ಇಲ್ಲ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಗಳೆ, ಮಾಮೂಲಾಗಿ laboratory ಮಾಡಿದ ಹಾಗೆ ಇದಕ್ಕೆ ಸಂಬಂಧಪಟ್ಟ laboratory ಮಾಡಲು ಆಗುವುದಿಲ್ಲ. ಏಕೆಂದರೆ ನಾನು ಸತ್ಯವನ್ನೇ ಹೇಳಬೇಕಾಗುತ್ತದೆ. ಗುಲಬರ್ಗಾದಲ್ಲಿ laboratory ಪ್ರಾರಂಭ ಮಾಡಲಾಗಿದೆ. ಅದೆಲ್ಲವು ಸರಿ ಹೋಗಬೇಕಾದರೆ ಇನ್ನು ಎರಡು–ಮೂರು ದಿನಗಳು ಬೇಕಾಗುತ್ತದೆ. Technical ಆಗಿ ಮಾಡಬೇಕಾಗುತ್ತದೆ. ಬೇರೆ–ಬೇರೆ ಕಡೆಗಳಲ್ಲಿ ಪ್ರಾರಂಭ ಮಾಡಬೇಕು ಎಂದರೆ ಎಲ್ಲವನ್ನು ಸರಿಮಾಡಿಕೊಂಡು ಮಾಡಬೇಕಾಗುತ್ತದೆ. ಮುಖ್ಯ ನಗರಗಳಾದ ಮಂಗಳೂರು, ಗುಲಬರ್ಗಾ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೆಳಗಾವಿ, ಬಳ್ಳಾರಿ ಮತ್ತು ಬೆಂಗಳೂರಿನಲ್ಲಿ ಇನ್ನು ಜಾಸ್ತಿ ಮಾಡಬೇಕು. ಎಲ್ಲವನ್ನು ಸರಿಮಾಡಿಕೊಂಡು ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಪ್ರಾರಂಭ ಮಾಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೆ, ಬಸ್ ನಿಲ್ದಾಣಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ ಏನು precautionary measures ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು. ಈಗ ಅಲ್ಲಿ ಯಾವುದೇ precautionary measures ತೆಗೆದುಕೊಂಡಿರುವುದಿಲ್ಲ. ಸಂತೆ ಮತ್ತು ಜಾತ್ರೆಗಳ ವಿಚಾರದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ತಕ್ಷಣ ತಿಳಿಸಬೇಕು. ಜಿಲ್ಲಾಡಳಿತ ಇನ್ನು ಚುರುಕಾಗಿಲ್ಲ. ಅವರು ಚುರುಕಾಗಬೇಕು.

**Sri IVAN D'SOUZA:-** The Private Medical Colleges are not co-operating at all. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ಬಸ್‌ಸ್ಟ್ಯಾಂಡ್‌ನಲ್ಲಿ ಅಥವಾ ರೈಲ್ವೆ ನಿಲ್ದಾಣಗಳಲ್ಲಿ ಕರೋನಾ ವೈರಸ್ ಬರುವುದಿಲ್ಲ. ಅದು ಕೇವಲ ಏರಪೋರ್ಟ್‌ಗಳಿಂದ ಬರುತ್ತದೆ. ಏಕೆಂದರೆ ಯಾವುದೇ ರಾಷ್ಟ್ರದಿಂದ ಬರಲಿ ಎಸಿ ಯಲ್ಲಿಯೇ ಏರಪೋರ್ಟ್‌ಗೆ ಬರುತ್ತಾರೆ, aircraft ನಲ್ಲಿಯು ಎಸಿ ಇರುತ್ತದೆ. ಅಲ್ಲಿಂದ ಇಳಿದ ಮೇಲೆ ನಮ್ಮ ಏರಪೋರ್ಟ್‌ನಿಂದ ಎಸಿ ಕಾರ್‌ನಲ್ಲಿಯೇ ಬರುತ್ತಾರೆ, ಎಸಿ ಯಲ್ಲಿಯೇ ಆ ವೈರಸ್ transfer ಆಗುತ್ತದೆ. ಕರೊನಾ ವೈರಸ್ ಆ temperature, environment ಸರಿಯಾದ ರೀತಿಯಲ್ಲಿ ಇರುವುದಕ್ಕೆ ಏನು ಬೇಕೋ ಅಷ್ಟಕ್ಕೂ ವ್ಯವಸ್ಥೆ ಈ Air Condition ನಲ್ಲಿ ಸಿಗುತ್ತದೆ. ಕರೋನಾ ವೈರಸ್ 27 ಅಥವಾ 28 ಡಿಗ್ರಿ ಮೇಲೆ ಇದ್ದರೆ ಅದು complete weak ಆಗಿ ಬಿಡುತ್ತದೆ. ಹಾಗಾಗಿ ನಮಗೆ ಈ ವೈರಸ್ ಎಲ್ಲಿ transformation ಆಗುತ್ತಿದೆ ಎಂದರೆ ಸರಿಯಾದ environment ನಲ್ಲಿ ಬರುತ್ತಿದೆ. ಅದನ್ನು ತಡೆಗಟ್ಟಲು ಅದನ್ನು sterilize and disinfect ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? We should cut that cycle. ಆ cycle cut ಮಾಡಿದರೆ automatically ಎಲ್ಲವು ಹೋಗಿ ಬಿಡುತ್ತದೆ. ಅದನ್ನು cut ಮಾಡುವಂತಹ technology ಯನ್ನು ನೀವು ಕಂಡುಹಿಡಿಯಬೇಕು.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಗಳೆ, ಮಾನ್ಯ ಶ್ರೀ ಕೆ.ಟಿ.ಶ್ರೀಕಂಠೇಗೌಡರು, ಶ್ರೀ ಐವನ್ ಡಿ'ಸೋಜಾರವರು ಸಲಹೆಗಳನ್ನು ಕೊಟ್ಟಿದ್ದಾರೆ, ಮತ್ತು ಬಸ್ ನಿಲ್ದಾಣಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ನಾವು ಈಗಾಗಲೇ ಏರಪೋರ್ಟ್‌ನಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಆದರೆ,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Thermal screening ಮಾಡಬೇಕಾದರೆ ಸಾಕಷ್ಟು ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಮುಖ್ಯವಾಗಿ ಜನರಲ್ಲಿ awareness ಮೂಡಿಸಬೇಕಾಗುತ್ತದೆ. ಏಕಂದರೆ, ಬಸ್‌ಗಳಿಂದ ಮತ್ತು ರ್ವೇಲೈಗಳಿಂದ ಜನರು ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಾರೆ. ಹಣೆಗೆ ಇಟ್ಟು temperature test ಮಾಡಲಾಗುತ್ತದೆ. Above 37, 38 ಇದ್ದರೆ ಅವರನ್ನು ತಪಾಸಣೆಗೆ ಒಳಪಡಿಸಲಾಗುತ್ತದೆ. 10000 temperature test ಮಾಡುವ ಮಶೀನ್‌ಗಳನ್ನು ತರಿಸಿಕೊಳ್ಳಲಾಗಿದೆ. ಮೊನ್ನೆ ಸರ್ಕಾರ ಬಿಡುಗಡೆ ಮಾಡಿದ 36 ಕೋಟಿ ರೂ.ಗಳನ್ನು ಇದಕ್ಕೆ ಖರ್ಚು ಮಾಡಲಾಗಿದೆ. ಸಡನ್ ಆಗಿ ಈ ವೈರಸ್ ಬಂದಿರುವುದರಿಂದ ಏನು ಮಾಡಬೇಕು ಎಂದು ದಿಕ್ಕೇ ತೋಚುತ್ತಿಲ್ಲ. ಇಷ್ಟು ದೊಡ್ಡ ಜನಸಂಖ್ಯೆ ಇರುವ ನಮ್ಮ ರಾಜ್ಯದಲ್ಲಿ ಎಲ್ಲೇಲಿ ಏನೇನು ಮಾಡಬೇಕು ಎನ್ನುವುದೆ ಇನ್ನು set-up ಆಗುತ್ತಿಲ್ಲ. ನಾನು ಪ್ರಮಾಣಿಕವಾದ ಪ್ರಯತ್ನ ಮಾಡಿ ಎಲ್ಲವನ್ನು set-up ಮಾಡುವ ಪ್ರಯತ್ನವನ್ನು ಮಾಡುತ್ತಿದ್ದೇನೆ. ನನ್ನ ಶಕ್ತಿ ಮೀರಿ ಪ್ರಯತ್ನ ಮಾಡುತ್ತಿದ್ದೇನೆ.ನಾನೊಬ್ಬನೆ ಎಲ್ಲವನ್ನು ಮಾಡುತ್ತಿಲ್ಲ. ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲ ಸದಸ್ಯರ ಸಹಕಾರವಿದೆ. ಖಾಸಗಿ ಆಸ್ಪತ್ರೆಯವರು ಸಹಕಾರ ನೀಡಲು ಏಕೋ ಸ್ವಲ್ಪ ಹಿಂದೇಟು ಹಾಕುತ್ತಿದ್ದಾರೆ. ಕಲ್ಬುರ್ಗಿಯಲ್ಲಿ ಒಬ್ಬ ವ್ಯಕ್ತಿ ಸಾವನ್ನಪ್ಪಿದರು. ಅವರು ಖಾಸಗಿ ಆಸ್ಪತ್ರೆಯಲ್ಲಿ admit ಆಗಿದ್ದರು. ಅದರ ಮಾಹಿತಿಯನ್ನು ಖಾಸಗಿ ಆಸ್ಪತ್ರೆಯವರು ಸರ್ಕಾರಕ್ಕೆ ಕೊಡಲಿಲ್ಲ. ಮೊನ್ನೆ ನಾನು ಖಾಸಗಿ ಆಸ್ಪತ್ರೆಗಳ ವೈದ್ಯದರನ್ನು ಕರೆದು ಚರ್ಚೆ ಮಾಡಿದ್ದೇನೆ. ಅವರಿಗೆ ಸ್ವಲ್ಪ panic ಇದೆ. ಏನು panic ಎಂದರೆ, ಇಂತಹ ರೋಗಿಯನ್ನು ನಾವು admit ಮಾಡಿಕೊಂಡರೆ ನಮಗೆ ಏನಾದರೂ ತೊಂದರೆಯಾಗಬಹುದು ಎಂದು ಯೋಚಿಸುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ನೀವು ಯಾವುದೇ ರೀತಿಯಲ್ಲಿ ಹೆದರುವ ಅವಶ್ಯಕತೆ ಇಲ್ಲ. ದಯಮಾಡಿ ಸಹಕಾರವನ್ನು ಕೊಡಬೇಕು ಎಂದು ಖಾಸಗಿ ಆಸ್ಪತ್ರೆಯವರಿಗೆ ಹೇಳಿದ್ದಾರೆ. ಅದಕ್ಕೆ ಖಾಸಗಿ ಆಸ್ಪತ್ರೆಯವರು ಸಂಪೂರ್ಣವಾದ ಸಹಕಾರವನ್ನು ಕೊಡುವ ವ್ಯವಸ್ಥೆಯಾಗುತ್ತಿದೆ. ಈ ವೈರಸ್ ಅಂಟಿದ ವ್ಯಕ್ತಿ ಖಾಸಗಿ ಆಸ್ಪತ್ರೆಯಲ್ಲಿ admit ಆದಾಗ ಈ ರೋಗದ positive symptoms ಕಂಡುಬಂದ ತಕ್ಷಣ ಸರ್ಕಾರಕ್ಕೆ ಮಾಹಿತಿಯನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಅಕಸ್ಮಾತ ಸರ್ಕಾರಕ್ಕೆ ಮಾಹಿತಿ ಕೊಡದಿದ್ದರೆ ಇದೇ ಸಮಸ್ಯೆ ಹೆಚ್ಚಾಗುತ್ತದೆ. ಇದರಿಂದ ಜನರು ಭಯಭೀತರಾಗುತ್ತಾರೆ. ಈ ರೀತಿಯಾಗಬಾರದು. ಅದಕ್ಕಾಗಿ ಸರ್ಕಾರಕ್ಕೆ ಮಾಹಿತಿ ಕೊಡುವ ವ್ಯವಸ್ಥೆಯಾಗಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರ ಸಲಹೆ ಮೇರೆಗೆ ಆರೋಗ್ಯ ಸಚಿವರು ಚೆನ್ನಾಗಿ ಉತ್ತರವನ್ನು ಕೊಟ್ಟಿದ್ದಾರೆ. ದಯಮಾಡಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದು, ಸಭಾನಾಯಕರು ಮತ್ತು ಇಬ್ಬರು ಉಪಮುಖ್ಯಮಂತ್ರಿಗಳು ಈ ಸದನದಲ್ಲಿದ್ದಾರೆ. ಶಾಲಾ–ಕಾಲೇಜುಗಳಿಗೆ ರಜೆ ಕೊಟ್ಟಿದ್ದಾರೆ. ಆದರೆ ಶಿಕ್ಷಕರು ಹೋಗಿ ಕೆಲಸ ಮಾಡಬೇಕೆಂದು ಹೇಳುತ್ತಾರೆ. ಎರಡು ದಿನಗಳಿಂದ ತುಂಬಾ ಜನ ಶಿಕ್ಷಕರು ನನಗೆ ಫೋನ್ ಮಾಡಿ ನಾನು ಮನೆಯಿಂದ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಶಾಲೆಗೆ ಹೋಗಬೇಕು, ಬರಬೇಕು. ರೈಲ್ವೆ ಮುಖಾಂತರ, ಬಸ್ ಮುಖಾಂತರ ನಾವು ಪ್ರಯಾಣ ಮಾಡುತ್ತೇವೆ. ನಮಗೆ ಕರೊನಾ ಸೋಂಕು ತಗಲುವುದಿಲ್ಲವೆ? ವಿದ್ಯಾರ್ಥಿಗಳಿಗೆ ಮಾತ್ರ ರಜೆ ಕೊಟ್ಟಿದ್ದಾರೆ ಶಿಕ್ಷಕರಿಗೆ ಕೊಟ್ಟಿರುವುದಿಲ್ಲ ಎಂದು ಹೇಳುತ್ತಿದ್ದಾರೆ. ಶಿಕ್ಷಕರಲ್ಲಿ 60% ಮಹಿಳೆಯರೆ ಇರುವುದು. ಅವರೆಲ್ಲರೂ ಬಹಳ ಭಯಭೀತರಾಗಿದ್ದಾರೆ.

**ಸಭಾಪತಿಯವರು:–** ಸಭಾಯನಾಯಕರೆ ಇದಕ್ಕೆ ಉತ್ತರ ಕೊಡಿ. ಇದು ಆರೋಗ್ಯಕ್ಕೆ ಸಂಬಂಧಪಟ್ಟಿರುವುದಿಲ್ಲ. ಆಡಳಿತಕ್ಕೆ ಸಂಬಂಧಪಟ್ಟಿರುವುದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೆ, ಶಾಲೆಯಲ್ಲಿ ಮಕ್ಕಳೆ ಇಲ್ಲ ಎಂದ ಮೇಲೆ ಶಿಕ್ಷಕರು ಶಾಲೆಗೆ ಹೋಗಬೇಕು ಎನ್ನುವುದು ಯಾವ ನ್ಯಾಯ? ಹಾಗಾಂದರೆ ಶಿಕ್ಷಕರಿಗೆ ಈ ಕಾಯಿಲೆ ಬರುವುದಿಲ್ಲವೆ? ಅವರಿಗೂ ಈ ಸೋಂಕು ತಗಲುವುದಿಲ್ಲವೆ? ಅದರಲ್ಲಿಯು 60% ಮಹಿಳಾ ಶಿಕ್ಷಕರೆ ಇದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಶಿಕ್ಷಕರಿಗೆ ರಜೆ ಕೊಡದಿದ್ದರೆ ಎಲ್ಲರೂ ಒಂದು ಕಡೆ ಗುಂಪು ಸೇರಿಕೊಂಡು ಮಾತನಾಡಲು ಪ್ರಾರಂಭ ಮಾಡಿಬಿಡುತ್ತಾರೆ. ಆ ರೀತಿಯಾಗಬಾರದು. ಮಕ್ಕಳಿಗೆ ರಜೆ ಕೊಟ್ಟಾಗ ಶಿಕ್ಷಕರಿಗೆ ರಜೆ ಕೊಡುವುದು ಒಳ್ಳೆಯದು. ಇಲ್ಲದಿದ್ದರೆ ಸರ್ಕಾರ ಮೂರು ಜನರಿಗಿಂತ ಹೆಚ್ಚು ಗುಂಪು ಕೂಡಬಾರದು ಎಂದು ಹೇಳುತ್ತದೆ. ಅವರು 50 ರಿಂದ 60 ಜನ ಗುಂಪಾಗಿ ಕೂಡುತ್ತಾರೆ. ಎಲ್ಲ ಸಮಾರಂಭಗಳನ್ನು ಮುಂದೂಡಲಾಗಿದೆ. ಅದೇ ರೀತಿ ಶಿಕ್ಷಕರಿಗೂ ರಜೆ ಕೊಡುವುದು ಸೂಕ್ತ.

**ಡಾ: ವೈ.ಎ.ನಾರಾಯಣಸ್ವಾಮಿ:–** ಮಕ್ಕಳಿಗೆ ರಜೆ ಕೊಟ್ಟಮೇಲೆ ಶಿಕ್ಷಕರಿಗೆ ಏನು ಕೆಲಸ. ಅವರಿಗೂ ರಜೆ ಕೊಡುವುದು ಒಳ್ಳೆಯದು. ದಯಮಾಡಿ ಶಿಕ್ಷಕರಿಗೂ ರಜೆ ಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಎಳೆ ಮಕ್ಕಳನ್ನು ರಕ್ಷಣೆ ಮಾಡುವ ಉದ್ದೇಶದಿಂದ ಸರ್ಕಾರ ಯೋಚನೆ ಮಾಡಿ ಮಕ್ಕಳಿಗೆ ರಜೆಯನ್ನು ಘೋಷಣೆ ಮಾಡಿದೆ. ಮಾನ್ಯ ಸದಸ್ಯರು ಶಿಕ್ಷಕರಿಗೂ ರಜೆ ಕೊಡಬೇಕು ಎಂದು ಹೇಳುತ್ತಿದ್ದಾರೆ. ಶಿಕ್ಷಣ ಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ. ಸರ್ಕಾರ ಅದರ ಬಗ್ಗೆ ಯೋಚನೆ ಮಾಡುತ್ತದೆ.

**ಶ್ರೀ ಮರಿತಿಬ್ಬೇಗೌಡ:–** ಜಾತ್ರೆ, ಸಂತೆಗಳು ನಡೆಯಬಾರದು ಎಂದು ಹೇಳಿದ್ದಾರೆ. ಅಲ್ಲಿ ದೊಡ್ಡವರೆ ಓಡಾಡುವುದು. ಹಾಗಾಂದರೆ ಶಿಕ್ಷಕರಿಗೆ ಈ ಕಾಯಿಲೆ ಬರುವುದಿಲ್ಲವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಶಿಕ್ಷಕರ ಬಗ್ಗೆ ಕಾಳಜಿಯಿಂದ ಮಾತನಾಡಿದ್ದಾರೆ. ಮಾನ್ಯ ಶಿಕ್ಷಣ ಸಚಿವರ ಜೊತೆಯಲ್ಲಿ ಮಾತನಾಡಿ ಏನು ಮಾಡಬೇಕು ಎನ್ನುವುದನ್ನು ತೀರ್ಮಾನ ಮಾಡುತ್ತೇವೆ.

(ಮುಂದು)

452/16–03–2020/06–30/ಬಿಎಸ್‌ಡಿ–ಎಂಡಿ

**ಮರಿತಿಬ್ಬೇಗೌಡ:–** ನಾಳೆ ಈ ಸದನದಲ್ಲಿ ಉತ್ತರವನ್ನು ಕೊಡುತ್ತಾರೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಶಿಕ್ಷಕರ ಜೊತೆ ಎಲ್ಲಾ ಸರ್ಕಾರಿ ನೌಕರರು ಬರುತ್ತಾರೆ. ಅದರ ಬಗ್ಗೆ ಯೋಚನೆ ಮಾಡಿ, ಎಲ್ಲರಿಗೂ ಸಮಾಧಾನವಾಗುವ ಹಾಗೂ ಸರಿಯಾದ ನಿರ್ಧಾರವನ್ನು ಕೈಗೊಳ್ಳುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ಅವರು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚಿಸಬೇಕು. ಸದನದಲ್ಲಿ ಇಬ್ಬರು ಉಪ ಮುಖ್ಯಮಂತ್ರಿಗಳು ಇದ್ದಾರೆ. ಒಬ್ಬರು ಭಾವಿ ಮುಖ್ಯಮಂತ್ರಿಯಾಗುವ ಉಪ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ದಯಮಾಡಿ ಉತ್ತರ ಹೇಳಬೇಕು. ಶಿಕ್ಷಕರ ಬಗ್ಗೆ ಕಾಳಜಿ ಇಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಶಿಕ್ಷಕರು ಮಾತ್ರವಲ್ಲದೇ ಎಲ್ಲಾ ಸರ್ಕಾರಿ ನೌಕರರು ಇದ್ದಾರೆ. ಸಾರ್ವಜನಿಕರ ಆರೋಗ್ಯವನ್ನು ಕಾಪಾಡಬೇಕು. ಶಿಕ್ಷಕರ ಸಹಿತ ಎಲ್ಲ ಸರ್ಕಾರಿ ನೌಕರರ ಮತ್ತು ಜನಪ್ರತಿನಿಧಿಗಳ ಆರೋಗ್ಯವನ್ನು ಕಾಪಾಡುವ ದಿಸೆಯಲ್ಲಿ ಯೋಚನೆ ಮಾಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸೂಟಿ ಕೊಡುವ ವಿಷಯ ಅಲ್ಲ, ವಿದ್ಯಾರ್ಥಿಗಳಿಲ್ಲದೇ ಎಲ್ಲಾ ಶಿಕ್ಷಕರು ಒಂದು ಕಡೆ ಕೂಡಬಾರದು ಎಂಬ ಉದ್ದೇಶದಿಂದ ಹೇಳುತ್ತಿದ್ದೇನೆ. ಎಲ್ಲರೂ ಖಾಲಿ ಕೂರುತ್ತಾರೆ. ಸರ್ಕಾರಿ ನೌಕರರು ಕಚೇರಿಗಳಲ್ಲಿ ಕೆಲಸ ಮಾಡುತ್ತಾರೆ. ಆದರೆ ಶಿಕ್ಷಕರು ಕೆಲಸ ಇಲ್ಲದೇ ಖಾಲಿ ಕೂರುತ್ತಾರೆ. ಎಲ್ಲರೂ ಗುಂಪು–ಗುಂಪಾಗಿ ಕೂಡುವುದರಿಂದ ರೋಗ ಹರಡಬಾರದು ಎನ್ನುವ ಉದ್ದೇಶದಿಂದ ಹೇಳಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರ ಸಲಹೆ ಚೆನ್ನಾಗಿದ್ದು, ಮಂತ್ರಿಗಳ ಜೊತೆ ಮಾತನಾಡಿ ನಿರ್ಧಾರ ತಿಳಿಸುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಮರಿತಿಬ್ಬೇಗೌಡ:–** ನಾಳೆ ಉತ್ತರವನ್ನು ಕೊಡುತ್ತಾರೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಂತ್ರಿಗಳ ಜೊತೆ ಮಾತನಾಡುವ ಬಗ್ಗೆ ಹೇಳಿದ್ದೇನೆ. ಆದರೆ ನಾಳೆಯೇ ಉತ್ತರ ಹೇಳಿ, ಈಗಲೇ ಹೇಳಿ ಎಂದರೆ ಆಗುತ್ತದೆಯೇ? ಅವರ ಜೊತೆ ಚರ್ಚೆ ಮಾಡುತ್ತೇನೆ. ಇದು ಅತ್ಯಂತ ಸೂಕ್ಷ್ಮವಾದ ವಿಚಾರ. ಶಾಲಾ ಮಕ್ಕಳಿಗೆ ರಜಾ ಕೊಟ್ಟಿದ್ದು, ಶಿಕ್ಷಕರಿಗೆ ಕೊಟ್ಟಿಲ್ಲ. ಅದರಲ್ಲಿಯೂ ಶೇಕಡ 60ರಷ್ಟು ಮಹಿಳಾ ಶಿಕ್ಷಕರಿದ್ದಾರೆ ಎನ್ನುವುದು ಸರಿಯಿದೆ. ಅದರಲ್ಲಿಯೂ ಎಲ್ಲಾ ಸರ್ಕಾರಿ ನೌಕರರು, ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳ ಆರೋಗ್ಯ ಕಾಪಾಡಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಮಾನ್ಯ ಶಿಕ್ಷಣ ಸಚಿವರಿಗೆ ತಿಳಿಸಿ, ನಂತರ ಉತ್ತರ ಹೇಳುತ್ತೇನೆ.

## 5. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆಃ 1035+1045+1207**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಎನ್.ಅಪ್ಪಾಜಿಗೌಡಃ–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ನಾನು ಅರಣ್ಯ ವಲಯಾಧಿಕಾರಿ ಹಾಗೂ ಲಿಪಿಕ ನೌಕರರ ವೃಂದದ ಬಿ.ಕೆ. ಪವಿತ್ರ–1 ರ ಪ್ರಕರಣದ ತೀರ್ಪನ್ನು ಅನುಷ್ಠಾನಗೊಳಿಸುವಾಗ ಉದ್ದೇಶಪೂರ್ವಕವಾಗಿ ನ್ಯೂನತೆಗಳೊಡನೆ ಅನರ್ಹ ನೌಕರರಿಗೆ ಮುಂಬಡ್ತಿ ನೀಡಲು ಪ್ರಯತ್ನಿಸಿದ ಹಗರಣದ ಕುರಿತು ಸಿ.ಐ.ಡಿ ತನಿಖೆ ನಡೆಸಲು ಕಡತ ಸಂಖ್ಯೆಃ ಅಪಜೀ/17/ಅಇಫ/2019ರಲ್ಲಿ ಆದೇಶವಾಗಿದ್ದು, ಈ ತನಿಖೆಯು ಯಾವ ಹಂತದಲ್ಲಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಜೊತೆಗೆ ಉದ್ದೇಶಪೂರ್ವಕವಾಗಿ ಇಂತಹ ಅಕ್ರಮಗಳನ್ನು ಎಸಗುತ್ತಿರುವ ಅರಣ್ಯಾಧಿಕಾರಿಗಳನ್ನು ಗುರುತಿಸಲಾಗಿದೆಯೇ? ಎಂದು ಕೇಳಿ ಅಂತಹವರ ಹೆಸರುಗಳನ್ನು ಕೇಳಿದ್ದೆನು. ಮಾನ್ಯ ಸಚಿವರು ಉತ್ತರವನ್ನು ನೀಡಿದ್ದು, ನನ್ನ ಮೂಲ ಪ್ರಶ್ನೆ ಏನೆಂದರೆ, ಈ ಜೇಷ್ಠ್ಯತೆ ಪಟ್ಟಿಯನ್ನು ತಯಾರು ಮಾಡಲು ವಲಯ ಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿದ್ದರು. ಅವರು ತಪ್ಪು ವರದಿಯನ್ನು ಇಲಾಖೆಗೆ ಕೊಟ್ಟಿದ್ದಾರೆ. ಉಚ್ಚ ನ್ಯಾಯಾಲಯದ ಬಿ.ಕೆ. ಪವಿತ್ರ ಪ್ರಕರಣದ ತೀರ್ಪ–1 ನ್ನು ಪಾಲಿಸಿಕೊಂಡು ಉಪವಲಯ, ಅರಣ್ಯಾಧಿಕಾರಿ ವೃಂದದ ಜೇಷ್ಠತಾ ಪಟ್ಟಿಯನ್ನು ಆಯಾ ವೃತ್ತ ಮಟ್ಟದ ಕಚೇರಿಗಳಲ್ಲಿ ತಯಾರಿಸಲಾಗಿದೆ. ಈ ಜೇಷ್ಠತಾ ಪಟ್ಟಿಯನ್ನು ಸಿ ಅಂಡ್ ಆರ್ ನಿಯಮ ಮತ್ತು ನೈಜವಾದ ಜೇಷ್ಠತೆಯನ್ನು ಪಾಲಿಸದೇ, ನ್ಯಾಯಾಲಯದ ಆದೇಶದಲ್ಲಿರುವ ಅಂಶಗಳನ್ನು ಕಡೆಗಣಿಸಿ, ಅನರ್ಹರಿಗೆ ಬಡ್ತಿ ನೀಡಲು ಪರಿಗಣಿಸಲಾಗಿತ್ತು. ಅದೇ ರೀತಿ ಬಿ.ಕೆ. ಪವಿತ್ರ ಪ್ರಕರಣದ ತೀರ್ಪ–2 ನ್ನು ಲಿಪಿಕ ವರ್ಗ ಎಫ್.ಡಿ.ಎ ವೃಂದದ ಹಾಗೂ ವೃತ್ತ ಮಟ್ಟದ ಉಪವಲಯ ಅರಣ್ಯ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಅನಗತ್ಯವಾಗಿ ತಪ್ಪುಗಳನ್ನು ಮಾಡಲಾಗಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಬಿ.ಕೆ. ಪವಿತ್ರ ಪ್ರಕರಣದ ತೀರ್ಪು–2 ರಂತೆ ಜೇಷ್ಠತಾ ಪಟ್ಟಿಯನ್ನು ಪುನರ್ ಅವಲೋಕಿಸಿ ಸರಿಪಡಿಸುವಾಗ ಯಾವುದೇ ಲೋಪದೋಷಗಳಿಲ್ಲದೇ ನಿಯಮಾನುಸಾರ ಪ್ರಕಟಿಸಬೇಕು. ಇಲ್ಲದಿದ್ದರೆ ಸಿ.ಐ.ಡಿ ತನಿಖೆ ನಡೆಸಲಾಗುವುದೆಂದು ಅರಣ್ಯ ಇಲಾಖೆಗೆ ಸರ್ಕಾರ ಎಚ್ಚರಿಸಿತ್ತು. ಜೇಷ್ಠತಾ ಪಟ್ಟಿಯನ್ನು ಸರಿಪಡಿಸಲು ಸಮಿತಿಯನ್ನು ನೇಮಿಸಲಾಗಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪು, ಸರ್ಕಾರದ ನಿರ್ದೇಶನವೆಲ್ಲವೂ ಇದ್ದರೂ ಕೆಲವು ಹಿರಿಯ ಅಧಿಕಾರಿ ಸಿಬ್ಬಂದಿ ವರ್ಗದವರು ಭ್ರಷ್ಟಾಚಾರದಲ್ಲಿ ಭಾಗಿಯಾಗಿ, ನೀತಿ–ನಿಯಮಗಳನ್ನು ಉಲ್ಲಂಘಿಸಿ, ಅರಣ್ಯ ಇಲಾಖೆಯ ಸಿ ಅಂಡ್ ಆರ್ ನಿಯಮಗಳನ್ನು ಗಾಳಿಗೆ ತೂರಿ, ಕಿರಿಯ ನೌಕರರನ್ನು ಜೇಷ್ಠತೆಯಲ್ಲಿ ಹಿರಿಯ ನೌಕರನ್ನಾಗಿ ಮಾಡಲು ಪುನಃ ಲೋಪದೋಷಗಳಿಂದ ಕೂಡಿರುವ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುತ್ತಾರೆ. ಇದನ್ನು ಸರಿಪಡಿಸುವ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕು.

**ಶ್ರೀ ಆನಂದ್ ಸಿಂಗ್ಃ–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಪ್ರಶ್ನೆಗಳನ್ನು ಕೇಳುವ ಮೂಲಕ ನನ್ನ ಮತ್ತು ಇಲಾಖೆಯ ಗಮನಕ್ಕೆ ತಂದಿದ್ದಾರೆ. 2002ನೇ ಇಸವಿಯಲ್ಲಿ Government Act

ಮಾಡಿಕೊಳ್ಳಬೇಕಾದಲ್ಲಿ Recruitment ನಲ್ಲಿ SC-ST ಗಳಿಗೆ reservation ಇಡಬೇಕೆಂದು ಮಾಡಿತ್ತು. ಅದರ ಜೊತೆಜೊತೆಗೆ promotion ನಲ್ಲಿಯೂ ಅವರಿಗೆ reservation ಇರಬೇಕೆಂದು ಮಾಡಿತ್ತು. ಬಿ.ಕೆ ಪವಿತ್ರ ಎಂಬುವವರು SC-ST ಜನಾಂಗಕ್ಕೆ recruitment and promotion ಎರಡೂ ಸಂದರ್ಭಗಳಲ್ಲಿ reservation ಕೊಟ್ಟರೆ general ನಲ್ಲಿರುವವರಿಗೆ ಅನ್ಯಾಯವಾಗುತ್ತದೆ ಎಂದು 2010 ರಲ್ಲಿ ನ್ಯಾಯಾಲಯಕ್ಕೆ ಮೊರೆ ಹೋಗಿ challenge ಮಾಡುತ್ತಾರೆ. ನಂತರ 2010ರಿಂದ 2017ರವರೆ ಕೇಸ್ ನಡೆದು, 2002 ರಲ್ಲಿ ಸರ್ಕಾರ ಮಾಡಿರುವ ಆಕ್ಟ್ ಅನ್ನು ಎತ್ತಿ ಹಿಡಿಯುತ್ತದೆ. ಇದನ್ನು ಸರಿ ಮಾಡುವ ಬಗ್ಗೆ ಸರ್ಕಾರಕ್ಕೆ ಛೀಮಾರಿ ಹಾಕಿದಾಗ ಸರ್ಕಾರವು 2017ರಲ್ಲಿ 2002ರ ಆಕ್ಟ್‌ಗೆ ಸ್ವಲ್ಪ ಬದಲಾವಣೆ ಮಾಡಿ, ಒಂದು amendment ತಂದಿತು. ಪವಿತ್ರ–1 ಪ್ರಕರಣದಲ್ಲಿ ಸರ್ಕಾರ ತಪ್ಪು ಮಾಡಿದೆ ಎಂದು ನ್ಯಾಯಾಲಯ ಹೇಳಿದಾಗ ಯಾರ್ಯಾರು seniority ಯಲ್ಲಿ ಇರುತ್ತಾರೆಯೋ D seniority ಗಾಗಿ ಬಿ.ಕೆ. ಪವಿತ್ರ ಪ್ರಕರಣದ ತೀರ್ಪು–1 ಎಂಬು ಒಂದು ಪಟ್ಟಿ ಮಾಡುತ್ತಾರೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಿದೆ. ಆ ಪಟ್ಟಿಯಲ್ಲಿ ಬಹಳಷ್ಟು ಅನ್ಯಾಯ ಮತ್ತು ತಾರತಮ್ಯ ಆಗಿದೆ ಎಂದು ಮಾನ್ಯ ಸದಸ್ಯರು ಆರೋಪ ಮಾಡುತ್ತಿದ್ದಾರೆ. ಆದರೆ ಆರೋಪ ಇರುವ ಪಟ್ಟಿಗೆ ಸಿ.ಐ.ಡಿ ಯಿಂದ ತನಿಖೆ ಮಾಡಿಸಬೇಕೆಂದು ಮಾನ್ಯ ಸದಸ್ಯರು ಮನವಿ ಮಾಡುತ್ತಿದ್ದಾರೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಕೆ.ಸಿ. ಕೊಂಡಯ್ಯನವರು ಪೀಠವನ್ನು ಅಲಂಕರಿಸಿದರು)**

ಆದರೆ ಆರೋಪದಿಂದ ಕೂಡಿರುವ ಪವಿತ್ರ–1 ಪ್ರಕರಣದ seniority list ಕಾರ್ಯರೂಪಕ್ಕೆ ಬಂದಿಲ್ಲ. ಏಕೆಂದರೆ 2017ರಲ್ಲಿ ಉಚ್ಚ ನ್ಯಾಯಾಲಯವು ಈ amendment– 2 ರಲ್ಲಿ promotion ನಲ್ಲಿ ಇರತಕ್ಕಂಥ SC-ST ಜನಾಂಗಕ್ಕೂ recruitment and promotion ಮಾಡುವ ಸಮಯದಲ್ಲಿ ಮೀಸಲಾತಿ ಕೊಡಬೇಕು ಎಂದಾಗ ಪವಿತ್ರ–1 ಲಿಸ್ಟ್ ಕಾರ್ಯರೂಪಕ್ಕೆ ಬರುವುದಿಲ್ಲ. ನಮ್ಮ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಸುಮಾರು 13 circle ಗಳಿದ್ದು, ಆ circle ಗಳಲ್ಲಿರುವ DRFO (Deputy Range Forest Officer), RFO (Range Forest Officer), ACF (Assistant Conservator of Forest),DCF (Deputy Conservator of Forest) ಗಳ ಹುದ್ದೆಗಳಲ್ಲಿರುವವರಿಗೆ ಪವಿತ್ರ–2 ಲಿಸ್ಟ್ ತಯಾರು ಮಾಡುತ್ತಿದ್ದೇವೆ. ಇದರ ಬಗ್ಗೆ ಆ ಇಲಾಖೆಯಲ್ಲಿರುವ State Level Committeeಯನ್ನು ರಚನೆ ಮಾಡಿದ್ದು, ಈ ಸಮಿತಿಯಲ್ಲಿ ಕೇವಲ ಅಧಿಕಾರಿಗಳು ಮಾತ್ರ ಇರುವುದಿಲ್ಲ. ಅದರಲ್ಲಿ ಕಾರ್ಮಿಕ ಸಂಘದ ಅಧ್ಯಕ್ಷರೂ ಇರುತ್ತಾರೆ. ಏಕೆಂದರೆ ತಯಾರಾಗುವ ಲಿಸ್ಟ್‌ನಲ್ಲಿ ಯಾವುದೇ ರೀತಿಯ ತಾರತಮ್ಯ ಆಗಬಾರದು. Seniority ಯಲ್ಲಿ ಯಾರಿಗೂ ಅನ್ಯಾಯ ಆಗಬಾರದೆಂಬ ದೃಷ್ಟಿಯಿಂದ ಅಲ್ಲಿರುವವರು ಸಮಿತಿಯಲ್ಲಿ ಸೇರ್ಪಡೆಯಾಗಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಕೇಳುವಂತೆ ಸಿ.ಓ.ಡಿ

ತನಿಖೆಯ ಬಗ್ಗೆ ಹಿಂದಿನ ಅರಣ್ಯ ಸಚಿವರ ಜೊತೆ ಚರ್ಚೆ ಮಾಡಿದ್ದೇನೆ. ಅದರಂತೆ ಇಲಾಖೆಯಿಂದ ಸಿ.ಓ.ಡಿ. ಗೆ ಒಂದು ಪತ್ರವನ್ನು ಬರೆದು, ಈ ರೀತಿ ದೂರು ಬಂದಿರುವುದರಿಂದ ದಯವಿಟ್ಟು ತನಿಖೆ ಪ್ರಾರಂಭ ಮಾಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಇನ್ನೂ internal communicationಆಗುತ್ತಿದೆ. ಪವಿತ್ರ–1 list implementಆಗುವುದಿಲ್ಲ ಎಂದಾಗ ಸಿ.ಓ.ಡಿ ರವರು ತನಿಖೆ ಮಾಡುವುದರಿಂದ ಏನೂ ಸಿಗುವುದಿಲ್ಲ ಎಂದು ಸಿ.ಓ.ಡಿ ಇಲಾಖೆಯ ಪತ್ರದ ಮೂಲಕ ಅನೇಕ ವಿಚಾರಗಳು ಬಂದಿವೆ. ಹಾಗಾಗಿ total DRFO, RFO, ACF, DCFಈ ಹುದ್ದೆಗಳಲ್ಲಿ 553 objections ಗಳು ಬಂದಿವೆ. ಅವರುಗಳ ತೊಂದರೆಗಳ ಬಗ್ಗೆ objections ಬಂದಿದ್ದು, ಹೆಚ್ಚಾಗಿ DRFO ರವರುಗಳ objection ಇರುವುದರಿಂದ, ಅವುಗಳೆಲ್ಲವನ್ನೂ ಪರಿಶೀಲಿಸುತ್ತೇವೆ.

(ಮುಂದು)

(453)/16.03.2020/6.40/ಹೆಚ್‌ವಿ–ಎಕೆ

**ಶ್ರೀ ಆನಂದ್‌ಸಿಂಗ್(ಮುಂದುವರೆದದ್ದು)** **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಿ.ಓ.ಡಿ. ತನಿಖೆಗೆ ಕಳುಹಿಸಿಕೊಡಬೇಕೆಂದು ಕೇಳುತ್ತಿದ್ದಾರೆ. ಬಿ.ಕೆ.ಪವಿತ್ರ–1ರ ಪ್ರಕರಣದ ತೀರ್ಪನ್ನು ಅನುಷ್ಠಾನಗೊಳಿಸದೇ ಇರುವುದರಿಂದ ಸಿ.ಓ.ಡಿ. ತನಿಖೆಗೆ ವಹಿಸುವಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ.

**ಶ್ರೀ ಎನ್.ಅಪ್ಪಾಜಿಗೌಡ:–** ಸನ್ಮಾನ್ಯ ಸಭಾಪತಿಯವರೇ, ಪವಿತ್ರ–1ರ ಪ್ರಕರಣದ ತೀರ್ಪನ್ನು ಅನುಷ್ಠಾನಗೊಳಿಸಲಾಯಿತೇ ಇಲ್ಲವೇ ಮತ್ತು ಅದನ್ನು ತಡೆಹಿಡಿಯಲಾಗಿದೆಯೇ ಎನ್ನುವುದು ಬೇರೆ ಪ್ರಶ್ನೆ. ಆದರೆ, ಇಲಾಖೆಗೆ ಮತ್ತು ಸರ್ಕಾರಕ್ಕೆ ಈ ವಿಷಯದ ಬಗ್ಗೆ ಮಿಸ್‌ಗೈಡ್ ಮಾಡಿದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿರುವುದು ಬಹಳ ಮುಖ್ಯವಾಗಿದೆ. ಇಲ್ಲದಿದ್ದರೆ ಯಾವುದೇ ಪ್ರಯೋಜನವಾಗುವುದಿಲ್ಲ.

**ಶ್ರೀ ಆನಂದ್‌ಸಿಂಗ್:–** ಸನ್ಮಾನ್ಯ ಸಭಾಪತಿಯವರೇ, ಬಿ.ಕೆ. ಪವಿತ್ರ ಪ್ರಕರಣ–1ರ ತೀರ್ಪನ್ನು ಸರಿಯಾಗಿ ಅನುಷ್ಠಾನಗೊಳಿಸಿಲ್ಲ, ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಿ ಎನ್ನುವುದು ಮಾನ್ಯ ಸದಸ್ಯರ ಮೂಲ ಪ್ರಶ್ನೆಯಾಗಿದೆ. ಇದರ ಬಗ್ಗೆ ಚರ್ಚೆ ಮಾಡಿ ಆದೇಶ ಮಾಡಲಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಿ.ಕೆ.ಪವಿತ್ರ ಪ್ರಕರಣ –1 ಮತ್ತು 2ರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈ ಹಿಂದೆ ದಿನಾಂಕ:24.10.2019ರಲ್ಲಿ ಅಂದಿನ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯುತ್ತದೆ. ಆ ಸಭೆಯಲ್ಲಿ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯುದಯದ ಮತ್ತು ಕ್ಷೇಮಾಭಿವೃದ್ಧಿ ಸಮಿತಿ, ಕೋಲಾರ ಮತ್ತು ದಲಿತ ರೈಟ್ಸ್ ಸಮಿತಿ, ಹೂವಿನ ಹಡಗಲಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವರು ವೃಂದ ಮತ್ತು ನೇಮಕಾತಿಗೆ ವ್ಯತಿರಿಕ್ತವಾಗಿ ಜ್ಯೇಷ್ಠತಾಪಟ್ಟಿಯನ್ನು ಮಾಡಿದ್ದಾರೆಂದು ಅರಣ್ಯ ಸಚಿವರಿಗೆ ಮತ್ತು ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೂ ಪತ್ರದ ಮುಖೇನ ದೂರನ್ನು ನೀಡುತ್ತಾರೆ. ಇಲಾಖಾ ಅಪರ ಮುಖ್ಯ ಕಾರ್ಯದರ್ಶಿಯವರು ದಿನಾಂಕ:05.07.2019ರಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಪತ್ರ ಬರೆದು 'ಸದರಿ ವೃಂದ ಜ್ಯೇಷ್ಠತಾ ಪಟ್ಟಿಯನ್ನು ಎರಡು ತಿಂಗಳ ಅವಧಿಯೊಳಗೆ ಅಂತಿಮಗೊಳಿಸತಕ್ಕದ್ದು ಮತ್ತು ಇದರಲ್ಲಿ ಪುನಃ ಯಾವುದೇ ಲೋಪದೋಷಗಳು ವಿಫಲತೆಗಳು ಕಂಡು ಬಂದಲ್ಲಿ ಸದರಿ ಪ್ರಕರಣದಲ್ಲಿ ಸಿ.ಐ.ಡಿ. ತನಿಖೆ ಜರುಗಿಸಲಾಗುವುದೆಂದು ನಿಮಗೆ ತಿಳಿಸಲು ನಿರ್ದೇಶಿಸುತ್ತೇನೆ' ಎಂದು ಒಂದು ನಿರ್ದೇಶನವನ್ನು ನೀಡುತ್ತಾರೆ. ನಂತರ ದಿನಾಂಕ:24.10.2019ರಲ್ಲಿ ಮಾನ್ಯ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯುತ್ತದೆ. ಆ ಸಭೆಯಲ್ಲಿ ಎಸ್.ಸಿ., ಎಸ್.ಟಿ., ವೃಂದದ ಎಲ್ಲ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ನಂತರ ದಿನಾಂಕ:11.11.2019ರಲ್ಲಿ ಈ ವಿಷಯಗಳನ್ನು ಕುರಿತು ಪರಿಶೀಲನೆ ಮಾಡುವುದಕ್ಕೆ ಸಮಿತಿಯನ್ನು ರಚನೆ ಮಾಡಲಾಗಿದೆ. ಸಮಿತಿ ರಚನೆ ಮಾಡಿ ಇಲ್ಲಿಗೆ ನಾಲ್ಕು ತಿಂಗಳುಗಳು ಕಳೆದಿವೆ. ಈ ಸಮಿತಿಯ ಕಾರ್ಯಪ್ರಗತಿ ಯಾವ ಹಂತದಲ್ಲಿದೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಿಲ್ಲ. ಅಂದರೆ, ಈ ಸಮಿತಿಯೂ ಕೆಲಸ ಮಾಡುತ್ತಿಲ್ಲವೆಂದು ಅರ್ಥವಾಗುತ್ತದೆ. ಮಾನ್ಯ ಸಚಿವರು ಮಾತನಾಡುತ್ತಾ, ಸುಮಾರು 550 ಮಂದಿ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ ಎನ್ನುವ ವಿಚಾರವನ್ನು ತಿಳಿಸಿದ್ದಾರೆ. ಈ ಪಟ್ಟಿಯಲ್ಲಿ ಜ್ಯೇಷ್ಠತೆಯನ್ನು ನಿಗದಿಗೊಳಿಸುವುದರಲ್ಲಿ ಬಹಳಷ್ಟು ಅವ್ಯವಹಾರಗಳು ನಡೆದಿವೆ ಎನ್ನುವುದರ ಬಗ್ಗೆ ಸರ್ಕಾರ ಸಿ.ಓ.ಡಿ. ತನಿಖೆಗೆ ಆದೇಶ ಮಾಡಲಿಲ್ಲ. ಜ್ಯೇಷ್ಠತಾ ಪಟ್ಟಿಯನ್ನು ತಯಾರು ಮಾಡುವುದಕ್ಕೆ ಯಾವ ಸಮಿತಿಗೆ ವಹಿಸಲಾಗಿತ್ತು ಅವರು ಲೋಪದೋಷಗಳನ್ನು ಎಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಅದನ್ನು ಪರಿಶೀಲನೆ ಮಾಡುವುದಕ್ಕೆ ವಿಭಾಗ ಮಟ್ಟದಲ್ಲಿ ಮಾನ್ಯ ಅರಣ್ಯ ಸಚಿವರು ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಆ ಸಮಿತಿ ನಾಲ್ಕು ತಿಂಗಳುಗಳಲ್ಲಿ ಏನು ಕೆಲಸ ಮಾಡಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಆಕ್ಷೇಪಣೆಗಳನ್ನು ಪರಿಶೀಲಿಸಿ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಗೊಳಿಸುವುದಕ್ಕೆ ನಾಲ್ಕು ತಿಂಗಳ ಕಾಲಾವಕಾಶ ಬೇಕಾಗಿದೆಯೇ? ಎಸ್.ಸಿ., ಎಸ್.ಟಿ.ಗಳ ಮನವಿ ಅಹವಾಲುಗಳಿಗೆ ಮತ್ತು ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ಬರೆದ ಪತ್ರಕ್ಕೆ ಕವಡೆ ಕಾಸಿನಷ್ಟು ಬೆಲೆಯಿಲ್ಲ. ಜ್ಯೇಷ್ಠತಾ ಪಟ್ಟಿಯನ್ನು ಎರಡು ತಿಂಗಳ ಅವಧಿಯೊಳಗೆ ಅಂತಿಮಗೊಳಿಸತಕ್ಕದ್ದು ಮತ್ತು ಇದರಲ್ಲಿ ಪುನಃ ಯಾವುದೇ ಲೋಪದೋಷಗಳು, ವಿಫಲತೆಗಳು ಕಂಡು ಬಂದಲ್ಲಿ ಸದರಿ ಪ್ರಕರಣದಲ್ಲಿ ಸಿ.ಐ.ಡಿ. ತನಿಖೆ ಜರುಗಿಸಲಾಗುವುದೆಂದು ಅಪರ ಮುಖ್ಯ ಕಾರ್ಯದರ್ಶಿಯವರು ಪತ್ರವನ್ನು ಬರೆದಿದ್ದರು. ಅವರು ಪತ್ರ ಬರೆದು ಇಲ್ಲಿಗೆ 8 ತಿಂಗಳುಗಳು ಕಳೆದು ಹೋಗಿದೆ. ಇಲ್ಲಿಯವರೆಗೆ ಸಿ.ಓ.ಡಿ. ತನಿಖೆಗೆ ವಹಿಸಿಲ್ಲ ಅಥವಾ ಮಾನ್ಯ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ನಾಲ್ಕು ತಿಂಗಳುಗಳು ಕಳೆದರು ಜಾರಿಗೊಳಿಸುವುದಕ್ಕೆ ಸಾಧ್ಯವಾಗಿಲ್ಲ. ಈ ಜ್ಯೇಷ್ಠತಾ ಪಟ್ಟಿಯನ್ನು ತಯಾರು ಮಾಡುವ ಸಂದರ್ಭದಲ್ಲಿ, ಇಲಾಖಾ ನಿಯಮಾವಳಿಗಳ ಪ್ರಕಾರ ಮಾಡದೇ ಅವ್ಯವಹಾರದಲ್ಲಿ ಭಾಗಿಗಳಾಗಿರುವ ಆ ಸಮಿತಿಯ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ದಿನಾಂಕ:11.11.2019ರಲ್ಲಿ 'ಪರಿಶೀಲನೆ ಮಾಡಿ ಕೂಡಲೇ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕು' ಎಂದು ನೇಮಿಸಿರುವ ಸಮಿತಿಯು ಎಷ್ಟು ದಿನದೊಳಗಾಗಿ ಜ್ಯೇಷ್ಠತಾ ಪಟ್ಟಿಯನ್ನು ಸಕ್ರಮಗೊಳಿಸಲಾಗುತ್ತದೆ ಎನ್ನುವುದಕ್ಕೆ ಮಾನ್ಯ ಸಚಿವರಿಂದ ನೇರ ಉತ್ತರವನ್ನು ಬಯಸುತ್ತಿದ್ದೇನೆ.

**ಶ್ರೀ ಆನಂದ್‌ಸಿಂಗ್:–** ಸನ್ಮಾನ್ಯ ಸಭಾಪತಿಯವರೇ, ತಯಾರು ಮಾಡಿರುವ ಜ್ಯೇಷ್ಠತಾ ಪಟ್ಟಿಯಲ್ಲಿ ಲೋಪದೋಷಗಳಿವೆ, ಅದರ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕೆನ್ನುವುದು ಮಾನ್ಯ ಸದಸ್ಯರ ಒತ್ತಾಯವಾಗಿದೆ. 'ಹಿಂದಿನ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಸಿ, ರಾಜ್ಯ ಮಟ್ಟದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಲಾಗಿದೆ. ಆ ಸಮಿತಿಯವರು ನಾಲ್ಕು ತಿಂಗಳುಗಳಾದರೂ ಸಹ ಇನ್ನೂ ಯಾವುದೇ ಪ್ರಗತಿಯನ್ನು ತೋರಿಸಿಲ್ಲ, ಕಾರಣವೇನು' ಎನ್ನುವುದು ಮಾನ್ಯ ಸದಸ್ಯರ ಮತ್ತೊಂದು ಪ್ರಶ್ನೆಯಾಗಿದೆ. ಸಿ.ಓ.ಡಿ. ಮತ್ತು ಇಲಾಖೆಯ ನಡುವೆ ಸಾಕಷ್ಟು ಪತ್ರ ವ್ಯವಹಾರಗಳು ನಡೆದಿವೆ. ಇಲಾಖೆಯವರು ಸಿ.ಓ.ಡಿ.ಯವರಿಗೆ ಏನೇನು ಮಾಹಿತಿಯನ್ನು ನೀಡಿದ್ದಾರೆ ಎನ್ನುವುದನ್ನು ನಾನು ತರಿಸಿಕೊಳ್ಳುತ್ತೇನೆ. ಬಿ.ಕೆ.ಪವಿತ್ರ ಪ್ರಕರಣ–1ರ ಜ್ಯೇಷ್ಠತಾ ಪಟ್ಟಿಯನ್ನು ತಯಾರು ಮಾಡುವುದರಲ್ಲಿ ನಡೆದಿರುವ ಲೋಪದೋಷಗಳು ಕಂಡುಬಂದಲ್ಲಿ ಸಿ.ಓ.ಡಿ. ತನಿಖೆಗೆ ವಹಿಸುವುದರ ಬಗ್ಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುವುದು. ಬಿ.ಕೆ.ಪವಿತ್ರ ಪ್ರಕರಣ–2 ಜ್ಯೇಷ್ಠತಾ ಪಟ್ಟಿಯನ್ನು ತಯಾರು ಮಾಡಲು ರಚಿಸಿರುವ ಸಮಿತಿಯು ಎಷ್ಟು ದಿನಗಳಲ್ಲಿ ಕಾರ್ಯಪ್ರಗತಿಯನ್ನು ತೋರಿಸುತ್ತದೆ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಬಹಳಷ್ಟು ಆಕ್ಷೇಪಣೆಗಳು ಬಂದಿವೆ. ಈ ಸಮಿತಿ ಈಗಾಗಲೇ 13 ಸರ್ಕಲ್‌ನಲ್ಲಿ ಪಟ್ಟಿಯನ್ನು ತಯಾರು ಮಾಡಿದೆ. ಅಂತಿಮ ಘಟ್ಟದಲ್ಲಿದೆ. ಯಾವುದೇ ಆಕ್ಷೇಪಣೆಗಳು ಬಂದರೇ ಅಥವಾ ಯಾರಾದರು ನ್ಯಾಯಾಲಯಕ್ಕೆ ಹೋದರೆ, ಪಟ್ಟಿ ತಯಾರು ಮಾಡುವ ಪ್ರಕ್ರಿಯೆಯಲ್ಲಿ ತಡವಾಗಬಹುದು. ಯಾವುದೇ ಅಡ್ಡಿ ಆತಂಕ ಬರದೇ ಹೋದರೆ, ಇವತ್ತಿನಿಂದ ಒಂದು ತಿಂಗಳೊಳಗಾಗಿ ಪಟ್ಟಿಯನ್ನು ಬಿಡುಗಡೆ ಮಾಡುವಂತಹ ಪ್ರಯತ್ನವನ್ನು ಮಾಡಲಾಗುತ್ತದೆ.

<u>**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1220**</u>

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಬಿಲ್ ಪಾಸ್ ಆಗಬೇಕಾಗಿರುವುದರಿಂದ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಅಲ್ಲಿಗೆ ಹೋಗಿದ್ದಾರೆ. ಆದ್ದರಿಂದ ಮಾನ್ಯ ಬಸವರಾಜ ಹೊರಟ್ಟಿಯವರ ಈ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಳ್ಳಬೇಕೆನ್ನುವುದು ನನ್ನ ಪ್ರಾರ್ಥನೆಯಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ ಮಾನ್ಯ ಸಭಾ ನಾಯಕರು ಉತ್ತರವನ್ನು ಹೇಳಬಹುದು, ಆ ಬಗ್ಗೆ ನನ್ನ ತಕರಾರಿಲ್ಲ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರಿಗೆ ಸಮರ್ಪಕವಾಗಿರುವ ಉತ್ತರವನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದಲೇ ಕೊಡಿಸಲಾಗುತ್ತದೆ. ಆದರೆ, ಸ್ವಲ್ಪ ವಿಳಂಬವಾಗುತ್ತದೆ.

**ವೈಸ್ ಛೇರ್ಮನ್ಃ–** ಆಯಿತು ಈ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಳ್ಳೋಣ ಮುಂದಿನ ಪ್ರಶ್ನೆ ಶ್ರೀ ಆರ್.ಬಿ.ತಿಮ್ಮಾಪೂರ್ ಅವರದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1054**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಬಿ.ತಿಮ್ಮಾಪೂರ್:–** ಸನ್ಮಾನ್ಯ ಸಭಾಪತಿಯವರೇ, ಸಕ್ಕರೆ ಕಾರ್ಖಾನೆಗಳು ಸ್ಥಾಪನೆಯಾದ ಪ್ರಾರಂಭದಲ್ಲಿ ಪ್ರತಿದಿನ ಸುಮಾರು 2800 ಟನ್‌ಗಳಷ್ಟು ಕಬ್ಬನ್ನು ಅರೆಯುವುದಕ್ಕೆ ಪ್ರಾರಂಭಿಸಿ, ನಂತರ ದಿನಂಪ್ರತಿ ಸುಮಾರು 20,000 ಟನ್‌ಗಳಷ್ಟು ಕಬ್ಬನ್ನು ಅರೆಯುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತವೆ. ಆಗ ಸಾರ್ವಜನಿಕರ ಅಭಿಪ್ರಾಯವನ್ನು ಕೇಳಲಾಗುತ್ತದೆ. ನಂತರದ ದಿನಗಳಲ್ಲಿ ಅದರಿಂದ ಹೊರಹೊಮ್ಮುವ ಧೂಳಿನಿಂದಾಗಿ ಅಕ್ಕಪಕ್ಕ ಇರುವಂತಹ ಜಮೀನುಗಳಿಗೆ ಹಾನಿಯಾಗುತ್ತದೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕಾರ್ಖಾನೆಗಳು ಪ್ರಾರಂಭವಾದ ನಂತರ ಅಕ್ಕಪಕ್ಕದ ಜಮೀನುಗಳಿಗೆ ಯಾವರೀತಿಯಲ್ಲಿ ಹಾನಿಯುಂಟಾಗುತ್ತಿದೆ ಎನ್ನುವುದರ ಬಗ್ಗೆ ಒಂದು ಅಥವಾ ಎಡರು ವರ್ಷಗಳಿಗೊಮ್ಮೆ ಸಮೀಕ್ಷೆ ಮಾಡಿದರೆ, ರೈತರಿಗೆ ಸಹಾಯಕಾರಿಯಾಗುತ್ತದೆ ಮತ್ತು ಅವರಿಗೆ ಪರಿಹಾರ ದೊರೆಯುತ್ತದೆ. ಈ ದಿಸೆಯಲ್ಲಿ ಕ್ರಮಕೈಗೊಳ್ಳಬೇಕೆನುವುದು ನನ್ನ ಒತ್ತಾಯವಾಗಿದೆ.

**ಶ್ರೀ ಆನಂದ ಸಿಂಗ್:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಗೆ ಆ ರೀತಿಯ ದೂರುಗಳು ಬಹಳ ಕಡಿಮೆ ಸಂಖ್ಯೆಯಲ್ಲಿ ಬಂದಿವೆ. ಮೆ॥ಎನ್.ಎಸ್.ಎಲ್.ಶುಗರ್ಸ್ ಲಿಮಿಟೆಡ್‌ನಿಂದ ಹೊರಹೊಮ್ಮುವ ಮಾಲಿನ್ಯದಿಂದ ಅಕ್ಕಪಕ್ಕದಲ್ಲಿರುವ ಜಮೀನುಗಳಿಗೆ ತೊಂದರೆಯುಂಟಾಗಿದೆ ಎನ್ನುವ ದೂರು ಬಂದಿದೆ. ಆ ಕಾರ್ಖಾನೆಯ ಮೇಲೆ ಬಹಳಷ್ಟು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅಲ್ಲಿರುವಂತಹ ರೈತರಿಗೆ ಪರಿಹಾರಧನವನ್ನು ಸಹ ನೀಡಲಾಗಿದೆ. ಮಾನ್ಯ ಸದಸ್ಯರು ಹೇಳಿರುವಂತಹ ಬೇರೆಬೇರೆ ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ.

(ಮುಂದುವರಿದಿದೆ)

(454) 16.3.2020 6.50 ಪಿಕೆ:ಎಕೆ

**ಶ್ರೀ ಹೆಚ್.ಎಂ.ರೇವಣ್ಣ:–** ಸರಿಯಾದ ಉತ್ತರವನ್ನು ತರಿಸಿಕೊಂಡು ಹೇಳಿ.
**ಶ್ರೀ ಆನಂದ್ ಸಿಂಗ್:–** ಉತ್ತರವನ್ನು ತರಿಸಿಕೊಂಡಿದ್ದೇವೆ.

**ಶ್ರೀ ಹೆಚ್.ಎಂ.ರೇವಣ್ಣ:–** ಕ್ರಮ ಕೈಗೊಂಡಿದ್ದೇವೆ ಎಂದು ಹೇಳಿಬಿಟ್ಟರೆ ನಾವು ಸುಮ್ಮನೆ ಕುಳಿತುಕೊಳಬೇಕೇ? ಎಷ್ಟು ಪರಿಹಾರ ಕೊಟ್ಟಿದ್ದೀರಾ ಎಂದು ತಿಳಿಸಿ.

**ಶ್ರೀ ಆನಂದ್ ಸಿಂಗ್:–** ಹೇಳುತ್ತೇನೆ, ಇನ್ನು ಮುಂದೆ ಬರ್ತಾ ಬರ್ತಾ ಚೆನ್ನಾಗಿಯೇ ಹೇಳುತ್ತೇನೆ. ನಿಮಗೆ ಕೇಳುವುದಕ್ಕೆ ಅವಕಾಶವನ್ನೂ ಕೊಡುವುದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರೇವಣ್ಣ:–** ಪರವಾಗಿಲ್ಲ, ನಿಧಾನವಾಗಿಯೇ ಹೇಳಿ. ಮುಂದಕ್ಕೆ ಹೇಳುವುದು ಬೇರೆ.

**ಶ್ರೀ ಆನಂದ್‌ಸಿಂಗ್:–** ಇನ್ನೂ 15 ದಿವಸದ ಒಳಗೆ ನೀವೂ ಬೇಕಾದರೆ ಪ್ರಶ್ನೆಯನ್ನು ಹಾಕಿದರೆ ನಾನು ಉತ್ತರ ಕೊಡುತ್ತೇನೆ. ಮಾನ್ಯ ಸಭಾಪತಿಯವರೇ, 162 ರೈತರಿಗೆ ರೂ. 80 ಲಕ್ಷಗಳನ್ನು ಪರಿಹಾರವಾಗಿ ಕೊಟ್ಟಿದ್ದೇವೆ. ಈ ಕಾರ್ಖಾನೆಯಿಂದ ಏನು ನಷ್ಟವಾಯಿತೋ ಅದರ ಹಿನ್ನೆಲೆಯಲ್ಲಿ ಅವರಿಗೆ ದಂಡ ವಿಧಿಸಿ ರೂ. 84 ಲಕ್ಷ 54 ಸಾವಿರ ಪರಿಹಾರ ಕೊಟ್ಟಿದ್ದೇವೆ.

**Sri R.B. THIMMAPUR:** Distillery, Co-generation ಪ್ರಾರಂಭವಾಗುತ್ತವೆ. ಇದರಿಂದ ಪರಿಸರ ಮಾಲಿನ್ಯ, ವಾಯು ಮಾಲಿನ್ಯವಾಗುತ್ತದೆ. ಪ್ರತಿವರ್ಷ ಒಂದೊಂದು ರೀತಿಯಲ್ಲಿ ಪರಿಣಾಮ ಬೀರುತ್ತದೆ. ಅಕ್ಕಪಕ್ಕದ ನೀರು ಕೆಟ್ಟು ಹೋಗುತ್ತದೆ, ಬಾವಿ ತೋಡಿದರೆ ಅಲ್ಲಿ ಡಿಸ್ಟಿಲರಿ ನೀರು ಬರುತ್ತದೆ. ಪ್ರತಿವರ್ಷ ಒಂದೊಂದು ರೀತಿಯಲ್ಲಿ ಬದಲಾವಣೆ ಆಗುತ್ತಿರುತ್ತದೆ. ಯಾರೋ ರೈತ ನಿಮಗೆ ದೂರು ಕೊಟ್ಟರೆ ಮಾತ್ರ ನೀವು ಕ್ರಮ ತೆಗೆದುಕೊಳ್ಳುವುದಲ್ಲ. ಪರಿಸರ ಮಾಲಿನ್ಯವಾಗುತ್ತದೆ, ರೈತಾಪಿ ವರ್ಗಕ್ಕೆ ತೊಂದರೆಯಾಗುತ್ತದೆ, ವಾಯು ಮಾಲಿನ್ಯ ಆಗುತ್ತದೆ, ನೀರು ಹದಗೆಡುತ್ತದೆ. ಆದುದರಿಂದ ಒಂದು ಅಥವಾ ಎರಡು ವರ್ಷಕ್ಕೊಮ್ಮೆ, ಆ ಸಕ್ಕರೆ ಕಾರ್ಖಾನೆಗಳಿಂದ ಆಗುವ ಹಾನಿಗಳ ಬಗ್ಗೆ ಸರ್ವೆ ಮಾಡಿಸಿ ಪರಿಹಾರ ಕೊಡುವ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ.

**ಶ್ರೀ ಆನಂದ್ ಸಿಂಗ್:–** ಮಾನ್ಯ ಸದಸ್ಯರ ಸಲಹೆಯನ್ನು ನಾವು ಪರಿಗಣಿಸುತ್ತೇವೆ. ವರ್ಷಕ್ಕೊಮ್ಮೆ ಈ ರೀತಿಯ ಕಾರ್ಖಾನೆಯಿಂದ ಏನೇನು ಪರಿಸರ ಮಾಲಿನ್ಯವಾಗುತ್ತದೆಯೋ ಆ ನಿಟ್ಟಿನಲ್ಲಿ ಅಧಿಕಾರಿಗಳ ಜೊತೆ ಮಾತನಾಡಿ ಕ್ರಮ ಕೈಗೊಳ್ಳುವ ತೀರ್ಮಾನ ಮಾಡುತ್ತೇವೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ನಾನು ಪ್ರತಿನಿಧಿಸುವಂತಹ ಕ್ಷೇತ್ರದ ಪಕ್ಕದ ಭಾಗದಲ್ಲಿ ಆದಂತಹ ದೊಡ್ಡ ಅವಘಡ ಭಯಂಕರ ಇದಾಗಿದೆ. ಮಾನ್ಯ ಸದಸ್ಯರಾದ ತಿಮ್ಮಾಪುರರವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಎನ್‌ಎಸ್‌ಎಲ್ ಸಕ್ಕರೆ ಕಾರ್ಖಾನೆ ಕೊಪ್ಪದಲ್ಲಿ ಬರುತ್ತದೆ. ಮಾನ್ಯ ಸಭಾಪತಿಯವರೇ, ಆ ಸಮಯ ಬಹಳ ಚೆನ್ನಾಗಿತ್ತು. ಏಕೆಂದರೆ ಒಂದು ವೇಳೆ ಅಲ್ಲಿ burst ಆದಾಗ ಸುತ್ತ ಏನಾದರೂ ಜನ ಇದ್ದಿದ್ದರೆ ಎಷ್ಟು ಜನರ ಸಾವಾಗುತ್ತಿತ್ತೋ ಗೊತ್ತಿಲ್ಲ. ಅಲ್ಲಿನ ಇಡೀ ಭೂಮಿ ಈಗ ಬಂಜರು ಭೂಮಿಯಾಗಿದೆ. ಇಲ್ಲಿನ ಅಧಿಕಾರಿಗಳು ಮತ್ತು ಕೆಲವು ಜನಪ್ರತಿನಿಧಿಗಳ nexus ನಿಂದ ಈ ಪ್ರಕರಣವನ್ನು ಮುಚ್ಚಿ ಹಾಕಿದರು.

**(ಈ ಹಂತದಲ್ಲಿ ಉಪಸಭಾಪತಿಯವರು ಪೀಠಾಸೀನರಾದರು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇಲ್ಲದಿದ್ದರೆ ಈ ಒಂದು ಪ್ರಕರಣವನ್ನು ಸಿಓಡಿಗೋ, ನ್ಯಾಯಾಂಗ ತನಿಖೆಗೋ ಅಥವಾ ಸಿಬಿಐ ತನಿಖೆಗೋ ವಹಿಸಬೇಕಾಗಿತ್ತು. ಜೊತೆಗೆ, ಆ ಸಮಯದಲ್ಲಿ ತಪ್ಪಿಸಿಕೊಳ್ಳುವುದಕ್ಕೆ ಇವರು ರೈತರ ಜೊತೆ ಮಾತುಕತೆ ಮಾಡಿ, ಅವರ ತುಟಿಗೆ ಬೆಣ್ಣೆ ಇಟ್ಟರು, ಮೂಗಿಗೆ ತುಪ್ಪ ಹಚ್ಚಿದರು. ಮಾನ್ಯ ಸಚಿವರೇ, ತಾವು ಕಳಕಳಿವುಳ್ಳ ಸಚಿವರಾಗಿದ್ದೀರಿ. ಈಗಲೂ ರೈತರಿಗೆ ಸರಿಯಾದ ಪರಿಹಾರ ಸಿಕ್ಕಿಲ್ಲ. ಆದ್ದರಿಂದ ಸಂಪೂರ್ಣವಾಗಿ ತನಿಖೆ ನಡೆಸಿ. ಇಡೀ ಕರ್ನಾಟಕ ರಾಜ್ಯದಲ್ಲಿ ಈ ರೀತಿ ಸಕ್ಕರೆ ಕಾರ್ಖಾನೆಗಳವರು burst ಆಗುವಂತಹ ಮೆಷಿನರಿಗಳನ್ನು ಏಕೆ ಇಟ್ಟುಕೊಳ್ಳುತ್ತಾರೋ ಗೊತ್ತಾಗುವುದಿಲ್ಲ. ಅನಾಹುತವಾಗುವುದಕ್ಕೆ ಮುಂಚೆಯೇ ಏಕೆ ಬದಲಾಯಿಸಬಾರದು? Pollution Control Board ನ ಅಧಿಕಾರಿಗಳು ಆಗಾಗ ಅಲ್ಲಿಗೆ ಹೋಗಿ ಟೆಸ್ಟ್ ಮಾಡುವುದಿಲ್ಲವೇ? ಎನ್.ಎಸ್.ಎಲ್ ಸಕ್ಕರೆ ಕಾರ್ಖಾನೆಯಲ್ಲಾಗಿದ್ದು ಕೇವಲ ಸ್ಯಾಂಪಲ್ ಮಾತ್ರ. ಇದೇರೀತಿ ಇಡೀ ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಅನಾಹುತಗಳು ಸಂಭವಿಸುತ್ತಿರುತವೆ. ಇದರಿಂದ ಪ್ರಾಣ ಹಾನಿ ಮತ್ತು ಅಲ್ಲಿನ ಭೂಮಿ ಬಂಜರಾಗುವ ಸಾಧ್ಯತೆ ಇರುತ್ತದೆ. ರೈತರ ಮತ್ತು ಕಾರ್ಖಾನೆಗಳ ಜೊತೆ ಏನು ಒಪ್ಪಂದವಾಗಿತ್ತೋ, ಅದರಂತೆ ಹಣ ಕೊಟ್ಟಿಲ್ಲ. ಜೊತೆಗೆ, ಈ ತರಹದ ಘಟನೆ ಇಡೀ ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಆಗಬಾರದು, ಆ ನಿಟ್ಟಿನಲ್ಲಿ ಮುಂಜಾಗರೂಕತಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇದು ನಮ್ಮ ಊರಿನಲ್ಲಿರುವ ಸಕ್ಕರೆ ಕಾರ್ಖಾನೆಯ ಘಟನೆಯಾಗಿದೆ. ಅದು ಮಾನ್ಯ ಸದಸ್ಯರ ಕ್ಷೇತ್ರ, ಅವರ ಊರು ನಮ್ಮದು. ಇಬ್ಬರೂ ಒಂದೇ ತಾಲ್ಲೂಕಿನವರಾಗಿದ್ದೇವೆ. ನಾವು, ಮಾನ್ಯ ಸದಸ್ಯರು ಮತ್ತು ಶಾಸಕರು ತೀರ್ಮಾನ ಮಾಡಿದ ಹಾಗೆ ಆ ಕಾರ್ಖಾನೆ ನಡೆದುಕೊಂಡಿಲ್ಲ. ಖಿಚಿಟಿಇ ಛಿಣಾಢಿಣ ಆಗಿ ಅದರಿಂದ ಏನು ದ್ರವ ಹರಿಯಿತೋ ಅದರಿಂದ ಅಲ್ಲಿ ಬೆಳೆ ಬೆಳೆಯವುದಕ್ಕೆ ಆಗುತ್ತಿಲ್ಲ. ಇನ್ನೂ ಸುಮಾರು 5–10 ವರ್ಷಗಳವರೆಗೆ ಅಲ್ಲಿ ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ನಮ್ಮ ಸಮಕ್ಷಮ ತಹಸೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಒಪ್ಪಿಕೊಂಡ ತೀರ್ಮಾನದ ಪ್ರಕಾರ ಕಾರ್ಖಾನೆ ನಡೆದುಕೊಂಡಿಲ್ಲ, ಆ ಪ್ರಮಾಣದ ಪರಿಹಾರ ಕೊಟ್ಟಿಲ್ಲ. ರೈತರು ಚೇತರಿಸಿಕೊಳ್ಳವುದೇ ಬಹಳ ಕಷ್ಟ ಇದೆ. ಅಲ್ಲಿ ಕೇವಲ ಪರಿಸರ ಹಾನಿಯಾಗಿರುವುದಲ್ಲ, ಣಚಿಟಿಇ ಛಿಣಾಢಿಣ ಆಗಿ, ಜಮೀನುಗಳಿಗೆ ನುಗ್ಗಿ ಆ ದ್ರವ ಸುಮಾರು 4–5 ಅಡಿ ಆಳದಲ್ಲಿ ಹೋಗಿ ನಿಂತಿತ್ತು. ಅಲ್ಲಿ ಬೆಳೆ ಬೆಳೆಯು ಬೇಕಾದರೆ ಇನ್ನೂ ಹತ್ತು ವರ್ಷ ಬೇಕಾಗುತ್ತದೆ. ಹೀಗಾಗಿ ರೈತರು ಬಹಳ ಕಷ್ಟದಲ್ಲಿದ್ದಾರೆ. ಆವತ್ತು ಏನು ತೀರ್ಮಾನವಾಗಿತ್ತೋ ಆ ಪ್ರಕಾರ ಅವರಿಗೆ ಪರಿಹಾರ ಕೊಡಿಸಿ ಕೊಡಬೇಕು.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇವತ್ತು ಯಾವುದೇ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕಾದರೆ 'Consent for Establishment' ಎಂದು ಕೊಡುತ್ತಾರೆ. ಅಲ್ಲದೇ 'Consent for Operation' ಎಂದು ಕೊಡುತ್ತಾರೆ. ಈ 'Consent for Operation' ತೆಗೆದುಕೊಂಡ ಮೇಲೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರತಿಯೊಂದು ಕಾರ್ಖಾನೆ, Air Act ಅಡಿಯಲ್ಲಿ ವಾಯು ಮಾಲಿನ್ಯ ಅಥವಾ Water Act ಅಡಿಯಲ್ಲಿ ಜಲ ಮಾಲಿನ್ಯ ತಡೆಯುವಲ್ಲಿ ಬಹಳಷ್ಟು ಮುತುವರ್ಜಿ ವಹಿಸಬೇಕು, ಪ್ರತಿವರ್ಷ ನವೀಕರಣ ಮಾಡಬೇಕು. ಅಂತಹ ಸಮಯದಲ್ಲಿ concerned officers ಪರಿಸರವನ್ನು ಸರಿಯಾದ ರೀತಿಯಲ್ಲಿ ಇಟ್ಟುಕೊಂಡಿದ್ದಾರೆಯೇ ಎಂದು Pollution Control Board and Environmental Officers ನೋಡಬೇಕಾಗುತ್ತದೆ. ನಮ್ಮ ಮಾನ್ಯ ಸದಸ್ಯರು ಹೇಳಿದ ಹಾಗೆ, ಭೂಮಿಯಲ್ಲಿ organic ಅಥವಾ inorganic ಅಥವಾ fluids, toxics ಯಾವರೀತಿ ಹೋಗುತ್ತಿದೆ ಎಂದರೆ, ಸಂಪೂರ್ಣವಾಗಿ ಭೂಮಿಯಲ್ಲಿರುವ ಅಂತರ್ಜಲ ಕಲುಷಿತವಾಗುತ್ತಿದೆ. ಇದು ಎಲ್ಲಿಯವರೆಗೆ ಹೋಗುತ್ತದೆ ಎಂದರೆ, ನಾವು ಅದನ್ನು ಸರಿಪಡಿಸುವುದಕ್ಕೆ ಆಗದೇ ಇರುವ ಮಟ್ಟಕ್ಕೆ ಹೋಗುತ್ತದೆ. ಇಂತಹ ಪರಿಸ್ಥಿತಿಯನ್ನು ನಾವು ಮುಂದಿನ ದಿನಗಳಲ್ಲಿ ಕಾಣುತ್ತೇವೆ. ಇದನ್ನು ಸರಿಪಡಿಸುವುದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ನಾವು ಯಾರೂ ಕೊಳವೆ ಬಾವಿಯ ನೀರನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ. ಆ ನೀರು ಸಂಪೂರ್ಣ ವಿಷಪೂರಿತವಾಗುತ್ತದೆ, ಕಲ್ಮಷಗೊಳ್ಳುತ್ತದೆ. ದಯವಿಟ್ಟು ಇದರ ಬಗ್ಗೆ ಮಾನ್ಯ ಸಚಿವರು ಸಂಪೂರ್ಣವಾದ ಕಾರ್ಯಕ್ರಮ ಹಾಕಿಕೊಂಡರೆ ಮಾತ್ರ ಇದನ್ನು ತಡೆಗಟ್ಟಬಹುದು. ಇಂತಹ ಸ್ಥಿತಿಯನ್ನು ಸರಿಪಡಿಸದೇ ಹೋದರೆ ಇಡೀ ರಾಜ್ಯದಲ್ಲಿ ಅಂತರ್ಜಲ ಕೆಟ್ಟು ಹೋಗುತ್ತದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಹಿಂದೆ ಸ್ಥಾಪಿತವಾಗುತ್ತಿದ್ದ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಪಟ್ಟಂತೆ Environmental Impact Assessment ಮಾಡಲಿಲ್ಲ, ಅದಕ್ಕೆ ತಕ್ಕಂತೆ mitigation measures ಮಾಡಲಿಲ್ಲ. Environmental Impact Assessment ನ್ನು ಮಾಡಿಸಬೇಕು ಮತ್ತು mitigation measures ಆಗಬೇಕು. ದಯವಿಟ್ಟು ಈ ಕೆಲಸಗಳು ಆಗಬೇಕು. ಅಲ್ಲದೇ ಆ ಜನರಿಗೆ ಸೂಕ್ತ ಪರಿಹಾರ ಕೊಡಿಸಬೇಕು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠಾಸೀನರಾದರು)**

**ಶ್ರೀ ಆನಂದ್ ಸಿಂಗ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಾ, ಸರಿಯಾದ ಪರಿಹಾರ ಕೊಟ್ಟಿಲ್ಲ ಎಂದು ಹೇಳಿದರು. ನಮ್ಮ ಇಲಾಖೆ ನೇರವಾಗಿ ರೈತರನ್ನು ಕರೆದು ಪರಿಹಾರ ಕೊಡುವ ಕೆಲಸ ಮಾಡಲಿಲ್ಲ. ಅಲ್ಲಿ ತಹಸೀಲ್ದಾರರು, ಕೃಷಿ ಇಲಾಖೆ, ರೇಷ್ಮೆ ಇಲಾಖೆ, ತೋಟಗಾರಿಕೆ ಇಲಾಖೆ ಇವರೆಲ್ಲರೂ ನಿಗದಿಪಡಿಸಿದಂತೆ, ಜಿಲ್ಲಾಧಿಕಾರಿಗಳ ಮುಖಾಂತರ ಪರಿಹಾರವನ್ನು ಕೊಟ್ಟಾಗಿದೆ. ಆದರೂ ತಾವು, ಅಲ್ಲಿ ಸರಿಯಾದ ರೀತಿಯಲ್ಲಿ ರೈತರಿಗೆ ಪರಿಹಾರ ಕೊಟ್ಟಿಲ್ಲ ಎಂದು ಹೇಳುತ್ತಿದ್ದೀರಿ. ಆ ಕಾರ್ಖಾನೆಯ ಸ್ಥಿತಿಯನ್ನು ನೋಡಿ ಅವರನ್ನೂ ಕರೆಯುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೆಯೇ ಆ ಭಾಗದವರಾದ ತಾವುಗಳು ತಮ್ಮ ಜೊತೆ ನಾಲ್ಕು ಜನ ರೈತರನ್ನು ಕರೆದುಕೊಂಡು ಬಂದರೆ ಸಭೆ ಮಾಡೋಣ. ಕಾರ್ಖಾನೆಯವರು ಕೊಟ್ಟಿರುವ ಪರಿಹಾರ ಸರಿಯಿಲ್ಲ ಎನ್ನುವುದಾದರೆ ಮತ್ತೆ ಆ ಕಾರ್ಖಾನೆಯ ಮುಖಾಂತರ ಪರಿಹಾರ ಕೊಡಿಸುವ ಪ್ರಯತ್ನ ಮಾಡುತ್ತೇನೆ.

(ಮುಂದು)

(455) 16–3–2020 7.00 ಡಿಎಸ್–ಆರ್‌ಎನ್

**ಚುಕ್ಕೆ ಪ್ರಶ್ನೆ ಸಂಖ್ಯೆ:1202**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸುರೇಶ್ ಕುಮಾರ್‌ರವರು ಕೆಳಮನೆಯಲ್ಲಿ ಬಿಲ್ ಪಾಸ್ ಆಗುತ್ತಿದೆ, ಅಲ್ಲಿ ಉತ್ತರ ಕೊಡುತ್ತಿದ್ದಾರೆ. ಅವರು ಕೊನೆಯಲ್ಲಿ ಉತ್ತರ ಕೊಡುತ್ತಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಹರೀಶ್ ಕುಮಾರ್‌ರವರ ಪ್ರಶ್ನೆ ಉನ್ನತ ಶಿಕ್ಷಣ ಸಚಿವರಿಗೆ ಸಂಬಂಧಪಟ್ಟಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಮಂತ್ರಿಗಳು ಎಂದು ಪ್ರಶ್ನೆಯಲ್ಲಿದೆ. ಆದರೆ ಇದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣಕ್ಕೆ ಸಂಬಂಧಪಟ್ಟಿದ್ದರೆ ಮಾತ್ರ ನೋಡಬೇಕು.

**ಶ್ರೀ ಕೆ.ಹರೀಶ್‌ಕುಮಾರ್:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ವರ್ಗಾವಣೆಯಾಗಿದೆ ಎಂದು ತಾವು ಹೇಳಲಿಲ್ಲ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರು ಉನ್ನತ ಶಿಕ್ಷಣಕ್ಕೆ ಪ್ರಶ್ನೆ ಕೇಳಿದ್ದಾರೆ. ಪ್ರಾಥಮಿಕ ಶಿಕ್ಷಣ ಇಲಾಖೆಯಿಂದ ಉತ್ತರ ಬಂದಿದೆ. ಇದು ವರ್ಗಾವಣೆಯಾಗಿರುವುದಲ್ಲ. ಅವರು ಉನ್ನತ ಶಿಕ್ಷಣಕ್ಕೆ ಪ್ರಶ್ನೆ ಕೇಳಿದ್ದಾರೆ. ಪ್ರಾಥಮಿಕ ಶಿಕ್ಷಣ ಇಲಾಖೆಯಿಂದ ಉತ್ತರ ಬಂದಿದೆ.

**ಡಾ॥ಸಿ.ಎನ್.ಅಶ್ವತ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಪದವಿ ಪೂರ್ವ ಕಾಲೇಜು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿದೆ. ಹಾಗಾಗಿ ಅವರಿಗೆ ವರ್ಗಾವಣೆಯಾಗಿದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಂದಲೇ ಉತ್ತರ ಬಂದಿದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಪ್ರಶ್ನೆ ಕಳುಹಿಸಿ ಹದಿನೈದು ದಿವಸಗಳಾಗಿವೆ. ಹಾಗಾದರೆ ಯಾವ ಮಂತ್ರಿಗೆ ಬರುತ್ತದೆ, ಯಾವ ಇಲಾಖೆಗೆ ಬರುತ್ತದೆ ಎಂಬುದು ಗೊತ್ತಿಲ್ಲವೇ? ಎಷ್ಟು ಬೇಜವಾಬ್ದಾರಿಯಾಗಿ ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸಚಿವರು ಕೆಳಮನೆಯಲ್ಲಿರುವುದರಿಂದ ಈ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಳ್ಳುತ್ತೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ:1226**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಕೊರೊನಾ ಬಗ್ಗೆ ಪತ್ರಿಕಾ ಗೋಷ್ಠಿ ನಡೆಯುತ್ತಿದೆ. ಇದನ್ನು ಮುಗಿಸಿಕೊಂಡು ಬರುತ್ತೇನೆಂದು ಮಾನ್ಯ ಸಚಿವರು ಚೀಟಿಯನ್ನು ಕಳುಹಿಸಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಚುಕ್ಕೆ ಪ್ರಶ್ನೆ ಸಂಖ್ಯೆ:1210
(ಉತ್ತರ ಲಗತ್ತಿಸಲಾಗಿದೆ)

**ಶ್ರೀ ಎಸ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯಲ್ಲಿ 06 ಜನರಿಕ್ ಔಷಧ ಮಳಿಗೆಗಳನ್ನು ತೆರೆಯುತ್ತೇನೆಂದು ಹೇಳಿದ್ದಾರೆ. ತಾಲ್ಲೂಕು ಕೇಂದ್ರ ಆಸ್ಪತ್ರೆಗಳಲ್ಲಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಜನರಿಕ್ ಔಷಧ ಮಳಿಗೆಗಳನ್ನು ತರೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಎಂದು ಪ್ರಶ್ನೆ ಕೇಳಿದ್ದೇನೆ. ಸುಮಾರು 151 ಜನರಿಕ್ ಔಷಧ ಮಳಿಗೆಗಳನ್ನು ಪ್ರಾರಂಭಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇಲ್ಲಿ ಮೂಲಭೂತವಾಗಿರುವ ಪ್ರಶ್ನೆ ಏನೆಂದರೆ, ಜನರಿಕ್ ಔಷಧ ಅಂಗಡಿ ಇದೆ. ಆದರೆ ಜನಸಾಮಾನ್ಯರಿಗೆ, ಬಡವರಿಗೆ ಸಿಗುವಂತಹ ಯಾವ ಔಷಧಿಗಳು ಅಲ್ಲಿ ಸಿಗುತ್ತಿಲ್ಲ. ಏಕೆಂದರೆ ವೈದ್ಯರುಗಳೇನಿದ್ದಾರೆ ಅವರು private ಅವರ ಜೊತೆ nexus ಆಗಿ ಏನು ಔಷಧ ಬೇಕಾಗಿದೆ ಅದನ್ನೆಲ್ಲಾ ಬರೆದುಕೊಡುತ್ತಾರೆ. ಈ ಸತ್ಯ ಇಲ್ಲಿರುವ ಎಲ್ಲಾ ಶಾಸಕರುಗಳಿಗೆ, ಸಚಿವರುಗಳಿಗೆ, ಅಧಿಕಾರಿಗಳಿಗೆ, ಪತ್ರಿಕಾ ಮಾಧ್ಯಮದವರಿಗೆ, ಎಲ್ಲರಿಗೂ ಗೊತ್ತಿದೆ. ಉದ್ದೇಶ ಬಹಳ ಚೆನ್ನಾಗಿದೆ. ನಿಜವಾಗಿಯೂ ಜನರಿಗೆ ಅನುಕೂಲವಾಗುತ್ತದೆ. ಆದರೆ ಅಲ್ಲಿ ಸಿಗಬೇಕಾದ ಔಷಧಿಗಳು ಸಿಗುತ್ತಿವೆಯೇ? ನಮ್ಮ ಕಳಕಳಿ ಏನಿದೆ ಎಂದರೆ, ಈ ಜನರಿಕ್ ಔಷಧಿಯನ್ನು ಎಂ.ಎಸ್.ಐ.ಎಲ್. ಮುಖಾಂತರ ಸರ್ಕಾರದ ಅಧೀನ ಸಂಸ್ಥೆಯ ಮುಖಾಂತರ, ಜಿಲ್ಲಾ ಕೇಂದ್ರಗಳ ಮುಖಾಂತರ ಈ ನಿರುದ್ಯೋಗಿ ಯುವಕರನ್ನು ಬಳಸಿಕೊಂಡು App based delivery system ಅನ್ನು ಉಪಯೋಗಿಸಿಕೊಂಡು ಮಾಡಿದರೆ ಜನಗಳಿಗೂ ಅನುಕೂಲವಾಗುತ್ತದೆ. ಇವತ್ತೇನು ಊಟ, ತಿಂಡಿಗಳಿಗೆ Zomato, Swiggy food delivery system, ಈ ರೀತಿ ಇದೆಯಲ್ಲಾ ಅದೇ ರೀತಿ ನಮ್ಮ ನಿರುದ್ಯೋಗಿ ವಿದ್ಯಾವಂತ ಯುವಕರನ್ನು ಬಳಸಿಕೊಂಡರೆ ಜನಸಾಮಾನ್ಯರಿಗೆ, ಬಡವರಿಗೆ ಅನುಕೂಲವಾಗುತ್ತದೆ. ಇಲಾಖೆಗೂ ಒಳ್ಳೆಯ ಹೆಸರು ಬರುತ್ತದೆ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, 2019-20ನೇ ಸಾಲಿನ ಅಂತ್ಯದವರೆಗೆ ಮಂಡ್ಯ ಜಿಲ್ಲೆಯಲ್ಲಿ ಸಾರ್ವಜನಿಕ ಆಸ್ಪತ್ರೆಗಳಾದ ಕೆ.ಆರ್.ಪೇಟೆ, ಮದ್ದೂರು, ಮಳ್ಳವಳ್ಳಿ, ನಾಗಮಂಗಲ, ಪಾಂಡವಪುರ ಮತ್ತು ಶ್ರೀರಂಗಪಟ್ಟಣಗಳಲ್ಲಿ ಒಟ್ಟಾರೆ 06 ಜನರಿಕ್ ಔಷಧ ಮಳಿಗೆಗಳನ್ನು ಎಂ.ಎಸ್.ಐ.ಎಲ್.ಸಂಸ್ಥೆ ಮೂಲಕ ಪ್ರಾರಂಭಿಸಲಾಗಿದೆ. KSDLWS (Karnataka State Drugs Logistics and Warehousing Society), ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಬಿಬಿಎಂಪಿ ಮೂಲಕ ಜನರಿಕ್ ಔಷಧ ಮಳಿಗೆಗಳನ್ನು ತೆರಯಲಾಗಿತ್ತು. ಜನರಿಕ್ ಔಷಧ ಮಳಿಗೆಗಳಲ್ಲಿ ಅದಕ್ಕೆ ಸಂಬಂಧಪಟ್ಟಿರುವಂತಹ ಔಷಧಗಳು ಸಿಗುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಾನು ಹೋದಂತಹ ಸಂದರ್ಭದಲ್ಲಿ ತಾಲ್ಲೂಕು ಆಸ್ಪತ್ರೆಗಳಲ್ಲಿ, ಜಿಲ್ಲಾ ಆಸ್ಪತ್ರೆಗಳಲ್ಲಿ ಕಡ್ಡಾಯವಾಗಿ ಜನರಿಕ್ ಔಷದ ಅಂಗಡಿಗಳು ಆಗಬೇಕು. ಜೊತೆಗೆ ಕೇಂದ್ರ ಸರ್ಕಾರ ಕೊಟ್ಟಿರುವಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾರ್ಮ್ಸ್ ಪ್ರಕಾರ ನಡೆಯಬೇಕೆಂದು ನಾನು ಎಲ್ಲಾ ಕಡೆ ಇನ್ಸ್‌ಪೆಕ್ಷನ್ ಮಾಡುತ್ತಿದ್ದೇನೆ. ಇತ್ತೀಚೆಗೆ ಏನಾಗುತ್ತಿದೆ ಎಂದರೆ, ಮೆಡಿಕಲ್ ಶಾಪ್‌ನಲ್ಲಿ ಏನು ಮಾರಾಟವಾಗುತ್ತಿದೆ ಅದನ್ನು ಮಾರಾಟ ಮಾಡುತ್ತಿದ್ದಾರೆ. ನಾನು ಬಹಳ ಕಡೆ ಹೋದಂತಹ ಸಂದರ್ಭದಲ್ಲಿ ಹೇಳಿದೆ, ಜನರಿಕ್ ಔಷಧದಲ್ಲಿ ಇದು ಇಲ್ಲ, ಏಕೆ ತಂದಿಟ್ಟುಕೊಂಡಿದ್ದೀರಾ ಎಂದು ಕೇಳಿದರೆ, ಅವರು ಕೆಲವು ಬೇರೆ ಬೇರೆ ರೀತಿಯಲ್ಲಿ ಹೇಳುತ್ತಿದ್ದರು. ಅದಕ್ಕೋಸ್ಕರವಾಗಿ ಕಡ್ಡಾಯವಾಗಿ ಮುಂದಿನ ದಿನಗಳಲ್ಲಿ ಜನರಿಕ್ ಔಷಧಗಳು ಕೇಂದ್ರ ಸರ್ಕಾರದಿಂದ ಬರುವಂತಹ ಔಷಧಗಳನ್ನು ಮಾತ್ರ ಅಲ್ಲಿ ಮಾರಾಟವಾಗಬೇಕು. ಅಕಸ್ಮಾತ್ ಆಗಿ ಅದನ್ನು ಬಿಟ್ಟು ಬೇರೆ ಮಾರಾಟ ಮಾಡಿದರೆ ಅವರ ಲೈಸೆನ್ಸ್ ರದ್ದು ಮಾಡುವಂತಹ ಕೆಲಸ ಮಾಡುತ್ತೇವೆ. ಜೊತೆಗೆ ಇಲ್ಲಿ ಈ ಔಷಧಿಗಳು ಬಳಕೆಯಾಗುತ್ತಿವೆ ಎಂದು Demand Draft ಕೂಡ ಕಳುಹಿಸಿಕೊಡುವ ಕೆಲಸ ಆಗಬೇಕು. ಇದರ ಬಗ್ಗೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆಂದು D.Pharma (Diploma in Pharmacy) ಕಲಿತಿರುವಂತಹ ಮಕ್ಕಳನ್ನು ಅಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವ ಕೆಲಸ ಮಾಡುತ್ತೇವೆ. ಇನ್ನು ಮುಂದೆ ಆ ಮಕ್ಕಳಿಗೆ ಅವಕಾಶ ಕೊಡುವ ಕೆಲಸ ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚುಕ್ಕೆ ಪ್ರಶ್ನೆ ಸಂಖ್ಯೆ:1061
(ಉತ್ತರ ಲಗತ್ತಿಸಲಾಗಿದೆ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳಲ್ಲಿ 14564 ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ನಾನು ಎರಡು ನೇರವಾದ ಪ್ರಶ್ನೆಗಳನ್ನು ಕೇಳುತ್ತೇನೆ. ಈಗಾಗಲೇ ಖಾಯಂ ಉಪನ್ಯಾಸಕರಿಗೆ ಯು.ಜಿ.ಸಿ. ಸ್ಕೇಲ್ ಜಾರಿಯಾಗಿದೆ. ವೇತನ ಹೆಚ್ಚಳವಾಗಿದೆ. ಅತಿಥಿ ಉಪನ್ಯಾಸಕರಿಗೆ ಐದು ಸಾವಿರ ರೂಪಾಯಿ ಹೆಚ್ಚಳ ಮಾಡುವ ಭರವಸೆ ಮಾತು ಬಂದಿತ್ತು. ಅದು ಜಾರಿಯಾಗಲಿಲ್ಲ. ಅದನ್ನು ಯಾವಾಗ ಜಾರಿ ಮಾಡುತ್ತಾರೆ? ಎರಡನೆಯದು, ಅತಿಥಿ ಉಪನ್ಯಾಸಕರಿಗೆ ಕೇವಲ ಎರಡು ಅಥವಾ ಮೂರು ತಿಂಗಳಿಗೆ ವೇತನ ಪಾವತಿ ಮಾಡುತ್ತಿದ್ದಾರೆ. ಕೆಲವು ಕಡೆ ಎರಡು ತಿಂಗಳು, ಕೆಲವು ಕಡೆ ಮೂರು ತಿಂಗಳಿಗೆ ವೇತನ ಪಾವತಿ ಮಾಡಿದ್ದಾರೆ. ಕಳೆದ ಒಂಬತ್ತು ತಿಂಗಳಿನಿಂದ ಅವರಿಗೆ ವೇತನ ಪಾವತಿಯಾಗಿಲ್ಲ. ಈ ತಿಂಗಳಲ್ಲಿ ವೇತನ ಕೊಡಲೇಬೇಕು. ಕಳೆದ ವಾರ ವೇತನ ಕೊಡಿಸುತ್ತೇವೆಂದು ಹೇಳಿದ್ದರು, ಆದರೆ ವೇತನ ಕೊಡಿಸಲಿಲ್ಲ. ಎಷ್ಟು ದಿನಗಳಲ್ಲಿ ವೇತನ ಕೊಡಿಸುತ್ತಾರೆ? ಮೂರನೆಯದು, ಅವರಿಗೆ ಸೇವಾ ಭದ್ರತೆ ಹಾಗೂ ಖಾಯಂಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ಎಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಉಮಾದೇವಿ ಪ್ರಕರಣ ಅಡ್ಡಿ ಇದೆ ಎಂದು ಹೇಳಿದ್ದಾರೆ. ಈ ರಾಜ್ಯದಲ್ಲಿ ಉಮಾದೇವಿ ಪ್ರಕರಣ ಬಂದ ಮೇಲೆ ಪಾರ್ಟ್‌ಟೈಮ್ ಉಪನ್ಯಾಸಕರನ್ನು, ಮೊರಾರ್ಜಿ ವಸತಿ ಶಾಲೆಯ ಶಿಕ್ಷಕರುಗಳನ್ನು, ಜೆ.ಓ.ಸಿ. ಶಿಕ್ಷಕರುಗಳನ್ನು ಎರಡೂ ಸದನಗಳಲ್ಲಿ ವಿಧೇಯಕವನ್ನು ತಂದು ಖಾಯಂ ಮಾಡಿದ್ದೇವೆ. ಈ ಹಿಂದೆ contract employees ಅನ್ನು ಸಹ ಖಾಯಂ ಮಾಡಿದ್ದೇವೆ. ಅದರ ಹಿಂದೆ local candidates ಅನ್ನು ಸಹ ಖಾಯಂ ಮಾಡಿದ್ದೇವೆ. ಅದೇ ರೀತಿ ಈ ಅತಿಥಿ ಉಪನ್ಯಾಸಕರನ್ನು ಖಾಯಂ ಮಾಡುತ್ತಾರೆಯೇ, NET/SLET/Ph.D ಮಾಡಿರುವವರ ಸಂಖ್ಯೆಯನ್ನು ಏನು ಹೇಳಿದ್ದಾರೆ ಇವರಿಗೇನಾದರೂ weightage ಕೊಟ್ಟು ಸೇವಾ ಭದ್ರತೆಯನ್ನು ಕೊಡುತ್ತಾರೆಯೇ?

(ಮುಂದು)

456/16-3-2020/7-10/ bkp-rn
**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು)**

ಏಕೆಂದರೆ, ಅವರ ಯೌವ್ವನದ ಅತ್ಯಂತ ಸಮರ್ಥ ಕಾಲ. ಅವರುಗಳು 10, 15 ಮತ್ತು 20 ವರ್ಷಗಳ ಕಾಲ ಸೇವೆ ಮಾಡಿದ್ದಾರೆ. ನಾವು ಕೊಟ್ಟ 3 ಕಾಸಿಗೆ ಅವರು ಸೇವೆ ಮಾಡಿದ್ದಾರೆ. ಬೇರೆಯವರಿಗೆಲ್ಲಾ weightage ಕೊಟ್ಟು ಖಾಯಂ ಮಾಡಿದ ಮೇಲೆ ಇವರು ಏನು ಅನ್ಯಾಯ ಮಾಡಿದ್ದಾರೆ? ಮುರಾರ್ಜಿ ಶಾಲೆಯ ಶಿಕ್ಷಕರನ್ನು ನಾವು ಖಾಯಂ ಮಾಡಿದ್ದೇವೆ, ಅರೆಕಾಲಿಕ ಶಿಕ್ಷಕರನ್ನು ನಾವು ಖಾಯಂ ಮಾಡಿದ್ದೇವೆ, ಜೆಓಸಿ. ಶಿಕ್ಷಕರನ್ನು ನಾವು ಖಾಯಂ ಮಾಡಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗ ಉಮಾದೇವಿ ಪ್ರಕರಣ ಎಲ್ಲಿ ಹೋಗಿತ್ತು? ದಯಮಾಡಿ ಇವರಿಗೆ weightage ಕೊಟ್ಟು ಖಾಯಂ ಮಾಡುವ ಅಥವಾ ಅವರಿಗೆ ಮತ್ತೆ ಏನಾದರೂ ಅವಕಾಶ ಮಾಡಿಕೊಡುವ ಬಗ್ಗೆ ಸರ್ಕಾರ ಭರವಸೆ ನೀಡಬೇಕೆಂದು ಕೋರುತ್ತೇನೆ.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:–** ಸನ್ಮಾನ್ಯ ಸಭಾಪತಿಯವರೇ, ನವೆಂಬರ್‌ರವರೆಗೆ ನಮ್ಮ guest faculty ಸಂಬಳ ಕೊಡುವಂತಹದ್ದು ಆಗಿದೆ. ಈಗ ಡಿಸೆಂಬರ್‌ನಿಂದ ಫೆಬ್ರವರಿವರೆಗೂ ಸಂಬಳವನ್ನು ಕೊಟ್ಟಿಲ್ಲ. ಹೆಚ್ಚುವರಿಯಾಗಿ ಪ್ರಾವಿಜನ್ ಮಾಡಿಕೊಂಡು ಸಂಬಳ ಕೊಡುವಂತಹದ್ದು ಆಗುತ್ತದೆ. ಮತ್ತೆ ಸಂಬಳ ಹೆಚ್ಚು ಮಾಡುವುದರ ಬಗ್ಗೆ ಇಲ್ಲಿ ಏನೂ ಪ್ರಶ್ನೆಯಿರುವುದಿಲ್ಲ. ಮಾನ್ಯ ಸದಸ್ಯರೇ ಒಂದು ಹೊಸ ಪ್ರಶ್ನೆಯನ್ನು ಹಾಕಿದ್ದಾರೆ. ಇಲ್ಲಿ ಯಾವುದೂ ಪ್ರಶ್ನೆ ಇಲ್ಲ. ಆದರೂ ಸಹ ಸರ್ಕಾರದ ಮಟ್ಟದಲ್ಲಿ ಸಂಬಳವನ್ನು ಹೆಚ್ಚಳ ಮಾಡುವುದಕ್ಕೆ consideration ನಲ್ಲಿ ಇಟ್ಟುಕೊಂಡಿದೆ. ಅದು ಪರಿಶೀಲನೆಯಲ್ಲಿದ್ದು, ಪರಿಶೀಲನೆ ಮಾಡಲಾಗುವುದು. ಮತ್ತೆ, ಮಾನ್ಯ ಸದಸ್ಯರು ಖಾಯಂ ಮಾಡುವ ಬಗ್ಗೆ ಹೇಳಿದ್ದಾರೆ. ಅವರನ್ನು ಖಾಯಂ ಮಾಡುವ ಪ್ರಶ್ನೆಯೇ ಇಲ್ಲ. 2016 ರಲ್ಲಿ weightage ಕೊಡುವುದಿಲ್ಲವೆಂದು ನ್ಯಾಯಾಲಯಕ್ಕೂ ಸಹ ಸರ್ಕಾರದ ವತಿಯಿಂದ ಸ್ಪಷ್ಟವಾದ ನಿಲುವನ್ನು ತಿಳಿಸಲಾಯಿತು. Weightage ಕೊಡಲಿಕ್ಕೂ ಸಹ 2010 ರಲ್ಲಿ ಸರ್ಕಾರ ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡಿರುವ ಕಾರಣ ಈಗ weightage ಪ್ರಶ್ನೆ ಎಷ್ಟರಮಟ್ಟಿಗೆ ಇದೆ ಎಂದು ನೋಡೋಣ. ಆದರೆ, ಈಗ ಖಾಯಂ ಮಾಡುವುದು ಸಾಧ್ಯವಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಮಾನ್ಯ ಶ್ರೀ ಬಸವರಾಜ ರಾಯರೆಡ್ಡಿ ಅವರು ಇದೇ ಖಾತೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಅವರು ಆ ಸಂದರ್ಭದಲ್ಲಿ ಏನಾದರೂ ಮಾಡಿ ಇವರಿಗೆ ಅವಕಾಶ ಮಾಡಿಕೊಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದರು. ಅವರು ಈ ವಿಚಾರದಲ್ಲಿ ಸಭೆಯನ್ನೂ ಸಹ ಮಾಡಿದ್ದರು. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಆಗಿರುವ ಡಾ॥ ಅಶ್ವತ್ಥ್ ನಾರಾಯಣರವರು ಸಹ ಈ ವಿಚಾರದಲ್ಲಿ ಧರಣಿ ಮಾಡಿದಂತಹ ಸಂದರ್ಭದಲ್ಲಿ ಭರವಸೆಯನ್ನು ಕೊಟ್ಟಿದ್ದರು.

**ಸಭಾಪತಿಯವರು:–** ಇದರ ಬಗ್ಗೆ ಉಪ ಮುಖ್ಯಮಂತ್ರಿಗಳು ಪರಿಶೀಲಿಸಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 1051**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಬೆಳಗಾವಿಯಲ್ಲಿರುವ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಿ, ನಿಗದಿತ ಸಮಯದಲ್ಲಿ ಪದವಿ ಪೂರ್ಣಗೊಳಿಸಲಾಗದೇ ಅವಕಾಶ ವಂಚಿತರಾಗುತ್ತಿರುವ ವಿದ್ಯಾರ್ಥಿಗಳಿಗೆ ಕೊನೆಯ ಸುವರ್ಣಾವಕಾಶ(ಗೋಲ್ಡನ್ ಚಾನ್ಸ್)ವನ್ನು ಕಲ್ಪಿಸಿಕೊಡುವ ಬಗ್ಗೆ ಸರ್ಕಾರಕ್ಕೆ ಪ್ರಶ್ನೆಯನ್ನು ಕೇಳಿದ್ದೇನೆ. ಸನ್ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸರ್ಕಾರದ ಸೂಚನೆಯಲ್ಲಿ ಪ್ರಸ್ತಾಪಿಸಿರುವ ಅವಧಿಯನ್ನು ಮೀರಿ ಹೆಚ್ಚುವರಿ ಕಾಲಮಿತಿಯನ್ನು ನೀಡಲು ಅವಕಾಶವಿರುವುದಿಲ್ಲ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ "ಸುವರ್ಣಾವಕಾಶ" ಯೋಜನೆಯನ್ನು ಸರ್ಕಾರದ ಸೂಚನೆಗಳನ್ವಯ ಜಾರಿಗೊಳಿಸಲು ವಿಶ್ವವಿದ್ಯಾಲಯವು ಸಕ್ಷಮ ಪ್ರಾಧಿಕಾರವಾಗಿರುತ್ತದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ.

ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಬಹುದಿನಗಳಿಂದ ಉಳಿದುಕೊಂಡಿರುವಂತಹ ಸಾವಿರಾರು ವಿದ್ಯಾರ್ಥಿಗಳು ಒಂದೆರಡು ವಿಷಯಗಳಲ್ಲಿ ಅನುತ್ತೀರ್ಣರಾಗಿ ಪದವಿಯನ್ನು ಪಡೆಯದೇ ಸಾಕಷ್ಟು ನೋವನ್ನು ಅನುಭವಿಸುವಂತಹ ಸಂದರ್ಭದಲ್ಲಿ ಒಂದು ಮಾನವೀಯತೆಯ ದೃಷ್ಟಿಯಿಂದ ಅವಕಾಶವನ್ನು ಮಾಡಿಕೊಡಬೇಕು. ಈ ಹಿಂದೆಯೂ ಅನೇಕ ಬಾರಿ ಒಂದು ಸುವರ್ಣಾವಕಾಶವನ್ನು ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಕಲ್ಪಿಸಿರುವಂತಹ ಉದಾಹರಣೆಯನ್ನು ನಾವು ನೋಡಿದ್ದೇವೆ. ಆ ಹಿನ್ನೆಲೆಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯದಲ್ಲಿ ಇರತಕ್ಕಂತಹ ವಿದ್ಯಾರ್ಥಿಗಳಿಗೂ ಕೂಡ ಈ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಇವರುಗಳು ಪರೀಕ್ಷೆಗೆ ಕುಳಿತುಕೊಳ್ಳಲಿಕ್ಕೆ ಈ 2020 ರ ಶೈಕ್ಷಣಿಕ ಅವಧಿಯಲ್ಲಿ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ|| ಅಶ್ವತ್ಥನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, ಇವರಿಗೆ double duration ಸಮಯವನ್ನು ಈಗಾಗಲೇ ಕೊಡಲಾಗಿದೆ. ಎರಡರಷ್ಟು ಅವಧಿಯನ್ನು ಕೊಡಲಾಗಿದೆ. ಇನ್ನು ಸ್ವಲ್ಪ consideration ಕೇಳುತ್ತಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ 1165**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಎಂ.ಸಿ.ವೇಣುಗೋಪಾಲ್:–** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಸಚಿವರು ಉತ್ತರವನ್ನು ಚೆನ್ನಾಗಿ ಒದಗಿಸಿಕೊಟ್ಟಿದ್ದಾರೆ. ಆದರೆ, ನಮಗೆ ಏನು ಬೇಕಾಗಿದೆ, ಅದನ್ನು ಒದಗಿಸಿಕೊಟ್ಟಿಲ್ಲ. ಈ ಬಜೆಟ್‌ನಲ್ಲಿ ಹೇಳುವಾಗ ಏನು ಹೇಳಿದ್ದಾರೆಂದರೆ ಹಿಂದುಳಿದ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರದ ಮುಖ್ಯ ಅದ್ಯತೆ ಎಂದು ಹೇಳಿದೆ. ನಮ್ಮ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಿಗೆ ಮೂಗಿಗೆ ತುಪ್ಪ ಸವರಿದ್ದು, ನಾವು ಅದರ ವಾಸನೆಯನ್ನು ನೋಡಿಕೊಂಡಿದ್ದೇವೆಯೇ ವಿನಃ ನಮಗೆ ಯಾವುದೇ ರೀತಿಯಾದಂತಹ ಪರಿಹಾರವನ್ನು ಕೊಟ್ಟಿರುವುದಿಲ್ಲ. ನಾನು ಈ ಇಲಾಖೆಯ ಸಚಿವರನ್ನು ಸುಮಾರು 5–6 ಬಾರಿ ಭೇಟಿ ಮಾಡಿರುತ್ತೇನೆ. ಆಗ ಅವರು ನನ್ನನ್ನು ಪ್ರೀತಿಯಿಂದ, ವಿಶಾಲವಾದ ಹೃದಯದಿಂದ ಮಾತನಾಡಿಸಿದರು. ಜೊತೆಗೆ ಮಾನ್ಯ ಮುಖ್ಯಮಂತ್ರಿಗಳನ್ನು ಸಹ 5 ಬಾರಿ ಭೇಟಿ ಮಾಡಿದ್ದೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಬೇಕು.

**ಶ್ರೀ ಎಂ.ಸಿ.ವೇಣುಗೋಪಾಲ್:–** ಹಿಂದುಳಿದ ವರ್ಗಗಳ ವ್ಯಾಪ್ತಿಗೆ ಬರುವ ಸಮಾಜಗಳ ಅಭಿವೃದ್ಧಿ ನಿಗಮಗಳು ಎಷ್ಟು; ಅವುಗಳಿಗೆ ನೀಡಿರುವ ಅನುದಾನವೆಷ್ಟು; ಎಷ್ಟು ಅಭಿವೃದ್ಧಿ ನಿಗಮಗಳು ಕಚೇರಿಯನ್ನು ಪ್ರಾರಂಭಿಸಿವೆ; ಅದರ ಸಿಬ್ಬಂದಿ ಎಷ್ಟು ಎನ್ನುವ ನನ್ನ ಪ್ರಶ್ನೆಗೆ ಹಿಂದುಳಿದ ವರ್ಗಗಳ ವ್ಯಾಪ್ತಿಗೆ ಬರುವ ಸಮಾಜದ ಅಭಿವೃದ್ಧಿ ನಿಗಮಗಳು ಒಟ್ಟು 07 ಎಂದು ಹೇಳಿದ್ದಾರೆ. ಮತ್ತೆ, 2020–21ನೇ ಸಾಲಿಗೆ ಇನ್ನೂ ಎರಡು ಅಭಿವೃದ್ಧಿ ನಿಗಮಗಳನ್ನು ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಕಚೇರಿ ಇಲ್ಲ, ನಿವೇಶನ ಇಲ್ಲ, ಅದಕ್ಕೆ ಅಧ್ಯಕ್ಷರನ್ನೂ ಮಾಡಿಲ್ಲ. ಮತ್ತೆ ಕೆಲವು ಅಭಿವೃದ್ಧಿ ನಿಗಮಗಳಿಗೆ ಹಣವನ್ನು ಬಜೆಟ್‌ನಲ್ಲಿ ನಮೂದಿಸಿದ್ದಾರೆ. ಆದರೆ, ನಮ್ಮ ಸವಿತಾ ಸಮಾಜ ಮತ್ತು ಮಡಿವಾಳ ಸಮಾಜದ ಅಭಿವೃದ್ಧಿ ನಿಗಮಕ್ಕೆ ಹಣವನ್ನು ಬಜೆಟ್‌ನಲ್ಲಿ ನಮೂದಿಸಿಲ್ಲ. ಇದರ ಬಗ್ಗೆ ನಾನು ಸಚಿವರನ್ನು ಭೇಟಿ ಮಾಡಿದಾಗ ನಾನು ಇದಕ್ಕೆ ಉತ್ತಮವಾದ ಪರಿಹಾರವನ್ನು ಕೊಡುತ್ತೇನೆ, ಕಾದು ನೋಡಿ ಎಂದವರು ಹೇಳಿದರು.

**ಶ್ರೀ ಬಿ. ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗಗಳ ಸಮಾಜದ ವ್ಯಾಪ್ತಿಯಲ್ಲಿ ಒಟ್ಟು 07 ಅಭಿವೃದ್ಧಿ ನಿಗಮಗಳು ಬರುತ್ತವೆ:

1. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

2. ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ
3. ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ
4. ವಿಶ್ವಕರ್ಮ ಅಭಿವೃದ್ಧಿ ನಿಗಮ
5. ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ
6. ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ
7. ಅಲೆಮಾರಿ ಹಾಗೂ ಅರೆ ಅಲೆಮಾರಿ ಅಭಿವೃದ್ಧಿ ನಿಗಮ

ಹೀಗೆ ಒಟ್ಟು 7 ಅಭಿವೃದ್ಧಿ ನಿಗಮಗಳು ನಮ್ಮ ಕಡೆ ಬರುತ್ತಿವೆ. ಅವುಗಳಿಗೆ ನೀಡಿರುವ ಅನುದಾನ ಒಟ್ಟು ರೂ. 22477 ಲಕ್ಷಗಳು. ಒಟ್ಟು ಅಭಿವೃದ್ಧಿ ನಿಗಮಗಳ ಕಚೇರಿಗಳನ್ನು ಪ್ರಾರಂಭಿಸಲಾಗಿದೆ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಎಲ್ಲಾ ರೀತಿಯ ಮಾನಿಟರ್ ಮಾಡುವಂತಹ ಕೆಲಸಗಳನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಎಂ.ಸಿ.ವೇಣುಗೋಪಾಲ್‌ರವರು 2–3 ಬಾರಿ ನನ್ನ ಹತ್ತಿರ ಬಂದು ಹೋಗಿದ್ದರು. ಅವರು ಬಂದಾಗ ಟೇಬಲ್–ಟೇಬಲ್‌ಗೆ ಅಡ್ಡಾಡಿ, ಈ ನಮ್ಮ ಕೆಲಸ ಆಗಬೇಕು, ಈ ನಮ್ಮ ಸವಿತಾ ಸಮಾಜ ಅಭಿವೃದ್ಧಿ ನಿಗಮಕ್ಕೆ ಹಣವನ್ನು ಕೊಡಬೇಕೆಂದು ಬಹಳ ಒತ್ತಾಯವನ್ನು ಮಾಡಿದ್ದಾರೆ. ಈ ವರ್ಷ ಕೊನೆಯಾಗಿರುವ ಕಾರಣ ಅನುದಾನವನ್ನು ಕೊಡಲಿಕ್ಕೆ ಆಗಿರುವುದಿಲ್ಲ. ಖಂಡಿತವಾಗಿಯೂ ಸಹ ಅವರ ಸಮಾಜದ ಬಗ್ಗೆ ಕಳಕಳಿ ಇದೆ. ಅವರು ತಮ್ಮ ಸಮಾಜದ ಬಗ್ಗೆ ವಿಶೇಷವಾದಂತಹ ಪ್ರೀತಿ, ಅಭಿಮಾನ, ಕಳಕಳಿ ಇಟ್ಟುಕೊಂಡಿದ್ದಾರೆ. ಮುಂದಿನ ವರ್ಷ ಏನಿದೆ, ಅದಕ್ಕೆ ಹಣ ಬಂದಿದೆ. ಆದಷ್ಟು ಬೇಗ ಅವರಿಗೆ ಹಣವನ್ನು ನಿಗದಿಪಡಿಸುವಂತಹ ಕೆಲಸವನ್ನು ನಾನು ಮಾಡುತ್ತೇನೆ.

(ಗೊಂದಲ)

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನಾನು ಕೇಳಬಯಸುವುದೇನೆಂದರೆ ಯಾವ ಕಾರಣಕ್ಕೋಸ್ಕರ ಸುಮ್ಮ–ಸುಮ್ಮನೆ ಅಭಿವೃದ್ಧಿ ನಿಗಮಗಳನ್ನು ಪ್ರಾರಂಭ ಮಾಡುತ್ತೀರಿ, ಪ್ರಾರಂಭ ಮಾಡಿದ ಮೇಲೆ ಅದಕ್ಕೆ ಬೇಕಾದಂತಹ ಸೌಲಭ್ಯಗಳನ್ನು ಕೊಡಬೇಕಲ್ಲವೇ? ಅದಕ್ಕೆ ಕಚೇರಿ, ಅಧಿಕಾರಿಗಳು, ನೌಕರರು ಇರುವುದಿಲ್ಲ. ಯಾವುದಕ್ಕೋಸ್ಕರ ಅಭಿವೃದ್ಧಿ ನಿಗಮಗಳನ್ನು ಮಾಡುತ್ತೀರಿ?

**ಶ್ರೀ ಎಂ.ಸಿ.ವೇಣುಗೋಪಾಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಎರಡು ಅತ್ಯಂತ ಹಿಂದುಳಿದ ಸಮಾಜಗಳು ಅಂದರೆ ಸವಿತಾ ಸಮಾಜ ಮತ್ತು ಮಡಿವಾಳ ಸಮಾಜಗಳು. ಈ ಸಮಾಜಗಳಿಗೆ ಎಷ್ಟು ಹಣವನ್ನು ನಿಗದಿ ಮಾಡಿದ್ದಾರೆ, 900 ಕೋಟಿ ರೂಪಾಯಿಗಳ ಹಣ ಇದೆ. ಅದರಲ್ಲಿ ವಿವಿಧ ಸಮಾಜಗಳಿಗೆ ಹಣವನ್ನು ಕೊಡುತ್ತೇವೆಂದು ಮಾನ್ಯ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ, ಈ ವಿಷಯವಾಗಿ ಕೂಡಲೇ ಈ ಸದನದಲ್ಲಿ ಈ ಬಗ್ಗೆ ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ.ಸಿ.ವೇಣುಗೋಪಾಲ್‌ರವರು ತಮ್ಮ ಸಮಾಜದ ಅಭಿವೃದ್ಧಿ ಬಗ್ಗೆ ತುಂಬಾ ಓಡಾಡಿದ್ದಾರೆ. ಮಾನ್ಯ ಸದಸ್ಯರು ಸವಿತಾ ಸಮಾಜಕ್ಕೆ ಮತ್ತು ಮಡಿವಾಳ ಸಮಾಜದ ಅಭಿವೃದ್ಧಿ ನಿಗಮಗಳಿಗೆ ಹಣ ಬಿಡುಗಡೆ ಮಾಡಬೇಕೆಂದು ನಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದರು. ಆದ್ದರಿಂದ, ಈ ವಿಚಾರದಲ್ಲಿ ಮಾನ್ಯ ಸದಸ್ಯರನ್ನು ಕರೆಸಿ, ಮಾತನಾಡಿ ಈ ಎರಡು ಅಭಿವೃದ್ಧಿ ನಿಗಮಗಳಿಗೆ ಹಣವನ್ನು ಕೊಡುವಂತಹ ಕೆಲಸ ಮಾಡುತ್ತೇನೆ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಸವಿತಾ ಸಮಾಜ, ಕುಂಬಾರ ಸಮಾಜ ಮತ್ತು ಮಡಿವಾಳ ಸಮಾಜ ಈ ಮೂರು ಸಮಾಜಗಳ ಜೊತೆಗೆ ತಿಗಳ ಸಮಾಜವನ್ನೂ ಸಹ ಸೇರಿಸಿದ್ದರು. 4 ವರ್ಷಗಳ ಕಾಲ ಅವರಿಗೆ ಒಂದು ಪ್ಯಾಕೇಜ್ ಅನ್ನು ಕೊಟ್ಟರು. ಈಗ ಈ ಪ್ಯಾಕೇಜ್‌ನಲ್ಲಿ ಈ ತಿಗಳ ಸಮಾಜವನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಏತಕ್ಕೆ ಬಿಟ್ಟಿದ್ದಾರೆಂದು ಮಾನ್ಯ ಸಚಿವರು ಹೇಳಬೇಕು. ಈ ಸಮಾಜಕ್ಕೆ ಅನುದಾನವನ್ನು ಕಳೆದ ವರ್ಷವೂ ಕೊಟ್ಟಿಲ್ಲ, ಈ ವರ್ಷವೂ ಕೊಟ್ಟಿಲ್ಲ. 4 ಸಮಾಜಗಳ ಪ್ಯಾಕೇಜ್ ಅನ್ನು ಮಾಡಿ, ಆ ಮೂರು ಸಮಾಜಗಳಿಗೆ ಸಂಬಂಧಪಟ್ಟ ಹಾಗೆ ಅಭಿವೃದ್ಧಿ ನಿಗಮಗಳನ್ನು ಮಾಡಿದ್ದು, ಈ ತಿಗಳ ಸಮಾಜಕ್ಕೆ ಅಭಿವೃದ್ಧಿ ನಿಗಮವನ್ನು ಮಾಡಿಲ್ಲ. ಸಂಪೂರ್ಣವಾಗಿ ತಿರಸ್ಕಾರ ಮಾಡಲಾಗಿದೆ.

**(ಮುಂದು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(457) 16.03.2020 07.20 ಎಸ್‌ವಿ–ವಿಕೆ**

**ಪ್ರಶ್ನೆ ಸಂಖ್ಯೆ: 1057**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. 2017–18ರಿಂದ 2018–19ನೇ ಸಾಲಿನವರೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಡಿ.ದೇವರಾಜ ಅರಸು ನಿಗಮದಿಂದ ಕೊಳವೆ ಬಾವಿಗಳನ್ನು ಕೊರೆಯಲು ನಿಗದಿಪಡಿಸಲಾಗಿದ್ದ ಗುರಿಯೆಷ್ಟು ಎನ್ನುವ ಪ್ರಶ್ನೆಗೆ ಒಟ್ಟು 413 ಕೊಳವೆ ಬಾವಿಗಳನ್ನು ಕೊರೆಯಲು ನಿಗದಿಪಡಿಸಲಾಗಿದೆ ಎಂದು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ. 2017–18 ಎಂದರೆ ಈಗಾಗಲೇ ಮೂರು ವರ್ಷಗಳಾಗುತ್ತಾ ಬಂದಿದೆ. 274 ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು, ಇನ್ನೂ 139 ಕೊಳವೆಬಾವಿಗಳು ಕೊರೆಯಲು ಬಾಕಿ ಇವೆ ಎಂದು ಲಿಖಿತ ಉತ್ತರದಲ್ಲಿಯೇ ತಿಳಿಸಲಾಗಿದೆ. ಒಂದು ಕೊಳವೆ ಬಾವಿಯನ್ನು ಕೊರೆಯಲು ಎಷ್ಟು ವೆಚ್ಚವಾಗುತ್ತದೆ? ಫಲಾನುಭವಿಗಳಿಂದ ಹಣವನ್ನು ಏನಾದರೂ ವಸೂಲಿ ಮಾಡಲಾಗುತ್ತದೆಯೇ? ಕೊರೆಯುವ ಆಳ ಹೆಚ್ಚಾದಾಗ ಫಲಾನುಭವಿಗಳೇನಾದರೂ ಹಣವನ್ನು ಕೊಡಬೇಕಾಗುತ್ತದೆಯೇ? ಈ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರವನ್ನು ನೀಡಬೇಕೆಂದು ಕೋರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ ಹಾಗೂ ಶ್ರೀ ಎನ್.ರವಿಕುಮಾರ್ ಅವರು ಮಾನ್ಯ ಸಚಿವರೊಂದಿಗೆ ಅವರ ಸ್ಥಾನದ ಬಳಿ ನಿಂತು ಮಾತನಾಡುತ್ತಿದ್ದರು)**

ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನು ಕೇಳುತ್ತಿರುವಾಗ ಮಾನ್ಯ ಸಚಿವರಿಗೆ ಈ ರೀತಿ ತೊಂದರೆಯನ್ನು ಕೊಟ್ಟರೆ ಅವರಿಗೆ ವಿಷಯ ಏನು ಅರ್ಥವಾಗುತ್ತದೆ?

ಮಾನ್ಯ ಸಭಾಪತಿಯವರೇ, ಈಗ ಎರಡು ಮೂರು ವರ್ಷಗಳಿಂದ ಕೊಳವೆ ಬಾವಿಗಳನ್ನು ಕೊರೆದು ಬಿಡಲಾಗಿದೆ. ಅದಕ್ಕೆ ಪಂಪ್ ಮೋಟಾರ್‌ಗಳನ್ನು ಅಳವಡಿಸಿರುವುದಿಲ್ಲ ಮತ್ತು ವಿದ್ಯುದೀಕರಣ ಆಗಿರುವುದಿಲ್ಲ. ಹೀಗೆ ಮಾಡಿದಾಗ ಕೊಳವೆ ಬಾವಿಗಳು ಮುಚ್ಚಿಕೊಂಡು ಹೋಗುವ ಪರಿಸ್ಥಿತಿ ಬರುತ್ತದೆ. ಆದುದರಿಂದ ಅವರು ಈ ಪದ್ಧತಿಯನ್ನು ತೆಗೆದು ಒಬ್ಬರಿಗೆ ಗುತ್ತಿಗೆಯನ್ನು ನೀಡುತ್ತಾರೆಯೇ ಅಥವಾ ಫಲಾನುಭವಿಗಳಿಗೆ ಹಣವನ್ನು ಬಿಡುಗಡೆ ಮಾಡುತ್ತಾರೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಶಿವಮೊಗ್ಗ ಜಿಲ್ಲೆಯಲ್ಲಿ 2017–18ನೇ ಸಾಲಿನಲ್ಲಿ 276 ಹಾಗೂ 2018–19ರಲ್ಲಿ 137 ಹೀಗೆ ಒಟ್ಟು 413 ಕೊಳವೆ ಬಾವಿಗಳಲ್ಲಿ ಈಗಾಗಲೇ 274 ಕೊಳವೆಬಾವಿಗಳನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೊರೆಯಲಾಗಿದ್ದು, 139 ಕೊಳವೆ ಬಾವಿಗಳನ್ನು ಕೊರೆಯುವುದು ಬಾಕಿ ಉಳಿದಿದೆ. 2018–19ನೇ ಸಾಲಿನಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಟೆಂಡರ್ ಕೂಡ ಆಹ್ವಾನಿಸಲಾಗಿತ್ತು. ನಂತರ ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠದ ಆದೇಶದನ್ವಯ ಅದನ್ನು ತಡೆ ಹಿಡಿಯಲಾಗಿದೆ. ಹೊಸದಾಗಿ ಟೆಂಡರ್ ಅನ್ನು ಕರೆಯಬೇಕೆಂದು ಉಚ್ಚ ನ್ಯಾಯಾಲಯದ ಆದೇಶವಾಗಿರುವ ಕಾರಣ ಆದಷ್ಟು ಬೇಗ ಟೆಂಡರ್ ಅನ್ನು ಕರೆದು, ಉಳಿದ ಕೊಳವೆ ಬಾವಿಗಳನ್ನು ಕೊರೆಸುವಂತಹ ಕೆಲಸ ಮಾಡಲಾಗುವುದು.

**ಶ್ರೀ ಆರ್.ಪ್ರಸನ್ನ ಕುಮಾರ್:–** ಮಾನ್ಯ ಸಚಿವರೇ, ದಯವಿಟ್ಟು ಇದನ್ನು ಪಾರದರ್ಶಕವಾಗಿ ಮಾಡಬೇಕು. ಕೇವಲ ಶಿವಮೊಗ್ಗದಲ್ಲಿ ಮಾತ್ರವಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಇಲ್ಲಿ ಕೊರೆದಿರುವ ಕೊಳವೆಬಾವಿಗಳಲ್ಲಿ ವಿದ್ಯುದೀಕರಣ ಆಗಿರುವ ಕೊಳವೆ ಬಾವಿಗಳು ಎಷ್ಟು ಎಂಬುದಕ್ಕೆ 42 ಎಂದು ಮಾತ್ರ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಪಂಪ್ ಮೋಟಾರ್ ಅಳವಡಿಕೆಗಾಗಿ ಬಾಕಿ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ಎಂಬುದಕ್ಕೆ ಕೊರೆದಿರುವ ಎಲ್ಲಾ ಕೊಳವೆ ಬಾವಿಗಳಿಗೆ ಪಂಪ್ ಮೋಟಾರ್ ಅಳವಡಿಸಲಾಗಿದೆ ಎಂದು ಉತ್ತರಿಸಲಾಗಿದೆ. ಪಂಪ್ ಮೋಟಾರ್ ಅಳವಡಿಸಿದ ಮೇಲೆ ಈ 42 ಕೊಳವೆ ಬಾವಿಗಳು ಏನು? ವಿದ್ಯುತ್ ಇಲ್ಲದೆ ಅವು ಏನು ಕೆಲಸ ಮಾಡುತ್ತವೆ? ಏನಿದು ಉತ್ತರ?

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಒಟ್ಟು 274 ಕೊಳವೆ ಬಾವಿಗಳು. ಅದರಲ್ಲಿ 42 ಕೊಳವೆ ಬಾವಿಗಳಿಗೆ ವಿದ್ಯುದೀಕರಣ ಆಗಬೇಕಾಗಿದೆ. ಅದನ್ನು ಆದಷ್ಟು ಬೇಗನೆ ಮುಗಿಸಿಕೊಡಲು ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಹೆಚ್.ಎಂ.ರೇವಣ್ಣ:–** ಹಾಗಾದರೆ ಪ್ರಶ್ನೆ(ಉ) ಗೆ ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿರುವಂತೆ ಪಂಪ್ ಮೋಟಾರ್ ಇಟ್ಟು ವಿದ್ಯುದೀಕರಣ ಮಾಡಲಿಲ್ಲವೆಂದರೆ ನೀರು ಎಲ್ಲಿಂದ ಕುಡಿಯುತ್ತಾನೆ?

**ಶ್ರೀ ಬಿ.ಶ್ರೀರಾಮುಲು:–** ಒಟ್ಟು 274ರಲ್ಲಿ ಇನ್ನೂ 42 ಕೊಳವೆ ಬಾವಿಗಳಿಗೆ ಮಾತ್ರ ವಿದ್ಯುದೀಕರಣ ಬಾಕಿ ಉಳಿದಿದೆ. ಅದನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಚಿವರೇ, ದಯಮಾಡಿ ತಮ್ಮ ಉತ್ತರವನ್ನು ಸರಿಯಾಗಿ ನೋಡಿ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ರೇವಣ್ಣನವರೇ, ನನಗೆ ಕೊಟ್ಟಿರುವ ಮಾಹಿತಿಯ ಪ್ರಕಾರ ಇನ್ನೂ 42 ಕೊಳವೆ ಬಾವಿಗಳಿಗೆ ವಿದ್ಯುದೀಕರಣವಾದರೆ ಎಲ್ಲಾ ಕೊಳವೆ ಬಾವಿಗಳ ಕಾರ್ಯ ಪೂರ್ಣವಾದಂತೆ. ನಿಮಗೆ ಅದು ಸರಿಯಿಲ್ಲವೆಂದರೆ, ನಾನು ಪರಿಶೀಲಿಸಿ ಸರಿ ಮಾಡಿಕೊಡುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಚಿವರೇ, ನಾನು ಏಕೆ ಹೇಳುತ್ತಿದ್ದೇನೆಂದರೆ ನಾನು ಅದರಲ್ಲಿ ಭಾಗಿಯಾಗಿದ್ದೇನೆ. ಪಂಪ್ ಸೆಟ್‌ಗಳನ್ನು ಕೊಟ್ಟು ಬಿಡುತ್ತಾರೆ. ವಿದ್ಯುದೀಕರಣವನ್ನು ಎಷ್ಟು ವರ್ಷಗಳಿಗೆ ಮಾಡುತ್ತಾರೆ? ಎಷ್ಟು ದಿನಗಳಿಂದ ಬಾಕಿ ಇದೆ? ಇದರಲ್ಲಿ ಬಹಳ ಇದೆ. ನಿಮ್ಮದು ಎಂದು ನಾನು ಹೇಳುತ್ತಿಲ್ಲ. ಅಧಿಕಾರಿಗಳು ಕೊಳವೆಬಾವಿ ಕೊರೆಯಿಸುತ್ತಾರೆ. ಕೊಳವೆ ಬಾವಿಯನ್ನು ಕೊರೆಯಿಸಿದ ಮೇಲೆ ಅದಕ್ಕೊಂದು ಬಿಲ್ ಆಗುತ್ತದೆ. ಪಂಪ್ ಮೋಟಾರ್ ಕೊಡುತ್ತಾರೆ. ಅದಕ್ಕೊಂದು ಬಿಲ್ ಮಾಡುತ್ತಾರೆ. ವಿದ್ಯುದೀಕರಣವಾಗುವುದಕ್ಕೆ ಎಷ್ಟು ದಿನ ಬೇಕಾಗುತ್ತದೆ?

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯ ಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಸರ್ಕಾರ ಯಾವುದೇ ಇದ್ದರೂ ಸಹಿತ ಅಧಿಕಾರಿಗಳು ತಪ್ಪು ಮಾಡುತ್ತಿರುವುದನ್ನು ನಾವು ಕೂಡ ಸಾಕಷ್ಟು ಬಾರಿ ನೋಡಿದ್ದೇವೆ. ಅನೇಕ ಕೆ.ಡಿ.ಪಿ. ಸಭೆಗಳಲ್ಲಿ ಇದರ ಬಗ್ಗೆ ಬಹಳಷ್ಟು ಚರ್ಚೆಯೂ ಆಗಿದೆ. ಇಲಾಖೆಯಿಂದ ಕೊಳವೆ ಬಾವಿಯನ್ನು ಹಾಕಲಾಗುವುದು. ಪಂಪ್ ಸೆಟ್ ಅನ್ನು ಅಳವಡಿಸಲಾಗುವುದು. ಇಲ್ಲಿ ಬಂದಿರುವ ಸಮಸ್ಯೆ ಎಂದರೆ ಒಂದು ವರ್ಷ, ಎರಡು ವರ್ಷ ಕೊನೆಗೆ ಮೂರು ವರ್ಷದವರೆವಿಗೂ ವಿದ್ಯುದೀಕರಣ ಮಾಡದಿರುವುದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಇಂಧನ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳೊಂದಿಗೆ ಜಂಟಿಯಾಗಿ ಸಭೆ ನಡೆಸಿ, commitment ಮಾಡಿಕೊಂಡು ಅದನ್ನು ಈಡೇರಿಸುವ ನಿಟ್ಟಿನಲ್ಲಿ ಸಚಿವರು ಆಲೋಚನೆ ಮಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಚಿವರೇ, ಈಗ ಕೊಳವೆ ಬಾವಿಯನ್ನು ಕೊರೆದು, submersible pump ಅಳವಡಿಸಲಾಗುವುದು. 2–3 ವರ್ಷ ಅದಕ್ಕೆ ವಿದ್ಯುದೀಕರಣ ಆಗಲಿಲ್ಲವೆಂದರೆ ನೀರಿನ ಸೆಲೆ ಬತ್ತಿ ಹೋಗಿ ಬಿಡುತ್ತದೆ. ನಂತರ ನೀವು ವಿದ್ಯುತ್ ಹರಿಸುವಷ್ಟು ಹೊತ್ತಿಗೆ ಕೊಳವೆ ಬಾವಿಯಲ್ಲಿ ನೀರು ಇರುವುದಿಲ್ಲ. It will become a defunct. ಸರ್ಕಾರ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣ ಖರ್ಚು ಮಾಡಿ ಕೊಳವೆ ಬಾವಿ ಕೊರೆಯಿಸಿ, ಅದಕ್ಕೆ submersible pump ಅನ್ನು ಅಳವಡಿಸಿ ವಿದ್ಯುದೀಕರಣ ವಿಳಂಬವಾದರೆ ಹೇಗೆ? Dry borewell ಗೆ ನೀವು ವಿದ್ಯುದೀಕರಣ ಮಾಡುವುದರಿಂದ ಏನು ಪ್ರಯೋಜನ? ಆ ರೈತನ ಗತಿ ಏನು? ಸರ್ಕಾರದ ಬೊಕ್ಕಸದಿಂದ ತೆರಿಗೆ ಹಣವನ್ನು ನೀವು ಖರ್ಚು ಮಾಡಿರುತ್ತೀರಿ? It will not become fruitful.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Rather it will become fruitless. ಅದಕ್ಕೆ ಕೊಳವೆಬಾವಿಯಲ್ಲಿ submersible pump ಅಳವಡಿಸಿದ ಒಂದು ವಾರದೊಳಗಾಗಿ ವಿದ್ಯುದೀಕರಣವಾಗಬೇಕು. ಮಾನ್ಯ ಉಪಮುಖ್ಯಮಂತ್ರಿಯವರು ಹೇಳಿದಂತೆ ಸಭೆಯನ್ನು ಕರೆಯಿರಿ. ಇಂಧನ ಇಲಾಖೆ ಅಧಿಕಾರಿಗಳು, submersible pump ಅನ್ನು ಸರಬರಾಜು ಮಾಡುವವರ ನಡುವೆ coordination ಇರಬೇಕು. ನೀವು ಕಟ್ಟುನಿಟ್ಟಿನ ಆದೇಶವನ್ನು ಮಾಡಿದರೆ ಅವರು ಬಂದು ವಿದ್ಯುದೀಕರಣವನ್ನು ಮಾಡುತ್ತಾರೆ. In case of electrification, ಸರ್ಕಾರದಿಂದ ಇಷ್ಟು ಹಣವನ್ನು ತುಂಬಬೇಕು ಎಂದು ಇರುತ್ತದೆ. ತಕ್ಷಣವೇ ಸರ್ಕಾರವು ಹಣವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಎಲ್ಲರ ಸಲಹೆಗಳನ್ನು ಪರಿಗಣಿಸುತ್ತೇನೆ. ಏಕೆಂದರೆ ನಾವು ಇದರ ಮಧ್ಯದಲ್ಲಿಯೇ ಹೋರಾಟಗಳನ್ನು ಮಾಡಿಕೊಂಡು ಬಂದಿರುತ್ತೇವೆ. MESCOM ಹಾಗೂ ನಮ್ಮ ಇಲಾಖೆಯವರ ನಡುವೆ ಸಮನ್ವಯ ಸಭೆಯನ್ನು ನಡೆಸಿ, ಯಾವುದು ಬಾಕಿ ಇದೆಯೋ ಅವುಗಳನ್ನು ಮಾಡಲಾಗುವುದು.

**ಶ್ರೀ ಆನಂದ್‌ಸಿಂಗ್ (ಅರಣ್ಯ, ಜೀವಿ ಪರಿಸ್ಥಿತಿ ಹಾಗೂ ಪರಿಸರ ಖಾತೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರು ಹೇಳಿರುವುದು ಈಗಿನಿಂದ ಬಾಕಿ ಇರುವುದಲ್ಲ. ಸುಮಾರು ವರ್ಷಗಳಿಂದ ಈ ರೀತಿ ಇದೆ. ಒಂದು ಕೊಳವೆ ಬಾವಿಯನ್ನು ಕೊರೆದರೆ ಎರಡು ವರ್ಷಗಳವರೆಗೆ ವಿದ್ಯುತ್ ಸಂಪರ್ಕವೇ ದೊರೆಯುವುದಿಲ್ಲ. ಕನಿಷ್ಟ ಪಕ್ಷ ಎರಡು ವರ್ಷಗಳಾಗುತ್ತವೆ. ಈ ಸಮಸ್ಯೆ ಈಗಿನಿಂದಲ್ಲ, ಹಿಂದೆ ಬೇರೆ ಬೇರೆ ಸರ್ಕಾರಗಳಿದ್ದಾಗ್ಯೂ ಈ ಸಮಸ್ಯೆ ಇತ್ತು. ಅಧಿಕಾರಿಗಳು ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳಬೇಕು.

**ಶ್ರೀ ಆರ್.ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಫಲಾನುಭವಿಗಳಿಗೆ ನೇರವಾಗಿ ಹಣವನ್ನು ಕೊಟ್ಟರೆ ಫಲಾನುಭವಿಗಳೇ ಮಾಡಿಕೊಳ್ಳುತ್ತಾರೆ. ಇದಕ್ಕೆ ಸರ್ಕಾರವೇನಾದರೂ ಕ್ರಮ ಕೈಗೊಳ್ಳುತ್ತದೆಯೇ ಎಂದು ಕೇಳಿದೆ. ಇದಕ್ಕೆ ಸಚಿವರು ಹೌದು ಅಥವಾ ಇಲ್ಲ ಎಂದು ಏನು ಹೇಳಲಿಲ್ಲ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಅವರು ಕೇಳಿದಂತೆ ಮಾಡುವುದಕ್ಕೆ ಆಗುವುದಿಲ್ಲ. ಇಂಧನ ಇಲಾಖೆಗೆ ಹಣವನ್ನು ಕಟ್ಟುವುದರಿಂದ ಅವರು ಕುಡಿಯುವ ನೀರಿನ ಸಲುವಾಗಿ ಮಾಡಲೇ ಬೇಕಾಗುತ್ತದೆ. ಇಂದಲ್ಲಾ ನಾಳೆ ಸರ್ಕಾರ ಹಣವನ್ನು ಕಟ್ಟಲೇ ಬೇಕಾಗುತ್ತದೆ. ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಮೊದಲನೆಯ ಆದ್ಯತೆ ಕುಡಿಯುವ ನೀರಿಗೆ ಕೊಡಬೇಕು. ಅದರ ಬಗ್ಗೆ ಒಂದು ಸಭೆಯನ್ನು ಕರೆದು ತೀರ್ಮಾನವನ್ನು ತೆಗೆದುಕೊಳ್ಳಲಾಗುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಆರ್.ಪ್ರಸನ್ನ ಕುಮಾರ್:–** ಮಾನ್ಯ ಸಚಿವರೇ, ಇದು ಫಲಾನುಭವಿಗಳ ಜಮೀನಿಗೆ ಕೊಡುತ್ತಿರುವ ಮೊದಲ ಆದ್ಯತೆಯಾಗಿದೆ. ಕುಡಿಯುವ ನೀರಿಗಾಗಿ ಅಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಚಿವರೇ, ಅವರು ಕೇಳುತ್ತಿರುವುದು ಕುಡಿಯುವ ನೀರಿಗಾಗಿ ಅಲ್ಲ. ಜಮೀನಿಗಾಗಿ. ಕೊಳವೆಬಾವಿಯನ್ನು ಕೊರೆದವನು ಹಣವನ್ನು ತೆಗೆದುಕೊಂಡು ಹೋಗುತ್ತಾನೆ. ಸಬ್‌ಮರ್ಸಿಬಲ್ ಪಂಪ್ ಅಳವಡಿಸಿದವನು ಹಣವನ್ನು ತೆಗೆದುಕೊಂಡು ಹೋಗುತ್ತಾನೆ. ಕೆಲವೊಮ್ಮೆ ವಿದ್ಯುದೀಕರಣ ಮಾಡಿದ ಕೂಡಲೇ ಅದರಲ್ಲಿ ನೀರು ಬರುವುದಿಲ್ಲ. It is the criminal waste of taxpayers' and Government money.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ತಡ ಮಾಡದೆ ತ್ವರಿತವಾಗಿ ಮಾಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಿದ್ದಾರೆ. ಖಂಡಿತವಾಗಿ ಮಾಡಿಕೊಡುತ್ತೇನೆ.

**(ಮುಂದು)**

**(458) 16.03.2020 1–30 ಕೆಜಿ/ವಿಕೆ**

**ಶ್ರೀ ಹೆಚ್.ಎಂ.ರೇವಣ್ಣ:–** ಕೊನೆಯ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ಬೋರ್‌ವೆಲ್‌ಗಳ ಟೆಂಡರ್ ಪ್ರಕ್ರಿಯೆ ನಿಂತು ಹೋಗಿದೆ ಎಂದು ಹೇಳಿದ್ದೀರಿ. ಅದು ಸರಿ. ಮತ್ತೆ ಈಗ ಟೆಂಡರ್ ಕರೆಯುವುದಕ್ಕೆ ಪ್ರಯತ್ನ ಮಾಡಿದ್ದೀರಿ, 2019 ಆಗಿದೆ. ಅದನ್ನು ಯಾವ ಅವಧಿಯಲ್ಲಿ ಮುಗಿಸುತ್ತೀರಿ? ಈಗಾಗಲೇ ಸಾಕಷ್ಟು ಸಮಯ ಆಗಿದೆ. ಅದಕ್ಕೆ ಒಂದು binding ಇಲ್ಲದ ಉತ್ತರಗಳನ್ನು ನೀಡಿದಂತಾಗಿದೆ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಇದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಈಗ ಅವರ ಕಡೆ ಇದೆ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಈಗ ಇದು ನನ್ನ ಕಡೆ ಬಂದಿದೆ. ಇದು ಮುಂಚೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇತ್ತು. ಆಗ ಮಾನ್ಯ ನ್ಯಾಯಾಲಯ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ ಆದೇಶ ನೀಡಿದ ಹಿನ್ನೆಲೆಯಲ್ಲಿ ಅದನ್ನು ಸ್ಥಗಿತಗೊಳಿಸಲಾಗಿತ್ತು. ಈಗ ನ್ಯಾಯಾಲಯದಿಂದ ಎಲ್ಲಾ clearance ಆಗಿ ನಮ್ಮ ಕಡೆ ಬಂದಿದೆ. ಅತಿ ಶೀಘ್ರದಲ್ಲಿಯೇ ಟೆಂಡರ್ ಕರೆದು ಕೆಲಸವನ್ನು ಪ್ರಾರಂಭ ಮಾಡಲಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 1226**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ಜಯಮಾಲ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. 'ಕ್ಯಾನ್ಸರ್' ಎನ್ನುವುದು ಎಂತಹ ಮಹಾಮಾರಿ ಎಂದರೆ, ಕ್ಯಾನ್ಸರ್ ಬಂದಿದೆ ಎಂದು ಗೊತ್ತಾದ ತಕ್ಷಣ ಮನುಷ್ಯ ಅಲ್ಲಿಯೇ ಕುಸಿದು ಹೋಗುತ್ತಾನೆ. ಅವರ ಆತ್ಮವಿಶ್ವಾಸ ಕುಗ್ಗಿ ಹೋಗುತ್ತದೆ. ಬದುಕಿನ ಯಾವ ಒಂದು ದಾರಿಗಳು ಸಹ ಗೊತ್ತಾಗದೆ, ಆ ಜನರು ಇವತ್ತಿನ ದಿವಸ ತತ್ತರಿಸಿ ಹೋಗುತ್ತಿದ್ದಾರೆ. 'ಸ್ತನ ಕ್ಯಾನ್ಸರ್' ಯಾವ ರೀತಿ ಬರುತ್ತದೆ ಎಂದು ಗೊತ್ತಾಗುವುದೇ ಇಲ್ಲ. Clinically test ಮಾಡಿ ಎಂದು ಹೇಳುತ್ತಾರೆ. WHO (World Health Organization) ಪ್ರಕಾರ, 40 ರಿಂದ 45 ವರ್ಷಗಳ ನಂತರದವರಿಗೆ ಪರೀಕ್ಷೆ ಮಾಡುತ್ತಾರೆ. ಕೆಲವೊಮ್ಮೆ ಕುಟುಂಬದ ಹಿನ್ನೆಲೆಯಲ್ಲಿ ಈ ಕಾಯಿಲೆ ಇದ್ದಾಗ, ಅಂದರೆ, ತಾಯಿಗೆ, ಅಕ್ಕನಿಗೆ, ಸೋದರ ಅತ್ತೆಗೆ ಇದ್ದಾಗ 30 ವರ್ಷಗಳಿಗೆ ಪರೀಕ್ಷೆ ಮಾಡುತ್ತಾರೆ. ಪುರುಷರಿಗೂ ಸಹ ಸ್ತನ ಕ್ಯಾನ್ಸರ್ ಇದೆ. ಇಂತಹ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಈ ಕಾಯಿಲೆ ಎಷ್ಟು ಜನರಿಗಿದೆ ಎಂಬ ಪ್ರಶ್ನೆಯನ್ನು ಕೇಳಿದಾಗ, ಈ ವರ್ಷದಲ್ಲಿ 32,400 ರೋಗಿಗಳು ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿರುವುದಾಗಿಯೂ ಮತ್ತು ಹೊಸದಾಗಿ 12,000 ರೋಗಿಗಳು ಇದ್ದಾರೆಂಬ ಉತ್ತರವನ್ನು ನೀಡಿದ್ದಾರೆ. ಸ್ತನ ಕ್ಯಾನ್ಸರ್‌ನ್ನು ಪರೀಕ್ಷಿಸುವಂತಹ ತಪಾಸಣೆ ಮಾಡುವಂತಹ ವೈದ್ಯಕೀಯ ಉಪಕರಣಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಅಳವಡಿಸಲು ಸರ್ಕಾರ ಚಿಂತಿಸಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದಕ್ಕೆ. ಅದಕ್ಕೆ ಮಾನ್ಯ ಸಚಿವರು ಈಗಾಗಲೇ 10 ಜಿಲ್ಲೆಗಳಲ್ಲಿ Mammography ಮತ್ತು ಪ್ಯಾಪ್‌ಸ್ಮಿಯರ್ಸ್ ಸ್ಕ್ರೀನಿಂಗ್ ಮಾಡುವುದಕ್ಕೆ ಉಪಕರಣಗಳನ್ನು bidding ಮಾಡುವುದಕ್ಕೆ, purchase ಮಾಡುವುದಕ್ಕೆ ಪ್ರಕ್ರಿಯೆ ನಡೆಯುತ್ತಿದೆ ಎಂಬ ಮಾತನ್ನು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ಒಂದು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಲ್ಲಿ ಸ್ತನ ಕ್ಯಾನ್ಸರ್ ಬಹಳ ಕಡಿಮೆ ಇದೆ. ಈ ಜಿಲ್ಲೆಗಳ ಅಂಕಿ ಅಂಶಗಳನ್ನು ನೋಡಿದಾಗ, ಇದು ನಗರ ಪ್ರದೇಶಗಳಲ್ಲಿ ಬಹಳ ಹೆಚ್ಚಿನ ಪ್ರಮಾಣದಲ್ಲಿ ಇರುವುದು ಕಂಡುಬರುತ್ತದೆ. ನಗರ ಪ್ರದೇಶಗಳಲ್ಲಿ ಖಿನ್ನತೆಗೆ ಒಳಗಾದಾಗ, obesity ಯಿಂದ ಅಥವಾ junk food ಗಳನ್ನು ತಿನ್ನುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಈ ಸ್ತನ ಕ್ಯಾನ್ಸರ್‌ಗೆ ಒಳಗಾಗುತ್ತಿದ್ದಾರೆ. ಕೆಲವೊಮ್ಮೆ 20 ವರ್ಷಗಳ ಮೇಲ್ಪಟ್ಟ ಹೆಣ್ಣು ಮಕ್ಕಳಲ್ಲಿ ಈ ರೋಗ ಕಂಡುಬಂದಿರುವಂತಹ ಉದಾಹರಣೆಗಳು ಇವೆ. ಕೇವಲ 10 ಜಿಲ್ಲೆಗಳ ಜಿಲ್ಲಾ ಆಸ್ಪತ್ರೆಗಳಿಗೆ ಒಂದು ಡಿಜಿಟಲ್ ಸ್ತನರೇಕ ವ್ಯವಸ್ಥೆ ಹಾಗೂ ಪ್ಯಾಪ್‌ಸ್ಮಿಯರ್ ಸ್ಕ್ರೀನಿಂಗ್‌ನ್ನು ಪ್ರಾರಂಭಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಇದನ್ನು ಇನ್ನೂ 10 ಜಿಲ್ಲೆಗಳಿಗೆ ವಿಸ್ತರಣೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ನನ್ನ ಅಗ್ರಹ ಇದೆ. ಇಲ್ಲಿ ಪ್ರಶ್ನೆ ಕೇವಲ Mammography ಮಾತ್ರವಲ್ಲ, Ultrasound and Hysteroscopy machine ಗಳನ್ನು ಸಹ ಅಳವಡಿಸಲಾಗುತ್ತದೆಯೇ ಎಂಬ ಪ್ರಶ್ನೆಯನ್ನು ಕೇಳಬಯಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಯವರೇ, ಈ 10 ಜಿಲ್ಲೆಗಳಲ್ಲಿಯೂ ಸಹ Cervical Cancer ಜಾಸ್ತಿ ಆಗಿದೆ. ಒಂದು ಸಣ್ಣ ಗ್ರಾಮದಲ್ಲಿ ಹೋಗಿ ಕೇಳಿದರೂ ಸಹ Cervical Cancer ಇರುವುದು ಕಂಡುಬರುತ್ತದೆ. ರಾಜ್ಯದ ಅಂಕಿ ಅಂಶಗಳನ್ನು ಗಮನಿಸಿದಾಗ, ಸುಮಾರು 20 ರಿಂದ 25 ಸಾವಿರ ಜನರಿಗೆ Cervical Cancer ರೋಗ ಇರುವುದು ಕಂಡುಬರುತ್ತಿದೆ. ನಗರ ಪ್ರದೇಶಗಳಲ್ಲಿ ಸ್ತನ ಕ್ಯಾನ್ಸರ್ ಜಾಸ್ತಿಯಾಗುತ್ತಿದೆ. ಗ್ರಾಮೀಣ ಪ್ರದೇಶಗಳಲಿ Cervical Cancer ಜಾಸ್ತಿಯಾಗಿದೆ. ಇದಕ್ಕೆ ಒಂದು vaccination ಬಂದಿದೆ. ಇದನ್ನು 15 ವರ್ಷದ ಒಳಗಿನ ಮಕ್ಕಳಿಗೆ ಮೂರು ಹಂತದಲ್ಲಿ ಕೊಡಬೇಕೆಂದು ಹೇಳುತ್ತಿದ್ದಾರೆ. ಅದರ ಬೆಲೆ private ನಲ್ಲಿ ಒಂದಕ್ಕೆ ಸುಮಾರು ರೂ.2,500/- ಇದೆ. ಆದ್ದರಿಂದ, ಮಾನ್ಯ ಸಚಿವರಲ್ಲಿ ಕನಿಷ್ಠ ಪಕ್ಷ 15 ವರ್ಷದ ಒಳಗಿನ ಮಕ್ಕಳಿಗೆ ಆ Cervical Cancer Vaccination ಅನ್ನು ಉಚಿತವಾಗಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ, Cervical Cancer ಅತಿ ಹೆಚ್ಚಾಗಿ ಹರಡುತ್ತಿದೆ. ಇದು ಮಹಿಳೆಯರಿಗೆ ಸಂಬಂಧಪಟ್ಟಿದ್ದು. ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಎರಡು ಉಪಕರಣಗಳನ್ನು ಹೆಚ್ಚು ಮಾಡುವುದು ಮತ್ತು ಉಚಿತವಾಗಿ Cervical Cancer Vaccination ಕೊಡುವುದರ ಬಗ್ಗೆ ತಾವು ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮಹಿಳೆಯರ ಬಗ್ಗೆ ಇರುವಂತಹ ಬದ್ಧತೆಯನ್ನು ನಾನು ಸ್ವಾಗತ ಮಾಡುತ್ತೇನೆ. ಅವರು ಬಹಳ ವಸ್ತುನಿಷ್ಠತೆಯಿಂದ ಮಾತನಾಡಿದ್ದಾರೆ. ಪಸ್ತುತ ರಾಜ್ಯದಲ್ಲಿ ಸ್ತನ ಕ್ಯಾನ್ಸರ್‌ನ ರೋಗಿಗಳ ಸಂಖ್ಯೆ 32,400 ಇದೆ. ಹಾಗಾಗಿ, ಈಗಾಗಲೇ 10 ಆಸ್ಪತ್ರೆಗಳಲ್ಲಿ ಈ ಮೆಷಿನ್‌ಗಳನ್ನು ಮತ್ತು 10 Radiotherapy machine ಗಳನ್ನು ತೆಗೆದುಕೊಳ್ಳಬೇಕು PAP smear ಬಗ್ಗೆ ಮತ್ತು Digital Mammography ಇವೆಲ್ಲವನ್ನು ಖರೀದಿ ಮಾಡುವುದಕ್ಕೆ ಆರೋಗ್ಯ ಇಲಾಖೆಯವರು ಈಗಾಗಲೇ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ನಮ್ಮ ವೈದ್ಯಕೀಯ ಶಿಕ್ಷಣ ಇಲಾಖೆಯಿಂದ 17 ಜಿಲ್ಲೆಗಳಲ್ಲಿ 17 ವೈದ್ಯಕೀಯ ಕಾಲೇಜುಗಳಿವೆ. ಈ 17 ಜಿಲ್ಲೆಗಳಲ್ಲಿ ಇದನ್ನು ಅಳವಡಿಸುವುದಕ್ಕೆ ಮುಂದಿನ ದಿವಸಗಳಲ್ಲಿ ಪ್ರಯತ್ನ ಮಾಡುತ್ತೇವೆ. ಇದನ್ನು ಅನುದಾನದ ಲಭ್ಯತೆಯ ಮೇರೆಗೆ ಆದಷ್ಟು ಬೇಗ ಮಾಡುತ್ತೇವೆ. ಮಾನ್ಯ ಸದಸ್ಯರು ಉಪ ಪ್ರಶ್ನೆಯನ್ನು ಕೇಳಿಲ್ಲ. ಆದರೂ ಸಹ, ಇವತ್ತು Cervical Cancer ಅಷ್ಟೇ ಗಂಭೀರವಾಗಿರುತ್ತದೆ. ಅದಕ್ಕೆ ಬೇಕಾದಂತಹ ಉಪಕರಣಗಳು ಮತ್ತು ಚಿಕಿತ್ಸಾ ವಿಧಿ ವಿಧಾನಗಳು ಏನಿವೆ, ಅದನ್ನು ಸಹ ಆಧುನಿಕವಾಗಿ ಅಳವಡಿಸುವುದಕ್ಕೆ ಸರ್ಕಾರ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

**ಡಾ||ಜಯಮಾಲ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು. ಮಾನ್ಯ ಸಚಿವರಲ್ಲಿ ನನ್ನ personal request ಏನೆಂದರೆ, ಈ vaccination ಮಕ್ಕಳಿಗೆ ಕೊಡುವಂತಹದ್ದು, ಇದು 96% ಕಡಿಮೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆಗಿದೆ. ಇದನ್ನು ಮಕ್ಕಳಿಗೆ ಕೊಟ್ಟರೆ, ಈ ರೋಗ ನಿರ್ಮೂಲನೆ ಆಗುತ್ತದೆ. ಪೋಲಿಯೋ ಲಸಿಕೆಯಿಂದ ಪೋಲಿಯೋ ಕಾಯಿಲೆಯನ್ನು ತಡೆಹಿಡಿಯಲಾಗಿದೆ. ಅದೇರೀತಿ ಇದನ್ನು ಸಹ ಒಂದು ಆಂದೋಲನವಾಗಿ ತೆಗೆದುಕೊಂಡು ಇದನ್ನು ನಿರ್ಮೂಲನೆ ಮಾಡುವಂತಹ ಕೆಲಸವನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ನಿಜವಾಗಿಯೂ ಈ ಬಗ್ಗೆ ಪರಿಶೀಲಿಸುತ್ತೇನೆ. ಇದಕ್ಕೆ ಉತ್ತರ ಕೊಡಬೇಕು ಎನ್ನುವ ಕಾರಣಕ್ಕಷ್ಟೇ ನಾನು ಈ ಮಾತನ್ನು ಹೇಳಿಲ್ಲ. ಒಂದು vaccination ನ ಬೆಲೆ ರೂ.2500/- ಇದೆ. ಅದನ್ನು ಮೂರು ಬಾರಿ ಕೊಡಬೇಕಾಗುತ್ತದೆ. ಮೂರು ಬಾರಿಗೆ ಒಟ್ಟು ರೂ. 7500/- ಆಗುತ್ತದೆ. ಅದಕ್ಕಾಗಿ ಅದರ ಬಗ್ಗೆ ಪರಿಶೀಲಿಸಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಸಚಿವರೇ, ಪರಿಶೀಲಿಸುತ್ತೇನೆಂದು ಹೇಳಿದರೆ, ಅದು ಭರವಸೆಗಳ ಸಮಿತಿಯ ಪರಿಶೀಲನೆಗೆ ಹೋಗುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಪ್ರಶ್ನೆ ಸಂಖ್ಯೆ 573)**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ತಡವಾಗಿ ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಇಲ್ಲಿ ಬಹಳ ಗಂಭೀರವಾದಂತಹ ವಿಚಾರವನ್ನು ಮಾತ್ರ ಮಾತನಾಡುತ್ತೇನೆ.

**(ಮುಂದು)**

(459)16–03–2020(7–40)ಎಂವಿ–ಬಿಎನ್‌ಎಸ್
**ಶ್ರೀ ಪಿ.ಆರ್.ರಮೇಶ್ (ಮುಂದು...)**

ಇವತ್ತು ರಾಜ್ಯದಲ್ಲಿರತಕ್ಕಂಥ ಒಟ್ಟು 43,42,785 ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಇದರ ಪೈಕಿ, ಎಲ್ಲಾ ಜಿಲ್ಲೆಗಳ ಒಟ್ಟು 82,650.65 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿದ್ದಾರೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ಉತ್ತರದಲ್ಲಿ ಕೊಟ್ಟಿರತಕ್ಕಂಥದ್ದರ ಬಗ್ಗೆ ನಾವು ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 64(ಎ) ರ ಪ್ರಕಾರ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, 1974ನೇ ಇಸವಿಯಲ್ಲಿ ಕಲಂ 64(ಎ) ತಿದ್ದುಪಡಿಯಾಗಿದೆ. ಈ ರಾಜ್ಯದಲ್ಲಿ ಇಷ್ಟು ಮೊತ್ತದ ಅರಣ್ಯ ಪ್ರದೇಶವನ್ನು ಎಂದಿನಿಂದ ಆಕ್ರಮಿಸಿಕೊಂಡಿದ್ದಾರೆಂದು ಮಾನ್ಯ ಸಚಿವರು ಸರಿಯಾದ ಮಾಹಿತಿ ಕೊಡಬೇಕಾಗುತ್ತದೆ. ಎರಡನೆಯದಾಗಿ, ಈ ಕಾಯ್ದೆಯಲ್ಲಿ ಎಷ್ಟು ಪ್ರಕರಣಗಳು ನ್ಯಾಯಾಲಯದಲ್ಲಿವೆ? ಮೂರನೆಯದಾಗಿ, ಇವತ್ತು adverse possession ಎಂದು ತೆಗೆದುಕೊಂಡಿದ್ದಾರೆ. ಮಾನ್ಯ ಸುಪ್ರೀಂ ಕೋರ್ಟ್ ಒಂದು ಆದೇಶವನ್ನು ಕೊಟ್ಟಿದೆ. ಯಾವುದೇ ಒಂದು private property ಗಳನ್ನು ಯಾರಾದರು ಆಕ್ರಮಿಸಿಕೊಂಡು ಸುಮಾರು 12 ವರ್ಷಗಳ ಕಾಲ ಅನುಭವಿಸಿದಾಗ, ಅದು ಅವರಿಗೆ ಸೇರುತ್ತದೆ ಎಂದಾಗುತ್ತದೆ. ಸರ್ಕಾರದ ಜಮೀನುಗಳನ್ನು 30 ವರ್ಷಗಳ ಕಾಲ ಯಾರೇ ಒಬ್ಬ ವ್ಯಕ್ತಿ ಆಕ್ರಮಿಸಿಕೊಂಡಿದ್ದರೆ, ಅದು ಸರ್ಕಾರದಿಂದ ಆತನಿಗೆ ಸಲ್ಲುತ್ತದೆಂದು ಮಾನ್ಯ ಸುಪ್ರೀಂ ಕೋರ್ಟ್ ಹೇಳಿದೆ, ಇದನ್ನು ನಾನು ಹೇಳಿಲ್ಲ. ಇಂತಹ ಒಂದು ಸಂದರ್ಭದಲ್ಲಿ 82,650 ಹೆಕ್ಟೇರ್ ಜಮೀನುಗಳಿಗೆ ಎಷ್ಟು ವರ್ಷಗಳಿಂದ ಮಾನ್ಯ ನ್ಯಾಯಾಲಯದಲ್ಲಿ ಹೋರಾಟ ಮಾಡುತ್ತಿದ್ದಾರೆ. 1974ರಲ್ಲಿ ತಿದ್ದುಪಡಿಯಾಗಿರುತ್ತದೆ, ಇದಕ್ಕಿಂತ ಮುಂಚೆ ಅದನ್ನು retrospective ಆಗಿ ತೆಗೆದುಕೊಳ್ಳುತ್ತಿದ್ದಾರೆಯೇ ಅಥವಾ prospective ಆಗಿ ತೆಗೆದುಕೊಳ್ಳುತ್ತಿದ್ದಾರೆಯೇ? ಅಥವಾ ಯಾವ ರೀತಿ ಈ ಜಾಗಗಳನ್ನು ಅರಣ್ಯ ಪ್ರದೇಶಕ್ಕೆ ಮತ್ತೆ reclaim ಮಾಡುತ್ತಾರೆ. ಯಾವ ರೀತಿ ತೆಗೆದುಕೊಳ್ಳಬಹುದು ಎನ್ನುವುದನ್ನು, ಮಾನ್ಯ ಸಚಿವರು ಈ ಸದನಕ್ಕೆ ತಿಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆನಂದ್ ಸಿಂಗ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಬಹಳ ವಿಸ್ತೃತವಾಗಿ ಉತ್ತರವನ್ನು ಕೊಡಲಾಗಿದೆ. ಆದರೆ ಅವರು ಕೇಳಿರತಕ್ಕಂಥ ಉಪ ಪ್ರಶ್ನೆಗಳಿಗೆ ಈಗ ಒಟ್ಟು 43,42,785 ಹೆಕ್ಟೇರ್ ವಿಸ್ತೀರ್ಣವಿರುವುದು. ಅದರಲ್ಲಿ 82,650 ಹೆಕ್ಟೇರ್ ಭೂಮಿ ಒತ್ತುವರಿಯಾಗಿದೆ. ಅಂದರೆ, 2,04,272 ಎಕರೆ ಒತ್ತುವರಿಯಾಗಿರುತ್ತದೆ. ಮೊದಲು ಒತ್ತುವರಿ ಮಾಡುವಾಗ, the Karnataka Forest Act, 1963ರ ಪ್ರಕಾರ ಕಲಂ 64, ಅಂದರೆ A.C.F. (Assistant Conservator of Forests) ಮುಖಾಂತರ ಅಲ್ಲಿ ಯಾರು ಒತ್ತುವರಿ ಮಾಡಿಕೊಂಡಿರುತ್ತಾರೆ, ಅಂತಹವರ ವಿರುದ್ಧ ಪ್ರಕರಣವನ್ನು ದಾಖಲಿಸಿ ಅದು ಸಿ.ಸಿ.ಎಫ್. ಕೋರ್ಟ್‌ನಲ್ಲಿ ಅಪೀಲ್ ಮುಖಾಂತರ ಅದನ್ನು ತಿರ್ಮಾನಿಸುತ್ತಿದ್ದರು. ಆದರೆ, ಹೈಕೋರ್ಟ್‌ನಿಂದ ಒಂದು ಆದೇಶ ಬಂತು, ಈಗ ಯಾವುದೇ ಸರ್ಕಾರಿ ಭೂಮಿಗಳು ಇರಬಹುದು, ಅದು ಅರಣ್ಯ ಪ್ರದೇಶ ಇರಬಹುದು, ಕಂದಾಯದ ಜಮೀನು ಇರಬಹುದು, ಬಿ.ಬಿ.ಎಂ.ಪಿ. ಇರಬಹುದು ಮತ್ತು ಕಾರ್ಪೋರೇಷನ್ ಇರಬಹುದು. ಇದು the Karnataka Land Grabbing Prohibition Act ನ ಅಡಿಯಲ್ಲಿ Court ನಲ್ಲಿ ತೀರ್ಮಾನವಾಗಬೇಕೆಂದು ಮಾನ್ಯ ಹೈಕೋರ್ಟ್‌ನಿಂದ ಒಂದು ಆದೇಶವಾಯಿತು. ಈ ರೀತಿಯ ಅನೇಕ ಪ್ರಕರಣಗಳಿವೆ. ಸರ್ಕಾರಿ ಭೂಮಿಗಳನ್ನು ತೆರವುಗೊಳಿಸುವುದಕ್ಕೆ, ಮೂರು ಎಕರೆ ಜಮೀನಿಗಿಂತ ಕಡಿಮೆ ಭೂಮಿ ಹೊಂದಿರತಕ್ಕಂಥವರಿಗೆ ಅವರ್‍ಯಾರು ತೆರವು ಮಾಡತಕ್ಕಂಥ ಅವಶ್ಯಕತೆಯಿಲ್ಲವೆಂದು ಸರ್ಕಾರದಲ್ಲಿ ಆದೇಶವಾಗಿದೆ. ಮೂರು ಎಕರೆ ಜಮೀನಿಗಿಂತ ಹೆಚ್ಚಿಗೆ ವಿಸ್ತೀರ್ಣದ ಜಮೀನನ್ನು ಹೊಂದಿರತಕ್ಕಂಥವರಿಗೆ ಅರಣ್ಯ ಇಲಾಖೆ ವತಿಯಿಂದ ಅಂತಹವರ ವಿರುದ್ಧ ಕ್ರಮ ತೆಗೆದುಕೊಂಡು ಅವರನ್ನು ಅಲ್ಲಿಂದ ತೆರವುಗೊಳಿಸತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಅದಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ಹೋದಾಗ, ನ್ಯಾಯಾಲಯದಿಂದ ಆದೇಶ ಬಂದಮೇಲೆ, ಅವರನ್ನು ತೆರವುಗೊಳಿಸುತ್ತೇವೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮೂರು ಎಕರೆಗಿಂತ ಕಡಿಮೆ ಇರತಕ್ಕಂಥವರಿಗೆ ಮಾತ್ರ ಸಕ್ರಮಗೊಳಿಸುತ್ತೇವೆಂದು ಹೇಳಿರುವಂಥದ್ದು ಅರ್ಥವಾಗುತ್ತದೆ. ಆದರೆ, ಅವರು ಅಂತಹವುಗಳನ್ನು ಹೇಗೆ segregate ಮಾಡುತ್ತಾರೆ? ಮೂರು ಎಕರೆಗಿಂತ ಹೆಚ್ಚಿಗೆ ಇರುವುದನ್ನು ಹೇಗೆ segregate ಮಾಡಿದ್ದಾರೆ? ಹಾಗೆಯೇ ಅದನ್ನು ಯಾವ ರೀತಿ reclaim ಮಾಡುತ್ತಾರೆಂದು ಹೇಳಲಿಲ್ಲ. ನನ್ನ ಮೂರನೆ ಪ್ರಶ್ನೆಗೆ, ಮನೆಗಳನ್ನು ನಿರ್ಮಾಣ ಮಾಡತಕ್ಕಂಥದ್ದಕ್ಕೆ ಸಕ್ರಮಗೊಳಿಸುವಂತಹ ಪ್ರಶ್ನೆ ಉದ್ಭವವಾಗವುದಿಲ್ಲವೆನ್ನುತ್ತಾರೆ. ಈಗ ಮೂರು ಎಕರೆ ಒಳಗಡೆ ಎಂದು ಹೇಳಿದ್ದಾರೆ. ಈ ಮನೆಗಳು ಇರುವಂಥದ್ದು ಮತ್ತೆ ಎಲ್ಲವನ್ನು ಸಂಪೂರ್ಣವಾಗಿ ನೋಡಿದರೆ, ಅವುಗಳನ್ನು ಸಕ್ರಮಗೊಳಿಸುವುದಕ್ಕೆ ಪರೋಕ್ಷವಾಗಿ ಉತ್ತರ ಕೊಟ್ಟಂತೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದೆ. ಹಾಗಾಗಿ, ಈ ಮನೆಗಳನ್ನು ಸಕ್ರಮ ಮಾಡಿಸುವಂಥದ್ದು ಆಗುತ್ತದೆಯೇ, ಇಲ್ಲವೇ ಅಥವಾ ಅವುಗಳನ್ನು reclaim ಮಾಡುತ್ತಾರೆಯೇ? ಎಂದು ಇದರ ಬಗ್ಗೆಯು ಸಹ ಹೇಳಬೇಕು.

**ಶ್ರೀ ಅರಬೈಲು ಶಿವರಾಮ್ ಹೆಬ್ಬಾರ (ಕಾರ್ಮಿಕ ಮತ್ತು ಸಕ್ಕರೆ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಫಲಾನುಭವಿಯಾಗಿ ಮಾತನಾಡುತ್ತೇನೆ. ಈಗ ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಏನು ಮಾತನಾಡುತ್ತಿದ್ದೀರಿ?

**ಶ್ರೀ ಅರಬೈಲು ಶಿವರಾಮ್ ಹೆಬ್ಬಾರ:–**ಮಾನ್ಯ ಸಭಾಪತಿಯವರೇ, ನಾವು ಅರಣ್ಯ ಪರಿಸ್ಥಿತಿಗೆ ಹೊಂದಿಕೊಂಡಿರುವಂತಹವರು. Forest Rights Actಏನು ಬಂತು . . .

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, encroach ಮಾಡಿರುವವರು ಎಂದು ಹೇಳಲಿ.

**ಶ್ರೀ ಅರಬೈಲು ಶಿವರಾಮ್ ಹೆಬ್ಬಾರ:–** ಮಾನ್ಯ ಸಭಾಪತಿಯವರೇ, ಇವತ್ತು ನಮಗೂ ಕಷ್ಟವಿದೆ. ಹಾಗಾಗಿ ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ, 2006ರಲ್ಲಿ Forest Rights Act ಏನು ಬಂತು, ಈಗ ನಮ್ಮ ಜಿಲ್ಲೆಯಲ್ಲಿ ಸುಮಾರು 98 ಸಾವಿರ ಪ್ರಕರಣಗಳು ಇನ್ನು ಬಾಕಿಯಿವೆ. ಸದರಿ ಪ್ರಕರಣಗಳಲ್ಲಿ ಶೇಕಡಾ 90–95ರಷ್ಟು ಅರಣ್ಯ ಭೂಮಿ ಅತಿಕ್ರಮಣವಾಗಿದೆ. ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅತ್ಯಂತ ಹೆಚ್ಚಿನ ಪ್ರಕರಣಗಳು ಬಾಕಿ ಇದ್ದು, ಇನ್ನು ಪರಿಶೀಲನೆಗೆ ತೆಗೆದುಕೊಂಡಿರುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭೆಯಿಂದ ಚುನಾಯಿತರಾದವರು):–**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕ್ಯಾಬಿನೆಟ್ ಸಚಿವರು ಅವರು ಅದನ್ನು ಕ್ಯಾಬಿನೆಟ್‌ನಲ್ಲಿ ಮಾತನಾಡಲಿ. ಈಗ ಸದನದಲ್ಲಿ ಹೊಸ ಹೊಸ ಸಂಪ್ರದಾಯಗಳು ಬರುತ್ತಿವೆ. ಇಲ್ಲಿ ಕಾನೂನು ಮತ್ತು ಸಂಸದೀಯ ಸಚಿವರು ಸಹ ಇಲ್ಲೇ ಇದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–**ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ತಮ್ಮ ತಮ್ಮ ಸಮಸ್ಯೆಗಳನ್ನು ಬಗೆಹರಿಸಕೊಳ್ಳದೆ ಇದ್ದರೆ, ಸದನದ ಸದಸ್ಯರ ಸಮಸ್ಯೆಗಳನ್ನು ಹೇಗೆ ಬಗೆಹರಿಸುತ್ತಾರೆ? ಮಾನ್ಯ ಸಚಿವರು ಕ್ಯಾಬಿನೆಟ್‌ಗೆ ಹೋಗಿ ಚರ್ಚೆ ಮಾಡಿಕೊಳ್ಳಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಎಂ.ರೇವಣ್ಣ:–**ಮಾನ್ಯ ಸಭಾಪತಿಯವರೇ, ಇಲ್ಲಿ ನಮ್ಮ ಸಮಸ್ಯೆಗೆ ಉತ್ತರ ಬೇಕು. ಆದರೆ, ಇಲ್ಲಿ ಮಾನ್ಯ ಸಚಿವರು ತಮ್ಮ ಸಮಸ್ಯೆಯನ್ನು ಹೇಳಿದರೆ, ನಾವುಗಳು ಎಲ್ಲಿಗೆ ಹೋಗಬೇಕು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–**ಮಾನ್ಯ ಸಭಾಪತಿಯವರೇ, ನಾನು ಬೆಳಗ್ಗೆಯಿಂದ ನೋಡುತ್ತಿದ್ದೇನೆ, ಮಾನ್ಯ ಸಚಿವರಿಗೆ ತಮ್ಮ ತಮ್ಮ ಸಮಸ್ಯೆಗಳ ಹೇಳುತ್ತಿದ್ದಾರೆ. ಆದರೆ, ಸದನದ ಸದಸ್ಯರ ಸಮಸ್ಯೆಗಳ ಬಗ್ಗೆ ಅವರಿಗೆ ಲಕ್ಷ್ಯವಿಲ್ಲ. ಅವರ ಸಮಸ್ಯೆಯನ್ನು ಬಗೆಹರಿಸಕೊಳ್ಳುವುದಕ್ಕೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಲಿ.

**ಸಭಾಪತಿಯವರು:–** ಅವರು ರೈತರ ಪರವಾಗಿ ಮಾತನಾಡಿದ್ದಾರೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–**ಮಾನ್ಯ ಕಾನೂನು ಸಚಿವರೆ ತಾವು ಇದರ ಬಗ್ಗೆ ಹೇಳಿ. ಕಳೆದ ಮೂರು ದಿವಸಗಳಿಂದ ಹೀಗೆ ನಡೆಯುತ್ತಿದೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–**ಮಾನ್ಯ ಸಭಾಪತಿಯವರೇ, Treasury Bench ನಲ್ಲಿರುವವರು ಪ್ರಶ್ನೆ ಕೇಳಬಾರದೆಂದು ನಾನು ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:–**ಮಾನ್ಯ ಸಭಾಪತಿಯವರೇ, ಎಲ್ಲಾ ಇದೇ ರೀತಿ ಆಗುತ್ತಿದೆ.

**ಶ್ರೀ ಆನಂದ್ ಸಿಂಗ್:–** ಮಾನ್ಯ ಸಭಾಪತಿಯವರೇ, ಅದನ್ನು ಪರಿಶೀಲನೆ ಮಾಡಿ, ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆಂದು ಹೇಳುತ್ತೇನೆ. ಏಕೆಂದರೆ, ನಾವು ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದೇವೆ. ಆದರೆ ಮಾನ್ಯ ಸದಸ್ಯರು ಬೇರೆ ಬೇರೆ ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ಅದನ್ನು ಪರಿಶೀಲಿಸಿ ಅದಕ್ಕೆ ಉತ್ತರ ನೀಡುತ್ತೇವೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಆ)ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 16ನೇ ಮಾರ್ಚ್ 2020ರ ಸಮೂಹ-Iರ ಲಿಖಿತ ಮೂಲಕ ಉತ್ತರಿಸುವ ಒಟ್ಟು 99 ಪ್ರಶ್ನೆಗಳ ಪೈಕಿ, 70 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಲಿಖಿತ ಉತ್ತರಗಳನ್ನು ಲಗತ್ತಿಸಿದೆ)**

**ಸಭಾಪತಿಯವರು:–** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 6.ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ಕೆ.ಆರ್.ಪೇಟೆಯ 17ನೇ ವಾರ್ಡಿನಲ್ಲಿನ ಉದ್ಯಾನವನದಲ್ಲಿ ಪುರಸಭಾ ಅನುದಾನದಲ್ಲಿ ಕೈಗೊಂಡಿರುವ ಡ್ರೈನೇಜ್ ಕಾಮಗಾರಿ ಬಗ್ಗೆ.**

-----

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಕೆ.ಆರ್.ಪೇಟೆಯ 17ನೇ ವಾರ್ಡಿನಲ್ಲಿನ ಉದ್ಯಾನವನದಲ್ಲಿ ಪುರಸಭಾ ಅನುದಾನದಲ್ಲಿ ಡ್ರೈನೇಜ್ ಕಾಮಗಾರಿಗೆ ರೂ.7.80 ಲಕ್ಷಗಳು ಮಂಜೂರಾಗಿದ್ದು, ಕಾಮಗಾರಿಯನ್ನು ಗುತ್ತಿಗೆದಾರರು ಒಂದು ವಾರದಿಂದ ನಿರ್ವಹಿಸುತ್ತಿದ್ದು, ದಿನಾಂಕ: 12.03.2020ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಸದರಿ 17ನೇ ವಾರ್ಡಿನ ಪುರಸಭಾ ಸದಸ್ಯರು ಈ ಕಾಮಗಾರಿಯು ತಮ್ಮ ವಾರ್ಡಿನ ವ್ಯಾಪ್ತಿಯಲ್ಲಿ ಬರುವುದರಿಂದ ಡ್ರೈನೇಜ್ ಕಾಮಗಾರಿಯನ್ನು ಮಾಡಿಸಿ ಹಿಂತಿರುಗಿದ ನಂತರ ಕೆ.ಆರ್.ಪೇಟೆಯ ಪುರಸಭಾ ಮುಖ್ಯಾಧಿಕಾರಿಯವರು ಸ್ಥಳೀಯ ಶಾಸಕರ ಕುಮ್ಮಕ್ಕಿನಿಂದ ಡ್ರೈನೇಜ್ ಅನ್ನು ಮುಚ್ಚಿ ಹಾಕಿರುತ್ತಾರೆ. ಮುಖ್ಯಾಧಿಕಾರಿಯವರು ಈ ರೀತಿ ಡ್ರೈನೇಜ್ ಅನ್ನು ಮುಚ್ಚಿದ್ದರಿಂದ 17ನೇ ವಾರ್ಡಿನ ಪುರಸಭಾ ಸದಸ್ಯರು ಮುಖ್ಯಾಧಿಕಾರಿಗಳ ವಿರುದ್ಧ ಕೆ.ಆರ್.ಪೇಟೆ ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಲು ತೆರಳಿದಾಗ ನಗರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ರವರು ಸ್ಥಳೀಯ ಶಾಸಕರ ಒತ್ತಾಯದ ಮೇರೆಗೆ 17ನೇ ವಾರ್ಡಿನ ಪುರಸಭಾ ಸದಸ್ಯರ ಮೇಲೆಯೇ ಎಫ್.ಐ.ಆರ್. ದಾಖಲಿಸಿ ಜೈಲಿಗೆ ಕಳುಹಿಸಿದ್ದು, ಈ ಬಗ್ಗೆ ಕೆ.ಆರ್.ಪೇಟೆ ನಗರದಲ್ಲಿ ಉದ್ವಿಗ್ನ ವಾತಾವರಣ ಉಂಟಾಗಿರುತ್ತದೆ. ಈ ವಿಷಯದಲ್ಲಿ ಉದ್ಧಟತನದಿಂದ ವರ್ತಿಸಿದ ಪೊಲೀಸ್ ಅಧಿಕಾರಿ ವಿರುದ್ಧ ಕ್ರಮ ಜರುಗಿಸಬೇಕಾಗಿದೆ. ಈ ವಿಷಯವು ದಿನಾಂಕ: 13.03.2020ರಂದು ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಕೇಳಿರುವ ಪ್ರಶ್ನೆಗೆ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**(ಮುಂದು...)**

(460) 16.03.2020 07.50 LL-BNS

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಆ) Alleged atrocity by a gang of five on a pregnant woman near Electronic City last weekend

- - - -

**Sri LAHAR SINGH SIROYA (Legislative Assembly Constituency):-** On Sunday, many newspapers carried a news item about a pregnant

woman being assaulted by a gang of five in the vicinity of Electronic City. A 27 year old woman who is pregnant through surrogacy, was attacked by a group of five woman and a man on Wednesday after an extortion bid. This is a grave matter that need urgent attention.

a) I urge the Home Minister to monitor the activities of the NGOs working in this field. I also urge the Minister to take serious and comprehensive action against the culprits in a time-bound manner.

b) Just like the way the kidney donation is monitored and the Government has set up a Committee to permit kidney donation, the Health and Family Welfare Department should immediately take note of this and bring out proper guidelines and set up a mechanism to monitor hospitals promoting surrogate parenthood.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ರವರು ಕೇಳಿರುವ ಪ್ರಶ್ನೆಗೆ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**(ಇ) ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಶ್ರೀನಿವಾಸಪುರ ಗ್ರಾಮದಲ್ಲಿರುವ ಹೇಮಾವತಿ ಸಕ್ಕರೆ ಕಾರ್ಖಾನೆಯ ಬಾಯ್ಲರ್‌ನ ಡಸ್ಟ್ ಕ್ಯಾಚರ್ ಸ್ಫೋಟಗೊಂಡು ಆಗಿರುವ ಅನಾಹುತಗಳ ಬಗ್ಗೆ.**

– – –

**ಶ್ರೀ ಎಂ.ಎ. ಗೋಪಾಲಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚನ್ನರಾಯಪಟ್ಟಣ ತಾಲ್ಲೂಕಿನ ಶ್ರೀನಿವಾಸಪುರ ಗ್ರಾಮದಲ್ಲಿರುವ ಹೇಮಾವತಿ ಸಕ್ಕರೆ ಕಾರ್ಖಾನೆಯನ್ನು ರೈತರ ಸಹಕಾರದೊಂದಿಗೆ ಸ್ಥಾಪಿಸಲಾಗಿದ್ದು, ಈ ಕಾರ್ಖಾನೆಯನ್ನು ರೈತರ ವಿರೋಧದ ನಡುವೆಯು 13 ವರ್ಷಗಳ ಹಿಂದೆ ಚಾಮುಂಡೇಶ್ವರಿ ಶುಗರ್ಸ್ ಕಂಪನಿಗೆ ಗುತ್ತಿಗೆ ನೀಡಲಾಗಿದೆ. ಗುತ್ತಿಗೆ ಕರಾರಿನಂತೆ, ಚಾಮುಂಡೇಶ್ವರಿ ಶುಗರ್ಸ್ ಕಂಪನಿಯು ಹೇಮಾವತಿ ಸಕ್ಕರೆ ಕಾರ್ಖಾನೆಯನ್ನು ಆಧುನೀಕರಣಗೊಳಿಸಿ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೆಚ್ಚಿಸಬೇಕಾಗಿರುತ್ತದೆ. ಆದರೆ, ಈ ಕಂಪನಿಯು ಆಧುನೀಕರಣ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸದೇ ಇರುವುದರಿಂದ ಕಬ್ಬು ಬೆಳೆಗಾರರಿಗೆ ಸಾಕಷ್ಟು ಅನ್ಯಾಯವಾಗಿರುತ್ತದೆ. ಚಾಮುಂಡೇಶ್ವರಿ ಶುಗರ್ಸ್ ಕಂಪನಿಯು ಕಳಪೆ ಕಾಮಗಾರಿ ಹಾಗೂ ಕಳಪೆ ಗುಣಮಟ್ಟದ ಯಂತ್ರೋಪಕರಣಗಳನ್ನು ಉಪಯೋಗಿಸಿರುವುದರಿಂದ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದಿನಾಂಕ:15.03.2020ರಂದು ಭಾನುವಾರ ಬೆಳಿಗ್ಗೆ ಹೇಮಾವತಿ ಸಕ್ಕರೆ ಕಾರ್ಖಾನೆಯ ಬಾಯ್ಲರ್‌ನ ಚಿಮನಿಗೆ ಅಳವಡಿಸಿರುವ ಧೂಳು ಫಿಲ್ಟರ್ ಮಾಡುವ ಘಟಕವು(ಇಎಸ್‌ಪಿ) ಸಿಡಿದು ನೆಲಕ್ಕೆ ಕುಸಿದು ಬಿದ್ದಿರುತ್ತದೆ. ಭಾನುವಾರ ರಜಾ ದಿನವಾದ್ದರಿಂದ ಕಾರ್ಮಿಕರ ಸಂಖ್ಯೆ ಕಡಿಮೆ ಇದ್ದುದರಿಂದ ಮತ್ತು ಕೆಲಸಕ್ಕೆ ಬಂದಿದ್ದ ಕಾರ್ಮಿಕರು ತಿಂಡಿ ತಿನ್ನಲೆಂದು ಹೊರಹೋಗಿದ್ದರಿಂದ ಯಾವುದೇ ಸಾವು–ನೋವು ಸಂಭವಿಸಿರುವುದಿಲ್ಲ.

ಹೇಮಾವತಿ ಸಕ್ಕರೆ ಕಾರ್ಖಾನೆಯನ್ನು ಆಧುನೀಕರಣಗೊಳಿಸುವ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಮತ್ತು ಈ ಕಾಮಗಾರಿಗಳಿಗೆ ಗುಣಮಟ್ಟದ ಯಂತ್ರೋಪಕರಣಗಳನ್ನು ಬಳಸಿ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೆಚ್ಚಿಸಿ ಈ ಭಾಗದ ರೈತರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಮತ್ತು ಈ ಅವಘಡಕ್ಕೆ ಕಾರಣರಾಗಿರುವವರ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಹಾಗೆಯೇ, ನಿನ್ನೆಯ ದಿವಸ ಆದಂತಹ ಅನಾಹುತ ವರ್ಕಿಂಗ್ ಡೇ ಆಗಿದ್ದರೇ, ಅಲ್ಲಿ ಸುಮಾರು 50–60 ಜನ ಕಾರ್ಮಿಕರು ಸಾವನ್ನಪ್ಪುತ್ತಿದ್ದರು. ದಿನನಿತ್ಯ ಅಲ್ಲಿ ಕಾಮಗಾರಿ ನಡೆಯುತ್ತಿದೆ. ಕಳೆದ ವಾರ ಕೂಡ ಇದೇ ಕಾರ್ಖಾನೆಯಲ್ಲಿ ಶ್ರೀ ಯಾದವ್ ಎನ್ನುವ ಕಾರ್ಮಿಕ ಸಾವನ್ನಪ್ಪಿರುತ್ತಾನೆ. ಅದರ ಹದಿನೈದು ದಿವಸಗಳ ಮೊದಲು ಇಬ್ಬರು ಕಾರ್ಮಿಕರ ಮೇಲೆ ಎರಡು ಪೈಪ್‌ಗಳು ಬಿದ್ದು ಅಪಘಾತವಾಗಿ ಸೊಂಟ ಮುರಿದುಕೊಂಡಿರುತ್ತಾರೆ. ಈ ಸದನದಲ್ಲಿ ಹಾಸನ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಂಬಂಧಪಟ್ಟ ಸಚಿವರು ಇರುವುದರಿಂದ, ದಯಮಾಡಿ ಈ ಬಗ್ಗೆ ಸೂಕ್ತ ಕ್ರಮ ಜರುಗಿಸಿಬೇಕು. ನಿನ್ನೆಯ ದಿವಸ ನಡೆದಿರುವ ಅನಾಹುತದಿಂದ ಕಬ್ಬು ಅರೆಯುವುದು ಸುಮಾರು 1 ವರ್ಷ ತಡವಾಗುತ್ತದೆ. ಸುಮಾರು 4–5 ಲಕ್ಷ ಟನ್ ಕಬ್ಬನ್ನು ಅರೆಯಬೇಕು. ಇದರಿಂದಾಗಿ, ಸುಮಾರು 3 ಕೋಟಿ ರೂಪಾಯಿ ಹಣ ರೈತರಿಗೆ ನಷ್ಟವಾಗುವ ಸಂದರ್ಭ ಇರುವುದರಿಂದ ದಯಮಾಡಿ ಮಾನ್ಯ ಸಚಿವರು ಇದಕ್ಕೆ ಉತ್ತರ ಒದಗಿಸಬೇಕು.

**ಶ್ರೀ ಅರಬೈಲು ಶಿವರಾಮ್ ಹೆಬ್ಬಾರ್ (ಕಾರ್ಮಿಕ ಮತ್ತು ಸಕ್ಕರೆ ಸಚಿವರು):–** ಮಾನ್ಯ ಸಭಾಪತಿಯವರೇ, 2007–08ರಲ್ಲಿ 30 ವರ್ಷದ ಲೀಸ್ ಆಧಾರದ ಮೇಲೆ ಈ ಕಾರ್ಖಾನೆಯನ್ನು ಗುತ್ತಿಗೆಗೆ ಕೊಡಲಾಯಿತು. 4 ವರ್ಷದಲ್ಲಿ ಕೆಲಸ ಪೂರ್ಣಗೊಳಿಸಬೇಕೆಂದು ಕಂಡೀಷನ್ ಇತ್ತು. ಆದರೆ, 2007–08ರಲ್ಲಿ ಕೊಟ್ಟಂತಹದ್ದನ್ನು 2019–20ಕ್ಕೆ ಕಾರ್ಖಾನೆ ಕೆಲಸ ಪೂರ್ಣಗೊಂಡು, ನಾವು ಯಾವ ಕಂಡೀಷನ್ ಅನ್ನು ಹಾಕಿದ್ದೆವೋ, ಅದರಂತೆ 3500 ಡಿಸಿಡಿಗಳನ್ನು ವಿಸ್ತರಿಸಬೇಕೆಂದು ಮತ್ತು 21 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ವಿದ್ಯುತ್ ಅನ್ನು ಹೆಚ್ಚಿಸಬೇಕೆಂದು ಹೇಳಿದ್ದೆವು. ಅದು 2019–20 ಕ್ಕೆ ಪೂರ್ಣಗೊಳಿಸಿದ್ದಾರೆ. ಎರಡನೆಯದಾಗಿ, ಚಾಮುಂಡೇಶ್ವರಿ ಶುಗರ್ಸ್ ಕಂಪನಿಯವರನ್ನು ಕರೆದು ಈ ವಿಷಯದ ಬಗ್ಗೆ ಒಂದು ಸಭೆಯನ್ನು ಅತೀ ಶೀಘ್ರದಲ್ಲಿಯೇ ಮಾಡುತ್ತೇವೆ. ಮಾನ್ಯ ಸದಸ್ಯರು ಏನು ನ್ಯೂನತೆಗಳನ್ನು ಹೇಳಿದ್ದಾರೆ ಅವುಗಳನ್ನು ಸರಿಪಡಿಸುವ ಬಗ್ಗೆ ನಮ್ಮ ಅಧಿಕಾರಿಗಳು ಮತ್ತು ಕಾರ್ಖಾನೆಯ ಮಾಲೀಕರನ್ನು ಹಾಗೂ ಸ್ಥಳೀಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರತಿನಿಧಿಗಳು ಅಂದರೆ, ವಿಧಾನ ಪರಿಷತ್ತಿನ ಶಾಸಕರನ್ನು ಆ ಸಭೆಗೆ ಕರೆಯಿಸಿ ಈ ಬಗ್ಗೆ ಸೂಕ್ತವಾದಂತಹ ನಿರ್ಣಯಗಳನ್ನು ತೆಗೆದುಕೊಳ್ಳುತ್ತೇವೆ.

ಮೂರನೆಯದಾಗಿ, ಟೆಂಡರ್ ಕಂಡೀಷನ್‌ಗಳ ಪ್ರಕಾರ ನಿಗದಿತ ಅವಧಿಯೊಳಗೆ ಕೆಲಸ ಪೂರ್ಣಗೊಳಿಸದೇ ಇದ್ದುದಕ್ಕಾಗಿ ಯಾವ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ, ಅದನ್ನು ತೆಗೆದುಕೊಳ್ಳುತ್ತೇವೆ. ನಾಲ್ಕನೆಯದಾಗಿ, ಕಳಪೆ ಗುಣಮಟ್ಟದ ಬಗ್ಗೆ ಹೇಳಿದ್ದಾರೆ. ಅದಕ್ಕೆ ತಾಂತ್ರಿಕ ಪರಿಣಿತರನ್ನು ಕರೆಯಿಸಿ, ಕಾರ್ಖಾನೆಯಲ್ಲಿ ಸರಿಯಾದ ಗುಣಮಟ್ಟದ ಯಂತ್ರೋಪಕರಣಗಳನ್ನು ಅಳವಡಿಸಿದ್ದಾರೆಯೇ ಅಥವಾ ಕಳಪೆ ಗುಣಮಟ್ಟದ ಯಂತ್ರೋಪಕರಣಗಳನ್ನು ಅಳವಡಿಸಿದ್ದಾರೆಯೇ ಎಂಬ ಬಗ್ಗೆ ತಾಂತ್ರಿಕ ಪರಿಣಿತರಿಂದ ವರದಿ ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಇದರ ಜೊತೆಗೆ, ಕಾರ್ಖಾನೆಯಿಂದ ರೈತರಿಗೆ ಏನು ಅನ್ಯಾಯವಾಗಿದೆ, ಅದರ ಬಗ್ಗೆ ಸಭೆಯನ್ನು ಕರೆಯುತ್ತಿದ್ದೇವೆ. ಆ ಸಭೆಗೆ ರೈತ ಪ್ರತಿನಿಧಿಗಳನ್ನು ಕರೆಯಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

**(ಈ) ಅಡುಗೆ ಎಣ್ಣೆಗೆ ಮಿನರಲ್ ಆಯಿಲ್ ಬೆರೆಸುತ್ತಿರುವ ಬಗ್ಗೆ**

– – –

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ರಾಜ್ಯದ ಜನತೆ ದಿನನಿತ್ಯ ಸೇವಿಸುವ ಆಹಾರ ಪದಾರ್ಥಗಳಲ್ಲಿ ಬಳಸುವ ಅಡುಗೆ ಎಣ್ಣೆಗೆ ವಿವಿಧ ರಾಸಾಯನಿಕ ಅಂಶಗಳನ್ನು ಹೊಂದಿರುವ ಮಿನರಲ್ ಆಯಿಲ್ ಹಾಗೂ ಇನ್ನಿತರೆ ಕೆಳದರ್ಜೆಯ ವಸ್ತುಗಳನ್ನು ಬೆರೆಸಲಾಗುತ್ತಿರುವ ವಿಷಯವು ಸಾರ್ವಜನಿಕವಾಗಿ ಮಹತ್ವವಾಗಿರುವುದರಿಂದ, ಇದನ್ನು ಸದನದಲ್ಲಿ ಪ್ರಸ್ತಾಪಿಸಲು ಅನುಮತಿಯನ್ನು ಕೋರುತ್ತೇನೆ.

ದೈನಂದಿನ ಆಹಾರ ತಯಾರಿಕೆಗೆ ಬೇಕಾಗುವ ಪದಾರ್ಥಗಳಲ್ಲಿ ಒಂದಾದ ಎಣ್ಣೆ ಒಂದು ಅವಿಭಾಜ್ಯ ಅಂಗವಾಗಿದೆ. ವಿವಿಧ ಬ್ರ್ಯಾಂಡ್‌ಗಳ ಮೇಲೆ ನಂಬಿಕೆಯನ್ನಿಟ್ಟು ಸಾರ್ವಜನಿಕರು ಅಂಗಡಿಗಳಲ್ಲಿ ದೊರೆಯುವ ಎಣ್ಣೆ ಪದಾರ್ಥಗಳನ್ನು ಖರೀದಿಸುತ್ತಾರೆ. ಹೊರ ರಾಜ್ಯಗಳಿಂದ ಸರಬರಾಜು ಆಗುತ್ತಿರುವ ಕಳಪೆ ದರ್ಜೆಯ ಎಣ್ಣೆಗಳನ್ನು ಡ್ರಮ್‌ಗಳಲ್ಲಿ ತಂದು ಮಾರಾಟ ಮಾಡಲಾಗುತ್ತಿದೆ. ರಕ್ಕಸ ರೂಪದಲ್ಲಿ ಬೆಳೆದಿರುವ ಕಲಬೆರಕೆ ಜಾಲವು ಅಧಿಕ ಲಾಭದಾಸೆಗೆ ಜನರ ಆರೋಗ್ಯದೊಂದಿಗೆ ಚೆಲ್ಲಾಟ ಮಾಡುತ್ತಿರುವುದು ಅಪಾಯಕಾರಿಯಾಗಿ ಪರಿಣಮಿಸಿದೆ. ಲೀಟರ್ ಮಿನರಲ್ ಆಯಿಲ್ ಬೆಲೆ ರೂ.40 ರಿಂದ ರೂ.60. ಇದನ್ನು ಅಡುಗೆ ಎಣ್ಣೆಗೆ ಮಿಶ್ರಣ ಮಾಡುವ ಖದೀಮರು ಪ್ರತಿ ಲೀಟರ್‌ಗೆ ಏನಿಲ್ಲವೆಂದರೂ ರೂ.50 ಲಾಭ ಪಡೆದುಕೊಳ್ಳುತ್ತಿದ್ದಾರೆ. ಎಲ್ಲಾ ಖಾದ್ಯ ತೈಲದಲ್ಲೂ ಇದು ಸುಲಭವಾಗಿ ಮಿಶ್ರಣವಾಗುತ್ತದೆ. ಯಾವುದೇ ವಾಸನೆ, ರುಚಿ, ಬಣ್ಣ ಹೊಂದಿಲ್ಲದೇ ಇರುವುದು ದಂಧೆಕೋರರ ಪಾಲಿಗೆ ವರವಾಗಿದೆ. ಧಾರಾಳವಾಗಿ ಹಾಗೂ ಕಡಿಮೆ ಬೆಲೆಗೆ ಸಿಗುವ ಪೆಟ್ರೋಲಿಯಂ ಉಪ ಉತ್ಪನ್ನ "ಮಿನರಲ್ ಆಯಿಲ್" ಅನ್ನು ಅಡುಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಣ್ಣೆಗೆ ಬೆರೆಸುವ ಜಾಲ ಸಕ್ರಿಯವಾಗಿದೆ. ಪ್ಯಾಕ್ ಮಾಡುವ ದೊಡ್ಡ ಕಂಪನಿಗಳು ಎಣ್ಣೆ ಮಿಲ್‌ಗಳಲ್ಲೇ ಈ ಕಲಬೆರಕೆ ದಂಧೆ ನಡೆಯುತ್ತಿದೆ. ಹೀಗೆ ಈ ಕಲಬೆರಕೆಯಿಂದ ಕೂಡಿದ ಎಣ್ಣೆಯನ್ನು ಸೇವಿಸಿದರೆ, ಹೃದಯ ಹಾಗೂ ಮೂತ್ರಪಿಂಡಗಳನ್ನು ಹಾನಿಗೊಳಿಸುವುದಲ್ಲದೇ ಕ್ಯಾನ್ಸರ್‌ಗೆ ಕಾರಣವಾಗಿದೆ. ಆದಕಾರಣ, ಜನರ ಆರೋಗ್ಯವನ್ನು ರಕ್ಷಿಸುವ ನಿಟ್ಟಿನಲ್ಲಿ ಕಲಬೆರಕೆ ಎಣ್ಣೆಯನ್ನು ಮಾರಾಟ ಮಾಡುವವರನ್ನು ಕಡಿವಾಣ ಹಾಕುವ ಸಂಬಂಧ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕೆಂದು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಇದೊಂದು ದೊಡ್ಡ ಲಾಭಿಯಾಗಿದೆ. ಜನ ಇವೊತ್ತಿನ ದಿವಸ ಕಡಿಮೆ ವಯಸ್ಸಿನಲ್ಲಿ ಅಂದರೆ, 20–30 ವರ್ಷದ ಯುವಕರು ಹೃದಯಾಘಾತ ಆಗಿ ಸಾವನ್ನಪ್ಪುತ್ತಿರುವ ಸನ್ನಿವೇಶ ಇರುತ್ತದೆ. ಒಳ್ಳೆಯ ಬ್ರಾಂಡ್ ಅಡುಗೆ ಎಣ್ಣೆ ಎಂದು ನಾವು ಏನು ಎಣ್ಣೆ ಕೊಂಡುಕೊಳ್ಳುತ್ತಿದ್ದೇವೆ. ಅದರಲ್ಲಿ ಕಲಬೆರಕೆ ಎಣ್ಣೆಯನ್ನು ಮಿಶ್ರಣ ಮಾಡಿ ಮಾರಾಟ ಮಾಡುತ್ತಿದ್ದಾರೆ. ದಯಮಾಡಿ, ಈ ವಿಷಯವನ್ನು ಬೇರೆ ಯಾವುದಾದರೂ ರೂಪದಲ್ಲಿ 30 ನಿಮಿಷ ಚರ್ಚೆಗೆ ಕಾಲಾವಕಾಶ ನೀಡಬೇಕು. ಏಕೆಂದರೆ, ಈ ವಿಷಯದ ಬಗ್ಗೆ ಸುಮಾರು ಮಾನ್ಯ ಸದಸ್ಯರುಗಳು ಮಾತನಾಡಬೇಕಾಗಿದೆ. ಇದೊಂದು ದಂಧೆಯಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈ ವಿಷಯ ಬಹಳ ಗಂಭೀರವಾಗಿದ್ದು, ಜನರ ಆರೋಗ್ಯದ ದೃಷ್ಟಿಯಿಂದ ಮಾನ್ಯ ಎಂ. ನಾರಾಯಣಸ್ವಾಮಿಯವರು ತಂದಿರುವಂತಹ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳಬೇಕು. ಏಕೆಂದರೆ, ಇಡೀ ರಾಜ್ಯದಲ್ಲಿ ಇಂತಹ ಘಟನೆಗಳು ಬಹಳಷ್ಟು ನಡೆದಿವೆ. ಜನರ ಆರೋಗ್ಯದ ಹಿತದೃಷ್ಟಿಯಿಂದ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಈ ವಿಷಯದ ಬಗ್ಗೆ ಯಾವುದಾದರೂ ಒಂದು ರೂಪದಲ್ಲಿ ನಾಳೆಯ ದಿವಸ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡಲಾಗುವುದು.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದೇ ವಿಷಯವನ್ನು ನಿಯಮ 330 ರಲ್ಲಿ ಪ್ರಸ್ತಾಪಿಸಲು ಅರ್ಜಿ ನೀಡಿರುತ್ತೇವೆ.

**ಶ್ರೀ ಆಯನೂರು ಮಂಜುನಾಥ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಸದನ ಸಮಿತಿ ರಚನೆ ಮಾಡಿ, ತನಿಖೆ ಮಾಡಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಎಲ್ಲಾ ವಿಷಯಗಳಿಗೂ ಸದನ ಸಮಿತಿ ರಚನೆ ಮಾಡುವುದು ಬೇಡ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಮೊದಲು ಚರ್ಚೆಯಾಗಲಿ.

**ಸಭಾಪತಿಯವರು:–** ನಾಳೆಯ ದಿವಸ ಯಾವುದಾದರೂ ಒಂದು ರೀತಿಯಲ್ಲಿ ಈ ವಿಷಯದ ಬಗ್ಗೆ ಮೊದಲು ಚರ್ಚೆಗೆ ಅವಕಾಶ ನೀಡುತ್ತೇನೆ.

**ಶ್ರೀ ಬಿ. ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ):–** ಮಾನ್ಯ ಸಭಾಪತಿಯವರೇ, ನಾಳೆಯ ದಿವಸ ನಾನು ಕೊರೋನಾ ವೈರಸ್ ವಿಷಯಕ್ಕೆ ಸಂಬಂಧಪಟ್ಟಂತೆ, ಮಂಗಳೂರಿಗೆ ಹೋಗಬೇಕಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾಳೆಯ ದಿವಸ ಈ ವಿಷಯ ಚರ್ಚೆಗೆ ಬರುವುದಿಲ್ಲ. ನಾಡಿದ್ದು ಬರುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನಿಯಮ 330ರಡಿಯಲ್ಲಿ ನಾಳೆ ಅರ್ಜಿ ಕೊಡುವುದರಿಂದ, ನಾಡಿದ್ದು ಚರ್ಚೆಗೆ ಬರುತ್ತದೆ.

**ಸಭಾಪತಿಯವರು:–** ಆಯಿತು. ತಾವು ನಾಡಿದ್ದು ಅಂದರೆ, ದಿನಾಂಕ:18.03.2020ರಂದು ಈ ವಿಷಯದ ಬಗ್ಗೆ ತಾವು ಉತ್ತರ ನೀಡಬಹುದು.

(ಮುಂದುವರೆದಿದೆ...)

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(461)16.03.2020/8.00/ವೈಎಲ್–ಜಿಆರ್

**7. ಗಮನ ಸೆಳೆಯುವ ಸೂಚನೆ**

**"ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಕೋಲಿ, ಕಬ್ಬಲಿಗ ಹಾಗೂ ಇನ್ನಿತರ 39 ಪರ್ಯಾಯ ಜಾತಿಗಳನ್ನು ಹೊಂದಿರುವವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆನ್ನುವ ವಿಷಯ ಕೇಂದ್ರ ಸರ್ಕಾರದಲ್ಲಿ ಹಲವು ವರ್ಷಗಳಿಂದ ಬಾಕಿ ಉಳಿದಿದ್ದು ಈ ಸಂಬಂಧ ರಾಜ್ಯ ಸರ್ಕಾರ ಮುತುವರ್ಜಿ ವಹಿಸಬೇಕಾಗಿರುವ ಬಗ್ಗೆ."**

– – – –

**ಶ್ರೀ ತಿಪ್ಪಣ್ಣ ಕಮಕನೂರ(ನಾಮನಿರ್ದೇಶಿತ ಹೊಂದಿದವರು):–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಕೋಲಿ, ಕಬ್ಬಲಿಗ ಹಾಗೂ ಇನ್ನಿತರ 39 ಪರ್ಯಾಯ ಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರ ಪರವಾಗಿ ಉತ್ತರವನ್ನು ನೀಡುತ್ತಿದ್ದೇನೆ.

(ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ,

- ಭಾರತದ ಪರಂಪರೆಯಲ್ಲಿ ಹಲವು ಜಾತಿ ಪಂಗಡಗಳು ಉಪ ಜಾತಿಗಳನ್ನು ಒಳಗೊಂಡ ವ್ಯವಸ್ಥೆ ಪ್ರಸ್ತುತವೂ ಮುಂದುವರೆದುಕೊಂಡು ಬಂದಿದೆ.

- ವೇದಗಳ ಕಾಲದಿಂದಲೂ ನಮ್ಮ ಸಂಸ್ಕೃತಿ, ಉದ್ಯೋಗಾಧಾರಿತ ಜಾತಿ, ಮೇಲ್ಜಾತಿ ವ್ಯವಸ್ಥೆ ನಮ್ಮ ನಮ್ಮ ನಂಬಿಕೆಗಳಲ್ಲಿ ಹಾಸುಹೊಕ್ಕಾಗಿದೆ.

- ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಹಿಂದುಳಿದ ಜಾತಿಗಳ ಪೈಕಿ ಕೋಲಿ, ಕಬ್ಬಲಿಗ, ಗಂಗಾಮತ, ಅಂಬಿಗ ಇನ್ನಿತರ 39 ಉಪಜಾತಿಗಳು ಅತ್ಯಂತ ಹಿಂದುಳಿದಿವೆ.

- ಈ ಜಾತಿಯಲ್ಲಿನ ಬಹುತೇಕರು ಅನಕ್ಷರಸ್ಥರಾಗಿದ್ದು, ಅಸಂಘಟಿತ ವಲಯಗಳಲ್ಲಿ ದಿನಗೂಲಿ ನೌಕರರಾಗಿ, ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಾ ಸಮಾಜದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಈಗಾಗಲೇ ಮಾನ್ಯ ಸಭಾನಾಯಕರು ನೀಡಿರುವ ಉತ್ತರದ ಮೇಲೆ ಪ್ರಶ್ನೆ ಕೇಳುವುದಾದರೆ ಕೇಳಿ.

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ನೀಡಿರುವ ಉತ್ತರ ಸಮಂಜಸವಾಗಿಲ್ಲ. ಇದು ಅತ್ಯಂತ ಗಂಭೀರವಾದ ವಿಷಯವಾಗಿದೆ. ಚುನಾವಣೆ ಸಂದರ್ಭದಲ್ಲಿ ನಮ್ಮ ಸಹೋದರರಾದ ಮಾನ್ಯ ಎನ್.ರವಿಕುಮಾರ್‌ರವರಿಗೆ ಗುಲ್ಬರ್ಗಾ ನಗರದ ಚುನಾವಣಾ ಉಸ್ತುವಾರಿಯನ್ನಾಗಿ ಮಾಡಲಾಗಿತ್ತು. ಅದರ ಜೊತೆಗೆ ಮತ್ತೊಬ್ಬರು ಪ್ರಮುಖ ನಾಯಕರು ಅಲ್ಲಿದ್ದರು. ಚುನಾವಣೆಯ ಸಂದರ್ಭದಲ್ಲಿ ಕೋಲಿ ಸಮಾಜದವರು ಒಗ್ಗಟ್ಟಾಗಿ ಬೆಂಬಲ ನೀಡಬೇಕು, 15 ದಿನಗಳಲ್ಲಿ ನಮ್ಮ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವಂಥ ಕೆಲಸ ಮಾಡುತ್ತೇನೆ ಎಂದು ಒಬ್ಬ ಪ್ರಮುಖ ನಾಯಕರು ಹೇಳಿದ್ದರು. ಮಾನ್ಯ ಎನ್.ರವಿಕುಮಾರ್‌ರವರು ಸಹ ಬಿಜೆಪಿ ಸರ್ಕಾರದ ಅತ್ಯಂತ ಪ್ರಬಲ ನಾಯಕರಾಗಿರುವ ಪ್ರಯುಕ್ತ ಅವರು ಸಹ ಚುನಾವಣೆಯ ಸಂದರ್ಭದಲ್ಲಿ 'ನಮ್ಮ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವಂಥ ಕೆಲಸ ಮಾಡುತ್ತೇನೆ,' ಇಲ್ಲದಿದ್ದರೆ 'ನನ್ನ ರಕ್ತದಲ್ಲಿ' ಬರೆದುಕೊಡುತ್ತೇನೆ ಎನ್ನುವಂಥ ಮಾತನ್ನು ಹೇಳಿದ್ದರು.

**ಸಭಾಪತಿಯವರು:–** ಆಯಿತು ಬಿಡಿ.

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ಅದಕ್ಕಾಗಿ ಇದು ಬಹಳ ಗಂಭೀರವಾದ ವಿಷಯವಾಗಿದೆ. ನಾವು 39 ವರ್ಷಗಳಿಂದ ಸತತವಾಗಿ ಹೋರಾಟ ಮಾಡುತ್ತಿದ್ದೇವೆ. ಪರಿಶಿಷ್ಟ ಪಂಗಡದಲ್ಲಿ ಕೋಲಿ, ಕಬ್ಬಲಿಗ ಎಂಬ ಪದವನ್ನು ಮಾತ್ರ ಬಿಟ್ಟಿದ್ದಾರೆ. ಈಗಾಗಲೇ ಬೀದರ್ ಜಿಲ್ಲೆಯಲ್ಲಿ ಶೇಕಡಾ 100ಕ್ಕೆ 100 ರಷ್ಟು ಜನರಿಗೆ 'ಟೋಕ್ಕರೆ ಕೋಲಿ' ಎಂಬ ಸಮಾಜದವರಿಗೆ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರವನ್ನು ವಿತರಣೆ ಮಾಡುತ್ತಿದ್ದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮನ್ನು 'ಕಬ್ಬಲಿಗ ಸಮಾಜದವರು' ಎಂದು ಕರೆಯುತ್ತಾರೆ. ಬೀದರ್ ಜಿಲ್ಲೆಯಲ್ಲಿ ನಮ್ಮ ಕಬ್ಬಲಿಗ ಸಮಾಜದವರು ನೆಲೆಸಿದ್ದಾರೆ. ಅವರ ಜೊತೆ ನಮ್ಮ ಜನ ಸಂಬಂಧವನ್ನು ಬೆಳೆಸುತ್ತಾರೆ. ನಮ್ಮ ಸಮಾಜದ 'ಟೊಕ್ಕರೆ ಕೋಲಿ' ಎಂಬ ಹೆಸರನ್ನು ಹೊಂದಿರುವವರು ಮಾಂಜ್ರಾ ನದಿ, ಅಮರ್ಜಾ ನದಿ, ಇನ್ನಿತರ ನದಿಗಳಲ್ಲಿ ಬುಟ್ಟಿ ಹಾಕಿಸಿ ದಡವನ್ನು ದಾಟಿಸುವಂತಹ ಕೆಲಸ ಮಾಡುತ್ತಿರುವವರಿಗೆ 'ಟೊಕ್ಕರೆ ಕೋಲಿ' ಎಂದು ಕರೆಯುತ್ತಾರೆ. ನಮ್ಮಲ್ಲಿ ನೀರಿನ ಸೌಲಭ್ಯ ಇಲ್ಲದ ಪ್ರಯುಕ್ತ ನಾವು ಒಕ್ಕಲುತನ ಇರುವುದರಿಂದ 'ಕೋಲಿ, ಕಬ್ಬಲಿಗ' ಎಂದು ಕರೆಯುತ್ತಾರೆ. ಇವೆಲ್ಲಾ ಒಂದೇ ನುಡಿಗಳು. ಅದಕ್ಕಾಗಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಈಗಾಗಲೇ ಮಾನ್ಯ ಉಚ್ಚ ನ್ಯಾಯಾಲಯವು ಒಂದು ಆದೇಶವನ್ನು ನೀಡಿದೆ. The order dated 11.01.1985 in Election Petition No.16 of 1983 reads thus:

"It is therefore clear that there is no difference between the terms Koya and Koli, they are similar or equivalent to each other. 'Koli' is a Urdu and Marati terms whereas 'Koya' is a Telugu term. That is why in Bombay Karnataka area, it is called as 'Koli' (Marathi term) and 'Koya' (Urdu term) in Hyderabad Karnataka area. .... But the circumstances under which the father of Sri Maruti Rao had deposed before the A.C., Bidar, that they belong to Kabbaliga community are not clear. Probably it must have been said like that on the ground that most of the Hindus (particularly the Lingayats) call the people belonging to Koya community as 'Kabbaligas' in Kannada and Muslims call them as 'Koli' in that area. Even the A.C., Bidar, who has conducted the preliminary enquiry has himself admitted in his report to the D.C., Bidar, that the Urdu equivalent is Kabbaliga is 'Koli'. .."

ಜೊತೆಗೆ ಮಾನ್ಯ ನ್ಯಾಯಾಧೀಶರುಗಳಾದ ಎಂ.ದೇವೇಂದ್ರಪ್ಪ s/o ಗಾಳಪ್ಪ, ವೈಜನಾಥ್ ಪಾಟೀಲ್‌ರವರ ಸಂಪರ್ಕದಲ್ಲಿ ಮಾನ್ಯ ನ್ಯಾಯಾಧೀಶರಾದ ಮಾರುತಿ ರಾವ್‌ರವರು ಕೋಲಿ, ಕಬ್ಬಲಿಗ ಸಮಾಜದವರು ಪರಿಶಿಷ್ಟ ಪಂಗಡದವರಲ್ಲ ಎಂದು ಉಚ್ಚ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ ಸಂದರ್ಭದಲ್ಲಿ ಇವೆಲ್ಲಾ ಸಮಾಜದವರು ಸರಿಸಮಾನರು ಎಂಬ ಆದೇಶವಾಗಿತ್ತು. ನಾವು ಸುಮಾರು 39 ವರ್ಷಗಳಿಂದ ಸತತವಾಗಿ ಇದರ ಪ್ರಯತ್ನದಲ್ಲಿದ್ದೇವೆ. ಮೊನ್ನೆ ನಡೆದಂತಹ ಚುನಾವಣೆ ಸಂದರ್ಭದಲ್ಲಿಯು ಸಹ ನಮ್ಮ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುತ್ತೇವೆ ಎಂದು ಅತ್ಯಂತ ಪ್ರಮುಖ ನಾಯಕರು ಹೇಳಿದ್ದರಿಂದ ನಮ್ಮ ಜನರು ಭಾರಿ ಪ್ರಮಾಣದಲ್ಲಿ ಅವರ ಮೇಲೆ ವಿಶ್ವಾಸ ಇಟ್ಟು ಮತವನ್ನು ಹಾಕಿ ಅವರ ಗೆಲುವಿಗೆ ಕಾರಣೀಭೂತರಾಗಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಈಗ ಕೇಂದ್ರದಲ್ಲಿಯು ಅವರದೇ ಸರ್ಕಾರ, ರಾಜ್ಯದಲ್ಲಿಯು ಅವರದೇ ಸರ್ಕಾರ ಅಧಿಕಾರದಲ್ಲಿದೆ. ಏನಾದರೂ ಮಾತನಾಡಿದರೆ, 'ನಿಮ್ಮವರನ್ನು ರಾಷ್ಟ್ರಪತಿಯಾಗಿ' ಮಾಡಿದ್ದೇವೆ ಎಂದು ಹೇಳುತ್ತಾರೆ. ಕೈ ಮುಗಿದು ಕೇಳಿಕೊಳ್ಳುತ್ತೇನೆ,

**ಸಭಾಪತಿಯವರು:–** ಆಗಲಿ, ಈಗ ತಮಗೆ ಉತ್ತರ ನೀಡಲು ಸಚಿವರು ಸದನದಲ್ಲಿಲ್ಲ. ಯಾರು ಉತ್ತರವನ್ನು ನೀಡಬೇಕು?

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ಇದು ಗಂಭೀರವಾದ ವಿಚಾರವಾಗಿರುವುದರಿಂದ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಆದೇಶದ ರೀತ್ಯಾ ಮರುಪ್ರಕರಣಕ್ಕೆ ಸಂಬಂಧಿಸಿದಂತೆ, ಕರ್ನಾಟಕದಲ್ಲಿ ಸರ್ಕಾರ ಆದೇಶ ದಿನಾಂಕ 28.01.1986 ರನ್ವಯ Gazette ಆಗಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಸಂಖ್ಯೆ ಎಸಿ 01 ಸಿವಿಲ್ ಅಪೀಲ್ 2229 ಮತ್ತು 1978, ದಿನಾಂಕ: 07.11.1979 ರೀತ್ಯಾ ಪರಿಶಿಷ್ಟ ವರ್ಗದ ಜಾತಿಯು ಎಸ್.ಟಿ., ಜಾತಿಗೆ ಸೇರಿದರೆ ಅದೇ ಪರ್ಯಾಯ ಜಾತಿಯು ಎಸ್.ಸಿ. / ಎಸ್.ಟಿ., ಸೌಲಭ್ಯವನ್ನು ಪಡೆಯಲು ಅರ್ಹರು ಎಂಬುದನ್ನು ತೀರ್ಪಿನಲ್ಲಿ ಹೇಳಿದ್ದೆ. ಅದಕ್ಕಾಗಿ ಈಗಾಗಲೇ 'ಟೋಕ್ಕರೆ ಕೋಲಿ' ಎಂಬ ಪದ ಎಸ್.ಟಿ., ಪಂಗಡದಲ್ಲಿದ್ದು, ನಮ್ಮ ಬೀದರ್ ಜಿಲ್ಲೆಯಲ್ಲಿ ಶೇಕಡಾ 100ಕ್ಕೆ 100 ರಷ್ಟು ಜನರು ಅದರ ಸೌಲಭ್ಯವನ್ನು ಪಡೆದುಕೊಳ್ಳುತ್ತಿರುವುದರಿಂದ ಅದೇ ಪರ್ಯಾಯ ಪದವು ಗುಲ್ಬರ್ಗಾ ಜಿಲ್ಲೆಯಲ್ಲಿ ಕಬ್ಬಲಿಗ. ಗಂಗಾ ಹಾಗೂ ಮೊಗವೀರ ಎನ್ನುವಂಥ 39 ಪರ್ಯಾಯ ಪದಗಳನ್ನು ಆ ಪಟ್ಟಿಯಲ್ಲಿ ಸೇರಿಸಿ, ತಕ್ಷಣ ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವಂಥ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಎನ್.ರವಿಕುಮಾರ್‌ರವರು ದಯವಿಟ್ಟು ಗಮನವಿಟ್ಟು ಕೇಳಬೇಕು. ಆರೋಗ್ಯ ಸಚಿವರಾದ ಮಾನ್ಯ ಬಿ.ಶ್ರೀರಾಮುಲುರವರು ಅತ್ಯಂತ ಪ್ರಭಾವಿ ನಾಯಕರು, ಹಿಂದುಳಿದ ವರ್ಗದಲ್ಲಿ ಅತ್ಯಂತ ಗಣ್ಯನಾಯಕರು ಎಂದು ಹೇಳಬೇಕಾಗುತ್ತದೆ. ಅವರು ಬಿಟ್ಟು ಹೊಂದಂತಹ 'ತಳವಾರ್' ಎಂಬ ಜಾತಿಯನ್ನು ಸೇರಿಸಲು ಅವರು ತಕ್ಷಣವೇ ಕೇಂದ್ರದ ಸಚಿವ ಸಂಪುಟಕ್ಕೆ ಹಾಗೂ ಲೋಕಸಭೆಗೆ ಈ ವಿಚಾರವನ್ನು ತೆಗೆದುಕೊಂಡು ಹೋಗಿ ಅವರ ಮನಹೊಲಿಸಿ 24 ಘಂಟೆಯಲ್ಲಿ ಆ ಆದೇಶಕ್ಕೆ ರಾಷ್ಟ್ರಪತಿಯವರ ಅಂಕಿತವನ್ನು ಹಾಕಿಸಿ, ತರುವಂತಹ ಕೆಲಸವನ್ನು ಪ್ರಾಮಾಣಿಕವಾಗಿ ಆ ಜಾತಿಯವರಿಗೆ ಮಾಡಿದ್ದಾರೆ. ತಾವೂ ಮುಂದೆ ಮಾತನಾಡಿ ಎಂದು ಅವಕಾಶ ನೀಡಿದರು ಮಾತನಾಡುವುದಿಲ್ಲ. ಇದೊಂದು ಗಂಭೀರವಾದ ವಿಷಯವಾಗಿದೆ. ನಮಗೆ ದಯವಿಟ್ಟು....

**ಸಭಾಪತಿಯವರು:–** ಆಯಿತು. ಈಗ ಉತ್ತರ ನೀಡುವವರ್‍ಯಾರು ಹೇಳಿ.

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ಇನ್ನೂ ಸ್ವಲ್ಪ ಮಾತನಾಡಲು ಅವಕಾಶ ನೀಡಲೇಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ದಯವಿಟ್ಟು ನಮಗೆ ಬಹಳ ತೊಂದರೆಯಾಗಿದೆ. ಉಪ ಮುಖ್ಯಮಂತ್ರಿಯವರು ಹಾಗೂ ಸಮಾಜ ಕಲ್ಯಾಣ ಸಚಿವರಾದ ಮಾನ್ಯ ಗೋವಿಂದ ಎಂ ಕಾರಾಜೋಳರವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶಾಸಕರಾದ ಸಂದರ್ಭದಲ್ಲಿ 'ಈ ಜಾತಿಯವರನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳಿಸಲು ಏನು ತೊಂದರೆ' ಎಂದು ವಿಧಾನಸಭೆಯಲ್ಲಿ ಪ್ರಶ್ನೆ ಕೇಳಿದ್ದಾರೆ. ಈಗ ಅವರು ಸಚಿವ ಸ್ಥಾನದಲ್ಲಿದ್ದಾರೆ. ಅವರು ನಮಗೆ ಏನು ವಾಗ್ದಾನ ಮಾಡುತ್ತಾರೆಯೋ ಎಂಬ ನಂಬಿಕೆ ಬಂದಿಲ್ಲ. ಸಭಾನಾಯಕರಾದ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀರಾಮುಲುರವರು ನಮ್ಮ ಭಾಗದ ಅತ್ಯಂತ ಪ್ರಬಲ ನಾಯಕರಾಗಿದ್ದಾರೆ. ಅವರ ಸಮಾಜವನ್ನು ಹೇಗೆ ಪಟ್ಟು ಹಿಡಿದು ರಕ್ಷಣೆ ನೀಡಿ, ಮೇಲೆ ಎತ್ತಿದ್ದಾರೆ ಅದೇ ರೀತಿ ನಮ್ಮ ಸಮಾಜದವರನ್ನು ಅವರ ಅಣ್ಣ–ತಮ್ಮಂದಿರು, ಅವರ ಮನೆಯ ಅಕ್ಕಂದಿರು ಎಂದು ಪರಿಗಣಿಸಿ. ಕೇಂದ್ರದಲ್ಲಿಯು ಸಹ ಶ್ರೀರಾಮುಲುರವರ ಹೆಸರು ಹೇಳಿದರೆ ಸಾಕು ಕೆಲಸವಾಗುತ್ತದೆ. ಶ್ರೀರಾಮುಲು ಎಂದರೆ ಇಡೀ ಅವರ ಸರ್ಕಾರವೇ ನಡುಗುತ್ತದೆ. ಅಂತಹ ಶಕ್ತಿಯುಳ್ಳವರಾಗಿದ್ದಾರೆ. ದಯವಿಟ್ಟು ಕಾನೂನಿನ ಅರಿವು ಮಾಡಿಕೊಂಡು,... ಸಭಾನಾಯಕರಾದ ಮಾನ್ಯ ಕೋಟ ಶ್ರೀನಿವಾಸ ಪೂಜಾರಿರವರು ಸಹ ಬಹಳ ಒಳ್ಳೆಯ ಮನುಷ್ಯರು. ಚುನಾವಣೆ ಸಂದರ್ಭದಲ್ಲಿ ನಮ್ಮೆಲ್ಲಾ ಮತವನ್ನು ಸುಳ್ಳು ಹೇಳಿ ಹಾಕಿಸಿಕೊಂಡಿದ್ದಾರೆ. ಈಗ ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಎಂದರೆ, ಯಾರು ಬರುತ್ತಾರೆ. ನಾನು ಧರಣಿ ಕೂರಬೇಕಾಗುತ್ತದೆ.

**(ಈ ಹಂತದಲ್ಲಿ ಮಾನ್ಯ ತಿಪ್ಪಣ್ಣ ಕಮಕನೂರರವರು ಬಾವಿಗೆ ಇಳಿದು ಧರಣಿಗೆ ಕೂರಲು ಪ್ರಯತ್ನಿಸಿದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರೇ ಮಾತನಾಡಿ, ತಾವು ಧರಣಿಗೆ ಕೂರಲು ಹೋದರೆ ಹೇಗೆ?

**ಸಭಾಪತಿಯವರು:–** ಅವರು ಧರಣಿ ಕೂರಬೇಕೆಂದು ತೀರ್ಮಾನ ಮಾಡಿಕೊಂಡು ಬಂದಿರುವ ಹಾಗೆ ಕಾಣುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರ ಬೇಡಿಕೆ ಸರಿ ಇದೆ.

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ಬಿಜೆಪಿ ಸರ್ಕಾರದವರು ಮಾತು ಎತ್ತಿದ್ದರೆ ರಾಷ್ಟ್ರಪತಿ ನಿಮ್ಮವರೇ ಎಂದು ಹೇಳುತ್ತಾರೆ. ಕೋಲಿ ಸಮಾಜದವರಿಗೆ ರಾಷ್ಟ್ರಪತಿ ಹುದ್ದೆಯನ್ನು ನೀಡಿದ್ದೇವೆ ಎಂದು ಬಿಜೆಪಿಯವರು ಹೇಳುತ್ತಾರೆ. ಹಾಗಾದರೆ, ನಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದಕ್ಕೆ ಏನು ತೊಂದರೆ ಇದೆ? ಪರಿಶಿಷ್ಟ ಜಾತಿಯವರನ್ನು ರಾಷ್ಟ್ರಪತಿ ಮಾಡಿದ್ದೇವೆ ಎಂದು ಹೇಳುತ್ತಾರೆ, ನಾವು ಅದೇ ಕುಲಕ್ಕೆ ಸೇರಿದವರಾಗಿದ್ದೇವೆ. ಗೌರವಾನ್ವಿತ ರಾಷ್ಟ್ರಪತಿಗಳು ನಮ್ಮ ಮನೆಗೆ ಬಂದು ಊಟ ಮಾಡಿ ಹೋಗಿದ್ದಾರೆ.

**ಶ್ರೀ ಎಂ.ಸಿ.ವೇಣುಗೋಪಾಲ್(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರ ನೋವನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ನೀಡಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ಹೈದ್ರಾಬಾದ್–ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ನಮ್ಮ ಕೋಲಿ ಸಮಾಜದವರೇ ಕಾರಣ. ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯು 50 ರಿಂದ 60 ಸಾವಿರಗಳಷ್ಟು ಮತ ನಮ್ಮ ಸಮಾಜದವರದೇ ಆಗಿರುತ್ತದೆ. ಮಾನ್ಯ ಎನ್.ರವಿಕುಮಾರ್‌ರವರು ಒಳ್ಳೆಯ ಮನುಷ್ಯ ಕೆಲಸವನ್ನು ಮಾಡುತ್ತಾರೆ ಎಂದು ಅವರನ್ನು ನಂಬಿ ಎಂತೆಂಥ ಪ್ರಭಾವಿ ನಾಯಕರನ್ನು ಸೋಲಿಸಿದ್ದರು. ಮಾನ್ಯ ಎನ್.ರವಿಕುಮಾರ್‌ರವರು ನಾನು ನಿಮ್ಮ ಸಮಾಜವನ್ನು ಪರಿಶಿಷ್ಟ ಪಂಗಡದಲ್ಲಿ ಸೇರಿಸುತ್ತೇನೆ, ಒಂದು ವೇಳೆ ವಿಶ್ವಾಸ ಇಲ್ಲದಿದ್ದರೆ ನನ್ನ ರಕ್ತದಲ್ಲಿ ಬರೆದುಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಮಾನ್ಯ ಎನ್.ರವಿಕುಮಾರ್‌ರವರನ್ನು ಹೌದೇ, ಅಲ್ಲವೇ ಎಂಬುದನ್ನು ಕೇಳಿ. ಹಾಗೆಯೇ ದಿವಂಗತ ವಿಠ್ಠಲ್ ಹೇರೂರುರವರು 15 ದಿನಗಳಲ್ಲಿ ಕೋಲಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲಿಲ್ಲವೆಂದರೆ, 'ನನ್ನನ್ನು ನೇಣು ಗಂಬಕ್ಕೆ ಹಾಕಿ ಎಂದು ಸಮಾಜಕ್ಕೆ ಆದೇಶ' ನೀಡುತ್ತೇನೆ. ನಮಗೆ ಮತ ಹಾಕಿ ಎಂದು ಹೇಳಿದ್ದರು.

(ಮುಂದು)

(462)/16.03.2020/8.10/ಎಸ್‌ಕೆ–ಜಿಆರ್

**ಸಭಾಪತಿಯವರು:–** ಆ ವಿಚಾರಗಳೆಲ್ಲಾ ಈಗ ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ತಿಪ್ಪಣ್ಣ ಕಮಕನೂರ ಅವರೇ ಏನಾದರೂ ಹೇಳುವುದು ಇದೆಯಾ?

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ ಒಂದು ನಿಮಿಷ ಕುಳಿತುಕೊಳ್ಳಿ. 'ಕೋಲಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಿಯೇ ನಾನು ಸಾಯುತ್ತೇನೆ. ಒಂದು ವೇಳೆ ಸೇರ್ಪಡೆ ಮಾಡದಿದ್ದರೆ ಸಮಾಜದ ಜನರೇ ನನ್ನನ್ನು ಗಲ್ಲಿಗೇರಿಸಲಿ' ಎಂದು ಬಿಜೆಪಿ ಮುಖಂಡ ಶ್ರೀ ಬಾಬುರಾವ ಚಿಂಚನಸೂರ ಹೇಳಿದರು. ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಲೋಕಸಭೆ ಚುನಾವಣೆ ಬಳಿಕ ನವದೆಹಲಿಗೆ ಹೋಗಿ ಎರಡು ತಿಂಗಳು ಬಿಡಾರ ಹೂಡುತ್ತೇನೆ. ಪರಿಶಿಷ್ಟ ಪಂಗಡಕ್ಕೆ ಸೇರಿಸಿದ ಬಳಿಕವೇ ವಾಪಸ್ಸು ಕುಲ್ಬುರ್ಗಿಗೆ ಬರುತ್ತೇನೆ. ಇಪ್ಪತ್ತು ಸಲ ದೆಹಲಿಗೆ ಹೋಗುತ್ತಾರೆ, ಬರುತ್ತಾರೆ. ಇಂತಹವರು ಬಿಜೆಪಿಯವರಿಗೆ ಬೇಕೇ? ಇಂತಹವರು ಏತಕ್ಕೆ ಬೇಕು? ಮಾನ್ಯ ರವಿಕುಮಾರ್‌ರವರೇ ಇವತ್ತು ನಮ್ಮ ಸಮಾಜದಲ್ಲಿ ಮಾನ್ಯ ಶ್ರೀರಾಮುಲು ಯಾವ ಉನ್ನತ ಸ್ಥಾನದಲ್ಲಿದ್ದಾರೋ, ಅದೇ ಪ್ರಕಾರವಾಗಿ ತಾವು ಉನ್ನತ ಸ್ಥಾನದಲ್ಲಿದ್ದೀರಿ. ಬಿಜೆಪಿ ಪಕ್ಷದವರೆಲ್ಲರೂ ನಿಮ್ಮ ಕೈಯಲ್ಲಿಯೇ ಮಾತನಾಡಿಸುತ್ತಾರೆ. ಆದರೆ ಅವರು ನಿಮಗೇನು ಸೌಲಭ್ಯಗಳನ್ನು ಕೊಡುತ್ತಿಲ್ಲ. ಅದಕ್ಕಾಗಿ ನಮ್ಮ ಸಮಾಜ ಅತ್ಯಂತ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಿಂದುಳಿದಿದ್ದು, ಕೋಲಿ ಸಮಾಜ ಮತ್ತು ಬಂಜಾರ ಸಮಾಜದವರು ಯಾವಾಗ ಪರಿಶಿಷ್ಟ ಪಂಗಡದಿಂದ ಪರಿಶಿಷ್ಟ ಜಾತಿಯವರಾದರು, ಅವತ್ತಿನಿಂದಲೇ ಸಾಮಾಜಿಕ ನ್ಯಾಯದ ಪ್ರಕಾರ ನಾವು ಸಹ ಪರಿಶಿಷ್ಟ ಜಾತಿಗೆ ಸೇರ್ಪಡೆಯಾಗಬೇಕಿತ್ತು. ನಮ್ಮ ಸಂಗಡ ಕುರುಬ ಸಮಾಜದ ಸಮಸ್ಯೆ ಸಹ ಇದೆ. ಆದರೆ ಅವರು ಏನೂ ಹೇಳುತ್ತಿಲ್ಲ, ನಾನು ಏನು ಮಾಡಲಿ?

ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಗಂಭೀರವಾದ ವಿಷಯವಾಗಿದೆ. ಮತ ಹಾಕುವುದಕ್ಕೆ ನಾವು ಬೇಕು. ಮತ ಹಾಕಿದ ಮೇಲೆ ತಮ್ಮ ಮುಖವನ್ನೇ ತೋರಿಸುವುದಿಲ್ಲ. ಒಂದು ಅಥವಾ ಎರಡು ತಿಂಗಳೊಳಗಾಗಿ ಇದನ್ನು ಮಾಡುತ್ತೇವೆಂದು ಹೇಳಿ ಕಳುಹಿಸಿ, ಇಪ್ಪತ್ತೈದು ವರ್ಷಗಳಿಂದ ಇದಕ್ಕಾಗಿ ನಾವು ತಿರುಗುತ್ತಿದ್ದೇವೆ. ಹಿಂದುಳಿದವರೇ ರಾಷ್ಟ್ರಪತಿ ಎಂದು ಹೇಳುತ್ತಾರೆ. ಎತ್ತಿನ ಹೆಸರು 'ಸಾಹುಕಾರ' ಎಂದಿಟ್ಟ ಎತ್ತು ಸಾಹುಕಾರ' ಆಗುತ್ತದೆಯೆ?

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸದಸ್ಯರ ಬಹಳ ಸುಧೀರ್ಘವಾದ ಮಾತನ್ನು ಕೇಳಿ ಸರ್ಕಾರದವರು ಅದನ್ನು ಮಾಡುವ ಹಾಗೆಯೇ ಹೇಳಿದ್ದಾರೆ. ದೊಡ್ಡ ದೊಡ್ಡ ಜನರು ಇಲ್ಲಿ ಬಂದು ಆಶ್ವಾಸನೆ ಕೊಟ್ಟಿದ್ದಾರೆ. ಆದ್ದರಿಂದ ಬಹುತೇಕವಾಗಿ ಸರ್ಕಾರ ತಮ್ಮ ವಿಚಾರಕ್ಕೆ ಸಕಾರಾತ್ಮಕವಾಗಿ ಸ್ಪಂದನೆ ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಋಣಿಯಾಗಿದ್ದೇನೆ ಮತ್ತು ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ರವಿಕುಮಾರ್‌ರವರು ಬಿಜೆಪಿ ಪಕ್ಷದಲ್ಲಿ ಅತ್ಯಂತ ಪ್ರಬಲ ನಾಯಕ. ಮಾನ್ಯ ಎನ್. ರವಿಕುಮಾರ್‌ರವರು ಏನು ಹೇಳುತ್ತಾರೋ, ಅದನ್ನು ಕರ್ನಾಟಕ ರಾಜ್ಯದ ಬಿಜೆಪಿ ಪಕ್ಷದವರು ಕೇಳುತ್ತಿದ್ದಾರೆ. ಅವರ ಮೇಲೆ ನಮ್ಮ ಸಮಾಜದವರು ಬಹಳ ವಿಶ್ವಾಸವನ್ನಿಟ್ಟುಕೊಂಡಿದ್ದಾರೆ. ದಯವಿಟ್ಟು, ನಾನು ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ಇದನ್ನು ನಾಳೆ ಅಥವಾ ನಾಡಿದ್ದೋ ಅಥವಾ ಯಾವಾಗ ಮಾಡುತ್ತೀರಾ ಎಂಬುದರ ಬಗ್ಗೆ ಸರಿಯಾದ ಸಮಯವನ್ನು ನಿಗದಿಪಡಿಸಿ ಹೇಳಿ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಅದನ್ನು ಅಷ್ಟರಲ್ಲಿ ಮಾಡುವುದಕ್ಕಾಗುವುದಿಲ್ಲ.

**ಶ್ರೀ ತಿಪ್ಪಣ್ಣ ಕಮಕನೂರ:–** ಅಷ್ಟರೊಳಗೆ ಸಮಯವನ್ನು ನಿಗದಿ ಮಾಡಿ. ನಮ್ಮಲ್ಲಿರುವ ಜನರು ...

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಇದು ಸದನವಾಗಿರುವುದರಿಂದ, ಸರಿಯಾದ ಉತ್ತರ ಕೊಡಬೇಕೆಂದರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವರೂ ಆಗಿರುವಂತಹ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ಮಾನ್ಯ ಗೋವಿಂದ ಎಂ. ಕಾರಜೋಳರವರು ಬರಬೇಕು. ಅವರು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ಹಾಗಾಗಿ ಇದು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. ಅದಕ್ಕೆ ನಮ್ಮ ಮನವಿ ಏನೆಂದರೆ, ಈಗ ಮಾನ್ಯ ಸಭಾನಾಯಕರು ಉತ್ತರವನ್ನು ಕೊಡಲಿ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಏನಾದರೂ remind ಮಾಡಬಹುದಾ? ನಾವು ಈ ರೀತಿ ಪತ್ರವನ್ನು ಬರೆದಿದ್ದೇವೆ, ಇದನ್ನು ತೀವ್ರಗತಿಯಲ್ಲಿ ಈ ಕಾರ್ಯಕ್ರಮವನ್ನು ಮುಗಿಸಬೇಕು. ಕನ್ಸಿಡರ್ ಮಾಡಬೇಕೆಂದು ಹೇಳಿ ರಾಜ್ಯ ಸರ್ಕಾರ ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ remind ಮಾಡಬೇಕೆಂದು ಹೇಳಿ, ನಾನು ಸರ್ಕಾರಕ್ಕೆ ಮತ್ತೊಮ್ಮೆ ವಿನಂತಿ ಮಾಡುತ್ತೇನೆ.

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):–** ಕಲ್ಬುರ್ಗಿ ಮತ್ತು ರಾಯಚೂರು ಭಾಗದಲ್ಲಿ ಮಾನ್ಯ ರವಿಕುಮಾರ್ ಇರಲಿ ಅಥವಾ ಬೇರೆ ಯಾರೇ ಇರಲಿ ಬಹಳ ವಿಸ್ತೃತವಾಗಿ ಚುನಾವಣೆ ಪ್ರಚಾರ ಮಾಡಿದ್ದಾರೆ. ನಮ್ಮ ಮೇಲೆ ನಂಬಿಕೆ ಇಡಿ, ನಾವು ಇದನ್ನು ಮಾಡಿಕೊಡುತ್ತೇವೆಂದು ದೆಹಲಿಯವರೆಗೂ ಕೆಲವರು ಜನರನ್ನು ಕರೆದುಕೊಂಡು ಹೋಗಿದ್ದಾರೆ. ಉನ್ನತ ಸ್ಥಾನಮಾನದಲ್ಲಿರುವಂತಹವರು ಸಹ 'ನಾವು ನಿಮ್ಮವರಿದ್ದೇವೆ, ನಾವು ಇದನ್ನು ಮಾಡಿಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ'. ಹಾಗಾಗಿ ಆ ಸಮಾಜದ ಜನರಿಗೆ ಏನು ನಂಬಿಸಿದ್ದಾರೆ, ಅವರಿಗೆ ಮೋಸವಾಗಬಾರದೆಂಬುದು ಮಾನ್ಯ ಸದಸ್ಯರ ಕಳಕಳಿಯಾಗಿದೆ. ಮಾನ್ಯ ಎನ್. ರವಿಕುಮಾರ್‌ರವರು ಹೇಳಿದಂತೆ ಮತ್ತೆ ಕೇಂದ್ರ ಸರ್ಕಾರಕ್ಕೆ ಸರಿಯಾದ ರೀತಿಯಲ್ಲಿ ಬರೆದು ಕಳುಹಿಸಿ. ಇದಕ್ಕೆ ಸರ್ಕಾರ ಆಶ್ವಾಸನೆಯನ್ನು ಕೊಡಬೇಕಾಗುತ್ತದೆ. ತುಂಬಾ ಮೋಸ ಮಾಡಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸರ್ಕಾರದವರು ಈ ಪ್ರಸ್ತಾವನೆಯನ್ನು ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಮಾಡಿ ಕಳುಹಿಸಿದ್ದಾರೆಯೋ ಅಥವಾ ಬರಿ ಪತ್ರ ಏನಾದರೂ ಬರೆದಿದ್ದಾರೆಯೋ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸಾಮಾನ್ಯವಾಗಿ ಕ್ಯಾನಿನೆಟ್‌ನಲ್ಲಿಟ್ಟು ಅಪ್ರೂವಲ್ ಮಾಡಿ ಕಳುಹಿಸಬೇಕು. ಇದು ನಾವು ಮಾತ್ರವಲ್ಲ, ಈಗ ಮಾನ್ಯ ವಿರೋಧ ಪಕ್ಷದವರು ಕೂಡ,...

**ಶ್ರೀ ಎಸ್.ಆರ್. ಪಾಟೀಲ್:–** ಆ ಪ್ರಸ್ತಾವನೆಯನ್ನು ಸರ್ಕಾರದವರು ಕ್ಯಾಬಿನೆಟ್‌ನಲ್ಲಿಟ್ಟು decide ಮಾಡಿ, recommendation ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು.

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ತಿಪ್ಪಣ್ಣ ಕಮಕನೂರ ಅವರು ಹೇಳಿರುವಂತೆ ಈಗಾಗಲೇ ಮೂರು ನಾಲ್ಕು ಕಮ್ಯೂನಿಟಿಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಹೋಗಿದೆ. ಇಲ್ಲಿ ಮಾನ್ಯ ಹಿರಿಯ ಸಚಿವರುಗಳಿದ್ದಾರೆ. ಮಾನ್ಯ ಎನ್. ರವಿಕುಮಾರ್ ಹೇಳಿದ ಹಾಗೆ ಇದರ ಬಗ್ಗೆ ಅಲ್ಲಿರುವ ಜನಗಳಿಗೆ ಬಹಳ ಅವಶ್ಯಕತೆಯಿದೆ. ಇದು ಕೇಂದ್ರ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ಕಾರಕ್ಕೆ ಹೋಗಿರುವುದು ನಿಜ. ಇನ್ನೊಂದು reminder ಹಾಕುತ್ತೀರಾ ಎಂದು ಕೇಳಿದರೆ, ಆದರಲ್ಲಿ ತಪ್ಪು ಏನಿಲ್ಲ. ಎರಡನೆಯದಾಗಿ, ಹೆಸರನ್ನು ಎತ್ತುವ ಬಗ್ಗೆ ಹೇಳುತ್ತಾರೆ. ಕಲ್ಬುರ್ಗಿ, ಬೀದರ್, ಯಾದಗಿರಿ ಜಿಲ್ಲೆಗಳಲ್ಲಿ ಕುರುಬ ಸಮಾಜ ಮತ್ತು ಕೋಲಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎನ್ನುವುದರ ಬಗ್ಗೆ ಪೆಂಡಿಂಗ್ ಇದೆ. ಇದರ ಬಗ್ಗೆ ಸರ್ಕಾರ ಶೀಘ್ರವಾಗಿ ಕಳುಹಿಸಿ, ಇದನ್ನು ಮಾಡಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ತಿಪ್ಪಣ್ಣ ಕಮಕನೂರು ಅವರು ಏನು ಹೇಳಿದ್ದಾರೋ, ಅದಕ್ಕೆ ರಾಜ್ಯ ಸರ್ಕಾರದ ಪೂರ್ಣ ಸಹಮತವಿದೆ. ಕೋಲಿ, ಕಬ್ಬಲಿಗ ಹಾಗೂ ಇನ್ನಿತರೇ 39 ಪರ್ಯಾಯ ವರ್ಗದ ಜನಾಂಗದವರನ್ನು ಹಾಗೂ ನಮ್ಮ ಕರಾವಳಿಯಲ್ಲಿರುವಂತಹ ಮೀನುಗಾರರ ಸಮಾಜ, ಗಂಗಾಮತ, ಅಂಬಿಗ ಇವೆಲ್ಲ ಒಂದೇ ವ್ಯಾಪ್ತಿಗೆ ಬರುತ್ತದೆ. ಈ 39 ಉಪಜಾತಿಯಲ್ಲಿ ಇದು ಸಹ ಸೇರುತ್ತದೆ. ಇದಕ್ಕೋಸ್ಕರ ಎಲ್ಲಾ ಮಟ್ಟದಲ್ಲಿಯೂ ಕೂಡ ಹಾಗೂ ನಮ್ಮ ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂಬ ಬಗ್ಗೆ ವ್ಯಾಪಕವಾದಂತಹ ಒತ್ತಡವಿದೆ. ಇವತ್ತಿನ ಸಚಿವ ಸಂಪುಟದಲ್ಲಿ ಮತ್ತು ದಿನಾಂಕ 03.03.2014 ರ ಹಿಂದಿನ ಸಚಿವ ಸಂಪುಟದಲ್ಲಿಯೂ ಕೂಡ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ನಂತರ ಮತ್ತೆ ಮರು ಪ್ರಸ್ತಾವನೆಯಲ್ಲಿ ಕೆಲವು ಅಂಶಗಳು ಬಿಟ್ಟು ಹೋಗಿವೆ ಎನ್ನುವ ಹಿನ್ನೆಲೆಯಲ್ಲಿ, ಮರು ಪರಿಶೀಲಿಸಲಾಗಿ, ಮತ್ತೆ ಸಮರ್ಥನೆ ಮಾಡಿ ಪರಿಶಿಷ್ಟ ಪಂಗಡಕ್ಕೆ ಕೋಲಿ ಸಮಾಜವನ್ನು ಸೇರಿಸಬೇಕೆಂದು ಹೇಳಿ ಪುನಃ ದಿನಾಂಕ 12.02.2019 ರಲ್ಲಿ ಅಂದರೆ, ಪ್ರಸ್ತುತ ಸರ್ಕಾರದಲ್ಲಿ ಪುನಃ ಎಲ್ಲಾ ವಿವರವಾದ ಅಂಶಗಳನ್ನು ಸೇರಿಸಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಹಿಂದಿನ ರಾಜ್ಯ ಸರ್ಕಾರ ಸಮರ್ಥನೆ ಮಾಡಿದೆ. ಈಗಿನ ರಾಜ್ಯ ಸರ್ಕಾರವೂ ಕೂಡ ಕೋಲಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು ಸಹಮತವಿದೆ. ಪ್ರಸ್ತುತವಾಗಿ ಹೇಳಿದಂತಹ ಎಲ್ಲಾ ವಿಚಾರಗಳು ಮಾನ್ಯ ಬಾಬುರಾವ್ ಚಿಂಚನಸೂರ ಅವರು ಹೆಸರು ಹೇಳುವ ಅಗತ್ಯವಿಲ್ಲ. ನಾನೂ ಸಹ ಹೇಳಬಾರದು. ಮೊದಲಿನಿಂದಲೂ ಜೀವನದಲ್ಲಿ ಗುರಿ ಇತ್ತು ಎಂದು ಅವರು ಹೇಳುತ್ತಿದ್ದರು. ಬಿಜೆಪಿ ಪಕ್ಷಕ್ಕೆ ಬಂದ ಮೇಲೆ ಅಲ್ಲ. ಮೊದಲಿದ್ದಂತಹ ಪಕ್ಷದಲ್ಲಿಯೂ ಕೂಡ ಹೇಳುತ್ತಿದ್ದರು. ನಮಗೆ ಪಕ್ಷ ಭೇದವನ್ನು ಮರೆತು ಒಂದು ವಿಚಾರವಿದೆ. ಈ ಕೋಲಿ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂಬ ನಿಲುವಿಗೆ ಹಿಂದಿನ ಸರ್ಕಾರವೂ ಬದ್ದವಾಗಿತ್ತು.ಈಗಿನ ರಾಜ್ಯ ಸರ್ಕಾರವೂ ಕೂಡ ಬದ್ಧವಾಗಿದೆ. ಕೇಂದ್ರ ಸರ್ಕಾರದ ಮುಂದೆ ಈ ಪ್ರಸ್ತಾವನೆ ಬಾಕಿ ಉಳಿದಿದೆ. ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ತಿಪ್ಪಣ್ಣ ಕಮಕನೂರ ಅವರಿಗೆ ಹೇಳುವುದೇನೆಂದರೆ, ರಾಜ್ಯ ಸರ್ಕಾರದ ಮೂಲಕ ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಇದರ ಮೇಲೆ ಒತ್ತಡ ಹೇರುವಂತಹ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ಮಾಡುತ್ತೇವೆಂಬ ಮಾತನ್ನು ತಮ್ಮ ಮೂಲಕ ಮಾನ್ಯ ತಿಪ್ಪಣ್ಣ ಕಮಕನೂರ ಅವರಿಗೆ ತಿಳಿಸಲಾಗಿದೆ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್:–** ತಮ್ಮದೇ ಆದ ಸರ್ಕಾರ ಕೇಂದ್ರದಲ್ಲಿದೆ. ಈಗಿರುವ ಸರ್ಕಾರವೂ ಮತ್ತು ಈ ಹಿಂದೆ ಇದ್ದಂತಹ ಸರ್ಕಾರವೂ ಸಹ recommendation ಮಾಡಿತ್ತು. ಇದನ್ನು ಬೆಂಬಲಿಸಿದ್ದೀರಿ ಮತ್ತು ವಿವರಣೆಯನ್ನು ಕೂಡ ಕೊಟ್ಟಿದ್ದೀರಿ. ತಮ್ಮದೇ ಆದ ಸರ್ಕಾರ ಕೇಂದ್ರದಲ್ಲಿರುವುದರಿಂದ, ಈಗಾಗಲೇ ಮೇಲಿಂದ ಮೇಲೆ ಹೇಳುತ್ತಿದ್ದೀರಿ. ರಾಜ್ಯದಲ್ಲಿರುವಂತಹ ಸರ್ಕಾರ ಕೇಂದ್ರದಲ್ಲಿ ಅದೇ ಸರ್ಕಾರ ಇದೆ. ಮಾನ್ಯ ತಿಪ್ಪಣ್ಣ ಕಮಕನೂರು ಅವರು ಹೇಳಿರುವ ವಿಚಾರದ ಬಗ್ಗೆ ಸ್ವತಃ ಇಲ್ಲಿ ಪತ್ರ ಬರೆದ ಮಾತ್ರಕ್ಕೆ ಏನೂ ಕೆಲಸವಾಗುವುದಿಲ್ಲ. ತಮಗೆ ಕೇಂದ್ರ ಸರ್ಕಾರದಲ್ಲಿ access ಇರುತ್ತದೆ. ರಾಷ್ಟ್ರಪತಿಗಳು ಈ ಸಮುದಾಯಕ್ಕೆ ಸಂಬಂಧಿಸಿದವರೆಂದು ದಾಖಲೆಗಳಲ್ಲಿ ಕೂಡ ಇವೆ. ಆ ದೃಷ್ಟಿಯಿಂದ ತಮ್ಮ ಸರ್ಕಾರದ ಕಡೆಯಿಂದ ಒಂದು ಡೆಲಿಗೇಷನ್ ಹೋಗಿ, ಅದನ್ನು ಮಾಡಿಕೊಂಡು ಬಂದು. ಅವರ ನ್ಯಾಯಸಮ್ಮತವಾದಂತಹ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ವ್ಯಕ್ತ ಮಾಡಿ. ನೋಡಿರಿ, ಅವರು ಹೇಳಿದರು: ಈ ರೀತಿ ಹೇಳಿದ್ದಕ್ಕೆ ನಾವೆಲ್ಲರೂ ನಿಮಗೆ ಓಟು ಹಾಕಿದ್ದೇವೆಂದು. ತಮ್ಮನ್ನು ಗೆಲ್ಲಿಸಿದ್ದೆ ತಪ್ಪಾಗಿಬಿಟ್ಟಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದಕ್ಕೆ ನಮ್ಮ ಸರ್ಕಾರದ ಸಹಮತವಿದೆ. ಬರೀ ಪತ್ರವನ್ನು ಬರೆದು ಸಚಿವ ಸಂಪುಟದಿಂದ ಪ್ರಸ್ತಾವನೆ ಕಳುಹಿಸಿಕೊಟ್ಟು ನಾವು ಸುಮ್ಮನಿಲ್ಲ. ಮಾನ್ಯ ರವಿಕುಮಾರ್ ಅವರು ಹಲವಾರು ಬಾರಿ ಹಾಗೂ ಒಂದು ತಿಂಗಳ ಹಿಂದೆ ಮತ್ತೆ ಕೂಡ ಹೋಗಿ ಕೇಂದ್ರ ಸರ್ಕಾರದಲ್ಲಿ ಯಾರ್ಯಾರ ಜೊತೆಯಲ್ಲಿ ಮಾತನಾಡಬೇಕೋ, ಅವರ ಜೊತೆಯಲ್ಲಿ ಮಾತನಾಡಿದ್ದಾರೆ. ಸರ್ಕಾರ ಈ ಪ್ರಯತ್ನವನ್ನು ಮುಂದುವರೆಸುತ್ತದೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಎರಡು–ಮೂರು ಕಮ್ಯೂನಿಟಿಗಳವರಿಂದ ತಮ್ಮ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂಬ ಬೇಡಿಕೆ ಇದೆ. ಆದರೆ ಇವತ್ತು ಪರಿಶಿಷ್ಟ ಜಾತಿಯಲ್ಲಿರುವಂತಹ ನಾಯಕ ಸಮುದಾಯ, ಅಂದರೆ ಬೇಡ ಸಮುದಾಯದವರು ತಮಗೆ seven percent ಗೆ ಹೆಚ್ಚಿಸದಿದ್ದರೆ ಇದರಲ್ಲಿ ನಮಗೆ ಅನ್ಯಾಯವಾಗುತ್ತದೆ ಎನ್ನುವ ಬೇಡಿಕೆಗೆ ಸಂಬಂಧಿಸಿದಂತೆ ಈಗಾಗಲೇ ಸಮಿತಿ ರಚನೆಯಾಗಿ ಸರ್ಕಾರದ ಮುಂದೆ ಚರ್ಚೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಕೋಲಿ ಸಮಾಜ, ಗೊಂಡ ಸಮಾಜವನ್ನು ಸೇರಿಸುವುದರ ಬಗ್ಗೆ ನಮ್ಮ ಅಭ್ಯಂತರವೇನಿಲ್ಲ. ಆದರೆ, ಇವತ್ತು ಇರತಕ್ಕಂತಹ ಪರಿಸ್ಥಿತಿಯಲ್ಲಿ ಮೂರು ಪರ್ಸೆಂಟ್ ಇರತಕ್ಕಂತಹ ಸಮಾಜಕ್ಕೆ ಹೆಚ್ಚು ಮಾಡಿ, ಆ ಸಮಾಜದ ಆ ಜಾತಿಯ ಸಮೀಕ್ಷೆಯನ್ನು ನೋಡಿ. ಅದರ ಆಧಾರದ ಮೇಲೆ revise ಮಾಡಬೇಕೇ ಹೊರತು ಆ ಒಂದು ಷರತ್ತನ್ನು ಪೂರ್ಣ ಮಾಡದೇ ಇದ್ದರೆ, ಅದು ಇನ್ನೊಂದು ಹೊಸ ಸಮಸ್ಯೆಗೆ ಕಾರಣವಾಗುತ್ತದೆ. ದಯವಿಟ್ಟು ಇದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಇದರ ಬಗ್ಗೆ ಸಮಯೋಚಿತವಾಗಿ ಚರ್ಚೆ ಮಾಡಿ ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಇಲ್ಲಿಂದ recommendation ಕೂಡ ಹೋಗಲಿ.

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ,...

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ತಿಪ್ಪಣ್ಣ ಕಮಕನೂರರವರೇ ಇದಕ್ಕೆ ನಮ್ಮದೇನೂ ವಿರೋಧವಿಲ್ಲ. ಆದರೆ ಇದು ಕ್ಲಿಷ್ಟಕರವಾದ ವಿಷಯವಾಗಿದೆ. ಮೂರು ಪರ್ಸೆಂಟ್‌ಗೆ ಎಲ್ಲರನ್ನೂ ಸೇರಿಸಿಬಿಟ್ಟರೆ, ಈಗಾಗಲೇ ತೊಂದರೆಯಾಗುತ್ತಿದೆ. ಆ ಮೂರು ಪರ್ಸೆಂಟ್ ಜೊತೆಗೆ ಅದರ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬೇಕು. ಸಂಖ್ಯಾ ಬಲದ ಪ್ರಕಾರ ಅದರ ಜೊತೆಗೆ ಇದನ್ನು ಸೇರಿಸಬೇಕೆಂಬ ಬಗ್ಗೆ ನಾನು ಈ ಸದನದ ಮೂಲಕ ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ.

**ಶ್ರೀ ತಿಪ್ಪಣ್ಣ ಕಮಕನೂರ:–** ಈ ತರಹ ಸಮಸ್ಯೆಯಿದ್ದಾಗ, ಸುಮ್ಮನೆ ಸುಳ್ಳು ಹೇಳಿ, ಚುನಾವಣೆಯ ಸಮಯದಲ್ಲಿ ಇವರು ನಮಗೆ ಏತಕ್ಕಾಗಿ ಆಶ್ವಾಸನೆ ಕೊಡಬೇಕಾಗಿತ್ತು? ಇವರು ಜನರಿಗೆ ಸುಳ್ಳು ಹೇಳಿ, ಮೋಸ ಮಾಡಿ ಓಟು ತೆಗೆದುಕೊಂಡಂತಾಗಿದೆ.

**ಸಭಾಪತಿಯವರು:–** ಇದರ ಬಗ್ಗೆಯೆಲ್ಲಾ ಈಗ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಈಗ ನಿಯಮ 330 ರ ಮೇರೆಗೆ ಚರ್ಚೆ.

(ಮುಂದು)

(463) 16.03.2020 8:20 ಕೆಜಿ (ಟಿಸಿಹೆಚ್)–ಎಂ.ಡಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಸಾಕಷ್ಟು ಸಮಯ್ಯ ಆಗಿದೆ. ಹಾಗಾಗಿ, ಈ ವಿಷಯವನ್ನು ನಾಳೆ ತೆಗೆದುಕೊಳ್ಳೋಣ.

**ಸಭಾಪತಿಯವರು:–** ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ರಾತ್ರಿ 8 ಗಂಟೆ 21 ನಿಮಿಷಗಳಿಗೆ ಮುಕ್ತಾಯಗೊಂಡು, ಪುನಃ ದಿನಾಂಕ 17.03.2020ರ ಮಂಗಳವಾರ ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~